ಮಂಗಳೂರು
ಬುಧವಾರ, 13 ಮೇ 2026
ಸಂಪುಟ 48, ಸಂಚಿಕೆ 55, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸಾರಿಗೆ ನೌಕರರಿಗೆ ಶೇ.2.5 ವೇತನ ಹೆಚ್ಚಳ |0೫ ಸುವೇಂದು ಆಪ್ತನ ಹತ್ಯೆ: ತನಿಖೆ ಆರಂಭ |0೨ ಪಾಕ್‌ಗೆ ಚೀನಾ ನೆರವು ತಿಳಿದಿತ್ತು |0೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ : ಏಕಾದಶಿ, ನಕ್ಷತ್ರ: ಉತ್ತರಭಾದ್ರ

ದಿನದ ಮಾತು

ಲೋಕದಲ್ಲಿ ಯಾವನ ಸತ್ಕೀರ್ತಿ ಬದುಕಿರುವುದೋ ಆತನೇ ಅಮರನು.

▲ ನೀತಿ ಕುಸುಮಮಾಲೆ

ಮೋದಿ ಹೇಳಿದರೆ ಜನ ಯಾಕೆ ಕೇಳುತ್ತಾರೆ?

ಖಾರಾ ಬಾತ್

• ವಿನಾಯಕ ಭಟ್ಟ ಮೂರೂರು

• ಪುಟ ೬

ಕಿರುಸುದ್ದಿ

ಚಾರಣಪಥ-ಸಂಚಾರಪಥ ತಾತ್ಕಾಲಿಕ ಸ್ಥಗಿತ: ಸಚಿವ

• **ಬೆಂಗಳೂರು:** ಚಾಮರಾಜನಗರದ ನಾಗಮಲೆ ಅರಣ್ಯದಲ್ಲಿ ಚಿರತೆ ದಾಳಿಯಿಂದ 10 ವರ್ಷದ ಬಾಲಕ ಮೃತಪಟ್ಟಿರುವ ಹಿನ್ನೆಲೆಯಲ್ಲಿ ವನ್ಯಜೀವಿ ಸಂಚಾರದಲ್ಲಿ ಎಲ್ಲ ಚಾರಣಪಥ ಮತ್ತು ಸಂಚಾರಪಥಗಳನ್ನುತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ. ಸಾರ್ವಜನಿಕರು ಮತ್ತು ಚಾರಣಿಗರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಆದೇಶದವರೆಗೆ ಚಿರತೆ, ಹುಲಿ, ಆನೆ, ಕರಡಿ ಮತ್ತಿತರೆ ವನ್ಯಜೀವಿಗಳು ಸಂಚರಿಸುವ ಮತ್ತು ಮಾನವ-ವನ್ಯಜೀವಿ ಸಂಘರ್ಷ ಸಂಭವಿಸಿರುವ ಕಡೆಗಳಲ್ಲಿ ಚಾರಣ ಮತ್ತು ಸಂಚಾರ ಪಥಗಳನ್ನು ತಕ್ಷಣ ದಿಂದಲೇ ಸ್ಥಗಿತಗೊಳಿಸಲು ಸೂಚಿಸಲಾಗಿದೆ. ಈ ಸಂಬಂಧ ಅಧಿಕೃತ ಸುತ್ತೋಲೆ ಹೊರಡಿಸಲಾಗಿದೆ. ➡ಪುಟ ೪

ಪಾಕ್ ಮಾರುಕಟ್ಟೆಯಲ್ಲಿ ಸ್ಫೋಟ: 10 ಮಂದಿ ಸಾವು

• ಪುಟ ೨

ಕೈ ಸಿಎಂ ಆಯ್ಕೆ ಗೊಂದಲ ಮತದಾರರಿಗೆ ಅವಮಾನ

• ಪುಟ ೨

ಪ.ಬಂಗಾಳದಲ್ಲಿ ರಸ್ತೆ ಬದಿ ನಮಾಜ್‌ಗೆ ಅವಕಾಶವಿಲ್ಲ

• ಪುಟ ೨

ಮಧ್ಯವರ್ತಿ ಪಾಕ್‌ನ ಇಬ್ಬಗೆ ನೀತಿ ಬಯಲು

• ಪುಟ ೨

ಅನುಭವ ಮಂಟಪ ಶೀಘ್ರ ಪೂರ್ಣ: ಖಂಡ್ರೆ

• ಪುಟ ೫



ನೀಟಾದ ಪ್ರೈವೇಟ್ ಮಾಫಿಯಾ ಜಾಲ

• ಪುಟ ೨

ಸುದ್ದಿ ಸಮಗ್ರ

ವೈದ್ಯಕೀಯ ಪ್ರವೇಶ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ | ಓರ್ವ ಸೆರೆ

ನೀಟ್ ಮರು ಪರೀಕ್ಷೆ

• **ಹೊಸದಿಲ್ಲಿ/ನಾಸಿಕ್:** ಪ್ರಶ್ನೆಪತ್ರಿಕೆ ಸೋರಿಕೆ ಆರೋಪಗಳ ಹಿನ್ನೆಲೆಯಲ್ಲಿ ಮೇ 3ರಂದು ನಡೆದಿದ್ದ ನೀಟ್(ಯುಜಿ) 2026 ಪರೀಕ್ಷೆಯನ್ನು ಮಂಗಳವಾರ ರದ್ದುಪಡಿಸಲಾಗಿದ್ದು, ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸುವಂತೆ ಕೇಂದ್ರ ಸರ್ಕಾರ ಸೂಚಿಸಿದ ನಂತರ ಸಿಬಿಐ ಎಫ್‌ಐಆರ್ ದಾಖಲಿಸಿದೆ.

ವೈದ್ಯಕೀಯ ಕಾಲೇಜುಗಳ ಪದವಿ ಪೂರ್ವ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ಈ ಪರೀಕ್ಷೆಯನ್ನು ನಡೆಸುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ), ಹೊಸ ದಿನಾಂಕಗಳನ್ನು ಮುಂದಿನ 7ರಿಂದ 10 ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ತಿಳಿಸಿದೆ.



ಸಿಬಿಐ ತನಿಖೆ

ಮೇ 3ರಂದು ನಡೆದ ಪರೀಕ್ಷೆಯ ಪ್ರಶ್ನೆಗಳು ಕೆಲವು ಕೋಚಿಂಗ್ ಕೇಂದ್ರಗಳಲ್ಲಿ ಹಂಚಿಕೆಯಾಗಿದ್ದ ಮಾದರಿ ಪ್ರಶ್ನೆ ಪತ್ರಿಕೆಗಳಿಗೆ ಹೋಲಿಕೆಯಾಗಿದ್ದವು ಎಂಬ ಆರೋಪಗಳು ಕೇಳಿಬಂದಿದ್ದು, ವಿಶೇಷವಾಗಿ ರಾಜಸ್ಥಾನದಲ್ಲಿ ಪರೀಕ್ಷೆಗೆ ಮುನ್ನವೇ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಬಗ್ಗೆ ಸಾಕ್ಷ್ಯಗಳು ಲಭ್ಯವಾಗಿದ್ದರಿಂದ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಂಡಿದೆ.ಈ ಬೆಳವಣಿಗೆಗಳಿಂದ ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಆತಂಕ ಉಂಟಾಗಿದ್ದು, ಪರೀಕ್ಷೆಯ ಪಾರದರ್ಶಕತೆ ಬಗ್ಗೆ ಪ್ರಶ್ನೆಗಳು ಕೇಳಿಬಂದಿವೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ನ್ಯಾಯಸಮ್ಮತ ಮೌಲ್ಯಮಾಪನಕ್ಕಾಗಿ ಇಡೀ ನೀಟ್(ಯುಜಿ) ಪರೀಕ್ಷೆಯನ್ನು ರದ್ದುಪಡಿಸಿರುವುದಾಗಿ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಘೋಷಿಸಿದೆ. ಎನ್‌ಟಿಎ ಅಧಿಕಾರಿಗಳ ಪ್ರಕಾರ, ಪರೀಕ್ಷೆ ಮೇ 3ರಂದು ನಡೆದಿದ್ದು, ಮೇ 7ರಂದು ಅಕ್ರಮಗಳ ಕುರಿತು ಪ್ರಾಥಮಿಕ ಮಾಹಿತಿ ಲಭ್ಯವಾಯಿತು. ತಕ್ಷಣವೇ ಕೇಂದ್ರ ತನಿಖಾ ಸಂಸ್ಥೆಗಳು ಮತ್ತು ಕಾನೂನು ಜಾರಿ ವಿಭಾಗಗಳಿಗೆ ಮಾಹಿತಿ ನೀಡಲಾಗಿತ್ತು. ಮೇ 8ರಂದು ನಡೆದ ಶೋಧ ಕಾರ್ಯಾಚರಣೆ ವೇಳೆ ರಾಜಸ್ಥಾನದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ನಡೆದಿರುವ ಬಗ್ಗೆ ಮಹತ್ವದ ಸುಳಿವುಗಳು ದೊರೆತಿವೆ ಎಂದು ಹೇಳಲಾಗಿದೆ.

ಕೇಂದ್ರ ತನಿಖಾ ಸಂಸ್ಥೆಗಳು ನೀಡಿದ ವರದಿಗಳ ಆಧಾರದ ಮೇಲೆ ನೀಟ್ ಪರೀಕ್ಷೆಯನ್ನು ರದ್ದುಪಡಿಸಿ ಮರುಪರೀಕ್ಷೆ ನಡೆಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಎನ್‌ಟಿಎ ಸ್ಪಷ್ಟಪಡಿಸಿದೆ. ಈ ಬಾರಿ ದೇಶದ 551 ನಗರಗಳು ಹಾಗೂ ವಿದೇಶಗಳ 14 ನಗರಗಳಲ್ಲಿ ಪರೀಕ್ಷೆ ಆಯೋಜಿಸಲಾಗಿತ್ತು. ಒಟ್ಟು 23 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.



ಮರುಪರೀಕ್ಷೆಯ ಹೊಸ ವೇಳಾಪಟ್ಟಿ ಮುಂದಿನ 7 ರಿಂದ 10 ದಿನಗಳಲ್ಲಿ ಪ್ರಕಟ: ಎನ್‌ಟಿಎ

ನಾಸಿಕ್‌ನಲ್ಲಿ ಓರ್ವನ ಬಂಧನ

ಇದರ ಬೆನ್ನಲ್ಲೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ನಾಸಿಕ್‌ನಲ್ಲಿ ಒಬ್ಬ ಶಂಕಿತ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ರಾಜಸ್ಥಾನ ಪೊಲೀಸರ ಮನವಿಯ ಮೇರೆಗೆ ನಾಸಿಕ್ ಅಪರಾಧ ವಿಭಾಗದ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ. ಈ ಕುರಿತು ಮಾತನಾಡಿದ ಪೊಲೀಸ್ ಉಪ ಆಯುಕ್ತ ಕಿರಣ್ ಕುಮಾರ್ ಚವಾಣ್, ರಾಜಸ್ಥಾನ ಪೊಲೀಸರಿಂದ ಮಾಹಿತಿ ಬಂದ ತಕ್ಷಣ ಕಾರ್ಯಾಚರಣೆ ಕೈಗೊಳ್ಳಲಾಗಿದ್ದು, ಶಂಕಿತ ಆರೋಪಿಯನ್ನು ಬಂಧಿಸಲಾಗಿದೆ.

ಮರು ನೋಂದಣಿ ಅಗತ್ಯವಿಲ್ಲ

ನೀಟ್ ಪರೀಕ್ಷೆಗೆ ಹೊಸ ನೋಂದಣಿ ಅಗತ್ಯವಿಲ್ಲ ಮತ್ತು ಯಾವುದೇ ಹೆಚ್ಚುವರಿ ಪರೀಕ್ಷಾ ಶುಲ್ಕ ಪಾವತಿಸಬೇಕಿಲ್ಲ ಎಂದು ಎನ್‌ಟಿಎ ಹೇಳಿದೆ. ಈಗಾಗಲೇ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕವನ್ನು ಮರುಪಾವತಿಸಲಾಗುವುದು ಮತ್ತು ಎನ್‌ಟಿಎಯ ಆಂತರಿಕ ಸಂಪನ್ಮೂಲಗಳನ್ನು ಬಳಸಿ ಮರು ಪರೀಕ್ಷೆ ನಡೆಸಲಾಗುವುದು ಎಂದೂ ತಿಳಿಸಿದೆ.

ಸಿಬಿಐನಿಂದ ಎಫ್‌ಐಆರ್

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಸಂಬಂಧ ಸಿಬಿಐ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) ಅನ್ವಯ ಅಪರಾಧ ಸಂಚು, ಮೋಸ, ನಂಬಿಕೆ ದ್ರೋಹ, ಕಳ್ಳತನ ಹಾಗೂ ಸಾಕ್ಷ್ಯ ನಾಶಪಡಿಸುವ ಆರೋಪ ಜತೆಗೆ ಭ್ರಷ್ಟಾಚಾರ ತಡೆ ಕಾಯ್ದೆ ಹಾಗೂ ಸಾರ್ವಜನಿಕ ಪರೀಕ್ಷೆಗಳಲ್ಲಿ ಅನ್ಯಾಯ ಮಾರ್ಗ ತಡೆ ಕಾಯ್ದೆ 2024ರಲ್ಲಿ ಪ್ರಕರಣ ದಾಖಲಿಸಿದೆ. ಸಂಸ್ಥೆ ಹಲವು ವಿಶೇಷ ತಂಡಗಳನ್ನು ವಿವಿಧ ಸ್ಥಳಗಳಿಗೆ ಕಳುಹಿಸಿದ್ದು, ರಾಜಸ್ಥಾನ ಪೊಲೀಸರ ವಿಶೇಷ ಕಾರ್ಯಾಚರಣೆ ದಳದಿಂದ(ಎಸ್‌ಒಜಿ)ದಾಖಲೆಗಳನ್ನು ಕೂಡ ಸಂಗ್ರಹಿಸಲಿದೆ. ರಾಜಸ್ಥಾನ ಪೊಲೀಸ್ ಎಸ್‌ಒಜಿ, ಪರೀಕ್ಷೆಗೆ ಮುನ್ನ ವಿದ್ಯಾರ್ಥಿಗಳ ನಡುವೆ ಹರಡಲಾಗಿದ್ದ ಎನ್ನಲಾದ ರಸಾಯನಶಾಸ್ತ್ರದ ಗೆಸ್ ಪೇಪರ್‌ನಲ್ಲಿ ಸುಮಾರು 410 ಪ್ರಶ್ನೆಗಳಿದ್ದು, ಅವುಗಳಲ್ಲಿ ಸುಮಾರು 120 ಪ್ರಶ್ನೆಗಳು ನೈಜ ಪ್ರಶ್ನೆಪತ್ರಿಕೆಯಲ್ಲಿ ಇದ್ದವು ಎಂದು ಹೇಳಿತ್ತು.

ತ.ನಾಡು ಸರ್ಕಾರ ಮಹತ್ವದ ನಿರ್ಧಾರ

ದೇಗುಲ ಬಳಿ ಮದ್ಯ ಅಂಗಡಿಗಳಿಗೆ ಬೀಗ

• **ಚೆನ್ನೈ:** ತಮಿಳುನಾಡಿನಲ್ಲಿ ದೇವಾಲಯಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಬಸ್ ನಿಲ್ದಾಣಗಳ 500 ಮೀಟರ್ ವ್ಯಾಪ್ತಿಯಲ್ಲಿರುವ 717 ಟಾಸ್ಮಾಕ್ ಮದ್ಯದಂಗಡಿಗಳನ್ನು ಎರಡು ವಾರಗಳೊಳಗೆ ಮುಚ್ಚುವಂತೆ ಅಧಿಕಾರಿಗಳಿಗೆ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಮಂಗಳವಾರ ಸೂಚನೆ ನೀಡಿದ್ದಾರೆ.

ತಮಿಳುನಾಡು ಸರ್ಕಾರದ ಮಾಹಿತಿಯ ಪ್ರಕಾರ, ರಾಜ್ಯದಲ್ಲಿ ಪ್ರಸ್ತುತ ತಮಿಳುನಾಡು ಸ್ಟೇಟ್ ಮಾರ್ಕೆಟಿಂಗ್ ಕಾರ್ಪೊರೇಷನ್ (ಟಾಸ್ಮಾಕ್) ವತಿಯಿಂದ ಒಟ್ಟು 4,765 ಮದ್ಯ ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ಮುಖ್ಯಮಂತ್ರಿ ಆದೇಶದ ನಂತರ ಅಧಿಕಾರಿಗಳು ರಾಜ್ಯವ್ಯಾಪಿ ಪರಿಶೀಲನೆ ನಡೆಸಿ, ದೇವಾಲಯಗಳು, ಶಾಲೆಗಳು, ಕಾಲೇಜುಗಳು ಹಾಗೂ ಬಸ್ ನಿಲ್ದಾಣಗಳ ಸಮೀಪ ದಲ್ಲಿರುವ ಮದ್ಯದಂಗಡಿಗಳ ಪಟ್ಟಿ ಸಿದ್ಧಪಡಿಸಿದ್ದಾರೆ. ಪರಿಶೀಲನೆಯಲ್ಲಿ 276 ಮದ್ಯದಂಗಡಿಗಳು ಧಾರ್ಮಿಕ ಸ್ಥಳಗಳ ಸಮೀಪ, 186 ಅಂಗಡಿಗಳು ಶಿಕ್ಷಣ ಸಂಸ್ಥೆಗಳ ಬಳಿ ಹಾಗೂ 255 ಅಂಗಡಿಗಳು ಬಸ್ ನಿಲ್ದಾಣಗಳ ಹತ್ತಿರ ಇರುವುದಾಗಿ ಪತ್ತೆಯಾಗಿವೆ. ಒಟ್ಟಾರೆ 717 ಮದ್ಯದಂಗಡಿಗಳನ್ನು ಮುಚ್ಚಲು ಸರ್ಕಾರ ತೀರ್ಮಾನಿಸಿದೆ. ಸಾರ್ವಜನಿಕರ ಆತಂಕ ಹಾಗೂ ಮಹಿಳೆಯರು ಮತ್ತು ವಿದ್ಯಾರ್ಥಿಗಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ➡ಪುಟ ೪

ಇಂದು ಸಿಎಂ ವಿಜಯ್‌ಗೆ ವಿಶ್ವಾಸಮತದ ಅಗ್ನಿಪರೀಕ್ಷೆ

• **ಚೆನ್ನೈ:** ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಸರ್ಕಾರ ವಿಧಾನಸಭೆಯಲ್ಲಿ ಬುಧವಾರ ವಿಶ್ವಾಸಮತ ಯಾಚನೆಯ ಅಗ್ನಿಪರೀಕ್ಷೆ ಎದುರಿಸಲಿದೆ. • ವಿವರ ಪುಟ ೨



ಸುಪ್ರೀಂಗೆ ಮೇಲ್ಮನವಿ ಸಲ್ಲಿಸಿದ ಟಿವಿಕೆ ಶಾಸಕ

• **ಹೊಸದಿಲ್ಲಿ:** ಟಿವಿಕೆ ಶಾಸಕ ಆರ್. ಶ್ರೀನಿವಾಸ ಸೇತುಪತಿ ಅವರು ತಮಿಳುನಾಡು ವಿಧಾನಸಭೆಯಲ್ಲಿ ಮತ ಚಲಾಯಿಸಲು ಅವಕಾಶ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ವಿಧಾನಸಭೆಯ ವಿಶ್ವಾಸಮತ ಅಥವಾ ಯಾವುದೇ ಮತದಾನದಲ್ಲಿ ಭಾಗವಹಿಸಬಾರದು ಎಂದು ಮದ್ರಾಸ್ ಹೈಕೋರ್ಟ್ ನೀಡಿದ್ದ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ಅವರು ಮೇಲ್ಮನವಿ ಸಲ್ಲಿಸಿದ್ದಾರೆ.ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠದ ಮುಂದೆ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ತುರ್ತು ವಿಚಾರಣೆಗೆ ಮನವಿ ಮಾಡಿದ್ದು, ಸುಪ್ರೀಂ ಕೋರ್ಟ್ ಬುಧವಾರ ವಿಚಾರಣೆ ನಡೆಸಲು ಒಪ್ಪಿದೆ. ➡ಪುಟ ೪

ಟಿವಿಕೆಗೆ ಎಐಎಡಿಎಂಕೆ ಷಣ್ಮುಗಂ ಬಣ ಬೆಂಬಲ • ಪುಟ ೨

ಬಿಜೆಪಿಯ ಇಬ್ಬರು ಸೇರಿ 4 ಶಾಸಕರು ಸಚಿವರಾಗಿ ಪದಗ್ರಹಣ

ಅಸ್ಸಾಂ ಸಿಎಂ ಆಗಿ ಬಿಸ್ವಾ ಪ್ರಮಾಣ

• **ಗುವಾಹತಿ:** ಸತತ ದ್ವಿತೀಯ ಅವಧಿಗೆ ಅಸ್ಸಾಂ ಮುಖ್ಯಮಂತ್ರಿಯಾಗಿ ಹಿಮಂತ ಬಿಸ್ವಾ ಶರ್ಮಾ ಮಂಗಳವಾರ ಪ್ರಮಾಣವಚನ ಸ್ವೀಕರಿಸಿದರು. ತನ್ಮೂಲಕ ಈಶಾನ್ಯ ವಲಯದಲ್ಲಿ ಬಿಜೆಪಿ ನೇತೃತ್ವದ ತೃತೀಯ ಎನ್‌ಡಿಎ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಬಿಜೆಪಿಯ ರಾಮೇಶ್ವರ್ ತೇಲಿ ಹಾಗೂ ಅಜಂತ ನೆಯೋಗ್, ಎಜಿಪಿಯ ಅತುಲ್ ಬೋರಾ, ಬಿಪಿಎಫ್‌ನ ಛರಣ್ ಬೋರೋ ಹೊಸ ಸಂಪುಟ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಗುವಾಹತಿಗೆ ಸಮೀಪದ ಖನಪಾರಾ ಪ್ರದೇಶದಲ್ಲಿನ ವೆಟರಿನರಿ ಗ್ರೌಂಡ್‌ನಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಸಿಎಂ ಶರ್ಮಾ ಹಾಗೂ ನಾಲ್ವರು ಶಾಸಕರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ ಸಿಂಗ್, ನಿತಿನ್ ಗಡ್ಕರಿ, ಸರ್ಬಾನಂದ ಸೋನೊವಾಲ್, ಪವಿತ್ರಾ ಮಾರ್ಗೆರಿಟಾ, ಬಿಜೆಪಿ ಆಳ್ವಿಕೆ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು, ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ➡ಪುಟ ೪



ಪ್ರಧಾನಿ ಮೋದಿ ಅಭಿನಂದನೆ

• ಪುಟ ೪

123 ಕೋಟಿ ರೂ. ವೆಚ್ಚದ ಯೋಜನೆ: ಎಚ್.ಡಿ. ಕುಮಾರಸ್ವಾಮಿ

1,243 ಇವಿ ಚಾರ್ಜಿಂಗ್ ಕೇಂದ್ರ

• **ಬೆಂಗಳೂರು:** ಕೇಂದ್ರ ಸರ್ಕಾರದ ಪಿಎಂ ಇ-ಡ್ರೈವ್ ಯೋಜನೆಯಲ್ಲಿ 123.26 ಕೋಟಿ ರೂ. ವೆಚ್ಚದಲ್ಲಿ ರಾಜ್ಯಕ್ಕೆ 1,243 ಹೊಸ ಇವಿ ಚಾರ್ಜಿಂಗ್ ಕೇಂದ್ರಗಳನ್ನು ನೀಡಲಾಗಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ಯಮಗಳ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.



ಮಂಗಳವಾರ ಖಾಸಗಿ ಹೋಟೆಲ್‌ನಲ್ಲಿ ಪಿಎಂ ಇ-ಡ್ರೈವ್ ಯೋಜನೆಯಲ್ಲಿ ರಾಷ್ಟ್ರವ್ಯಾಪಿ ಇವಿ ಚಾರ್ಜಿಂಗ್ ಮೂಲಸೌಕರ್ಯವನ್ನು ಸಕ್ರಿಯಗೊಳಿಸುವ ಕುರಿತು ನಡೆದ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ಪಿಎಂ ಇ-ಡ್ರೈವ್ ಯೋಜನೆಯ ಮೂಲಕ ರಾಜ್ಯದ ಇವಿ ವಾಹನೋದ್ಯಮಕ್ಕೆ ಪರಿವರ್ತನಾತ್ಮಕ ವೇಗ ದೊರೆಯುತ್ತದೆ ಎಂದು ಪ್ರತಿಪಾದಿಸಿದರು. ➡ಪುಟ ೪



“ ಬೆಂಗಳೂರು ದೇಶದ ಪ್ರಮುಖ ಇವಿ ಚಾರ್ಜಿಂಗ್ ಕೇಂದ್ರಗಳಲ್ಲಿ ಒಂದಾಗಿದೆ. ಭಾರತದ ಆಟೋಮೋಟಿವ್ ವಲಯವು ದೇಶದ ಒಟ್ಟು ಜಿಡಿಪಿಗೆ ಶೇ.7ಕ್ಕಿಂತ ಹೆಚ್ಚು ಕೊಡುಗೆ ನೀಡುತ್ತದೆ. ಉತ್ಪಾದನಾ ಜಿಡಿಪಿಯ ಸುಮಾರು ಅರ್ಧದಷ್ಟಿದೆ ಮತ್ತು ಸುಮಾರು 30 ದಶಲಕ್ಷದಷ್ಟು ಉದ್ಯೋಗಗಳನ್ನು ಸೃಷ್ಟಿಸುತ್ತಿದೆ.

■ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಹೆಸರು ಅಂತಿಮ, ಘೋಷಣೆಯಷ್ಟೇ ಬಾಕಿ

ಕೇರಳ ಹೊಸ ಸಿಎಂ ಕೆಸಿವಿ?

• **ಹೊಸದಿಲ್ಲಿ:** ಕೇರಳ ಮುಖ್ಯಮಂತ್ರಿ ಹೆಸರನ್ನು ಅಂತಿಮಗೊಳಿಸಿದ್ದೇವೆ. ಶೀಘ್ರದಲ್ಲಿ ಅಧಿಕೃತ ಘೋಷಣೆ ಮಾಡುವುದಾಗಿ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ(ಕೆಪಿಸಿಸಿ) ಅಧ್ಯಕ್ಷ ಸನ್ನಿ ಜೋಸೆಫ್ ಹೇಳಿದ್ದಾರೆ. ರಾಹುಲ್ ಆಪ್ತ ಮತ್ತು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮುಖ್ಯಮಂತ್ರಿ ಆಗುವ ಸಾಧ್ಯತೆ ಹೆಚ್ಚಾಗಿದೆ. ಕೇರಳ ಮುಖ್ಯಮಂತ್ರಿ ಆಯ್ಕೆ ವಿಚಾರವಾಗಿ ಸನ್ನಿ ಜೋಸೆಫ್‌ರನ್ನು ದಿಲ್ಲಿಗೆ ಕರೆಸಿಕೊಂಡು ವಿಪಕ್ಷ ನಾಯಕ ರಾಹುಲ್ ಗಾಂಧಿ ಚರ್ಚೆ ನಡೆಸಿದ್ದು, ಬಳಿಕ ಅವರು ಹೀಗೆ ಹೇಳಿದ್ದಾರೆ.ಇತರ ರಾಜ್ಯಗಳಲ್ಲೆಲ್ಲಾ ಮುಖ್ಯಮಂತ್ರಿಗಳ ಆಯ್ಕೆಯಾಗಿದ್ದು, ನೆರೆಯ ತಮಿಳುನಾಡಿನಲ್ಲಿ ವಿಜಯ್ ನೇತೃತ್ವದ ಟಿವಿಕೆ ಸರ್ಕಾರ ರಚನೆಯಾಗಿ ಬುಧವಾರ ವಿಶ್ವಾಸಮತ ಪರೀಕ್ಷೆ ಎದುರಿಸಲಿದೆ. ಆದರೆ ಕೇರಳ ಮುಖ್ಯಮಂತ್ರಿ ಹೆಸರನ್ನು ಕೈ ಹೈಕಮಾಂಡ್ ಇನ್ನೂ ಘೋಷಿಸಲು ಸಾಧ್ಯವಾಗಿಲ್ಲ. ➡ಪುಟ ೪

ಪೂರೈಕೆ ಅಬಾಧಿತ | ಮೋದಿ ಸಲಹೆ ಪಾಲಿಸಿ: ಕೇಂದ್ರ

ದೇಶದಲ್ಲಿ ಇಂಧನ ಬಿಕ್ಕಟ್ಟಿಲ್ಲ

• **ಹೊಸದಿಲ್ಲಿ:** ಭಾರತದಲ್ಲಿ ಎರಡು ತಿಂಗಳಿಗೆ ಸಾಕಾಗುವಷ್ಟು ಇಂಧನ ದಾಸ್ತಾನಿದೆ. ಜಾಗತಿಕ ಇಂಧನ ಪೂರೈಕೆ ವ್ಯವಸ್ಥೆ ಅಸ್ತವ್ಯಸ್ತಗೊಂಡಿರುವ ಹೊರತೂ, ಇಂಧನ ಪೂರೈಕೆ ವಿಚಾರದಲ್ಲಿ ಭಾರತಕ್ಕೆ ಯಾವುದೇ ಆತಂಕವಿಲ್ಲ ಎಂದು ಕೇಂದ್ರ ತೈಲ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ.



ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾಗಬಹುದಾದ ಆರ್ಥಿಕ ಒತ್ತಡವನ್ನು ಕಡಿಮೆ ಮಾಡಲು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಯೋಚಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಮಿತವ್ಯಯದ ಮನವಿ, ಎಚ್ಚರಿಕೆಯ ಕರೆ ಆಗಿದೆ ಎಂದು ಇದೇ ವೇಳೆ ಅವರು ಹೇಳಿದರು. ಸಿಐಐ ವಾರ್ಷಿಕ ವಾಣಿಜ್ಯ ಶೃಂಗಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕಚ್ಚಾತೈಲ ದರ ಏರಿಕೆ ಸ್ಥಿತಿ ನಿರಂತರಗೊಂಡಲ್ಲಿ ಮತ್ತು ಚಿಲ್ಲರೆ ಇಂಧನ ದರಗಳು ಸ್ಥಿರವಾಗುಳಿದಲ್ಲಿ ಅಥವಾ ಬದಲಾಗದಿದ್ದಲ್ಲಿ ಸರ್ಕಾರಿ ಸ್ವಾಮ್ಯದ ಚಿಲ್ಲರೆ ಇಂಧನ ಮಾರಾಟಗಾರರು ಕಾಲು ವರ್ಷದಲ್ಲಿ 1 ಲಕ್ಷ ಕೋಟಿ ರೂ. ನಷ್ಟ ಅನುಭವಿಸಬೇಕಾಗುವುದು ಎಂದರು. ➡ಪುಟ ೪



ಎಲ್‌ಪಿಜಿ ಉತ್ಪಾದನೆ ಗಣನೀಯ ಹೆಚ್ಚಳ

ಪೂರೈಕೆ ವಿಚಾರದಲ್ಲಿ ನಮಗೆ ಸಮಸ್ಯೆ ಇಲ್ಲ. ಬಿಕ್ಕಟ್ಟು ಶುರುವಾದಾಗಲೆ ಭಾರತವು ಸಾಮಾನ್ಯ ದಾಸ್ತಾನಿಗಿಂತಲೂ ಅಧಿಕ ಕಚ್ಚಾತೈಲ ಮತ್ತು ಎಲ್‌ಪಿಜಿ ದಾಸ್ತಾನು ಹೊಂದಲು ಆದ್ಯತೆ ನೀಡಿತ್ತು. ಆಗಲೇ ಎಲ್‌ಪಿಜಿ ಉತ್ಪಾದನೆ ಪ್ರಮಾಣವನ್ನು ಹಿಂದಿನ 36 ಸಾವಿರ ಟನ್‌ಗಳ ಬದಲು 54 ಸಾವಿರ ಟನ್‌ಗಳಿಗೇರಿಸಿದೆ. ಆದರೆ, ಚಿಲ್ಲರೆ ಇಂಧನ ಮಾರಾಟ ದರಗಳನ್ನು ಯಥಾವತ್ ಕಾಯ್ದುಕೊಂಡ ಪರಿಣಾಮ ವಿತ್ತೀಯ ಒತ್ತಡ ಬೆಳೆಯುತ್ತಲೇ ಇದೆ ಎಂದು ಸಚಿವ ಪುರಿ ಮಾಹಿತಿ ನೀಡಿದರು.

ಸನಾತನ ಧರ್ಮದ ಬಗ್ಗೆ ಉದಯನಿಧಿ ಉದ್ಧಟತನ ಮಾತು

• **ಚೆನ್ನೈ:** 2023 ಸೆಪ್ಟೆಂಬರ್‌ನಲ್ಲಿ ಹಿಂದು ಧರ್ಮವನ್ನು ಮಲೇರಿಯಾ, ಡೆಂಗ್ಯೂಗೆ ಹೋಲಿಸಿ ಅಸಂಬದ್ಧವಾಗಿ ಅವಹೇಳನ ಮಾಡುವ ಮುಖೇನ ಉದ್ಧಟತನ ಮೆರೆದಿದ್ದ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್‌ಗೆ, ಈ ಬಾರಿ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ಸೋತು ಸುಣ್ಣವಾದರೂ ಬುದ್ಧಿ ಬಂದಂತಿಲ್ಲ. ಸನಾತನ ಧರ್ಮವನ್ನು ರದ್ದುಗೊಳಿಸಬೇಕೆಂದು ಮಂಗಳವಾರ ಮತ್ತೆ ನಿಂದೆ ಮಾಡುವ ಮೂಲಕ ಮತ್ತೆ ತನ್ನ ಅಪ್ರಬುದ್ಧತೆ ಮೆರೆದಿದ್ದಾರೆ.



• ವಿವರ ಪುಟ ೨

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,80,000(2,61,900)	ಅಪರಂಜಿ ಚಿನ್ನ 15,200(15,000)	ಆಭರಣ ಚಿನ್ನ 14155(13,965)	ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)	ಷೇರು ಸೂಚ್ಯಂಕ	ಬಿಎಸ್‌ಇ 74,559(1456↓)	ಎನ್‌ಎಸ್‌ಇ 23,379(436↓)	$1=₹95.80

ಉದಯನಿಧಿ ಹೇಳಿಕೆಗೆ ವ್ಯಾಪಕ ಆಕ್ರೋಶ

ಸನಾತನ ಧರ್ಮ ಬಗ್ಗೆ ಉದ್ಧಟತನದ ಮಾತು

ಚೆನ್ನೈ: 2023 ಸೆಪ್ಟೆಂಬರ್‌ನಲ್ಲಿ ಹಿಂದು ಧರ್ಮವನ್ನು ಮಲೇರಿಯಾ, ಡೆಂಗ್ಯೂಗೆ ಹೋಲಿಸಿ ಅಸಂಬದ್ಧವಾಗಿ ಅವಹೇಳನಮಾಡುವಮುಖೇನ ಉದ್ಧಟತನಮೆರೆದಿದ್ದ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್‌ಗೆ, ಈ ಬಾರಿ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ಸೋತು ಸುಣ್ಣವಾದರೂ ಬುದ್ಧಿ ಬಂದಂತಿಲ್ಲ. ಸನಾತನ ಧರ್ಮವನ್ನು ರದ್ದುಗೊಳಿಸಬೇಕೆಂದು ಮಂಗಳವಾರ ಮತ್ತೆ ನಿಂದೆ ಮಾಡುವ ಮೂಲಕ ಮತ್ತೆ ತಮ್ಮ ಅಪ್ರಬುದ್ಧತೆ ಮೆರೆದಿದ್ದಾರೆ. ಸನಾತನ ಧರ್ಮವು ಜನರನ್ನು ಒಡೆಯುತ್ತದೆ. ಈ ಧರ್ಮವನ್ನು ರದ್ದುಗೊಳಿಸಬೇಕೆಂಬುದು ಈ ಡಿಎಂಕೆ ನಾಯಕನ ಈ ಬಾರಿಯ ಆಗ್ರಹವಾಗಿದೆ. ಇದು ಭರತಖಂಡದ ಮೂಲಾಧಾರ, ಮಾತೃಸದೃಶ ಸನಾತನ ಧರ್ಮದ ನೆರಳಲ್ಲೇ ಸಹಸ್ರಾರು ವರ್ಷಗಳಿಂದ ಜೀವಿಸುತ್ತಿರುವ ಸಮಸ್ತ ಹಿಂದು ಸಮಾಜವನ್ನು ಕೆಂಡಾಮಂಡಲಗೊಳಿಸಿದೆ. ಉದಯನಿಧಿಯ ಸನಾತನ ಧರ್ಮವಿರೋಧಿ ಗೀಳಿಗೆ - ಅನಾಗರೀಕ ಪ್ರವೃತ್ತಿಗೆ ಇಡೀ ಹಿಂದು ಸಮಾಜದಿಂದ ತುಂಬು ಆಕ್ರೋಶ, ವಿರೋಧ ವ್ಯಕ್ತವಾಗಿದೆ.

ಸುಪ್ರೀಂ ಎಚ್ಚರಿಕೆ ಮರೆತ ಉದಯನಿಧಿ: ಉದಯನಿಧಿಯ ಸನಾತನ ಧರ್ಮ ವಿರೋಧಿ ಉದ್ಧಟತನದ ಟೀಕೆಗಳಿಗೆ ಕಳೆದ ವರ್ಷ ಸುಪ್ರೀಂಕೋರ್ಟ್ ಛೀಮಾರಿ ಹಾಕಿತ್ತು ಮತ್ತು ಈ ರೀತಿ ದ್ವೇಷ ಭಾಷಣ ಕೂಡದೆಂದು ಎಚ್ಚರಿಸಿತ್ತು. ಆದರೆ ಈ ತಮಿಳು ನಾಯಕ ಸುಪ್ರೀಂಕೋರ್ಟ್ ಛೀಮಾರಿಯನ್ನು ಮರೆತಂತಿದೆ. ಕೇವಲ ವೋಟ್‌ಬ್ಯಾಂಕ್ ರಾಜನೀತಿಗಾಗಿ ಇಡೀ ಜಗತ್ತೇ ಗೌರವಿಸುತ್ತಿರುವ, ಭಾರತದ ಮೂಲಾಧಾರವಾಗಿರುವ ಸನಾತನ ಧರ್ಮವನ್ನು ಪದೇ ಪದೇ ನಿಂದಿಸುವ ಡಿಎಂಕೆ ನಾಯಕನ ತುಚ್ಛ ನಡೆಗೆ ತಮಿಳ್ನಾಡಷ್ಟೇ ಅಲ್ಲ, ದೇಶಾದ್ಯಂತದ ಹಿಂದು ಸಂಘಟನೆಗಳು, ಹಿಂದು ಸಮಾಜ ತೀವ್ರ ಆಕ್ರೋಶ ವ್ಯಕ್ತಪಡಿಸಿವೆ.

ಯಾವುದೇ ಹಕ್ಕಿಲ್ಲ: ತಮಿಳುನಾಡಿನ ಸಾಂಪ್ರದಾಯಿಕ ಗೀತೆ ತಮಿಳು ತಾಯಿ ವಾಳ್ತುವನ್ನು ಬದಿಗೊತ್ತುವ ಯಾವ ಪ್ರಯತ್ನಗಳಿಗೂ ನಾವು ಸಮ್ಮತಿಸುವುದಿಲ್ಲ ಎಂದು ತಮಿಳುನಾಡು ವಿಧಾನಸಭೆಯ ವಿಪಕ್ಷ ನಾಯಕ ಉದಯನಿಧಿ, ವಿಧಾನಸಭೆಯಲ್ಲಿ ತನ್ನ ಚೊಚ್ಚಲ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಇದೇ ವೇಳೆ ಭಾರತದ ಮೂಲಪರಂಪರೆಯೇ ಆಗಿರುವ, ಭಾರತದ ತಾಯಿ ಸಮಾನ ಸಹಸ್ರಾರು ವರ್ಷಗಳ ಹಿನ್ನೆಲೆಯ ಸನಾತನ ಧರ್ಮವನ್ನು ಅಪಮಾನಿಸುವ, ನಿಂದಿಸುವ ಯಾವುದೇ ಹಕ್ಕು ಉದಯನಿಧಿಗಿಲ್ಲ ಎಂದು ಹಿಂದು ಸಮಾಜ ಈತನನ್ನು ಕಟುವಾಗಿ ತರಾಟೆಗೆತ್ತಿಕೊಂಡಿದೆ.

ಸನಾತನ ಧರ್ಮ ನಿಂದಿಸಿದ ವಿಪಕ್ಷಗಳು ಸೋತು ಸುಣ್ಣ: ಡಿಎಂಕೆ ಮತ್ತಿತರ ವಿರೋಧಪಕ್ಷಗಳು ವೋಟ್‌ಬ್ಯಾಂಕ್ ರಾಜನೀತಿಗಾಗಿ ಸನಾತನ ಧರ್ಮ ವಿರುದ್ಧ ದ್ವೇಷ ಕಾರುತ್ತಿವೆ ಎಂದು, ಸನಾತನ ಧರ್ಮವನ್ನು ಮತ್ತೆ ಅನ್ಯಾಯವಾಗಿ ನಿಂದಿಸಿರುವ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್‌ರನ್ನು ಬಿಜೆಪಿ ಕಟುವಾಗಿ ತರಾಟೆಗೆತ್ತಿಕೊಂಡು ಛೀಮಾರಿ ಹಾಕಿದೆ. ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ದಯನೀಯವಾಗಿ ಪರಾಭವಗೊಂಡ ಹೊರತೂ ಪಕ್ಷ ನಾಯಕ ಉದಯನಿಧಿ ತನಗೆ ಸಾಧ್ಯವಿರುವ ಒಂದೇ ಒಂದು 'ಶ್ರೇಷ್ಠ ಕಾಯಕ'ವಾದ ಸನಾತನ ಧರ್ಮ ನಿಂದನೆಯಲ್ಲಿ ಮತ್ತೆ ತೊಡಗಿರುವುದು ತೀರಾ ನಾಚಿಕೆಗೇಡು. ಸನಾತನ ಧರ್ಮದ ಅಪಮಾನ, ಸನಾತನ ಧರ್ಮ ವಿರುದ್ಧ ದ್ವೇಷ ಹರಡುವುದು ಮಾತ್ರ ಉದಯನಿಧಿಗೆ ಗೊತ್ತು. ಕಳೆದ ಬಾರಿ ಸನಾತನ ಧರ್ಮ ವಿರೋಧಿ ನಿಂದೆ ಮಾಡಿದ್ದಕ್ಕೆ ಸರ್ವೋಚ್ಚ ನ್ಯಾಯಾಲಯ ಉದಯನಿಧಿಯನ್ನು ತರಾಟೆಗೆತ್ತಿಕೊಂಡು, ಈ ತೆರ ದ್ವೇಷ ಭಾಷಣ ಸಲ್ಲದೆಂದು ಎಚ್ಚರಿಸಿತ್ತು , ಈ ಎಚ್ಚರಿಕೆ ಉದಯನಿಧಿಗೆ ಬಹುಶ: ಮರೆತಿದೆ ಎಂದು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಎಕ್ಸ್‌ಗೆ ಪೋಸ್ಟ್ ಮಾಡಿರುವ ವಿಡಿಯೋದಲ್ಲಿ ಟೀಕಿಸಿದ್ದಾರೆ.

ಮಗ ಈ ಹಿಂದೆ ಸನಾತನ ಧರ್ಮವನ್ನು ಅಪಮಾನಿಸುವ ದುರಹಂಕಾರ ಮೆರೆದಾಗಲೂ ತಂದೆ, ಮಾಜಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಮಗನನ್ನು ತಿದ್ದಿ ಬುದ್ಧಿ ಹೇಳುವ ಕೆಲಸ ಮಾಡಿಲ್ಲ, ಬದಲಾಗಿ ಮಗನಿಗೆ ಉಪ ಮುಖ್ಯಮಂತ್ರಿ ಪಟ್ಟ ಕಟ್ಟಿದ್ದರು. ಕಾಂಗ್ರೆಸ್ ಕೂಡ ಉದಯನಿಧಿ ದುರ್ವರ್ತನೆಯನ್ನು ಖಂಡಿಸಿಲ್ಲ. ಡಿಎಂಕೆ ಚುನಾವಣೆಯಲ್ಲಿ ಸೋತು ನೆಲಕಚ್ಚಿದೆ. ಇವರ ಹಿಂದು ವಿರೋಧಿ, ಸನಾತನ ವಿರೋಧಿ ದೃಷ್ಟಿಕೋನವನ್ನು ಜನತೆ ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಆದರೂ ಬುದ್ಧಿ ಕಲಿಯದ ಉದಯ ನಿಧಿ ಇದೀಗಲೂ ಸನಾತನ ಧರ್ಮ ನಿಂದೆಯಲ್ಲಿ ತೊಡಗಿರುವುದು ಖಂಡನಾರ್ಹ ಎಂದ ಪೂನಾವಾಲಾ ವಿಡಿಯೋದಲ್ಲಿ ಟೀಕಿಸಿದ್ದಾರೆ.



ತ.ನಾಡಿನಲ್ಲಿ ಸನಾತನ ಧರ್ಮ ಬೆಳೆಯಲ್ಲ: ಕೈ ಮುಸ್ಲಿಂ ನಾಯಕ

ತನ್ನ ಹಳೆಯ ಮಿತ್ರ ಪಕ್ಷ ಡಿಎಂಕೆಗೆ ವಿಶ್ವಾಸದ್ರೋಹವೆಸಗಿ ತಮಿಳಗ ವೆಟ್ರಿ ಕಳಗಂ ಬೆಂಬಲಿಸಿದ ಕಾಂಗ್ರೆಸ್ ಪಕ್ಷದ ಮುಸ್ಲಿಂ ನಾಯಕನೊಬ್ಬ ಉದಯನಿಧಿ ಸ್ಟಾಲಿನ್ ನೀಡಿದ ಸನಾತನ ಧರ್ಮ ಅಳಿಸಬೇಕೆಂಬ ಹೇಳಿಕೆಗೆ ಬೆಂಬಲ ನೀಡಿ ಮಾತನಾಡಿದ್ದಾನೆ. ಚೆನ್ನೈನ ವೇಲಚೇರಿ ಕ್ಷೇತ್ರದ ಮಾಜಿ ಶಾಸಕ ಜೆಎಂಎಚ್ ಆಸ್ಸಾನ್ ಮೌಲಾನಾ, ಎಡಪ್ಪಾಡಿ ಹೊರಬಿದ್ದಿದ್ದಾರೆ, ಅಂದರೆ ನರೇಂದ್ರ ಮೋದಿ ಹೊರಬಿದ್ದಿದ್ದಾರೆ, ಅಂದರೆ ಸತಾನದ ಧರ್ಮ ಈಗಾಗಲೇ ತಮಿಳುನಾಡು ರಾಜ್ಯದಿಂದಲೇ ಹೊರಬಿದ್ದಿದೆ. ತಮಿಳುನಾಡಿನಲ್ಲಿ ಸನಾತನ ಧರ್ಮ ಬೆಳೆಯುವುದಿಲ್ಲ. ತಮಿಳುನಾಡು, ಇಂತಹ ವಿಚಾರಗಳನ್ನೆಲ್ಲಾ ಮೀರಿ ನಿಂತ ರಾಜ್ಯ ಎಂದು ಮೌಲಾನಾ ಹೇಳಿದ್ದಾನೆ. ಎಐಎಡಿಎಂಕೆ ನೇತೃತ್ವದ ಎನ್‌ಡಿಎ ಸೋಲು ಮತ್ತು ಟಿವಿಕೆ ವಿಜಯ್ ಗೆಲುವನ್ನು ಮೌಲಾನಾ ಹೋಲಿಕೆ ಮಾಡಿದ್ದಾನೆ.



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಹಿಂದೆ ರಾಜಸ್ಥಾನದಲ್ಲಿನ ಖಾಸಗಿ ಕೋಚಿಂಗ್ ಕೇಂದ್ರಗಳ ಕೈವಾಡ!

ನೀಟಾದ ಪ್ರೈವೇಟ್ ಮಾಫಿಯಾ ಜಾಲ

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು ದೇಶಾದ್ಯಂತ ಭಾರೀ ಸುದ್ದಿಯಾಗಿದೆ. 2026ರ ಮೇ 3ರಂದು ನಡೆದ ನೀಟ್ ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆಯು ರಾಜಸ್ಥಾನದಲ್ಲಿ, ಅದರಲ್ಲೂ ವಿಶೇಷವಾಗಿ ಸೀಕರ್‌ನಲ್ಲಿ ನಡೆಯುತ್ತಿರುವ ಖಾಸಗಿ ಕೋಚಿಂಗ್ ಕೇಂದ್ರಗಳ ಮಾಫಿಯಾ ಮತ್ತು ಕಪ್ಪು ಆರ್ಥಿಕತೆ ಮೇಲೆ ಬೆಳಕು ಚೆಲ್ಲುತ್ತದೆ. ಆರಂಭದಲ್ಲಿ ಗೆಸ್ ಪೇಪರ್ ಸೋರಿಕೆ ಆಗಿತ್ತೆಂದು ಅದನ್ನು ಪರಿಗಣಿಸಿರಲಿಲ್ಲ. ಆದರೆ 135ರಿಂದ 150 ಪ್ರಶ್ನೆಗಳನ್ನು ಸೋರಿಕೆ ಮಾಡಲಾಗಿದ್ದು, ಇವು 720 ಒಟ್ಟು ಅಂಕಗಳಲ್ಲಿ 600 ಅಂಕಗಳ ಪ್ರಶ್ನೆಗಳಾಗಿವೆ. ರಾಜಸ್ಥಾನ ವಿಶೇಷ ಕಾರ್ಯಾಚರಣೆ ಗುಂಪು (ಎಸ್‌ಒಜಿ) ನಡೆಸಿದ ತನಿಖೆಯಲ್ಲಿ ತಿಳಿದುಬಂದಿದೆ. 400 ಸದಸ್ಯರನ್ನು ಹೊಂದಿರುವ ಪ್ರೈವೇಟ್ ಮಾಫಿಯಾ ಹೆಸರಿನ ಎನ್‌ಕ್ರಿಪ್ಟೆಡ್ ಟೆಲಿಗ್ರಾಂ ಗುಂಪಿನಿಂದ ವಾಟ್ಸ್ಯಾಪ್ ಮೂಲಕವೂ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಪ್ರೈವೇಟ್ ಮಾಫಿಯಾ ಹೆಸರಿನಿಂದ ರಾಜಸ್ಥಾನದ ಕೋಟಾ ಮತ್ತು ಸೀಕರ್ ನಂತಹ ನಗರಗಳಲ್ಲಿ ವೈದ್ಯಕೀಯ ಕೋಚಿಂಗ್ ಉದ್ಯಮಗಳು ನಡೆಸುತ್ತಿರುವ ಖಾಸಗಿ ಮಾಫಿಯಾಗಳು ಬೆಳಕಿಗೆ ಬರುತ್ತವೆ. ಹಣಕ್ಕಾಗಿ ನೀಟ್ ಮತ್ತು ಕೋಚಿಂಗ್ ಉದ್ಯಮದಲ್ಲಿನ ಮಾಫಿಯಾ ಜಾಲದ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಕೋಚಿಂಗ್ ಕೇಂದ್ರಗಳ ಮಧ್ಯೆ ಸ್ಪರ್ಧೆ

ಟಾಪ್ ರ್‍ಯಾಂಕ್ ವಿದ್ಯಾರ್ಥಿಗಳನ್ನು ಸೃಷ್ಟಿಸಬೇಕೆಂಬ ಸ್ಪರ್ಧೆ ಎಲ್ಲಾ ಕೋಚಿಂಗ್ ಕೇಂದ್ರಗಳ ಮಧ್ಯೆ ಏರ್ಪಡುತ್ತವೆ. ಕೋಚಿಂಗ್ ಕೇಂದ್ರಗಳ ನಡುವಿನ ಈ ಸ್ಪರ್ಧೆ ಕಾನೂನುಬಾಹಿರ ಚಟುವಟಿಕೆಗಳಿಗೆ ಆಸ್ಪದ ನೀಡುತ್ತದೆ. ತಮ್ಮ ಕೋಚಿಂಗ್ ಕೇಂದ್ರಗಳ ವಿದ್ಯಾರ್ಥಿಗಳು ಹೆಚ್ಚು ಸ್ಕೋರ್ ಮಾಡುವ ಮೂಲಕ ಕೋಚಿಂಗ್ ಉದ್ಯಮದಲ್ಲಿ ತಮ್ಮ ಸಂಸ್ಥೆಗೆ ಬೇಡಿಕೆ ಹೆಚ್ಚಾಗಬೇಕೆಂದು ಸಕ್ಸಸ್ ರೇಟ್ ಹೆಚ್ಚಿಸಲು ಸೋರಿಕೆಯಾದ ಪ್ರಶ್ನೆ ಪತ್ರಿಕೆಗಳನ್ನು ಖರೀದಿಸುತ್ತವೆ.

ಪ್ರಶ್ನೆ ಪತ್ರಿಕೆ ಸೋರಿಕೆ ಜಾಲಗಳು

ತನಿಖಾ ಸಂಸ್ಥೆಗಳ ಪ್ರಕಾರ, ಗೆಸ್ ಪೇಪರ್ ಪ್ರಶ್ನೆ ಪತ್ರಿಕೆ ಸೋರಿಕೆಯು ಹೆಚ್ಚಾಗಿ ಕೋಚಿಂಗ್ ಸಂಪರ್ಕದ ವಾಟ್ಸ್ಯಾಪ್ ಮತ್ತು ಟೆಲಿಗ್ರಾಂ ಗುಂಪುಗಳ ಮೂಲಕ ನಡೆಯುತ್ತವೆ.



ಮಧ್ಯವರ್ತಿಗಳು

ಕೋಚಿಂಗ್ ಕೇಂದ್ರಗಳಲ್ಲಿನ ಹಾಸ್ಟೆಲ್ ಮಾಲೀಕರು ಅಥವಾ ವೃತ್ತಿಜೀವನ ಸಲಹೆಗಾರರು ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಮಧ್ಯವರ್ತಿಗಳಾಗಿ ಇರುತ್ತಾರೆ. ಈ ಮಧ್ಯವರ್ತಿಗಳು ಸೋರಿಕೆಯಾದ ಪ್ರಶ್ನೆ ಪತ್ರಿಕೆಗಳನ್ನು 5 ಲಕ್ಷದಿಂದ 80 ಲಕ್ಷ ರೂ.ವರೆಗಿನ ಶುಲ್ಕದಲ್ಲಿ ಮಾರಾಟ ಮಾಡುತ್ತಾರೆ.

ರಾಜಸ್ಥಾನದಲ್ಲಿ ವೈದ್ಯಕೀಯ ಶಿಕ್ಷಣದ ಹುಚ್ಚು

ವೈದ್ಯಕೀಯ ಕ್ಷೇತ್ರದ ಹಿಂದೆ ಆಳವಾಗಿ ಬೇರೂರಿದ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳೇ ರಾಜಸ್ಥಾನದಲ್ಲಿ ವೈದ್ಯಕೀಯ ಶಿಕ್ಷಣದ ಹುಚ್ಚು ಹಿಡಿಸಿದೆ. ಇದರಿಂದ ಹಲವಾರು ದಂಧೆಕೋರರು ಹುಟ್ಟಿಕೊಂಡಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ಉದ್ಯೋಗ ಮಾಡುವುದರಿಂದ ಸಮಾಜ ಗೌರವಿಸುತ್ತದೆ. ಮುಖ್ಯವಾಗಿ ವೈದ್ಯಕೀಯ ಕ್ಷೇತ್ರ, ಅತಿ ಹೆಚ್ಚು ವೇತನ ಜೇಬಿಗಿಳಿಸುವ ಕ್ಷೇತ್ರಗಳಲ್ಲೊಂದು.

ಸಾಮಾಜಿಕ ಗೌರವ: ವೈದ್ಯಕೀಯ ಕ್ಷೇತ್ರವನ್ನು ರಾಜಸ್ಥಾನದಲ್ಲಿ ಅತ್ಯಂತ ಗೌರವಯುತ ಉದ್ಯೋಗವನ್ನಾಗಿ ಕಾಣುತ್ತಾರೆ. ಇದು ಸೇವಾ ಪ್ರಜ್ಞೆ ನೀಡುವುದಲ್ಲದೆ, ಸಮಾಜದಲ್ಲಿ ಅತ್ಯುನ್ನತ ಸ್ಥಾನಮಾನವನ್ನು ನೀಡುತ್ತದೆ.

ಉದ್ಯೋಗ ಸುರಕ್ಷತೆ: ವೈದ್ಯಕೀಯ ಉದ್ಯೋಗ ಅತ್ಯಂತ ಸುರಕ್ಷಿತ ವೃತ್ತಿಜೀವನವೆಂದು ಪರಿಗಣಿಸಲ್ಪಡುತ್ತದೆ. ಸರ್ಕಾರ ಮತ್ತು ಖಾಸಗಿ ವಲಯಗಳಲ್ಲಿ ಸಾಕಷ್ಟು ಉದ್ಯೋಗ ಅವಕಾಶಗಳಿದ್ದು, ಉದ್ಯೋಗ ಸುರಕ್ಷತೆಯ ಖಾತರಿ ಇರುತ್ತದೆ.

ಆರ್ಥಿಕ ಬೆಳವಣಿಗೆ: ಹಲವು ಬಡ ಕುಟುಂಬಗಳಿಗೆ ತಮ್ಮ ಮಕ್ಕಳಿಗೆ ಎಂಬಿಬಿಎಸ್ ಮಾಡಿಸಬೇಕು, ಅದರಿಂದ ತಮ್ಮ ಆರ್ಥಿಕ ಸಂಕಷ್ಟಗಳೆಲ್ಲವೂ ಹೋಗಿ, ತಾವೂ ಸಹ ಸಮಾಜದಲ್ಲಿ ಗೌರವದಿಂದ ಬದುಕಬಹುದು, ಐಷಾರಾಮಿ ಜೀವನ ನಡೆಸಬಹುದು ಎಂಬ ಆರ್ಥಿಕ ಬೆಳವಣಿಗೆ ದೃಷ್ಟಿಕೋನ ಹೊಂದಿರುತ್ತಾರೆ.

ಇತ್ತೀಚೆಗಿನ ಕೆಲವು ಹಗರಣಗಳು

ಡಮ್ಮಿ ಕ್ಯಾಂಡಿಡೇಟ್ ಅಥವಾ ಸಾಲ್ವರ್ ಗ್ಯಾಂಗ್: 2025ರ ಜೂನ್‌ನಲ್ಲಿ ಏಮ್ಸ್ ಜೋಧ್‌ಪುರ ವಿದ್ಯಾರ್ಥಿ ಕೆಲವು ವರ್ಷಗಳ ಹಿಂದೆ ತನ್ನದೇ ಪ್ರವೇಶ ಪರೀಕ್ಷೆ ಬರೆಯಲು ಡಮ್ಮಿ ಕ್ಯಾಂಡಿಡೇಟ್ ಬಳಸಿ ಸಿಕ್ಕಿಬಿದ್ದಿದ್ದಾನೆ. ಹಲವು ಬಡ ವಿದ್ಯಾರ್ಥಿಗಳು ಹಣಕ್ಕಾಗಿ ಶ್ರೀಮಂತ ವಿದ್ಯಾರ್ಥಿಗಳ ಬದಲಿಗೆ ಪರೀಕ್ಷೆ ಬರೆಯುತ್ತಾರೆ. ಇಂತಹ ಪ್ರಕರಣಗಳೂ ರಾಜಸ್ಥಾನದಲ್ಲಿ ಹೆಚ್ಚಾಗಿ ಬೆಳಕಿಗೆ ಬರುತ್ತವೆ. ಇವರು ನೀಟ್, ಎಸ್‌ಎಸ್‌ಸಿ ಪರೀಕ್ಷೆಗಳಲ್ಲಿ ಇತರರಿಗಾಗಿ ಹಣ ಪಡೆದು ಪರೀಕ್ಷೆ ಬರೆಯುತ್ತಾರೆ.

ಸ್ಕೋರ್ ಮ್ಯಾನಿಪುಲೇಶನ್: 2025ರಲ್ಲಿ ಸ್ಕೋರ್ ಮ್ಯಾನಿಪುಲೇಶನ್ ನಡೆಸಲು ಒಪ್ಪಿದ ಅಧಿಕಾರಿಗಳನ್ನು ಸಿಬಿಐ ಬಂಧಿಸಿತ್ತು. ಒಬ್ಬ ವಿದ್ಯಾರ್ಥಿಗೆ 90 ಲಕ್ಷ ರೂ. ಎಂಬಂತೆ ದರ ನಿಗದಿಪಡಿಸಿ ಫೇಲ್ ಅಂಕಗಳನ್ನು ಬದಲಾಯಿಸಲು ಅಧಿಕಾರಿಗಳು ಒಪ್ಪಿಕೊಂಡಿದ್ದ ಪ್ರಕರಣ ರಾಜಸ್ಥಾನದಲ್ಲಿ ನಡೆದಿತ್ತು.

ವೈದ್ಯಕೀಯ ಕಾಲೇಜು ಮೂಲಸೌಕರ್ಯ ಹಗರಣ: ಗುಣಮಟ್ಟ ಮಾನದಂಡಕ್ಕಿಂತ ಕಳಪೆ ಕಟ್ಟಡ ಮೂಲಸೌಕರ್ಯಗಳಿಗೆ ವೈದ್ಯಕೀಯ ಕಾಲೇಜು ಪರವಾನಗಿ ನೀಡಿದ ಹಗರಣವೊಂದು 2025ರ ಜುಲೈನಲ್ಲಿ ಬೆಳಕಿಗೆ ಬಂದಿತ್ತು. ಒಬ್ಬ ದೇವಮಾನವ ಮತ್ತು ಪ್ರಮುಖ ಅಧಿಕಾರಿಗಳು ಈ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದರು.

ನೀಟ್ ಮತ್ತು ಕೋಚಿಂಗ್ ಮಾಫಿಯಾ

ಎಂಬಿಬಿಎಸ್, ಬಿಡಿಎಸ್ ಇತರ ವೈದ್ಯಕೀಯ ಮತ್ತು ದಂತ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ನೀಟ್ ಕಡ್ಡಾಯವಾಗಿದೆ. ಇದನ್ನೇ ತಮ್ಮ ಬೇಳೆ ಬೇಯಿಸಿಕೊಳ್ಳಲು ಬಳಸಿಕೊಳ್ಳುವ ಕೋಚಿಂಗ್ ಮಾಫಿಯಾ ಕ್ರಿಮಿನಲ್‌ಗಳು ಕೋಚಿಂಗ್ ನೀಡುವುದಾಗಿ ನೀಟ್ ಆಕಾಂಕ್ಷಿಗಳನ್ನು ಆಕರ್ಷಿಸುತ್ತಾರೆ. ಇವು ಭಾರೀ ಶುಲ್ಕ ಹೇರುವುದಲ್ಲದೆ, ಪ್ರಶ್ನೆ ಪತ್ರಿಕೆ ಸೋರಿಕೆ ಗ್ಯಾಂಗ್‌ಗಳೊಂದಿಗೆ ಸಂಪರ್ಕದಲ್ಲಿ ಇರುತ್ತಾರೆ.

ನೀಟ್ ಪರೀಕ್ಷೆ ಹೇಗೆ ನಡೆಯುತ್ತದೆ?

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಎಂಬಿಬಿಎಸ್, ಬಿಡಿಎಸ್ ಮತ್ತು ಇತರ ವೈದ್ಯಕೀಯ ಸಂಬಂಧಿತ ಶಿಕ್ಷಣಗಳಿಗೆ ಪ್ರವೇಶ ಪಡೆಯಲು ನೀಟ್ ಪರೀಕ್ಷೆಯನ್ನು ನಡೆಸುತ್ತದೆ. ಇದು ಭಾರತೀಯ ವೈದ್ಯಕೀಯ ಮಂಡಳಿ ಮತ್ತು ಭಾರತೀಯ ದಂತ ಮಂಡಳಿ ಮಾನ್ಯತೆ ಪಡೆದ ವೈದ್ಯಕೀಯ ಹಾಗೂ ದಂತ ಕಾಲೇಜುಗಳಲ್ಲಿನ ಪ್ರವೇಶಕ್ಕೆ ಅನ್ವಯಿಸುತ್ತದೆ. ಭಾರತದ ಮತ್ತು ಅಂತಾರಾಷ್ಟ್ರೀಯ ವಿದ್ಯಾರ್ಥಿಗಳು ವರ್ಷಕ್ಕೊಮ್ಮೆ ನಡೆಯುವ ನೀಟ್ ಪರೀಕ್ಷೆ ಬರೆಯಬಹುದು. ಪರೀಕ್ಷೆಯಲ್ಲಿ 180 ಎಂಸಿಕ್ಯೂ (ಬಹು ಆಯ್ಕೆಯ) ಪ್ರಶ್ನೆಗಳು ಇರುತ್ತವೆ. ಉಳಿದಂತೆ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ (ಸಸ್ಯ ಮತ್ತು ಪ್ರಾಣಿಶಾಸ್ತ್ರ) ವಿಷಯಗಳು ಒಳಗೊಂಡಿರುತ್ತವೆ. ಇಂಗ್ಲಿಷ್, ಹಿಂದಿ ಸೇರಿದಂತೆ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ನಡೆಯುತ್ತದೆ. ನೀಟ್ ಅಂಕಗಳು ಅತ್ಯಂತ ಮಹತ್ವದ್ದಾಗಿದೆ. ಅಂಕಗಳ ಆಧಾರದಲ್ಲೇ ಮೀಸಲಾತಿ, ವಿದ್ಯಾರ್ಥಿವೇತನ ಮತ್ತು ವಿದ್ಯಾರ್ಥಿಗಳ ಭವಿಷ್ಯ ಎಲ್ಲವೂ ಒಳಗೊಂಡಿರುತ್ತದೆ.

ಆಕಾಂಕ್ಷಿಗಳ ಆತ್ಮಹತ್ಯೆ

ರಾಜಸ್ಥಾನದ ಕೋಟಾದಲ್ಲಿ ನೀಟ್ ಆಕಾಂಕ್ಷಿಗಳ ಆತ್ಮಹತ್ಯೆ ಅತಿ ಹೆಚ್ಚು ನಡೆಯುತ್ತದೆ ಎಂದು ದಾಖಲೆಗಳು ಹೇಳುತ್ತವೆ. 2025ರಲ್ಲಿ ಕನಿಷ್ಠಪಕ್ಷ 14 ನೀಟ್ ಆಕಾಂಕ್ಷಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ದಿನನಿತ್ಯ 18 ಗಂಟೆಗಳ ಕಾಲ ನೀಟ್ ಪರೀಕ್ಷೆಗಾಗಿ ವಿದ್ಯಾರ್ಥಿಗಳು ತಯಾರಿ ಮಾಡುತ್ತಾರೆ. ಇದಲ್ಲದೆ ನೀಟ್‌ನಲ್ಲಿ ಅತ್ಯುತ್ತಮ ಅಂಕ ಬರಬೇಕೆಂಬ ಹೆತ್ತವರ ಕನಸು ಸಾಕಾರಗೊಳಿಸುವ ಒತ್ತಡ, ಕುಟುಂಬದ ಹಣಕಾಸು ಸಮಸ್ಯೆ, ನೀಟ್ ಪರೀಕ್ಷೆ ತಯಾರಿಗೆಂದು ಹೆತ್ತವರಿಂದ ದೂರವಿದ್ದು, ಒಂಟಿತನದಲ್ಲಿ ಇರುವುದು ಇತ್ಯಾದಿ ಹಲವು ಕಾರಣಗಳಿಂದ ನಿರೀಕ್ಷಿತ ಅಂಕ ಬರದಿದ್ದಾಗ ಕೆಲವು ಆಕಾಂಕ್ಷಿಗಳು ಆತ್ಮಹತ್ಯೆಗೆ ಶರಣಾಗುತ್ತಾರೆ. ಇದೇ ಕಾರಣಕ್ಕಾಗಿ ಆತ್ಮಹತ್ಯೆ ನಿರೋಧಕ ಫ್ಯಾನ್‌ಗಳನ್ನು ಹಾಸ್ಟೆಲ್‌ಗಳಲ್ಲಿ ಅಳವಡಿಸಲಾಗುತ್ತದೆ. ವಿದ್ಯಾರ್ಥಿಗಳಿಗೆ ಮೆಂಟಲ್ ಹೆಲ್ತ್ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

ಕಿರುಸುದ್ದಿ

ಸುವೇಂದು ಆಪ್ತನ ಹತ್ಯೆ: ಪ್ರಕರಣ ದಾಖಲಿಸಿದ ಸಿಬಿಐ

ಹೊಸದಿಲ್ಲಿ: ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿಯ ಆ್ತ ಸಹಾಯಕ ಚಂದ್ರನಾಥ್ ರಥ್ ಹತ್ಯೆ ಆರೋಪದ ಮೇಲೆ ಸಿಬಿಐ ಎಫ್‌ಐಆರ್ ದಾಖಲಿಸಿದ್ದು, ರಾಜ್ಯ ಪೊಲೀಸರಿಂದ ತನಿಖೆಯನ್ನು ವಹಿಸಿಕೊಂಡಿದೆ. ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ ಸಿಬಿಐ ಕ್ರಮ ಕೈಗೊಂಡಿದೆ. ಸಿಬಿಐ ವಿಶೇಷ ಅಪರಾಧದ ಡಿಐಜಿ ನೇತೃತ್ವದಲ್ಲಿ ಏಳು ಸದಸ್ಯರ ವಿಶೇಷ ತನಿಖಾ ತಂಡವನ್ನು ರಚಿಸಿದೆ. ಇದರಲ್ಲಿ ಸಿಬಿಐಯ ವಿವಿಧ ಘಟಕಗಳಿಂದ ಬಂದ ಕೆಲವು ಅತ್ಯುತ್ತಮ ತನಿಖಾಧಿಕಾರಿಗಳು ಸೇರಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತಂಡವು ಕೋಲ್ಕತ್ತಾದ ಜಂಟಿ ನಿರ್ದೇಶಕರಿಗೆ ವರದಿ ಮಾಡಲಿದೆ.

ಪಾಕ್ ಮಾರುಕಟ್ಟೆಯಲ್ಲಿ ಸ್ಫೋಟ: 10 ಮಂದಿ ಸಾವು

ಇಸ್ಲಾಮಾಬಾದ್: ಪಾಕಿಸ್ತಾನದ ವಾಯುವ್ಯ ಪಾಕಿಸ್ತಾನದ ಜನಸಂದಣಿಯಿರುವ ಮಾರುಕಟ್ಟೆಯಲ್ಲಿ ಮಂಗಳವಾರ ಭಾರೀ ಸ್ಫೋಟ ಸಂಭವಿಸಿದ್ದು, 10 ಮಂದಿ ಮೃತಪಟ್ಟಿದ್ದು, 32ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಜನಸಂದಣಿ ನೌರಂಗ್ ಬಜಾರ್‌ನಲ್ಲಿ ಸಂಭವಿಸಿದ ಸ್ಫೋಟವು ಬೀದಿಗಳಲ್ಲಿ ಭೀತಿ ಸೃಷ್ಟಿ ಮಾಡಿದೆ. ಅಫ್ಘಾನಿಸ್ತಾನದ ಗಡಿಯ ಸಮೀಪವಿರುವ ಪಾಕಿಸ್ತಾನದ ಲಕ್ಕಿ ಮಾರ್ವತ್ ಜಿಲ್ಲೆಯ ಸರಾಯ್ ನೌರಂಗ್ ಪಟ್ಟಣದಲ್ಲಿ ಬಾಂಬ್ ತುಂಬಿದ ರಿಕ್ಷಾದಿಂದ ಮಂಗಳವಾರ ಸ್ಫೋಟ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರಲ್ಲಿ ಇಬ್ಬರು ಟ್ರಾಫಿಕ್ ಪೊಲೀಸರು ಮತ್ತು ಒಬ್ಬ ಮಹಿಳೆ ಸೇರಿದ್ದಾರೆ ಎಂದು ಸ್ಥಳೀಯ ಪೊಲೀಸ್ ಮುಖ್ಯಸ್ಥ ಅಜ್ಮತ್ ಉಲ್ಲಾ ತಿಳಿಸಿದ್ದಾರೆ.

ಪಂಜಾಬ್ ಬಿಜೆಪಿ ಕಚೇರಿ ಮೇಲೆ ದುಷ್ಕರ್ಮಿಗಳ ದಾಳಿ

ಚಂಡೀಗಢ: ಪಂಜಾಬ್‌ನ ತರಣ್ ತರನ್ ಜಿಲ್ಲೆಯ ಬಿಜೆಪಿ ಕಚೇರಿ ಮೇಲೆ ದುಷ್ಕರ್ಮಿಗಳು ದಾಳಿ ನಡೆಸಿದ್ದು, ಸುಮಾರು 20 ಮಂದಿ ಯುವಕರು ಕಚೇರಿಗೆ ನುಗ್ಗಿ ಘೋಷಣೆ ಕೂಗಿ, ಕಚೇರಿಯ ಮೌಲ್ಯಯುತ ವಸ್ತುಗಳನ್ನು ಧ್ವಂಸ ಮಾಡಿದ್ದಾರೆ. ಅಲ್ಲದೆ ದುಷ್ಕರ್ಮಿಗಳು ಕಚೇರಿಯೊಳಗೆ ಮಸಿ ಎರಚಿದ್ದಾರೆ. ಈ ವೇಳೆ ವೇಳೆ ಕೆಲವು ಬಿಜೆಪಿ ನಾಯಕರು ಅಲ್ಲೇ ಇದ್ದರು ಎಂದು ವರದಿಯಾಗಿದೆ. ಸದ್ಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಸಿಸಿಟಿವಿ ದೃಶ್ಯಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ. ಈ ದಾಳಿ ಬಳಿಕ ರಾಜ್ಯದಲ್ಲಿ ರಾಜಕೀಯ ಉದ್ವಿಗ್ನತೆ ಹೆಚ್ಚಾಗಿದ್ದು, ಬಿಜೆಪಿ ನಾಯಕರು ರಾಜ್ಯದ ಕಾನೂನು-ಸುವ್ಯವಸ್ಥೆ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ. ಬಿಜೆಪಿ ಕಾರ್ಯಕರ್ತರು ದಾಳಿಯಲ್ಲಿ ಆಪ್ ಕಾರ್ಯಕರ್ತರ ಕೈವಾಡ ಇದೆ ಎಂದು ಆರೋಪಿಸಿದ್ದಾರೆ.

ಇಂದು ಸಿಎಂ ವಿಜಯ್‌ಗೆ ವಿಶ್ವಾಸಮತದ ಅಗ್ನಿಪರೀಕ್ಷೆ

ಚೆನ್ನೈ: ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಸರ್ಕಾರ ವಿಧಾನಸಭೆಯಲ್ಲಿ ಬುಧವಾರ ವಿಶ್ವಾಸಮತ ಯಾಚನೆಯ ಅಗ್ನಿಪರೀಕ್ಷೆ ಎದುರಿಸಲಿದೆ.

ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ 234ರಲ್ಲಿ 108 ಸ್ಥಾನಗಳನ್ನು ಗೆದ್ದು ಟಿವಿಕೆ ಬಹುದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಎರಡು ಕ್ಷೇತ್ರಗಳಲ್ಲಿ ಗೆದ್ದ ವಿಜಯ್, ಅಧಿಕಾರ ಸ್ವೀಕರಿಸುವಾಗ ಪೆರಂಬೂರ್ ಉಳಿಸಿಕೊಂಡು ತಿರುಚಿರಾಪ್ಪಳ್ಳಿ ಪೂರ್ವ ಕ್ಷೇತ್ರದಿಂದ ರಾಜೀನಾಮೆ ನೀಡಿದ್ದಾರೆ. ಈ ಕಾರಣದಿಂದ ಟಿವಿಕೆ 107 ಸ್ಥಾನಗಳಿಗೆ ಕುಸಿದಿತ್ತು. ಉಳಿದಂತೆ ಕಾಂಗ್ರೆಸ್, ವಿಸಿಕೆ, ಮುಸ್ಲಿಂ ಲೀಗ್ ಮತ್ತು ಎಡ ಪಕ್ಷಗಳೆಲ್ಲರ ಒಟ್ಟು 12 ಶಾಸಕರು ವಿಜಯ್ ಪರ ಇದ್ದಾರೆ. ಆದರೆ ತಿರುಪತ್ತೂರ್ ಕ್ಷೇತ್ರದಲ್ಲಿ ಡಿಎಂಕೆ ಅಭ್ಯರ್ಥಿ ಪೆರಿಯಕರುಪ್ಪನ್ ವಿರುದ್ಧ ಒಂದು ಮತದಿಂದ ಗೆದ್ದ ಟಿವಿಕೆ ಶಾಸಕ ಶ್ರೀನಿವಾಸ ಸೇತುಪತಿ ವಿಶ್ವಾಸಮತ ಪರೀಕ್ಷೆಯಲ್ಲಿ ಭಾಗವಹಿಸುವಂತಿಲ್ಲ ಎಂದು ಮದ್ರಾಸ್ ಹೈಕೋರ್ಟ್ ಮಂಗಳವಾರ ಆದೇಶ ಹೊರಡಿಸಿದೆ. ತನಿಖೆ ನಡೆಸಲು ಪೆರಿಯಕರುಪ್ಪನ್ ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಇದರಿಂದ ಟಿವಿಕೆ ಶಾಸಕರ ಸಂಖ್ಯೆ 106ಕ್ಕೆ ಕುಸಿದಿದೆ. ಎಐಎಡಿಎಂಕೆ ಶನ್ಮುಗಂ ಬಣದ 30 ಶಾಸಕರು ವಿಜಯ್ ಭೇಟಿಯಾಗಿ ಬೆಂಬಲ ಸೂಚಿಸಿದ್ದಾರೆ. ಎಎಂಎಂಕೆ ಶಾಸಕ ಎಸ್.ಕಾಮರಾಜ್ ಫೋರ್ಜರಿ ಆರೋಪ ಹಿಂಪಡೆದು ವಿಜಯ್‌ಗೆ ಬೆಂಬಲ ನೀಡಿದ್ದಾರೆ. ಟಿವಿಕೆ 120 ಶಾಸಕರ ಬೆಂಬಲವಿದೆ. ಬುಧವಾರವೇ ಸುಪ್ರೀಂ ಕೋರ್ಟ್‌ನಲ್ಲಿ ಟಿವಿಕೆ ಶಾಸಕನ ಪ್ರಕರಣದ ವಿಚಾರಣೆ ನಡೆಯಲಿದೆ.

ಕೈ ಸಿಎಂ ಆಯ್ಕೆ ಗೊಂದಲ ಮತದಾರರಿಗೆ ಅವಮಾನ

ಕೋಝಿಕ್ಕೋಡು: ಕೇರಳದಲ್ಲಿ ಯುಡಿಎಫ್ ಸ್ಪಷ್ಟ ಬಹುಮತ ಪಡೆದಿರುವ ಹೊರತಾಗಿಯೂ, ರಾಜ್ಯದ ಮುಂದಿನ ಮುಖ್ಯಮಂತ್ರಿ ಆಯ್ಕೆಯಲ್ಲಿ ಕಾಂಗ್ರೆಸ್ ನಾಯಕತ್ವ ಇನ್ನೂ ನಿರ್ಧಾರವೊಂದಕ್ಕೆ ಬರಲು ವಿಫಲವಾಗಿರುವುದನ್ನು ಸಂಸ್ಥಾ ಕೇರಳ ಜಮಿಯತ್ತುಲ್ ಉಲೇಮಾ(ಇಕೆ ಬಣ)ದ ಮುಖವಾಣಿ 'ಸುಪ್ರಭಾತಂ'ಟೀಕಿಸಿದೆ. ಇದು ತನಗೆ ಮತ ನೀಡಿದ ಮತದಾರರಿಗೆ ಕಾಂಗ್ರೆಸ್ ಮಾಡಿದ ಅವಮಾನ ಎಂದು ಅದು ಕಿಡಿಕಾರಿದೆ. ಈ ಗುಂಪು ಯುಡಿಎಫ್‌ನ ಪ್ರಮುಖ ಘಟಕಪಕ್ಷವಾಗಿರುವ ಮುಸ್ಲಿಂಲೀಗಿನೊಂದಿಗೆ ನಂಟು ಹೊಂದಿರುವ ಗುಂಪೆಂದು ಪರಿಗಣಿಸಲ್ಪಟ್ಟಿದ್ದು, ಲೀಗಿನ ಬಳಿಕ ಈ ಸಂಘಟನೆಯೂ ಕಾಂಗ್ರೆಸ್ ನಿಲುವಿನ ವಿರುದ್ಧ ತಿರುಗಿಬಿದ್ದಿದೆ. ಮುಖ್ಯಮಂತ್ರಿ ಹುದ್ದೆ ಕುರಿತಂತೆ ಅಂತ್ಯವಿಲ್ಲದ ಆಂತರಿಕ ಡ್ರಾಮಾಗಳ ಮೂಲಕ ಜನತೆಯನ್ನು ಅವಮಾನಿಸಲಾಗದು .ಇದು ಕಾಂಗ್ರೆಸ್ ನಾಯಕತ್ವದ ದೌರ್ಬಲ್ಯವನ್ನು ಬಯಲಿಗೆಳೆದಿದೆ ಎಂದು ಅದು ಟೀಕಿಸಿದೆ. ಕೇರಳದಲ್ಲಿ ಕಾಂಗ್ರೆಸ್ ಹೈಕಮಾಂಡ್ ಗಾಂಧಿ ಕುಟುಂಬದ ನಿಕಟವರ್ತಿ ಕೆ.ಸಿ.ವೇಣುಗೋಪಾಲ್ ಅವರನ್ನು ಬಹುಮತದ ಕಾಂಗ್ರೆಸ್ ಶಾಸಕರ ಬೆಂಬಲದೊಂದಿಗೆ ಮುಖ್ಯಮಂತ್ರಿಯಾಗಿಸಲು ಯತ್ನಿಸುತ್ತಿದ್ದರೆ, ಮುಸ್ಲಿಂಲೀಗ್ ವಿ.ಡಿ.ಸತೀಶನ್ ಅವರನ್ನು ಮುಖ್ಯಮಂತ್ರಿಯಾಗಿಸಬೇಕೆಂದು ಕಾಂಗ್ರೆಸ್ ಹೈಕಮಾಂಡ್ ಮೇಲೆ ಒತ್ತಡ ಹೇರುತ್ತಿದೆ. ಇದೀಗ ಹಿರಿಯ ಕಾಂಗ್ರೆಸ್ ನಾಯಕ ರಮೇಶ್ ಚೆನ್ನಿತ್ತಲ ಅವರು ಮುಖ್ಯಮಂತ್ರಿ ಹುದ್ದೆಯ ಸ್ಪರ್ಧೆಯಿಂದ ಹೊರಬಿದ್ದಿದ್ದರೂ, ಕೆ.ಸಿ.ವೇಣುಗೋಪಾಲ್ ಮತ್ತು ವಿ.ಡಿ.ಸತೀಶನ್ ನಡುವೆ ತೀವ್ರ ತಿಕ್ಕಾಟ ಮುಂದುವರಿದಿದೆ.ತನಗೆ ಮುಖ್ಯಮಂತ್ರಿ ಹುದ್ದೆಯ ಹೊರತಾಗಿ ಬೇರೇನೂ ಬೇಡ ಎಂದು ಸತೀಶನ್ ಪಟ್ಟುಹಿಡಿದಿರುವುದಾಗಿ ಹೇಳಲಾಗಿದೆ.

ಪ.ಬಂಗಾಳ: ರಸ್ತೆ ಬದಿಯ ನಮಾಜ್‌ಗೆ ಅವಕಾಶವಿಲ್ಲ

ಕೋಲ್ಕತ್ತಾ: ಅರಾಜಕತೆ ತುಂಬಿಕೊಂಡಿದ್ದ ಪಶ್ಚಿಮ ಬಂಗಾಳದಲ್ಲಿ ಬದಲಾವಣೆ ಪರ್ವ ಆರಂಭವಾಗಿದೆ. ಹೊಸದಾಗಿ ರೂಪುಗೊಂಡ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಶಾಂತಿ,ಸುವ್ಯವಸ್ಥೆಯನ್ನು ಮತ್ತೆ ತರಲು ಪ್ರಾರಂಭಿಸಿದೆ. ನಮ್ಮ ಆಡಳಿತದಲ್ಲಿ ರಸ್ತೆ ಬದಿಯ ನಮಾಜ್‌ಗೆ ಅನುಮತಿ ನೀಡಲಾಗುವುದಿಲ್ಲ. ಜಾನುವಾರು ಕಳ್ಳಸಾಗಣೆ ಮತ್ತು ಕಲ್ಲು ತೂರಾಟದ ಘಟನೆಗಳ ವಿರುದ್ಧವೂ ಕ್ರಮವನ್ನು ತೀವ್ರಗೊಳಿಸಲಾಗುವುದು ಪಕ್ಷದ ಶಾಸಕ ಅರ್ಜುನ್ ಸಿಂಗ್ ಅವರು ಸ್ಪಷ್ಟನೆ ನೀಡಿದ್ದಾರೆ.

ಸರ್ಕಾರ ಅಧಿಕಾರ ವಹಿಸಿಕೊಂಡ ಕೂಡಲೇ ಕೈಗೊಂಡ ನಿರ್ಧಾರಗಳ ಬಗ್ಗೆ ಮಾಧ್ಯಮದ ಜತೆ ಮಾತನಾಡಿದ ಸಿಂಗ್, ಈಗಾಗಲೇ ಸಂಪುಟ ಮಟ್ಟದಲ್ಲಿ ಹಲವಾರು ನಿರ್ದೇಶನಗಳನ್ನು ಚರ್ಚಿಸಲಾಗಿದೆ ಎಂದು ಹೇಳಿದರು. ಸಚಿವ ಸಂಪುಟ ಸಭೆಯಲ್ಲಿ ಸಿಎಂ ಹಲವು ಆದೇಶಗಳನ್ನು ನೀಡಿದ್ದಾರೆ. ಬೀದಿಗಳಲ್ಲಿ ನಮಾಜ್ ಮಾಡಲು ಅವಕಾಶವಿರುವುದಿಲ್ಲ. ಅವರು ಮಸೀದಿಗಳಲ್ಲಿ ಪ್ರಾರ್ಥನೆ ಮಾಡಲಿ, ಆದರೆ ಬೀದಿಗಳಲ್ಲಿ ನಮಾಜ್ ಮಾಡಲು ಅವಕಾಶ ನೀಡಲಾಗುವುದಿಲ್ಲ ಎಂದು ಸಿಂಗ್ ತಿಳಿಸಿದರು. ಕೋಲ್ಕತ್ತಾದ ರೆಡ್ ರೋಡ್‌ನಲ್ಲಿ ನಡೆದ ಪ್ರಾರ್ಥನೆಗಳನ್ನು ಉಲ್ಲೇಖಿಸಿದ ಅವರು, ಬಿಜೆಪಿ ಆಡಳಿತದಲ್ಲಿ ಇಂತಹ ಕೂಟಗಳು ಮುಂದುವರಿಯುವುದಿಲ್ಲ ಎಂದು ಸೂಚಿಸಿದರು.

ರಾಜ್ಯದಲ್ಲಿ ಬಿಜೆಪಿಯ ಚುನಾವಣಾ ಪ್ರಚಾರದಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿದ್ದ ಜಾನುವಾರು ಕಳ್ಳಸಾಗಣೆ ಜಾಲಗಳು ಮತ್ತು ಕಲ್ಲು ತೂರಾಟವನ್ನು ಒಳಗೊಂಡ ಘಟನೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ ಎಂದು ಸಿಂಗ್ ಹೇಳಿದರು.

ಪಾಕ್‌ಗೆ ಚೀನಾ ನೆರವು ತಿಳಿದಿತ್ತು ಎಂದ ಜೈಸ್ವಾಲ್

ಹೊಸದಿಲ್ಲಿ: ಕಳೆದ ವರ್ಷದ ಮೇಯಲ್ಲಿ ನಡೆದ ಆಪರೇಷನ್ ಸಿಂದೂರ್ ವೇಳೆ ಪಾಕಿಸ್ತಾನಕ್ಕೆ ತಳಮಟ್ಟದಲ್ಲಿ ನೆರವು ನೀಡಿದ್ದಾಗಿ ಚೀನಾ ಮೊದಲ ಬಾರಿಗೆ ಒಪ್ಪಿಕೊಂಡಿರುವ ಬಗ್ಗೆ ಪ್ರತಿಕ್ರಿಯಿಸಿರುವ ವಿದೇಶಾಂಗ ಸಚಿವಾಲಯವು, ಇದು ಭಾರತಕ್ಕೆ ಮೊದಲೇ ತಿಳಿದಿತ್ತು. ಆದರೆ ಪಾಕಿಸ್ತಾನದ ಭಯೋತ್ಪಾದಕ ಮೂಲಸೌಕರ್ಯಗಳನ್ನು ರಕ್ಷಿಸುವ ತನ್ನ ಯತ್ನಗಳು ತನ್ನ ಗೌರವ ಮತ್ತು ಸ್ಥಾನಮಾನದ ಮೇಲೆ ಪರಿಣಾಮ ಬೀರುವಂಥದ್ದೇ ಎಂಬುದನ್ನು ಚೀನಾವೇ ಚಿಂತನೆ ನಡೆಸಬೇಕಷ್ಟೇ ಎಂದು ಮಂಗಳವಾರ ಮಾರ್ಮಿಕವಾಗಿ ಪ್ರತಿಕ್ರಿಯಿಸಿದೆ.

ಸಾಪ್ತಾಹಿಕ ಪತ್ರಿಕಾಗೋಷ್ಠಿಯಲ್ಲಿ,ಆಪರೇಷನ್ ಸಿಂದೂರ್ ವೇಳೆ ,ಚೀನಾ ತಾನು ಪಾಕಿಸ್ತಾನಕ್ಕೆ ನೆರವು ನೀಡಿದ್ದನ್ನು ಮೊದಲ ಬಾರಿಗೆ ಒಪ್ಪಿಕೊಂಡ ಬಗ್ಗೆ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರನ್ನು ಪ್ರಶ್ನಿಸಲಾಗಿತ್ತು.ನಾವು ಮೊದಲೇ ಏನನ್ನು ತಿಳಿದಿದ್ದೆವೋ ಅಂತಹ ಅಂಶಗಳನ್ನು ದೃಢೀಕರಿಸುವ ವರದಿಗಳನ್ನು ನಾವು ನೋಡಿದ್ದೇವೆ.ಆದರೆ ಭಯೋತ್ಪಾದಕ ಮೂಲಸೌಕರ್ಯಗಳಿಗೆ ಬೆಂಬಲ ನೀಡುವ ತನ್ನ ಯತ್ನಗಳು ತಮ್ಮ ಗೌರವ, ಸ್ಥಾನಮಾನಕ್ಕೆ ತಕ್ಕುದೇ ಎಂಬುದಾಗಿ ಯೋಚಿಸಬೇಕಾದ್ದು ತಮ್ಮನ್ನು ತಾವೇ ಜವಾಬ್ದಾರಿಯುತ ರಾಷ್ಟ್ರ ಎಂದು ಗುರುತಿಸಿಕೊಳ್ಳುವ ದೇಶಗಳದೇ ಜವಾಬ್ದಾರಿ ಎಂದರು.

ತಮಿಳುನಾಡು ರಾಜಕೀಯದಲ್ಲಿ ಮತ್ತೊಂದು ಮಹತ್ತರ ಬದಲಾವಣೆ

ಟಿವಿಕೆಗೆ ಎಐಎಡಿಎಂಕೆ ಷಣ್ಮುಗಂ ಬಣ ಬೆಂಬಲ

ಚೆನ್ನೈ : ಎಐಎಡಿಎಂಕೆ ನಾಯಕ ಎಡಪ್ಪಾಡಿ ಕೆ. ಪಳನಿಸ್ವಾಮಿ ಪಕ್ಷದ ಬದ್ಧವಿರೋಧಿ ಡಿಎಂಕೆ ಜತೆ ಮೈತ್ರಿಗೆ ಮುಂದಾಗಿದ್ದಾರೆಂದು ಆರೋಪಿಸಿ ಬಂಡೆದ್ದಿರುವ ಶಾಸಕರ ಗುಂಪೊಂದು , ಬುಧವಾರ ವಿಧಾನಸಭೆಯಲ್ಲಿ ವಿಶ್ವಾಸ ಮತ ಯಾಚಿಸಲಿರುವ ಟಿವಿಕೆ ನಾಯಕ ವಿಜಯ್ ನೇತೃತ್ವದ ಸರಕಾರಕ್ಕೆ ಬೆಂಬಲ ಘೋಷಿಸಿದೆ. ತನ್ಮೂಲಕ ಮಾಜಿ ಮುಖ್ಯಮಂತ್ರಿ ದಿ.ಜಯಲಲಿತಾ ಬೆಳೆಸಿದ ಎಐಎಡಿಎಂಕೆ ಒಡೆದು ಇಬ್ಭಾಗವಾಗುವ ಸಾಧ್ಯತೆಗಳು ದಟ್ಟವಾಗಿವೆ.

ಎಡಿಎಂಕೆ ಹಿರಿಯ ನಾಯಕರಾದ ಎಸ್.ಪಿ.ವೇಲುಮಣಿ ಮತ್ತು ಸಿ.ವೆ.ಷಣ್ಮುಗಂ ನೇತೃತ್ವದಲ್ಲಿ ಸುಮಾರು 30 ಶಾಸಕರ ಗುಂಪು ಬಂಡೆದಿದ್ದು, ಏ.23ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಹೀನಾಯವಾಗಿ ಸೋತ ಹೊರತೂ ನಾಯಕ ಸ್ಥಾನದಲ್ಲಿರುವುದು ಎಷ್ಟು ಸರಿ ಎಂದು ಎಡಪ್ಪಾಡಿ ಪಳನಿಸ್ವಾಮಿ ಅವರಿಗೆ ಸವಾಲೆಸೆದಿದೆ. ಈಚಿನ ವಿಧಾನಸಭಾ ಚುನಾವಣೆಯಲ್ಲಿ 164ಸ್ಥಾನಗಳಿಗೆ ಎಡಿಎಂಕೆ ಸ್ಪರ್ಧಿಸಿತ್ತಾದರೂ , ಬರೇ 47 ಸ್ಥಾನಗಳಲ್ಲಿ ಜಯಿಸಿತ್ತು. ನಾವು ಸಿ.ಜೋಸೆಫ್ ವಿಜಯ್‌ರನ್ನು ಭೇಟಿಯಾಗಿ, ಅವರ ಸರಕಾರಕ್ಕೆ ಬೆಂಬಲ ವ್ಯಕ್ತಪಡಿಸುವ ಪತ್ರ ಹಸ್ತಾಂತರಿಸುತ್ತೇವೆ. ಎಐಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಡಿಎಂಕೆ ಬೆಂಬಲದಲ್ಲಿ ಸರಕಾರ ರಚಿಸಲು ಬಯಸಿದ್ದಾರೆ. ವಾಸ್ತವದಲ್ಲಿ ಎಐಎಡಿಎಂಕೆ ಅಸ್ತಿತ್ವಕ್ಕೆ ಬಂದದ್ದೇ ಡಿಎಂಕೆಯನ್ನು ಕಿತ್ತೆಸೆಯಲು. ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ ಬೆಂಬಲದಲ್ಲಿ ಸರಕಾರ ರಚಿಸುವ ಪಳನಿಸ್ವಾಮಿ ಪ್ರಸ್ತಾವಕ್ಕೆ ಎಡಿಎಂಕೆಯ ಎಲ್ಲಾ ಸದಸ್ಯರ ವಿರೋಧವಿದೆ. ಇಂತಹ ಯಾವುದೇ ಪ್ರಸ್ತಾವವು ಎಐಎಡಿಎಂಕೆಯ ಮೂಲಭೂತ ಸಿದ್ಧಾಂತಗಳ ಉಲ್ಲಂಘನೆಯಾಗುವುದು ಎಂದು ಷಣ್ಮುಗಂ ಸುದ್ದಿಗಾರರಿಗೆ ತಿಳಿಸಿದ್ದಾರೆ.



ಮರಳಬೇಕಿದೆ ಅಮ್ಮನ ಆಳ್ವಿಕೆ: ಪಕ್ಷಕ್ಕೀಗ ಹೊಸ ಬದುಕೊಂದು ಅನಿವಾರ್ಯವಿದೆ ಮತ್ತು ಅಮ್ಮ(ಜಯಲಲಿತಾ)ನ ಆಳ್ವಿಕೆ ಮರಳಬೇಕಿದೆ. ಇದಕ್ಕಾಗಿ ನಾವು ಟಿವಿಕೆಗೆ ಬೆಂಬಲ ವ್ಯಕ್ತಪಡಿಸುತ್ತೇವೆ ಎಂದು ಷಣ್ಮುಗಂ ಹೇಳಿದ್ದಾರೆ. ಆದರೆ ಇದೆಲ್ಲವು ವದಂತಿ. ಭಿನ್ನಮತ ನಾಯಕರು ತಮ್ಮ ಜಿಲ್ಲೆಗಳಲ್ಲಿ ಚುನಾವಣೆ ಗೆಲ್ಲಲು ವಿಫಲರಾಗಿದ್ದಾರೆ. ಹಾಗಾಗಿ ಸುಳ್ಳಿನ ಕಂತೆಗಳನ್ನೇ ಹರಿಯಬಿಡುತ್ತಿದ್ದಾರೆಂದು ಎಐಎಡಿಎಂಕೆ ನಾಯಕತ್ವ ವಿಶದಪಡಿಸಿದೆ. ವೇಲುಮಣಿ, ಷಣ್ಮುಗಂ ಮತ್ತು ಸಿ.ವಿಜಯಭಾಸ್ಕರ್ ಟಿವಿಕೆ ಸರಕಾರದಲ್ಲಿ ಸಚಿವ ಸ್ಥಾನ ಪಡೆಯಲು ಹವಣಿಸುತ್ತಿದ್ದಾರೆ. ಇನ್ನು ಮೈತ್ರಿ ನಿರ್ಧಾರವನ್ನು ಬೆರಳೆಣಿಕೆಯ ಶಾಸಕರು ಕೈಗೊಳ್ಳುವಂತಿಲ್ಲ. ಪಕ್ಷದ ಪದಾಧಿಕಾರಿಗಳೆಲ್ಲರು ಪಳನಿಸ್ವಾಮಿ ನಾಯಕತ್ವಕ್ಕೆ ತುಂಬು ಬೆಂಬಲ ಮುಂದುವರೆಸಿದ್ದಾರೆ ಎಂದು ಎಐಎಡಿಎಂಕೆ ನಾಯಕತ್ವ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ವಿಶದಪಡಿಸಿದೆ.

ಪಾಕ್‌ನ ಇಬ್ಬಗೆ ನೀತಿ ಬಯಲು

ಹೊಸದಿಲ್ಲಿ: ಅಮೆರಿಕ-ಇರಾನ್ ನಡುವೆ ಶಾಂತಿ ಮಾತುಕತೆಯ ಮಧ್ಯವರ್ತಿ ಆಗುವುದರೊಂದಿಗೆ ಪಾಕಿಸ್ತಾನ ತನ್ನ ಬೇಳೆ ಬೇಯಿಸಿಕೊಳ್ಳುತ್ತಿದೆ. ಅಮೆರಿಕದ ದಾಳಿಯಿಂದ ತಪ್ಪಿಸಿಕೊಳ್ಳಲು ಇರಾನ್ ತನ್ನ ಅತ್ಯಾಧುನಿಕ ಎಫ್-35 ಸೇನಾ ವಿಮಾನವನ್ನು ಟೆಹ್ರಾನ್ ವಾಯುನೆಲೆಯಿಂದ ಪಾಕ್ ವಾಯುನೆಲೆಗೆ ಸ್ಥಳಾಂತರ ಮಾಡಿರುವುದು ಬಹಿರಂಗವಾಗಿದೆ. 1991ರಲ್ಲಿ ನಡೆದ ಮೊದಲ ಗಲ್ಫ್ ಯುದ್ಧ ಸಂದರ್ಭದಲ್ಲಿ ಸದ್ದಾಂ ಹುಸೇನ್ ಇದೇ ಯುದ್ಧತಂತ್ರ ಅನುಸರಿಸಿದ್ದರು. ಸದ್ದಾಂ ಹುಸೇನ್ ಯುದ್ಧತಂತ್ರವನ್ನೇ ಇರಾನ್ ಬಳಸಿಕೊಂಡಿದೆ. ಅಮೆರಿಕ-ಇಸ್ರೇಲ್ ಪಡೆಗಳು ಇರಾನ್ ಮೇಲೆ ವೈಮಾನಿಕ ದಾಳಿ ನಡೆಸುವ ಸಾಧ್ಯತೆ ಹಿನ್ನೆಲೆಯಿಂದ ಸೇನಾ ವಿಮಾನಕ್ಕೆ ಪಾಕ್ ಆಶ್ರಯ ನೀಡಿದೆ. ಮಧ್ಯವರ್ತಿಯಷ್ಟೇ ಅಲ್ಲದೆ, ಇರಾನ್ ಸೇನಾ ವಿಮಾನಕ್ಕೆ ಆಶ್ರಯದಾತನೂ ಆಗಿ ಕಾರ್ಯ ನಿರ್ವಹಿಸುತ್ತಿದೆ. ಇದು ಅಮೆರಿಕ ಸೆನೆಟರ್ ಲಿಂಡ್ಸೆ ಗ್ರಾಹಮ್ ಜಾಲತಾಣ ಪೋಸ್ಟ್‌ನಿಂದ ಬಯಲಾಗಿದೆ.

ಒಪ್ಪಿಕೊಂಡ ಪಾಕ್: ಇರಾನ್ ಸೇನಾ ವಿಮಾನಕ್ಕೆ ಆಶ್ರಯ ನೀಡಿರುವುದು ಸತ್ಯ. ಆದರೆ ಇರಾನ್ ಸೇನಾ ವಿಮಾನ ಇಸ್ಲಾಮಾಬಾದ್‌ನಲ್ಲಿ ನಿಲುಗಡೆ ಆಗಿರುವುದಕ್ಕೂ ಅಮೆರಿಕ ದಾಳಿ ತಪ್ಪಿಸುವುದಕ್ಕೂ ಸಂಬಂಧವಿಲ್ಲ ಎಂಬ ಸ್ಪಷ್ಟನೆಯನ್ನು ಪಾಕ್ ವಿದೇಶಾಂಗ ಸಚಿವಾಲಯ ನೀಡಿದೆ. ಏ.11 ಮತ್ತು 12ರಂದು ನಡೆದ ಶಾಂತಿ ಮಾತುಕತೆ ಹಿನ್ನೆಲೆ ಇರಾನ್ ಮತ್ತು ಅಮೆರಿಕ ರಾಷ್ಟ್ರಗಳ ವಿಮಾನಗಳು ನಿಲುಗಡೆ ಆಗಿದ್ದವು. ದ್ವಿತೀಯ ಸುತ್ತಿನ ಶಾಂತಿ ಸಭೆ ನಡೆಯುವ ಹಿನ್ನೆಲೆಯಿಂದ ಇರಾನ್ ಸೇನಾ ವಿಮಾನವೂ ಇನ್ನೂ ಪಾಕ್‌ನಲ್ಲಿ ಉಳಿದುಕೊಂಡಿದೆ ಎಂಬ ಸ್ಪಷ್ಟನೆಯನ್ನು ನೀಡಿದೆ.

ಸದ್ದಾಂ ಯುದ್ಧತಂತ್ರ?: 1991ರಲ್ಲಿ ಮೊದಲ ಗಲ್ಫ್ ಯುದ್ಧ ಸಂದರ್ಭದಲ್ಲಿ ಅಮೆರಿಕ ನೇತೃತ್ವದ 42 ರಾಷ್ಟ್ರಗಳ ಮೈತ್ರಿ ಇರಾಕ್ ವಿರುದ್ಧ ಆಪರೇಷನ್ ಡೆಸರ್ಟ್ ಸ್ಟಾರ್ಮ್ ಎಂಬ ದಾಳಿಯನ್ನು ನಡೆಸಿತ್ತು. ಇಂತಹ ಸಂದರ್ಭ ತಮ್ಮ ಸೇನಾ ಮೂಲಸೌಕರ್ಯ ಕಾಪಾಡಬೇಕೆಂಬ ಉದ್ದೇಶದಿಂದ ಸದ್ದಾಂ, ಬಗ್ದಾದ್‌ನಿಂದ 115 ಸೇನಾ ವಿಮಾನಗಳನ್ನು ಇರಾನ್‌ಗೆ ಸ್ಥಳಾಂತರಿಸಿದ್ದರು.

ಕಿರುಸುದ್ದಿ

ಮೇ 16, 17 : ಕಿಡ್ ಫೆಸ್ಟ್

ಮಂಗಳೂರು: ಮಕ್ಕಳ ಪ್ರತಿಭೆ, ಸೃಜನಶೀಲತೆ ಮತ್ತು ಸಮಗ್ರ ಬೆಳವಣಿಗೆಯನ್ನು ಉತ್ತೇಜಿಸುವ ಉದ್ದೇಶದಿಂದ ಸ್ಪಾರ್ಕ್ ಟ್ರೀ ವತಿಯಿಂದ ಕಿಡ್ ಫೆಸ್ಟ್ 2026 ಎಂಬ ವಿಶೇಷ ಮಕ್ಕಳ ಉತ್ಸವವನ್ನು ಮೇ 16 ಮತ್ತು 17ರಂದು ಮೇರಿಹಿಲ್‌ನ ಪಾಲೆಮಾರ್ ಕನ್ವೆನ್ಶನ್ ಸೆಂಟರ್‌ನಲ್ಲಿ ಆಯೋಜಿಸಲಾಗಿದೆ.

ಉತ್ಸವದಲ್ಲಿ ಮಕ್ಕಳಿಗೆ ಮನರಂಜನೆಯ ಜತೆಗೆ ಕಲಿಕೆ, ಆಟಗಳು, ಸೃಜನಾತ್ಮಕ ಚಟುವಟಿಕೆಗಳು, ಕಾರ್ಯಾಗಾರಗಳು ಹಾಗೂ ಹಲವು ಆಕರ್ಷಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳಿಗಾಗಿ ವಿಶೇಷವಾಗಿ 1.5 ಕಿ.ಮೀ. ಮಕ್ಕಳ ಮ್ಯಾರಥಾನ್ ಆಯೋಜಿಸಲಾಗಿದೆ. ಪರಿಸರ ಕಾಳಜಿ, ಆರೋಗ್ಯ ಸಂರಕ್ಷಣೆ, ಆತ್ಮವಿಶ್ವಾಸ, ಕ್ರೀಡಾ ಸ್ಫೂರ್ತಿಯನ್ನು ಉತ್ತೇಜಿಸುವ ಉದ್ದೇಶದೊಂದಿಗೆ ಈ ಮ್ಯಾರಥಾನ್ ಹಮ್ಮಿಕೊಳ್ಳಲಾಗಿದೆ. ಹಿರಿಯರಿಗಾಗಿಯೂ 2.5 ಕಿ.ಮೀ. ಮ್ಯಾರಥಾನ್ ಈ ಸಂದರ್ಭ ನಡೆಯಲಿದೆ ಎಂದು ಸ್ಪಾರ್ಕ್ ಟ್ರೀ ಸಂಸ್ಥೆಯ ಸೌಜನ್ಯ ಹೆಗ್ಡೆ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮಕ್ಕಳಿಗೆ ಪೂರಕವಾದ ವಿವಿಧ ರೀತಿಯ ಸ್ಪರ್ಧೆಗಳು, ಬಹುಮಾನಗಳ ಜತೆಗೆ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಅವಳಿ ಮಕ್ಕಳಿಗೂ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಈಗಾಗಲೇ ಸುಮಾರು 10 ಜೋಡಿ ಅವಳಿ ಮಕ್ಕಳು ನೋಂದಾಯಿಸಿಕೊಂಡಿದ್ದಾರೆ. ಉಚಿತವಾಗಿ ನಡೆಯಲಿರುವ ಈ ಉತ್ಸವದಲ್ಲಿ ಆಸಕ್ತರು ಭಾಗವಹಿಸಬಹುದು ಎಂದರು. ಸ್ಪಾರ್ಕ್ ಟ್ರೀ ತಂಡದ ಪ್ರೀತಂ ಪೊನ್ನಪ್ಪ ಉಪಸ್ಥಿತರಿದ್ದರು.

ಕೊಡಗು ಅಪರ ಜಿಲ್ಲಾಧಿಕಾರಿಯಾಗಿ ಡಾ.ಸಹನಾ ಎಸ್.ಹಾದಿಮನಿ ಅಧಿಕಾರ ಸ್ವೀಕಾರ

ಮಡಿಕೇರಿ: ಕೊಡಗು ಜಿಲ್ಲೆಯ ಅಪರ ಜಿಲ್ಲಾಧಿಕಾರಿಯಾಗಿ ಡಾ.ಸಹನಾ ಎಸ್.ಹಾದಿಮನಿ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. 2014 ನೇ ಬ್ಯಾಚಿನ ಕೆಎಎಸ್ ಅಧಿಕಾರಿಯಾದ ಸಹನಾ ಎಸ್.ಹಾದಿಮನಿ ಅವರು ಈ ಹಿಂದೆ 6 ವರ್ಷಗಳ ಕಾಲ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿಶೇಷ ಭೂ ಸ್ವಾಧೀನ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಅದಕ್ಕೂ ಮೊದಲು ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿ ಆಡಳಿತ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ.




ಮೇ 17ರಂದು ದ.ಕ.- ಉಡುಪಿ ಜಿಲ್ಲಾ ವಿಶಿಷ್ಟ ಚೇತನರ ಸಂಘದ ವಾರ್ಷಿಕ ಸಮಾವೇಶ

ಮಂಗಳೂರು : ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ವಿಶಿಷ್ಟ ಚೇತನರ ಸಂಘ ಮಂಗಳೂರು ವತಿಯಿಂದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ. ಜಿಲ್ಲಾ ಶಾಖೆ ಹಾಗೂ ಯುವ ರೆಡ್ ಕ್ರಾಸ್ ಮಂಗಳೂರು ವಿಶ್ವವಿದ್ಯಾನಿಲಯ ಸಹಯೋಗದಲ್ಲಿ ಮೇ 17ರಂದು ಪೂರ್ವಾಹ್ನ 10ಕ್ಕೆ ವಿಶಿಷ್ಟ ಚೇತನರ ಸಂಘದ 34ನೇ ವಾರ್ಷಿಕ ಸಮಾವೇಶ, ದಿವ್ಯಾಂಗರಿಗೆ ವೈದ್ಯಕೀಯ ನೆರವು, ವೈದ್ಯಕೀಯ ತಪಾಸಣೆ ಮತ್ತು ವಿದ್ಯಾರ್ಥಿ ವೇತನ ವಿತರಣೆ ಕಾರ್ಯಕ್ರಮ ರೆಡ್‌ಕ್ರಾಸ್ ಶತಮಾನೋತ್ಸವ ಕಟ್ಟಡದ ಪ್ರೇರಣಾ ಸಭಾಂಗಣದಲ್ಲಿ ನಡೆಯಲಿದೆ. ರೆಡ್‌ಕ್ರಾಸ್ ದ.ಕ.ಜಿಲ್ಲಾ ಶಾಖೆಯ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ನಿಟ್ಟೆ ವಿಶ್ವವಿದ್ಯಾಲಯದ ಸಹಕುಲಾಧಿಪತಿ ಡಾ.ಎಂ. ಶಾಂತರಾಮ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ್, ಸಂಸದ ಕ್ಯಾ.ಬ್ರಿಜೇಶ್ ಚೌಟ, ಶಾಸಕ ವೇದವ್ಯಾಸ ಕಾಮತ್, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ದ.ಕ. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ನರ್ವಡೆ ವಿನಾಯಕ ಕಾರ್ಬಾರಿ, ಡಾ.ಕೆ.ಆರ್. ಕಾಮತ್, ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿ ಮನೀಶ್ ನಾಯಕ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ವಿಶಿಷ್ಟ ಚೇತನರ ಸಂಘದ ಅಧ್ಯಕ್ಷ ಡಾ.ವಿ. ಮುರಳೀಧರ ನ್ಯಾಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಪಿಎಂ ಕಚೇರಿಗೆ ಹಾನಿ: ಇಪ್ಪತ್ತೈದು ಮುಸ್ಲಿಂ ಲೀಗ್ ಕಾರ್ಯಕರ್ತರ ವಿರುದ್ಧ ಕೇಸು

ಕಾಸರಗೋಡು: ಚಟ್ಟಂಚಾಲ್ ಪುತ್ತರಿಯಡ್ಕದಲ್ಲಿರುವ ಸಿಪಿಎಂ ಉದುಮ ಏರಿಯಾ ಸಮಿತಿ ಕಚೇರಿಗೆ ಹಾನಿಗೈದು ಅಲ್ಲಿದ್ದವರಿಗೆ ಹಲ್ಲೆಗೈದ ಆರೋಪದಂತೆ 25 ಮಂದಿ ಮುಸ್ಲಿಂಲೀಗ್ ಕಾರ್ಯಕರ್ತರ ವಿರುದ್ಧ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಮೇ 4ರಂದು ಚುನಾವಣಾ ವಿಜಯೋತ್ಸವದ ವೇಳೆ ಮುಸ್ಲಿಂಲೀಗ್ ಕಾರ್ಯಕರ್ತರು ಸಿಪಿಎಂ ಕಚೇರಿಗೆ ಹಾನಿಗೈದು ಅಲ್ಲಿದ್ದವರಿಗೆ ಹಲ್ಲೆಗೈದಿರುವುದಾಗಿ ದೂರಲಾಗಿದೆ.



ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಭೇಟಿ ನೀಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕುಟುಂಬ ಸಮೇತರಾಗಿ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿಯವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಸ್ವಾಮೀಜಿಯವರು ಅವರಿಗೆ ಶಾಲು ಹೊದಿಸಿ ಫಲ ಮಂತ್ರಾಕ್ಷತೆ ನೀಡಿ ಹರಸಿದರು. ಈ ಸಂದರ್ಭ ಶ್ರೀ ಮಠದ ವೇಣುಗೋಪಾಲ ಶಾಸ್ತ್ರಿ ಉಪಸ್ಥಿತರಿದ್ದರು.

ಕನಕದಾಸರ ಸಮಗ್ರ ಅನುವಾದ ಯೋಜನೆ ಮೇ 15ರಂದು ತುಳು ಕೃತಿಗಳ ಬಿಡುಗಡೆ

ಮಂಗಳೂರು: ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಬೆಂಗಳೂರಿನ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಕನಕದಾಸರ ಎಲ್ಲಾ ಕೃತಿಗಳನ್ನು ದೇಶದ 14 ಭಾಷೆಗಳಲ್ಲಿ ಅನುವಾದ ಮಾಡುವ ಕಾರ್ಯ ಕೈಗೊಂಡಿದ್ದು, ತಲಾ ಮೂರು ಸಂಪುಟಗಳಲ್ಲಿ ಅಚ್ಚಾಗಿ ಬಿಡುಗಡೆಗೆ ಸಿದ್ಧವಾಗಿವೆ.



ಮೇ 15ರಂದು ಸಂಜೆ ಗಂಟೆ 5.30ಕ್ಕೆ ಬೆಂಗಳೂರಿನ ಮಲ್ಲತಹಳ್ಳಿ ಸಾಂಸ್ಕೃತಿಕ ಸಮುಚ್ಚಯ ಕಲಾಗ್ರಾಮದಲ್ಲಿ ಕನಕದಾಸರ ಸಮಗ್ರ ಸಾಹಿತ್ಯ ಅನುವಾದ ಸಂಪುಟಗಳ ಬಿಡುಗಡೆ ಮತ್ತು ಕನಕ ಶಿಲ್ಪವನ ಅನಾವರಣ ನಡೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 14 ಭಾಷೆಗಳಲ್ಲಿ ಅನುವಾದವಾಗಿ ಸಿದ್ಧವಾದ ಸಂಪುಟಗಳನ್ನು ಬಿಡುಗಡೆಗೊಳಿಸಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತಿತರ ಗಣ್ಯರು ಭಾಗವಹಿಸುವರು. ಸಂಸ್ಕೃತಿ ಚಿಂತಕರಾದ ಬಂಜಗೆರೆ ಜಯಪ್ರಕಾಶ್ ಕೃತಿಗಳ ಕುರಿತು ಮಾತನಾಡುವರು.

ಮೂರು ಸಂಪುಟಗಳಲ್ಲಿ ತುಳು ಆವೃತ್ತಿ

ತುಳುವಿನಲ್ಲಿ ಕನಕದಾಸರ ಸಮಗ್ರ ಕೃತಿಗಳು ಅನುವಾದವಾಗಿದ್ದು ಹಿರಿಯ ಸಂಶೋಧಕ ವಿದ್ವಾಂಸ ಪ್ರೊ. ಎ.ವಿ. ನಾವಡ ತುಳು ಆವೃತ್ತಿಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ದಿ. ಡಾ.ವಾಮನ ನಂದಾವರ, ಡಾ. ವಸಂತ ಕುಮಾರ್ ಪೆರ್ಲ (ಮೋಹನ ತರಂಗಿಣಿ), ಡಾ. ವಸಂತ ಭಾರದ್ವಾಜ, ಪ್ರೊ.ಟಿಎಎನ್ ಖಂಡಿಗೆ (ಕೀರ್ತನೆಲು, ಮುಂಡಿಗೆಲು), ಭಾಸ್ಕರ ರೈ ಕುಕ್ಕುವಳ್ಳಿ, ಆತ್ರಾಡಿ ಅಮೃತ ಶೆಟ್ಟಿ (ನಳ ಚರಿತ್ರೆ), ಮುದ್ದು ಮೂಡುಬೆಳ್ಳೆ (ರಾಮಧಾನ್ಯ ಚರಿತ್ರೆ), ಡಾ. ಕಾತ್ಯಾಯಿನಿ ಕುಂಜಿಬೆಟ್ಟು (ಹರಿಭಕ್ತಿಸಾರ) ಅವರು ಕನಕದಾಸರ ಸಮಗ್ರ ಕೃತಿಗಳನ್ನು ಅನುವಾದಿಸಿದ್ದಾರೆ ಎಂದು ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ತಿಳಿಸಿದ್ದಾರೆ.

ವಾಹನಗಳ ವೇಗಕ್ಕೆ ಬೀಳಲಿ ಕಡಿವಾಣ | ರಾಜ್ಯದಲ್ಲಿ 3 ವರ್ಷದಲ್ಲಿ 45 ಕೋಟಿ ನಿಯಮ ಉಲ್ಲಂಘನೆ

ಅಮಾಯಕ ಜೀವಗಳು ಬಲಿಯಾಗದಿರಲಿ

ಮಂಗಳೂರು: ಇತ್ತೀಚಿನ ದಿನಗಳಲ್ಲಿ ವಾಹನ ಅಪಘಾತಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಸಾವು ನೋವಿನ ಸಂಖ್ಯೆಯೂ ಹೆಚ್ಚಾಗಿದೆ. ವಾಹನಗಳ ಅತಿಯಾದ ವೇಗವು ಅಮಾಯಕ ಜೀವಗಳನ್ನು ಬಲಿಪಡೆಯುತ್ತಿದೆ. ದಿನಬೆಳಗಾದರೆ ಮಾಧ್ಯಮಗಳಲ್ಲಿ ಬರುವ ಅಪಘಾತ ಸುದ್ದಿಗಳು ಬೆಚ್ಚಿ ಬೀಳಿಸುತ್ತಿವೆ.

ಯಾರದ್ದೋ ತಪ್ಪಿಗೆ ಇನ್ಯಾರೋ ಬಲಿಯಾಗುತ್ತಿರುವ ಘಟನೆಗಳು ನಿತ್ಯ ನಡೆಯುತ್ತಿರುವುದು ಆಘಾತಕಾರಿ ಅಂಶವಾಗಿದೆ. ಪೊಲೀಸರು ಎಷ್ಟೇ ಕಡಿವಾಣ ಹಾಕಲೆತ್ನಿಸಿದರೂ ಸಂಚಾರ ನಿಯಮ ಉಲ್ಲಂಘಿಸುವವರ ಸಂಖ್ಯೆ ಮಾತ್ರ ಕಡಿಮೆಯಾಗಿಲ್ಲ.

ಸಂಚಾರ ನಿಯಮ ಉಲ್ಲಂಘನೆ

ಸಂಚಾರ ನಿಯಮಗಳನ್ನು ಉಲ್ಲಂಘಿಸಿ ವಾಹನ ಓಡಿಸುವುದು ಅಧಿಕವಾಗುತ್ತಲೇ ಇದೆ. ಪ್ರತಿವರ್ಷ ಸಂಚಾರ ಸುರಕ್ಷತಾ ಸಪ್ತಾಹ ಆಚರಿಸಿ ಜಾಗೃತಿ ಮೂಡಿಸಿದರೂ ಪ್ರಕರಣಗಳ ಸಂಖ್ಯೆ ಮಾತ್ರ ಕಡಿಮೆಯಾಗಿಲ್ಲ.

ರಾಂಗ್ ಸೈಡ್ ರೈಡ್

ಮಂಗಳೂರಿನ ಬಹುತೇಕ ಕಡೆಗಳಲ್ಲಿ ವಿರುದ್ಧ ದಿಕ್ಕಿನಿಂದ ವಾಹನಗಳು ಬರುತ್ತಿದ್ದು, ನಿಯಮಾನುಸಾರ ಸಂಚರಿಸುವವರಿಗೆ ಕಂಟಕವಾಗಿ ಪರಿಣಮಿಸಿದೆ. ದೇರಳಕಟ್ಟೆ, ಉಳ್ಳಾಲ, ತೊಕ್ಕೊಟ್ಟು, ಪರಂಗಿಪೇಟೆ, ಮುಕ್ಕ ಮುಂತಾದೆಡೆ ರಾಂಗ್ ಸೈಡ್‌ನಿಂದ ವಾಹನಗಳು ಸಂಚರಿಸುತ್ತಿದ್ದು, ಇದು ಅಪಾಯಕಾರಿಯಾಗಿದೆ. ಪೊಲೀಸರು ಇಂತಹ ವಾಹನಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಿದೆ.



ಎಳೆಯ ಪ್ರಾಯದ ಮಕ್ಕಳ ರೈಡ್

ಒಂದೆಡೆ ಶಾಲಾ ವಿದ್ಯಾರ್ಥಿಗಳು ಕೂಡ ಬೈಕ್, ಸ್ಕೂಟರ್ ಚಲಾಯಿಸುತ್ತಿರುವುದು ಕಂಡುಬರುತ್ತಿದ್ದು, ಇದಕ್ಕೂ ಕಡಿವಾಣ ಬೀಳಬೇಕಿದೆ. ಮಂಗಳೂರು ನಗರದಲ್ಲಂತೂ ಇದು ಹೆಚ್ಚಾಗಿದೆ. ಹೆಲ್ಮೆಟ್ ರಹಿತ ಚಾಲನೆಯೂ ಅಧಿಕವಾಗುತ್ತಿದೆ. ಕೇರಳ ಸೇರಿದಂತೆ ವಿವಿಧ ರಾಜ್ಯಗಳಿಂದ ವಿದ್ಯಾಭ್ಯಾಸಕ್ಕಾಗಿ ಇಲ್ಲಿನ ಹಾಸ್ಟೆಲ್‌ಗಳಲ್ಲಿ ತಂಗಿರುವ ವಿದ್ಯಾರ್ಥಿಗಳು ನಿಯಮ ಉಲ್ಲಂಘನೆ ಮಾಡುತ್ತಿರುವುದು ಹೆಚ್ಚುತ್ತಿದೆ.

ಕೋಟಿ ಕೋಟಿ ಪ್ರಕರಣ

ಸರ್ಕಾರದ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 45,100,063 ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳು ದಾಖಲಾಗಿವೆ. 2023ರಲ್ಲಿ 12,737,946 ಪ್ರಕರಣಗಳು ದಾಖಲಾಗಿದ್ದು, 680,70,20,942 ದಂಡ ವಿಧಿಸಲಾಗಿದೆ. 2024ರಲ್ಲಿ 1,62,97,495 ಮತ್ತು 2025ರಲ್ಲಿ 16064622 ಪ್ರಕರಣಗಳು ದಾಖಲಾಗಿದ್ದು, 920,89,50,630 ರೂಪಾಯಿ ದಂಡ ವಿಧಿಸಲಾಗಿದೆ. 2023ರಲ್ಲಿ ಶೇ.43ರಷ್ಟು, 2024ರಲ್ಲಿ ಶೇ.24, ಮತ್ತು 2025ರಲ್ಲಿ ಶೇ.44ರಷ್ಟು ಪ್ರಕರಣಗಳ ದಂಡವನ್ನು ವಸೂಲಿ ಮಾಡಲಾಗಿದೆ. ಬೆಂಗಳೂರು, ಮೈಸೂರು, ಬೆಳಗಾವಿ, ಮಂಗಳೂರು, ಹುಬ್ಬಳ್ಳಿ ಧಾರವಾಡ, ಕಲಬುರಗಿ, ಶಿವಮೊಗ್ಗ ಸೇರಿದಂತೆ ರಾಜ್ಯದ ವಿವಿಧ ನಗರಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ನಿಯಮ ಉಲ್ಲಂಘನೆಯ ಪ್ರಕರಣಗಳು ದಾಖಲಾಗುತ್ತಿವೆ.

ಶಾರದಾ ವಿದ್ಯಾಲಯದ ಧ್ಯಾನಮಂದಿರದಲ್ಲಿ

‘ಶ್ರೀಮದ್ ಭಾಗವತ ಸಪ್ತಾಹ’ ಉದ್ಘಾಟನೆ



ಮಂಗಳೂರು: ನಗರದ ಕೊಡಿಯಾಲ ಬೈಲಿನ ಶಾರದಾ ವಿದ್ಯಾಲಯದ ಧ್ಯಾನಮಂದಿರದಲ್ಲಿ ಎಸ್.ಕೆ.ಡಿ.ಬಿ. ಅಸೋಸಿಯೇಶನ್ ಮತ್ತು ತುಳುನಾಡು ಎಜ್ಯುಕೇಶನ್ ಟ್ರಸ್ಟ್ ವತಿಯಿಂದ ಹುಬ್ಬಳ್ಳಿಯ ಡಾ. ಶ್ರೀಹರಿ ಆಚಾರ್ಯ ವಾಳ್ವೇಕರ್ ಇವರಿಂದ ‘ಶ್ರೀಮದ್ ಭಾಗವತ ಸಪ್ತಾಹ’ ಪ್ರವಚನಮಾಲಿಕೆಯು ಮೇ 10ರಂದು ಉದ್ಘಾಟನೆಗೊಂಡಿತು.

ಶಾರದಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ.ಪುರಾಣಿಕ್ ಪ್ರಸ್ತಾವನೆಗೈದರು. ಸಂಘಟಕ ಸುಧಾಕರರಾವ್ ಪೇಜಾವರ ಸ್ವಾಗತಿಸಿದರು. ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಶಾರದಾ ಸಮೂಹ ಸಂಸ್ಥೆಗಳ ಕಾರ್ಯದರ್ಶಿ ಪ್ರದೀಪಕುಮಾರ ಕಲ್ಕೂರ, ಎಸ್.ಕೆ.ಡಿ.ಬಿ. ಅಸೋಸಿಯೇಶನ್ ಅಧ್ಯಕ್ಷ ಬಿ. ಸುಬ್ರಹ್ಮಣ್ಯರಾವ್, ಡಾ. ಶರ್ಮ ಮತ್ತು ಡಾ. ಲತಾ ಶರ್ಮ, ಇಂದಿರಾ, ಪದ್ಮನಾಭ ಭಟ್, ಡಾ. ಪ್ರಭಾಕರ ಜೋಶಿ, ಡಾ. ಪದ್ಮನಾಭ ಬಳ್ಳಕುರಾಯ, ಎಂ. ಎಸ್. ಗುರುರಾಜ್, ಪ್ರಭಾಕರ ರಾವ್ ಪೇಜಾವರ, ರಾಮಕೃಷ್ಣರಾವ್, ಶೇಷಾದ್ರಿ ಭಟ್, ದಯಾನಂದ ಕಟೀಲ್, ಕೆ.ಜಿ.ರಮೇಶ್, ಸುನಂದಾ ಪುರಾಣಿಕ್ ವೇದಿಕೆಯಲ್ಲಿದ್ದರು.

ಎರಡನೇ ದಿನ

ಹುಬ್ಬಳ್ಳಿಯ ವಿದ್ಯಾವಾರಿಧಿ ಡಾ. ಶ್ರೀಹರಿ ಆಚಾರ್ಯ ವಾಳ್ವೇಕರ್ ಅವರಿಂದ ಎರಡನೇ ದಿನದ ‘ಶ್ರೀಮದ್ ಭಾಗವತ ಸಪ್ತಾಹ’ ಪ್ರವಚನ ಮಾಲಿಕೆ ಜರಗಿತು.

ಸಂಘಟಕ ಸುಧಾಕರರಾವ್ ಪೇಜಾವರ ಸ್ವಾಗತಿಸಿದರು. ಎಸ್.ಕೆ.ಡಿ.ಬಿ. ಅಸೋಸಿಯೇಶನ್ ಅಧ್ಯಕ್ಷ ಬಿ. ಸುಬ್ರಹ್ಮಣ್ಯರಾವ್, ಬಾಲಕೃಷ್ಣ ಐತಾಳ್, ಶಶಿಪ್ರಭಾ ಐತಾಳ್, ಸುಮಾ ಸುಬ್ರಹ್ಮಣ್ಯರಾವ್, ಕೃಷ್ಣ ರಾವ್, ವಿಶಾಲ ಕೃಷ್ಣ ರಾವ್, ಪ್ರಶಾಂತ ಉಪಧ್ಯಾಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾವೂರು ಮುಖ್ಯಪ್ರಾಣ ಮಹಿಳಾ ಭಜನಾ ಬಳಗದಿಂದ ಶ್ರೀಮದ್ ಭಗವನ್ನಾಮ ಸಂಕೀರ್ತನೆ ನೆರವೇರಿತು.

ಪ್ರತೀ ದಿನ ಸಂಜೆ ವಿವಿಧ ಭಜನಾ ಮಂಡಳಿಯವರಿಂದ ಶ್ರೀಮದ್ ಭಗವಾನ್ನಾಮ ಸಂಕೀರ್ತನೆ ಮತ್ತು ಸಂಜೆ 6ರಿಂದ 7.30ರ ತನಕ ಮೇ 16ರ ವರೆಗೆ ಉಪನ್ಯಾಸ ಜರಗಲಿದೆ.

ದೇಶದ ಹಿತಕ್ಕಾಗಿ ಪ್ರಧಾನಿ ಕೋರಿಕೆ, ಕಾಂಗ್ರೆಸ್‌ಗೆ ಯಾಕೆ ಹೊಟ್ಟೆ ಉರಿ?



ಮಂಗಳೂರು: ಮಧ್ಯಪ್ರಾಚ್ಯದಲ್ಲಿ ಯುದ್ಧದಿಂದ ಉಂಟಾಗಿರುವ ವಿಷಮ ಪರಿಸ್ಥಿತಿ ಇಡೀ ಜಗತ್ತಿಗೆ ಪರಿಣಾಮ ಬೀರುತ್ತಿದೆ. ಭಾರತದಲ್ಲಿ ಪ್ರಧಾನಿ ಮೋದಿಯವರ ದೂರದೃಷ್ಟಿತ್ವದಿಂದಾಗಿ ಬೇರೆದೇಶಗಳಿಗೆಹೋಲಿಸಿದರೆಹೆಚ್ಚಿನಪ್ರತಿಕೂಲತೆ ಬೀರಿಲ್ಲ. ಆದರೂ ಜಾಗತಿಕವಾಗಿ ತೈಲ ಬೆಲೆಗಳು ಏರಿಕೆಯಾಗಿದ್ದು ಈ ಬಗ್ಗೆ ಪ್ರಧಾನಿಯವರು ದೇಶದ ಜನರಲ್ಲಿ ಪ್ರಾಮಾಣಿಕವಾದ ಮನವಿಯನ್ನು ಮಾಡಿದ್ದಾರೆ. ಸ್ವಂತ ವಾಹನದ ಬದಲು, ಬಸ್ಸು, ರೈಲಿನಲ್ಲಿ ಪ್ರಯಾಣ, ಒಂದು ವರ್ಷದ ಅವಧಿಗೆ ಚಿನ್ನ ಖರೀದಿಗೆ ಕಡಿವಾಣ ಇಂತಹ ಕೆಲವೊಂದು ಸೂತ್ರವನ್ನು ದೇಶದ ಆರ್ಥಿಕ ಹಿತದೃಷ್ಟಿಯಿಂದ ಸೂಚಿಸಿದ್ದಾರೆ. ಆದರೆ ಕಾಂಗ್ರೆಸ್ ಆಕಾಶ ಕಳಚಿ ಬಿದ್ದಂತೆ ವರ್ತಿಸುತ್ತಿದೆ. ಇವರಿಗೆ ರಾಷ್ಟ್ರದ ಹಿತಚಿಂತನೆ ಅಗತ್ಯವಿಲ್ಲ ಎಂದು ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ದೂರಿದ್ದಾರೆ.

ದೇಶದ ಹಿತ ಕಾಯುವ ನಾಯಕನಾಗಿ ಇಂತಹ ಕೋರಿಕೆಗಳನ್ನು ಪ್ರಜೆಗಳ ಮುಂದೆ ಇಡುವುದು ಇದು ಮೊದಲಲ್ಲ. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಸ್ವಾತಂತ್ರ್ಯ ಪೂರ್ವದಲ್ಲಿ, ಬಳಿಕ ಪಾಕಿಸ್ತಾನ, ಭಾರತ ಕದನ ಸಂದರ್ಭದಲ್ಲಿ ಲಾಲ್ ಬಹುದ್ದೂರ್ ಶಾಸ್ತ್ರಿ ಒಂದು ಹೊತ್ತಿನ ಊಟ ಕೈ ಬಿಡಲು ಜನತೆಗೆ ಸೂಚಿಸಿದ್ದರು. ಜನರು ಅದನ್ನು ಪಾಲಿಸಿದ್ದರು ಮತ್ತು ದೇಶದ ಹಿತಕ್ಕಾಗಿ ಅಂದಿನ ವಿಪಕ್ಷಗಳು ಅದನ್ನು ಸಮರ್ಥಿಸಿದ್ದವು. ಹಿಂದೆ ಪ್ರಧಾನಿ ಇಂದಿರಾ ಗಾಂಧಿಯವರು ನಂತರ ಇತ್ತೀಚೆಗೆ ದಶಕಗಳ ಹಿಂದೆ ಹಣಕಾಸು ಸಚಿವರಾಗಿದ್ದ ಚಿದಂಬರಂ ಅವರು ಚಿನ್ನ ಖರೀದಿಸದಂತೆ ಜನತೆಗೆ ಮನವಿ ಮಾಡಿದ್ದನ್ನು ಕಾಂಗ್ರೆಸ್ ಮರೆತಿದೆಯಾ ಎಂದು ಕುಂಪಲ ಪ್ರಶ್ನಿಸಿದ್ದಾರೆ. ರಾಜ್ಯದಲ್ಲಿ ಅಭಿವೃದ್ಧಿಯೇ ಮಿತವಾಗಿರುವಾಗ ಅದರ ಬಗ್ಗೆ ಚಿಂತಿಸದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿಯನ್ನು ಟೀಕಿಸುವುದು ಹಾಸ್ಯಾಸ್ಪದ. ಇದು ಹೈಕಮಾಂಡನ್ನು ಖುಷಿಗೊಳಿಸಿ ತನ್ನ ಸ್ಥಾನ ಭದ್ರ ಪಡಿಸುವ ತಂತ್ರವಾಗಿದೆ ಎಂದು ಕುಂಪಲ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪುತ್ತೂರು ದೇವಸ್ಥಾನದಲ್ಲಿ ಮೃತ್ಯುಂಜಯ ಸೂಕ್ತ ಜಪ

ಪುತ್ತೂರು: ಮಹತೋಭಾರ ಪುತ್ತೂರು ಶ್ರೀ ಮಹಾ ಲಿಂಗೇಶ್ವರ ದೇವಸ್ಥಾನದಲ್ಲಿ ಮಂಗಳವಾರ ಮೃತ್ಯುಂಜಯ ಸೂಕ್ತ ಜಪ 1008 ನಡೆಯಿತು. ಪುತ್ತೂರು ಪರಿಸರದಲ್ಲಿ ಹೆಚ್ಚುತ್ತಿರುವ ಅಪಘಾತ ಪ್ರಕರಣಗಳ ಹಿನ್ನೆಲೆಯಲ್ಲಿ ಪರಿಹಾರಕ್ಕಾಗಿ ಹಾಗೂ ಲೋಕ ಕಲ್ಯಾಣಕ್ಕಾಗಿ ಜಪ ನಡೆಯಿತು. ಶಾಸಕ ಅಶೋಕ್ ಕುಮಾರ್ ರೈ ಅವರ ನೇತೃತ್ವದಲ್ಲಿ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಪ್ರಧಾನ ಅರ್ಚಕ ವಸಂತ ಕೆದಿಲಾಯ ಹಾಗೂ ಜಯರಾಮ ಜೋಯಿಸರ ನೇತೃತ್ವದಲ್ಲಿ ವೈದಿಕ ಕಾರ್ಯಕ್ರಮ ನಡೆಯಿತು. ಮುಂದೆ ಯಾವುದೇ ಅನಾಹುತ, ಮೃತ್ಯು ಕಂಟಕ ಆಗದಂತೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಮೃತ್ಯುಂಜಯ ಜಪ ಹಾಗೂ ಪೂಜೆ ನಡೆದು ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ವಿವೇಕವಾಣಿ ಸರಣಿ ಉಪನ್ಯಾಸ ಕಾರ್ಯಕ್ರಮದ 55ನೇ ಉಪನ್ಯಾಸ

ವಿವೇಕಾನಂದರು ಜಾಗೃತ ಭಾರತದ ಚೇತನ



ಮಂಗಳೂರು: ದೇಶ ಕಂಡ ಮಹಾನ್ ಸಂತ, ಸ್ವಾಮಿ ವಿವೇಕಾನಂದರು ಜಾಗೃತ ಭಾರತದ ಚೇತನ. ಅವರು ಯುವ ಸಮೂಹಕ್ಕೆ ಪ್ರೇರಕ ಶಕ್ತಿಯಾಗಿದ್ದಾರೆ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಎಸ್‌ವಿಪಿ ಅಧ್ಯಯನ ಸಂಸ್ಥೆಯ ಸಹ ಪ್ರಾಧ್ಯಾಪಕ ಡಾ.ಧನಂಜಯ ಕುಂಬ್ಳೆ ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯದ ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ನಡೆಯುತ್ತಿರುವ ವಿವೇಕವಾಣಿ ಸರಣಿ ಉಪನ್ಯಾಸ ಕಾರ್ಯಕ್ರಮದ 55ನೇ ಉಪನ್ಯಾಸ ಕಾರ್ಯಕ್ರಮ ಉರ್ವ ಎಸ್‌ಸಿಎಸ್ ಕಾಲೇಜಿನಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಪಾಲ್ಗೊಂಡು ‘ಕಾವ್ಯ ಕನ್ನಡಿಯಲ್ಲಿ ಕಂಡ ವಿವೇಕಾನಂದರು’ ಎಂಬ ವಿಷಯದ ಕುರಿತಾಗಿ ಮಾತನಾಡಿದ ಧನಂಜಯ ಕುಂಬ್ಳೆ ಅವರು, ವಿವೇಕಾನಂದರ ಜೀವನವು ತ್ಯಾಗ, ಸೇವೆ, ದೇಶಭಕ್ತಿ ಮತ್ತು ಮಾನವೀಯ ಮೌಲ್ಯಗಳ ಪ್ರತಿಬಿಂಬವಾಗಿದೆ. ಕಾವ್ಯದಲ್ಲಿ ಅವರು ಶಕ್ತಿಯ ರೂಪವಾಗಿ, ಧೈರ್ಯದ ಸಂಕೇತವಾಗಿ ಹಾಗೂ ಮಾನವ ಸೇವೆಯನ್ನು ಶಿವ ಸೇವೆಯೆಂದು ಸಾರಿದ ಮಹಾನ್ ಚಿಂತಕರಾಗಿ ಮೂಡಿಬರುತ್ತಾರೆ ಎಂದರು.

ವಿವೇಕಾನಂದರ ಚಿಂತನೆಗಳು ಸದಾಕಾಲಕ್ಕೂ ಪ್ರಸ್ತುತವಾದುದು. ಯುವಶಕ್ತಿಗೆ ಅವರು ಆತ್ಮವಿಶ್ವಾಸದ ಜ್ಯೋತಿಯಾಗಿದ್ದಾರೆ. ಯುವಜನತೆ ಆತ್ಮವಿಶ್ವಾಸದಿಂದ ಎದ್ದು ನಿಂತು ಸಮಾಜದ ಒಳಿತಿಗಾಗಿ ಕಾರ್ಯನಿರ್ವಹಿಸಬೇಕು ಎಂಬ ಅವರ ಸಂದೇಶ ಇಂದಿಗೂ ಪ್ರತಿಯೊಬ್ಬರಿಗೂ ಪ್ರೇರಣೆಯಾಗಿದೆ. ಅವರು ಭಾರತ ದೇಶದ ಆತ್ಮವನ್ನು ಜಗತ್ತಿಗೆ ಪರಿಚಯಿಸಿದ ಮಹಾನ್ ಯುಗಪುರುಷರು. ಅವರ ಚಿಂತನೆಗಳು ಕೇವಲ ಆಧ್ಯಾತ್ಮಿಕತೆಯಲ್ಲ, ಜೀವನದ ಪ್ರತಿಯೊಂದು ಕ್ಷೇತ್ರಕ್ಕೂ ದಾರಿದೀಪವಾಗಿವೆ ಎಂದವರು ವಿಶ್ಲೇಷಿಸಿದರು.

ಎಸ್‌ಸಿಎಸ್ ಕಾಲೇಜಿನ ಪ್ರಾಂಶುಪಾಲರಾದ ಹಾರ್ದಿಕ್ ಪಿ ಚೌಹಾನ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಉಪನ್ಯಾಸಕರಾದ ಜಾಯ್ಲಿನ್ ಆರ್. ಪಿಂಟೋ, ವಿದ್ಯಾರ್ಥಿ ಕಲ್ಯಾಣಾಧಿಕಾರಿ ಅಶ್ವಿನಿ ಎಸ್. ಉಪಸ್ಥಿತರಿದ್ದರು.

ಕನ್ನಡ ವಿಭಾಗದ ಮುಖ್ಯಸ್ಥರಾದ ಸುಚಿತ್ರಾ ಪಿ. ಶೆಟ್ಟಿ ಸ್ವಾಗತಿಸಿ, ವಿದ್ಯಾರ್ಥಿ ಕಲ್ಯಾಣಾಧಿಕಾರಿ ತಿಲಕ್ ಗೌಡ ಮಂಗಳೂರು ವಂದಿಸಿದರು. ವಿದ್ಯಾರ್ಥಿನಿ ಮೇಘಾ ಕಾರ್ಯಕ್ರಮ ನಿರೂಪಿಸಿದರು.

ಪೈಪ್‌ಲೈನ್ ಎಂಡ್ ಪಾಯಿಂಟ್‌ಗೆ ತಲುಪುತ್ತಿಲ್ಲ ನೀರು | ಟ್ಯಾಂಕರ್ ಮೂಲಕ ನೀರು ಪೂರೈಕೆ

ನೇತ್ರಾವತಿ ತೀರದಲ್ಲಿ ನೀರಿನ ಅಭಾವ

▸ ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ನೇತ್ರಾವತಿ ನದಿ ತಟದಲ್ಲಿ ವಿಸ್ತರಿಸಿಕೊಂಡಿರುವ ಹೊಯಿಗೆಬಜಾರ್ ವಾರ್ಡ್‌ನ ಕೆಲ ಪ್ರದೇಶಗಳಲ್ಲಿ ಜನತೆ ನೀರಿನ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಹೊಯಿಗೆಬಜಾರ್ ಭಗತ್ ಸಿಂಗ್ ರಸ್ತೆ, ಧೂಮಾವತಿ ದೈವಸ್ಥಾನ, ಮೆಟಲ್ ಬಾಕ್ಸ್, ಹೊಯಿಗೆಬಜಾರ್ ಶಾಲೆ, ಫಿಶರೀಸ್ ಕಾಲೇಜು, ಮಾರಿಗುಡಿ ದೇವಸ್ಥಾನ, ಮುಖ್ಯಪ್ರಾಣ ದೇವಸ್ಥಾನ, ಹೊಳೆಬದಿ, ಬೋಳಾರ ಮುಖ್ಯರಸ್ತೆ, ಶಾದಿಮಹಲ್, ಮುಳಿಹಿತ್ಲು, ಮಂಗಳಾ ಐಸ್ ಪ್ಲ್ಯಾಂಟ್, ಅಂಬಾಮಹೇಶ್ವರಿ ಭಜನಾ ಮಂದಿರ, ಪಾಲೇಮಾರ್ ಗಾರ್ಡನ್ ವರೆಗೆ ವ್ಯಾಪಿಸಿರುವ ಹೊಯಿಗೆಬಜಾರ್ ವಾರ್ಡ್‌ನಲ್ಲಿ ನೀರು ಪೂರೈಕೆಗೆ ರೇಷನಿಂಗ್ ವ್ಯವಸ್ಥೆ ಜಾರಿಗೊಂಡ ಬಳಿಕ ಸಮಸ್ಯೆ ಹೆಚ್ಚಳಗೊಂಡಿದೆ. ಹೊಳೆಬದಿ, ಧೂಮಾವತಿ ದೈವಸ್ಥಾನ, ಗುಡ್ಡೆಮನೆ, ಅರಕೆರೆ ಬೈಲು, ಮುಳಿಹಿತ್ಲು ಪ್ರದೇಶಗಳಲ್ಲಿ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿಲ್ಲ.

ಸನಿಹದಲ್ಲಿ ನೇತ್ರಾವತಿ ನದಿ ಸಮುದ್ರ ಸೇರುತ್ತಿದ್ದರೂ ಈ ವಾರ್ಡ್‌ನಲ್ಲಿ ನೀರಿದೆ ಬರ. ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ನೀರು ಪೂರೈಸುವ ಪೈಪ್‌ಲೈನ್‌ನ ಕೊನೆಯ ಸ್ಥಳ ಆಗಿರುವುದರಿಂದ ಇಲ್ಲಿಗೆ ಬೇಕಾದಷ್ಟು ಪ್ರಮಾಣದ ನೀರು ಲಭ್ಯವಾಗುತ್ತಿಲ್ಲ. ಮೊದಲಿನ ವಾರ್ಡ್‌ಗಳಿಗೆ ಹಂಚಿಕೆಯಾಗಿ ಉಳಿದ ನೀರನ್ನು ಹೊಯಿಗೆಬಜಾರ್ ವಾರ್ಡ್‌ಗೆ ವಿತರಣೆ ಮಾಡಲಾಗುತ್ತಿದೆ ಎನ್ನುತ್ತಾರೆ ಇಲ್ಲಿನ ಜನತೆ.

ಈ ವಾರ್ಡ್‌ಗೆ ಪಡೀಲು ಟ್ಯಾಂಕ್‌ನಿಂದ ನೀರು ಒದಗಿಸಲಾಗುತ್ತಿದೆ. ಮಧ್ಯಾಹ್ನ 1ರಿಂದ ರಾತ್ರಿ 12.30ರವರೆಗೆ ಇಲ್ಲಿ ನೀರು ಪೂರೈಕೆ ಆಗುತ್ತಿದೆ. ಪಡೀಲ್‌ನಿಂದ ಪೈಪ್‌ಲೈನ್ ಮೂಲಕ ನೀರು ವಿವಿಧ ವಾರ್ಡ್‌ಗಳನ್ನು ಹಾದು ಹೊಯಿಗೆಬಜಾರ್‌ಗೆ ಬರುತ್ತಿದೆ. ಹೀಗಾಗಿ ಇಲ್ಲಿಗೆ ಲಭ್ಯವಾಗುವ ನೀರಿನ ಪ್ರಮಾಣ ಕಡಿಮೆ. ಪ್ರೆಶರ್ ಕೊರತೆಯಿಂದ ಅಗತ್ಯ ಇರುವಷ್ಟು ನೀರು ದೊರೆಯುತ್ತಿಲ್ಲ. ರೇಷನಿಂಗ್ ಆರಂಭಗೊಂಡ ಬಳಿಕ ಪ್ರೆಶರ್ ಇದ್ದರೂ ಸಮರ್ಪಕವಾಗಿ ವಿತರಣೆ ಆಗುತ್ತಿಲ್ಲ. ಆಗಾಗ್ಗೆ ವಿದ್ಯುತ್ ಇಲ್ಲ ಎಂಬ ನೆಪದಲ್ಲಿ ನೀರು ಪೂರೈಕೆ ವ್ಯತ್ಯಯವಾಗುತ್ತಿದೆ ಎನ್ನುತ್ತಾರೆ ಸ್ಥಳೀಯರು. ಸಿಟಿಬೀಚ್, ಮುಳಿಹಿತ್ಲು ಪ್ರದೇಶಗಳಿಗೆ ನೀರು ಸರಿಯಾಗಿ ತಲುಪುತ್ತಿಲ್ಲ ಎಂಬ ದೂರುಗಳಿವೆ.

ನೀರಿನ ಕೊರತೆ ಕಾಣಿಸಿಕೊಂಡಿರುವ ಸಿಟಿಬೀಚ್, ಮುಳಿಹಿತ್ಲು ಮುಂತಾದ ಸ್ಥಳಗಳಿಗೆ ಮನಪಾ ವತಿಯಿಂದ ಟ್ಯಾಂಕರ್ ಮೂಲಕ ನೀರು ನೀಡಲಾಗುತ್ತಿದೆ. ಸಾರ್ವಜನಿಕ ಕಾರ್ಯಕ್ರಮಗಳು ಇದ್ದ ವೇಳೆಯೂ ಟ್ಯಾಂಕರ್ ನೀರು ಪೂರೈಸಲಾಗುತ್ತಿದೆ. ರೇಷನಿಂಗ್ ಆರಂಭಗೊಂಡ ಬಳಿಕವೂ ಟ್ಯಾಂಕರ್ ನೀರು ತರಿಸಲಾಗಿದೆ. ಬೋಳಾರ ಶಾಲೆ, ಮುಳಿಹಿತ್ಲುವಿನಲ್ಲಿ ಬಾವಿಗಳಿವೆ. ಲಿವೆಲ್ ಜಂಕ್ಷನ್ ಬಳಿ ಬಾವಿ ದುರಸ್ತಿಗೊಂಡಿದ್ದರೂ, ನೀರು ಉಪಯೋಗ ಆಗುತ್ತಿಲ್ಲ. ಈ ವಾರ್ಡ್‌ನಲ್ಲಿ ಸಾರ್ವಜನಿಕ ಕೊಳವೆಬಾವಿಗಳು ಇಲ್ಲ. ಈ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಪೈಪ್‌ಲೈನ್ ಅಳವಡಿಕೆ ಶೇ.80ರಷ್ಟು ಪೂರ್ಣಗೊಂಡಿದ್ದು, ಕೆಲವೆಡೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ.



ಮುಳಿಹಿತ್ಲುವಿನಲ್ಲಿ ರಸ್ತೆ ಕಾಂಕ್ರೀಟ್ ಕಾಮಗಾರಿ ನಡೆದಿದೆ

ಮಳೆಗಾಲದಲ್ಲಿ ಕೃತಕ ನೆರೆ ಸಮಸ್ಯೆ

ಮುಳಿಹಿತ್ಲು, ಅರಕೆರೆ ಬೈಲ್, ಪಾದೆಕಲ್ಲು ಮುಂತಾದ ಪ್ರದೇಶಗಳಲ್ಲಿ ರಾಜಕಾಲುವೆ ಇದ್ದು, ಮಳೆಗಾಲದಲ್ಲಿ ರಾಜಕಾಲುವೆಗಳಿಂದ ನೀರು ಉಕ್ಕಿ ಕೃತಕ ನೆರೆ ಉಂಟಾಗುತ್ತಿದೆ. ರಾಜಕಾಲುವೆಯ ನೀರನ್ನು ನದಿ ಸ್ವೀಕರಿಸದೇ ಇದ್ದಾಗ ಸಮಸ್ಯೆ ಹೆಚ್ಚಾಗುತ್ತದೆ. ಮುಳಿಹಿತ್ಲು, ದೇವಾಡಿಗ ಕಂಪೌಂಡ್, ಅರಕೆರೆಬೈಲು ಮುಂತಾದ ಕಡೆಗಳಲ್ಲಿ ಮನೆಗಳಿಗೆ ನೀರು ನುಗ್ಗುತ್ತದೆ.

ಒಳಚರಂಡಿ ತ್ಯಾಜ್ಯ ಸೋರಿಕೆ

ಮಳೆ ಬಂದಾಗ ಹೊಯಿಗೆಬಜಾರ್ ವಾರ್ಡ್‌ನ ವಿವಿಧ ಕಡೆಗಳಲ್ಲಿ ಡ್ರೈನೇಜ್ ಓವರ್‌ಫ್ಲೋ ಆಗುತ್ತಿದೆ. ಮ್ಯಾನ್‌ಹೋಲ್‌ಗಳಲ್ಲಿ ಕೊಳಚೆ ನೀರು ಉಕ್ಕುತ್ತದೆ. ಪಾಂಡೇಶ್ವರ ವೆಟ್‌ವೆಲ್ ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇದ್ದಾಗ ಪಾದೆಕಲ್ಲು, ಮುಳಿಹಿತ್ಲು, ಹೊಯಿಗೆಬಜಾರ್ ಪ್ರದೇಶಗಳಲ್ಲಿ ಒಳಚರಂಡಿ ತ್ಯಾಜ್ಯ ಸೋರಿಕೆ ಉಂಟಾಗುತ್ತದೆ.

ವೆಟ್‌ವೆಲ್ ಸಮರ್ಪಕವಾಗಿ ಕಾರ್ಯನಿರ್ವಹಣೆಗೆ ವ್ಯವಸ್ಥೆ ಮಾಡುವ ಮೂಲಕ ಈ ಸಮಸ್ಯೆ ಬಗೆಹರಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಹೊಯಿಗೆಬಜಾರ್ ವಾರ್ಡ್ ಎಂಡ್ ಪಾಯಿಂಟ್ ಆಗಿರುವುದರಿಂದ ಇಲ್ಲಿ ನೀರಿನ ಸಮಸ್ಯೆ ಅಧಿಕವಾಗಿದೆ. ರೇಷನಿಂಗ್ ಬಳಿಕವೂ ನೀರಿನ ವಿತರಣೆ ಸಮರ್ಪಕವಾಗಿ ಆಗುತ್ತಿಲ್ಲ. ಅಗತ್ಯ ಇರುವ ಕಡೆಗಳಲ್ಲಿ ಮಂಗಳೂರು ಮಹಾನಗರ ಪಾಲಿಕೆ ಟ್ಯಾಂಕರ್ ಮೂಲಕ ನೀರು ಒದಗಿಸುತ್ತಿದೆ. ಕೃತಕ ನೆರೆ ತಡೆಯಲು ಶಾಸಕರ ಸಹಕಾರದೊಂದಿಗೆ ತಡೆಗೋಡೆ ನಿರ್ಮಿಸಲಾಗಿದೆ. ಹೊಯಿಗೆಬಜಾರ್ ಭಗತ್ ಸಿಂಗ್ ರಸ್ತೆ, ಹೊಳೆಬದಿ, ಬೋಳಾರ, ಮುಳಿಹಿತ್ಲು, ಅಂಬಾ ಮಹೇಶ್ವರಿ ಭಜನಾ ಮಂದಿರ ಮುಂತಾದ ಕಡೆಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದೆ. ಹೊಳೆಬದಿ ಪಾರ್ಕ್ ಅಭಿವೃದ್ಧಿಪಡಿಸಲಾಗಿದೆ. ವಾರ್ಡ್‌ನ ವಿವಿಧ ಕಡೆಗಳಲ್ಲಿ ಮ್ಯಾನ್‌ಹೋಲ್ ಬದಲಾವಣೆ ಮಾಡಲಾಗಿದೆ.



■ **ರೇವತಿ,** ಹೊಯಿಗೆಬಜಾರ್ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

ನಮ್ಮಲ್ಲಿ ಹಲವು ಸಮಯದಿಂದ ನೀರಿನ ಸಮಸ್ಯೆ ಇದೆ. ಪ್ರೆಶರ್ ಕೊರತೆಯಿಂದ ನಮ್ಮ ಮನೆಗೆ ನೀರು ಬರುತ್ತಿಲ್ಲ. ರೇಷನಿಂಗ್ ಆದ ಬಳಿಕ ಒಮ್ಮೆ ಉತ್ತಮ ಪ್ರೆಶರ್‌ನೊಂದಿಗೆ ನೀರು ಬಂದಿತ್ತು. ಇದನ್ನು ನೋಡುವಾಗ ಉದ್ದೇಶಪೂರ್ವಕವಾಗಿ ನಮ್ಮಲ್ಲಿಗೆ ನೀರು ಪೂರೈಕೆ ವ್ಯತ್ಯಯ ಮಾಡಲಾಗುತ್ತಿದೆ ಅನಿಸುತ್ತದೆ. 8 ದಿನ ನೀರು ಬರದೇ ಇದ್ದ ಸಂದರ್ಭವೂ ಇದೆ. ನೀರು ಖಾಲಿಯಾದಾಗ ನಾವು ಸಂಬಂಧಿಕರ ಮನೆಗೆ ತೆರಳಬೇಕಾದ ಸ್ಥಿತಿ ನಮ್ಮದು. ನಮ್ಮ ಮನೆಗೆ ಕಾಲುದಾರಿ ಮಾತ್ರ ಇದೆ. ಹೀಗಾಗಿ ಟ್ಯಾಂಕರ್ ಮೂಲಕವೂ ನೀರು ತರಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಮನಪಾ ಅಧಿಕಾರಿಗಳು ಇನ್ನಾದರೂ ಸಮರ್ಪಕವಾಗಿ ನೀರು ಪೂರೈಸಲು ಕ್ರಮ ಕೈಗೊಳ್ಳಬೇಕು ಎಂಬುದು ನಮ್ಮ ಆಗ್ರಹ.

■ **ರಚನಾ ,** ಮುಳಿಹಿತ್ಲು ಭವಾನಿ ಕಂಪೌಂಡ್ ನಿವಾಸಿ

ಗೋಡೆ ಕುಸಿತ ಪ್ರಕರಣ: ಆಸ್ಪತ್ರೆ ಆಡಳಿತ ಮಂಡಳಿ ಲೋಪ

• **ಬೆಂಗಳೂರು:** ಏಳು ಜನರ ಸಾವಿಗೆ ಕಾರಣವಾದ ಬೌರಿಂಗ್ ಆಸ್ಪತ್ರೆಯ ಗೋಡೆ ಕುಸಿತ ಪ್ರಕರಣದಲ್ಲಿ, ಗುತ್ತಿಗೆದಾರರು ಮತ್ತು ಎಂಜಿನಿಯರ್ ಹಾಗೂ ಆಸ್ಪತ್ರೆ ಆಡಳಿತ ಮಂಡಳಿ ಲೋಪವೆಸಗಿವೆ ಎಂದು ಜಿಲ್ಲಾಧಿಕಾರಿಗಳ ತನಿಖಾ ವರದಿಯಲ್ಲಿ ಉಲ್ಲೇಖಿಸಿದೆ.

ಘಟನೆ ನಡೆದ ಬಳಿಕ ರಾಜ್ಯ ಸರ್ಕಾರ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿತ್ತು. ಪ್ರತ್ಯೇಕವಾಗಿ ಲೋಕಾಯುಕ್ತರು ಮತ್ತು ಆ ತನಿಖೆಗೆ ನಿರ್ದೇಶನ ನೀಡಿದ್ದರು. ಲೋಕಾಯುಕ್ತ ತನಿಖಾ ತಂಡದಲ್ಲಿ, ಜಿಲ್ಲಾ ನ್ಯಾಯಾಧೀಶರು, ಎಸ್ಪಿ ದರ್ಜೆಯ ಅಧಿಕಾರಿ ಹಾಗೂ ಲೋಕಾಯುಕ್ತ ಇಂಜಿನಿಯರಿಂಗ್ ವಿಭಾಗದ ಅಧಿಕಾರಿ ಕೆಲಸ ನಿರ್ವಹಿಸಿದ್ದಾರೆ.

ಕುಸಿದ ಗೋಡೆಯ ಮರಳು, ಮಣ್ಣು ಹಾಗೂ ಕಲ್ಲುಗಳ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಬಹುತೇಕ ಮುಂದಿನ ವಾರದ ಬಳಿಕ ತನಿಖಾ ವರದಿ ಲೋಕಾಯುಕ್ತರ ಕೈ ಸೇರುವ ಸಾಧ್ಯತೆ ಇದೆ. ಅದಕ್ಕೂ ಮುನ್ನಾ ಜಿಲ್ಲಾಧಿಕಾರಿಗಳ ನೇತೃತ್ವದ ತಂಡ ಕಂಡ ವರದಿಯನ್ನು ಸಿದ್ಧಪಡಿಸಿದ್ದ ಸರ್ಕಾರಕ್ಕೆ ಮುಖ್ಯ ಕಾರ್ಯದರ್ಶಿಗೆ ಸಲ್ಲಿಸಲು ತೀರ್ಮಾನಿಸಿದೆ. ಆಸ್ಪತ್ರೆ, ಗೋಡೆ ಪ್ರಕರಣದಲ್ಲಿ ಹೆಚ್ಚಿನ ಪ್ರಮಾಣದಲ್ಲಿ, ಮಣ್ಣು ಸುರಿದಿರುವುದು ದುರಂತಕ್ಕೆ ಮೂಲ ಕಾರಣ ಎಂದು ಜಿಲ್ಲಾಧಿಕಾರಿಗಳ ವರದಿ ಶಂಕಿಸಿದೆ. ಸುರಿದಿದ್ದ ಮಣ್ಣನ್ನು ಸೂಕ್ತ ಸಮಯದಲ್ಲಿ ತೆರವುಗೊಳಿಸದೆ ಗುತ್ತಿಗೆದಾರರು ಮತ್ತು ವ್ಯಕ್ತಿ ಕೆಲಸ ಮಾಡಿದರು ಎಂದು ಇಂಜಿನಿಯರ್‌ಗಳು ನಿರ್ಲಕ್ಷ್ಯ ವಹಿಸಿದ್ದಾರೆ.

ಸರ್ಕಾರ ತನಿಖೆಗೆ ಸೂಚಿಸಿತ್ತು, ಕೂಲಂಕುಷವಾಗಿ ತನಿಖೆಯನ್ನು ಮಾಡಿ, ವರದಿ ಸಲ್ಲಿಕೆ ಮಾಡಿದ್ದೇವೆ. ಮುಚ್ಚಿದ ಲಕೋಟೆಯಲ್ಲಿ ನೀಡಿದ್ದೇವೆ. ಸರ್ಕಾರ ಏನು ಕ್ರಮ ವಹಿಸುತ್ತೋ ಕಾದು ನೋಡಬೇಕು.
■ **ಜಗದೀಶ್, ಜಿಲ್ಲಾಧಿಕಾರಿ**

ರಾಮ ಬಾಣ



ಮೀಸಲಾತಿ ಹೆಚ್ಚಳ ರದ್ದು: ಸಂಸದ ಬೊಮ್ಮಾಯಿ ಖಂಡನೆ

• **ಬೆಂಗಳೂರು:** ಬಿಜೆಪಿ ಸರ್ಕಾರದ ಅವಧಿಯಲ್ಲಿ ಎಸ್ಸಿ-ಎಸ್ಟಿ ಸಮುದಾಯಕ್ಕೆ ಹೆಚ್ಚಳ ಮಾಡಿದ್ದ ಮೀಸಲಾತಿಯನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ರದ್ದು ಮಾಡಿರುವುದನ್ನು ಖಂಡಿಸಿ ಬಿಜೆಪಿ ವತಿಯಿಂದ ರಾಜ್ಯದ ಜನತೆಗೆ ಜಾಗೃತಿ ಮೂಡಿಸಲು ತೀರ್ಮಾನಿಸಲಾಗಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ತಮ್ಮ ನಿವಾಸದಲ್ಲಿ ನಡೆದ ಬಿಜೆಪಿಯ ಎಸ್ಸಿ-ಎಸ್ಟಿ ಮುಖಂಡರ ಜೊತೆಗಿನ ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಎಸ್ಸಿ-ಎಸ್ಟಿ ಮತ್ತು ಒಬಿಸಿ ಜನಾಂಗಕ್ಕೆ ಬಹಳ ದೊಡ್ಡ ಅನ್ಯಾಯ ಮಾಡುತ್ತಿದೆ. ಅಹಿಂದ ಹೆಸರಲ್ಲಿ ರಾಜಕಾರಣ ಮಾಡುತ್ತಿರುವ ಸಿಎಂ ಸಿದ್ದರಾಮಯ್ಯ ಅವರು ಯಾವ ವರ್ಗದಿಂದ ಬೆಂಬಲ ಪಡೆದಿದ್ದಾರೆ ಅವರಿಗೆ ಅನ್ಯಾಯ ಮಾಡುತ್ತಿದ್ದಾರೆ ಕಿಡಿಕಾರಿದರು.

ಎಸ್ಸಿ-ಎಸ್ಟಿ ಒಳ ಮೀಸಲಾತಿ ಗೊಂದಲದ ಬಗ್ಗೆ ಸಂವಿಧಾನ ಪೀಠ ರಾಜ್ಯ ಸರ್ಕಾರಗಳಿಗೆ ಅಧಿಕಾರ ಕೊಟ್ಟಿದೆ ಅದನ್ನು ತೆಲಂಗಾಣ, ಹರಿಯಾಣ ಸೇರಿದಂತೆ ಅನೇಕ ರಾಜ್ಯಗಳು ಜಾರಿ ಮಾಡಿವೆ. ಒಳ ಮೀಸಲಾತಿ ಜಾರಿ ಮಾಡಲು ರಾಜ್ಯ ಕಾಂಗ್ರೆಸ್ ಗೆ ಹಾಗೂ ಅಲ್ಲಿನ ದಲಿತ ನಾಯಕರಿಗೆ ಆಸಕ್ತಿ ಇಲ್ಲ ಎಂದು ಆರೋಪಿಸಿದರು. ಮೀಸಲಾತಿ ಹೆಚ್ಚಳದ ಕುರಿತು ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ನಾಗಮೋಹನ್ ದಾಸ್ ವರದಿ ಬಂದಿದೆ. ನಾನು ಸಿಎಂ ಆಗಿದ್ದಾಗ ಎಸ್ಸಿ ಸಮುದಾಯಕ್ಕೆ ಶೇ.15 ರಿಂದ 17 ರಷ್ಟು ಹಾಗೂ ಎಸ್ಟಿ ಸಮುದಾಯಕ್ಕೆ ಶೇ.3 ರಿಂದ ಶೇ.7 ರಷ್ಟು ಮೀಸಲಾತಿ ಹೆಚ್ಚಿಗೆ ಮಾಡಿದ್ದೇನೆ. ಇದರಿಂದ ಎಸ್ಸಿ-ಎಸ್ಟಿ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಸುಮಾರು ನಾಲ್ಕು ಸಾವಿರ ಎಂಜನಿಯರಿಂಗ್ ಹಾಗೂ ಸುಮಾರು ನಾಲ್ಕು ನೂರು ವೈದ್ಯಕೀಯ ಸೀಟುಗಳು ಹೆಚ್ಚಿಗೆ ಲಭ್ಯವಾಗಿವೆ. ಈ ಆದೇಶ ಜಾರಿಯಾಗಿ ನಾಲ್ಕು ವರ್ಷ ಆಗಿದೆ ಎಂದು ಹೇಳಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆಕೇಜೆ

◈ ಚಿನ್ನ ಖರೀದಿಸಬೇಡಿ, ಪೆಟ್ರೋಲ್ ಮತ್ತು ಖಾದ್ಯ ತೈಲಗಳ ಬಳಕೆ ಕಮ್ಮಿ ಮಾಡಿ, ರಸಗೊಬ್ಬರ ಕಮ್ಮಿ ಬಳಸಿ ಎಂದು ಪ್ರಧಾನಿ ಬೇಡಿಕೊಳ್ಳುವುದು ಯಾವ ಅಭಿವೃದ್ಧಿಯ ಸಂಕೇತ – ಸಿದ್ದರಾಮಯ್ಯ

– ಇದು ದೇಶಾಭಿಮಾನ ವೃದ್ಧಿಯ ಸಂಕೇತ, ಸ್ವಾಭಿಮಾನವನ್ನು ಮೀರಿದ ಮಂದಿಗೆ ಮತ್ತೆ ಇದು ಅರ್ಥವಾಗದು. ಅಂದ ಹಾಗೆ ನಿಮ್ಮದೇ ಪಕ್ಷದ ಸರಕಾರವಿದ್ದಾಗ ಲಾಲ್ ಬಹಾದುರ್ ಶಾಸ್ತ್ರಿಯವರು ಪ್ರಜೆಗಳಲ್ಲಿ ಒಂದು ಹೊತ್ತಿನ ಊಟವನ್ನು ಬಿಡಿ ಅಂತ ಕೇಳಿಕೊಂಡಿದ್ದರು, ಅಲ್ಲದೆ ಇಂದಿರಾಗಾಂಧಿಯವರೇ ಒಮ್ಮೆ ಜನತೆಗೆ ಚಿನ್ನವನ್ನು ಖರೀದಿಸಬೇಡಿ ಅಂತ ಕರೆ ನೀಡಿದ್ದು ಮರೆತುಹೋಯಿತಾ?

ದಿನ ಭವಿಷ್ಯ

ಮೇಷ ಮನೆಯಲ್ಲಿ ವಾಗ್ಯುದ್ಧ ನಡೆದೀತು. ಮಾತಿಗೆ ಮಾತು ಕೊಡಿಸಬೇಡಿ. ಅನಿರೀಕ್ಷಿತ ಖರ್ಚು ಒದಗಲಿದೆ. ಖರೀದಿ ಕಡಿಮೆ ಮಾಡಿ.

ವೃಷಭ ಕೆಲಸದ ಒತ್ತಡ ಹೆಚ್ಚು. ಕೆಲಸದ ಗುಣಮಟ್ಟ ಹೆಚ್ಚಿಸಲು ಆದ್ಯತೆ ಕೊಡಿ. ಆಪ್ತರ ಜತೆ ಮನಬಿಚ್ಚಿ ಮಾತನಾಡಿ. ಮುಚ್ಚುಮರೆ ಬೇಡ.

ಮಿಥುನ ಸುಗಮ ಕಾರ್ಯ. ಗುರಿ ಈಡೇರಿಕೆ. ಕೌಟುಂಬಿಕ ಬದ್ಧತೆ ಈಡೇರಿಸಿ. ಕೆಲಸ ಬಾಕಿ ಇಡಬೇಡಿ. ಹಣ ಗಳಿಕೆ ತೃಪ್ತಿ ತರಲಿದೆ.

ಕಟಕ ಮನೆಯಲ್ಲಿ ತಾಳ್ಮೆಯಿಂದ ವ್ಯವಹರಿಸಿ. ಜಗಳಕ್ಕೆ ಆಸ್ಪದ ನೀಡದಿರಿ. ಹೆಚ್ಚುವರಿ ಖರ್ಚು. ನಿಮ್ಮ ನಿರ್ಧಾರ ಉತ್ತಮ ಫಲ ನೀಡದಿರಬಹುದು.

ಸಿಂಹ ಕೆಲವಾರು ವಿಷಯದತ್ತ ಏಕಕಾಲದಲ್ಲಿ ಗಮನ ಹರಿಸಬೇಕಾದ ಒತ್ತಡ. ಆರ್ಥಿಕ ಪ್ರಗತಿ ಕುಂಠಿತ. ಕೆಲವರಿಗೆ ಕಾಲು ನೋವು ಬಾಧಿಸಬಹುದು.

ಕನ್ಯಾ ಉತ್ಸಾಹದ ದಿನ. ವೃತ್ತಿಯಲ್ಲಿ ಹೊಸ ಅವಕಾಶ ಪ್ರಾಪ್ತಿ. ವಿವಾಹಿತ ದಂಪತಿಗೆ ಶುಭ ಸುದ್ದಿ. ಆತ್ಮೀಯರ ಜತೆಗೆ ಮನಸ್ತಾಪ ಮಾಡದಿರಿ.

ತುಲಾ ಹೊಣೆಗಾರಿಕೆ ಸಕಾಲದಲ್ಲಿ ಪೂರೈಸುವಿರಿ. ಆದಾಯ ಏರಿಕೆ. ಸಣ್ಣ ಚಿಂತೆಗೆ ಕಾರಣವಾಗಿದ್ದ ವಿಷಯ ಇತ್ಯರ್ಥ. ಬಂಧುಗಳ ಸಹಕಾರ.

ವೃಶ್ಚಿಕ ಇಚ್ಛಿತ ಕಾರ್ಯ ನಿಧಾನವಾಗಲಿದೆ. ಆದರಿಂದ ಅಸಹನೆ. ವ್ಯವಹಾರದಲ್ಲಿ ಹಣ ಹೂಡಿಕೆ ಲಾಭ ತರಲಿದೆ. ಖರ್ಚು ಅಧಿಕ.

ಧನು ನಿಮ್ಮ ದುಡಿಮೆಗೆ ತಕ್ಕ ಫಲ. ಘನತೆ ಹೆಚ್ಚಳ. ನಿಮ್ಮ ನಡೆನುಡಿ ಎಲ್ಲರ ಮೆಚ್ಚುಗೆ ಗಳಿಸಲಿದೆ. ಆದಾಯ ಏರಿಕೆ. ಕೌಟುಂಬಿಕ ಅಶಾಂತಿ ನಿವಾರಣೆ.

ಮಕರ ಎಂದಿಗಿಂತ ಹೆಚ್ಚು ಹೊಣೆ. ಕೆಲವರ ಅಸಹಕಾರ. ಹಣದ ತೊಡಕು ಕಾಡಲಿದೆ. ಊಟ ಸಕಾಲದಲ್ಲಿ ಮಾಡಿ. ಆರೋಗ್ಯಕ್ಕೆ ಗಮನ ಕೊಡಿ.

ಕುಂಭ ವೃತ್ತಿಯಲ್ಲಿನ ಒತ್ತಡ ನಿಭಾಯಿಸಲು ಸಫಲ. ಸಂಗಾತಿ ಜತೆ ಉತ್ತಮ ಹೊಂದಾಣಿಕೆ. ಆರೋಗ್ಯ ಸಮಸ್ಯೆ ಪರಿಹಾರ. ಮಾನಸಿಕ ನಿರಾಳತೆ.

ಮೀನ ಕೆಲಸದ ಒತ್ತಡ ಕಡಿಮೆ ಮಾಡುವ ಅವಕಾಶ ಸಿಗಲಿದೆ. ಮನೆಯಲ್ಲಿ ಸೌಹಾರ್ದ ವಾತಾವರಣ. ಹಣ ಹೂಡಿಕೆಯಿಂದ ಲಾಭ.

ರಾಹುಕಾಲ: 12.00–1.30
ಗುಳಿಕಕಾಲ: 10.30–12.00

ಅದೃಷ್ಟ ಸಂಖ್ಯೆ : 4,7,0,3

ಕೇರಳದಲ್ಲೂ ಗೊಂದಲ ಇದೆ: ಸಚಿವ ಸತೀಶ್ ಜಾರಕಿಹೊಳಿ
ನಾಯಕತ್ವ ಬದಲು ಸದ್ಯಕ್ಕಿಲ್ಲ

• **ಬೆಂಗಳೂರು:** ಕೇರಳದಲ್ಲಿ ಸರ್ಕಾರದ ರಚನೆ ಪ್ರಕ್ರಿಯೆ ಮುಗಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ದಿಲ್ಲಿಗೆ ಹೋಗಬಹುದು ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.



ಮಂಗಳವಾರ ಮಾಧ್ಯಮಗಳ ಜತೆಗೆ ಮಾತನಾಡಿ, ನಾಯಕತ್ವ ಬದಲಾವಣೆ ವಿಚಾರದ ಬಗ್ಗೆ ಇನ್ನೂ ಸಮಯ ಇದೆ. ಕೇರಳದಲ್ಲಿ ಸರ್ಕಾರದ ರಚನೆ ಪ್ರಕ್ರಿಯೆ ಇದೆ, ಅಲ್ಲಿ ಸ್ಥಳೀಯ ವಾಗಿ ಏನು ಇದೆಯೋ ಗೊತ್ತಿಲ್ಲ. ಹೈಕಮಾಂಡ್ ಏನ್ ಮಾಡುತ್ತೋ ಗೊತ್ತಿಲ್ಲ. ಇರೋ ಸಂಘರ್ಷ ಬಗೆಹರಿಯಬೇಕು ಅಷ್ಟೇ, ಕೇರಳದಲ್ಲೂ ಗೊಂದಲ ಇದೆ, ಅದನ್ನ ಹೈಕಮಾಂಡ್ ಬಗೆಹರಿಸುತ್ತೆ ಎಂದರು.

ಸಿಎಂ ಬದಲಾವಣೆ ಬಗ್ಗೆ ಪ್ರಧಾನಿ ಹೇಳಿಕೆ ಕುರಿತು ಮಾತನಾಡಿದ ಅವರು, ಅದು ನಮ್ಮ ಪಕ್ಷದ ಆಂತರಿಕ ವಿಚಾರ, ಇದನ್ನು ಸರಿಪಡಿಸಲು ಹೈಕಮಾಂಡ್ ಇದೆ, ಸಿಎಲ್‌ಪಿ ಇದೆ ಎಂದು ಹೇಳಿದರು. ಪ್ರಧಾನಿ ಅವರು ಹೇಳಿದ್ದನ್ನು ಮಾಡೋದು ಕಷ್ಟ. ಪೆಟ್ರೋಲ್ ಬೇಡ, ಡೀಸೆಲ್ ಬೇಡ ಅಂದ್ರೆ ಆಗಲ್ಲ. ಬಸ್ ಬಳಸಿ ಅಂದ್ರೆ ಎಲ್ಲರಿಗೆ ಕಷ್ಟ. ಕೆಲವು ಕಡೆ ಅಗತ್ಯತೆ ಇರುತ್ತೆ ಓಡಾಡಬೇಕಾಗುತ್ತದೆ. ಕೆಲವೊಂದನ್ನು ಮಾತ್ರ ಮಾಡಬಹುದು ಎಂದು ಅಭಿಪ್ರಾಪಟ್ಟರು.

ಹೈಕಮಾಂಡ್ ಗೊಂದಲ ನಿವಾರಿಸಲಿ: ಪಂಚರಾಜ್ಯ ಚುನಾವಣೆ ಪ್ರಕ್ರಿಯೆ ಪೂರ್ಣವಾಗಿಲ್ಲ. ಕೇರಳದಲ್ಲಿ ಇನ್ನೂ ನಾಯಕನ ಆಯ್ಕೆ ಇದೆ. ಇದೆಲ್ಲ ಪೂರ್ಣಗೊಂಡ ನಂತರ ಬೆಳವಣಿಗೆ ಶುರುವಾಗುತ್ತವೆ. ಗೊಂದಲ ಇದ್ದರೆ ಆಡಳಿತ ನಡೆಯಲ್ಲ, ವಿಪಕ್ಷಗಳಿಗೆ ಇದು ಹಾಸಿಗೆ ಹಾಕಿ ಕೊಟ್ಟಂತಿದೆ. ಸರ್ಕಾರ ಹೆಚ್ಚು ಸಕ್ರಿಯವಾಗಿ ಕೆಲಸ ಮಾಡಬೇಕು. ಅದಕ್ಕೆ ಹೈಕಮಾಂಡ್ ಗೊಂದಲ ನಿವಾರಿಸಬೇಕು ಎಂದರು.

ಸಿದ್ದರಾಮಯ್ಯ ಮುಂದುವರಿಯಲಿ: ರಾಜಣ್ಣ

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಮುಂದುವರಿಯಬೇಕು, ಸಂಪುಟ ಪುನಾರಚನೆಗೆ ಅವಕಾಶ ಕೊಡಬೇಕು. ಇಲ್ಲದಿದ್ದರೆ ಗೊಂದಲ ಮುಂದುವರಿಯುತ್ತಲೇ ಇರುತ್ತೆ ಎಂದು ಶಾಸಕ ಕೆ.ಎನ್. ರಾಜಣ್ಣ ತಿಳಿಸಿದ್ದಾರೆ. ನಗರದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಹಲವರು ಸಂಪುಟ ಪುನಾರಚನೆಗೆ ಕೇಳುತ್ತಿದ್ದಾರೆ. ಬಹಳಷ್ಟು ಶಾಸಕರು ದಿಲ್ಲಿಗೆ ಹೋಗಿ ಬಂದಿದ್ದಾರೆ. ಸಿದ್ದರಾಮಯ್ಯಗೆ ಅವಕಾಶ ಸಿಗಲಿದೆ. ಸಂಪುಟ ಪುನರ್ ರಚನೆಗೆ ಅವಕಾಶ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ನಾನು ಮೇನಲ್ಲಿ ಬದಲಾವಣೆ ಎಂದಿದ್ದೆ. ಮೇ 20 ಅಂತ ನಾನು ಡೆಡ್ ಲೈನ್ ಕೊಟ್ಟಿಲ್ಲ. ಏನಾಗುತ್ತದೆ ಅಂತ ನೋಡೋಣ, ಈಗ ಗೊಂದಲದ ಪರಿಸ್ಥಿತಿ ಇದೆ. ಆ ಗೊಂದಲದ ಪರಿಸ್ಥಿತಿ ನಿವಾರಣೆ ಮಾಡಬೇಕು. ಗೊಂದಲ ನಮ್ಮ ಪಕ್ಷದಲ್ಲೂ ಆಗುತ್ತವೆ, ಬೇರೆ ಪಕ್ಷದಲ್ಲೂ ಆಗುತ್ತದೆ.
■ **ಕೆ.ಎನ್.ರಾಜಣ್ಣ, ಶಾಸಕ**

ಅಸ್ಸಾಂ ಸಿಎಂ ಆಗಿ ಬಿಸ್ವಾ ಪ್ರಮಾಣ

ಪುಟ 1 ➡ ಪ್ರಮಾಣವಚನ ಸ್ವೀಕರಿಸಿದ ಸಚಿವರುಗಳ ಪೈಕಿ ನೆಯೋಗ್, ಬೋರಾ ಮತ್ತು ಬೋರೋ ಸಿಎಂ ಶರ್ಮಾ ಅವರ ಪ್ರಥಮ ಸಚಿವ ಸಂಪುಟದ ಸದಸ್ಯರು. ಕೇಂದ್ರದ ಮಾಜಿ ಸಚಿವ ತೇಲಿ ರಾಜ್ಯ ರಾಜಕೀಯರಂಗಕ್ಕೆ ಮರಳಿದವರು. ನಿರ್ಗಮನ ಸರಕಾರದಲ್ಲಿ ನೆಯೋಗ್, ಬೋರಾ ಮತ್ತು ಬೋರೋ ಕ್ರಮವಾಗಿ ಹಣಕಾಸು ಸಚಿವ, ಕೃಷಿ ಸಚಿವ, ಸಾರಿಗೆ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದರು.

ಜನಸೇವೆ ಮಾಡಲು ಕಾತರ: ಮಾ ಕಾಮಾಕ್ಯ, ಮಹಾಪುರುಷ ಶ್ರೀಮಂತ ಶಂಕರದೇವರ ದಯೆ ಮತ್ತು ಅಸ್ಸಾಮ್ ಜನತೆಯ ಆಶೀರ್ವಾದಬಲದಿಂದ ತಾನು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿರುವೆ. ಸಂಪುಟ ಸಚಿವರ ಜತೆ ಕೈಜೋಡಿಸಿಕೊಂಡು ಜನಸೇವೆ ಮಾಡಲು, ರಾಜ್ಯದ ಜನತೆಯ ಆಶೋತ್ತರಗಳ ಸಾಕಾರಗೊಳಿಸಲು ನಾವು ಕಾತರರಿದ್ದೇವೆ ಎಂದು ಮುಖ್ಯಮಂತ್ರಿ ಶರ್ಮಾ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ರಾಜ್ಯದ ಜನತೆಯ ಮುಖ್ಯಸೇವಕನಾಗಿ ಮತ್ತೆ ಪ್ರಮಾಣವಚನ ಸ್ವೀಕರಿಸಲು ತಾನು ಹೆಮ್ಮೆಪಡುವುದಾಗಿ ಸಿಎಂ ಶರ್ಮಾ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಪ್ರಧಾನಿ ಮೋದಿ ಅಭಿನಂದನೆ

ಪ್ರಮಾಣವಚನ ಸ್ವೀಕರಿಸಿದ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ನಾಲ್ವರು ಸಚಿವರುಗಳನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದರು. ಪ್ರಮಾಣವಚನ ಕಾರ್ಯಕ್ರಮ ಮುಗಿಸಿ ನಿರ್ಗಮಿಸುವ ಕ್ಷಣಗಳಲ್ಲಿ ಅಸ್ಸಾಂನ ಜನತೆ ಮತ್ತು ವೇದಿಕೆಯಲ್ಲಿದ್ದವರಿಗೆ ಪ್ರಧಾನಿ ಶುಭಾಶಯ ಕೋರಿದರು.

ಗಮೋಸಾದಲ್ಲಿ ಮಿಂಚಿದ ಸಿಎಂ: ಧೋತಿ ಮತ್ತು ಕುರ್ತಾಧಾರಿಯಾಗಿದ್ದು, ಕುತ್ತಿಗೆಗೆ ಸಾಂಪ್ರದಾಯಿಕ ಗಮೋಸಾ ಸುತ್ತಿಕೊಂಡಿದ್ದ ಮುಖ್ಯಮಂತ್ರಿ ಹಿಮಂತ ಬಿಸ್ವಾ ಅಸ್ಸಾಮಿ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಶಾಸಕರಾದ ತೇಲಿ, ಬೋರಾ ಮತ್ತು ನೆಯೋಗ್ ಅವರೂ ಅಸ್ಸಾಮಿಯಲ್ಲೇ ಪ್ರಮಾಣವಚನ ಸ್ವೀಕರಿಸಿದರು. ಬಿಪಿಎಫ್ ಸಚಿವರು ಬೋಡೋ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ದೇಗುಲ ಬಳಿ ಮದ್ಯ ಅಂಗಡಿಗಳಿಗೆ ಬೀಗ

ಪುಟ 1 ➡ ವಿಶೇಷವಾಗಿ ಶಾಲೆ ಮತ್ತು ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿನಿಯರು ಮದ್ಯದಂಗಡಿಗಳ ಬಳಿ ಅಸಭ್ಯ ವರ್ತನೆ ಮತ್ತು ಕಿರುಕುಳ ಎದುರಿಸುತ್ತಿರುವ ಬಗ್ಗೆ ಅನೇಕ ದೂರುಗಳು ಬಂದಿದ್ದವು ಎನ್ನಲಾಗಿದೆ. ಮೈತ್ರಿ ಪಕ್ಷಗಳ ಬೆಂಬಲದೊಂದಿಗೆ ಸರ್ಕಾರ ರಚಿಸಿರುವ ವಿಜಯ್, ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ಜನಪರ ಕ್ರಮಗಳನ್ನು ಆರಂಭಿಸಿರುವುದಕ್ಕೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.2025ರಲ್ಲಿ ತಮಿಳುನಾಡಿನಲ್ಲಿ ಮದ್ಯ ಮಾರಾಟದಿಂದ 48,344 ಕೋಟಿ ರೂ. ಆದಾಯ ಬಂದಿದೆ. ರಾಜ್ಯದಲ್ಲಿ 551 ವಿದೇಶಿ ಮದ್ಯ ಬ್ರ್ಯಾಂಡ್‌ಗಳು ಮಾರಾಟವಾಗುತ್ತಿವೆ. ರಾಜ್ಯವನ್ನು ಮಾದಕವಸ್ತು ಮುಕ್ತಗೊಳಿಸುವ ಭರವಸೆಯನ್ನು ವಿಜಯ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದೆ.

ನಿರ್ಧಾರ ಸ್ವಾಗತಿಸಿದ ಕಮಲ್ ಹಾಸನ್: ಈ ನಿರ್ಧಾರವನ್ನು ನಟ ಹಾಗೂ ರಾಜಕೀಯ ನಾಯಕ ಕಮಲ್ ಹಾಸನ್ ಸ್ವಾಗತಿಸಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ, ದೇವಾಲಯಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಬಸ್ ನಿಲ್ದಾಣಗಳ ಬಳಿ ಇರುವ ಮದ್ಯದಂಗಡಿಗಳನ್ನು ತೆರವುಗೊಳಿಸಬೇಕೆಂಬ ಜನರ ನಿರೀಕ್ಷೆಯನ್ನು ಮುಖ್ಯಮಂತ್ರಿ ವಿಜಯ್ ಅಧಿಕಾರಕ್ಕೆ ಬಂದ ತಕ್ಷಣವೇ ಈಡೇರಿಸಿದ್ದಾರೆ. ಸರ್ಕಾರ ಮದ್ಯ ಮಾರಾಟ ಮಾಡುವುದಕ್ಕಿಂತ ಮದ್ಯ ನಿಯಂತ್ರಣದ ಹೊಣೆ ಹೊತ್ತುಕೊಳ್ಳಬೇಕು. 717 ಅಂಗಡಿಗಳ ಮುಚ್ಚುವಿಕೆಯಿಂದ ಆರಂಭವಾದ ಈ ಕ್ರಮ ಮುಂದುವರಿಯಬೇಕು ಎಂದು ಹೇಳಿದ್ದಾರೆ.

ವಿಜಯ್‌ಗೆ ನಟ ವಿಶಾಲ್ ಶ್ಲಾಘನೆ: ನಟ ವಿಶಾಲ್ ಕೂಡ ಸಿಎಂ ವಿಜಯ್ ಅವರನ್ನು ಶ್ಲಾಘಿಸಿದ್ದಾರೆ. ಆರ್‌ಕೆ ನಗರದಲ್ಲಿರುವ ಒಂದು ವಿದ್ಯಾರ್ಥಿನಿ ಪ್ರತಿದಿನ ಟಾಸ್ಮಾಕ್ ಅಂಗಡಿ ಎದುರಿನಿಂದ ಹೋಗುವಾಗ ಭಯ ಮತ್ತು ಕಿರುಕುಳ ಅನುಭವಿಸುತ್ತಿದ್ದಾಳೆ ಎಂದು ನನಗೆ ತಿಳಿದಿದೆ. ಇಂತಹ ಅನೇಕ ವಿದ್ಯಾರ್ಥಿನಿಯರಿಗೆ ಈ ನಿರ್ಧಾರ ನೆಮ್ಮದಿ ನೀಡಲಿದೆ. ಮುಖ್ಯಮಂತ್ರಿ ವಿಜಯ್ ಅವರ ಈ ಹೆಜ್ಜೆ ಜನರ ಮುಖದಲ್ಲಿ ನಗು ತರಲಿದೆ ಎಂದು ಅವರು ಹೇಳಿದ್ದಾರೆ.

ಸುಪ್ರೀಂಗೆ ಮೇಲ್ಮನವಿ ಸಲ್ಲಿಸಿದ ಟಿವಿಕೆ ಶಾಸಕ

ಪುಟ 1 ➡ **ಸಿವಗಂಗಾ ಜಿಲ್ಲೆಯ ತಿರುಪ್ಪತ್ತೂರು ಕ್ಷೇತ್ರದಲ್ಲಿ ಸೇತುಪತಿ ಕೇವಲ ಒಂದು ಮತದ ಅಂತರದಿಂದ ಡಿಎಂಕೆ ನಾಯಕ ಕೆ.ಆರ್. ಪೆರಿಯಕರುಪ್ಪನ್ ಅವರನ್ನು ಸೋಲಿಸಿದ್ದರು. ಅಂಚೆ ಮತಪತ್ರ ಎಣಿಕೆಯಲ್ಲಿ ಗೊಂದಲ ನಡೆದಿದೆ ಎಂದು ಆರೋಪಿಸಿ ಪೆರಿಯಕರುಪ್ಪನ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ಅಂತಿಮ ತೀರ್ಪು ಬರುವವರೆಗೆ ಸೇತುಪತಿ ವಿಧಾನಸಭೆ ಮತದಾನದಲ್ಲಿ ಪಾಲ್ಗೊಳ್ಳಬಾರದು ಎಂದು ಹೈಕೋರ್ಟ್ ಆದೇಶಿಸಿತ್ತು.**

1,243 ಇವಿ ಚಾರ್ಜಿಂಗ್ ಕೇಂದ್ರ

ಪುಟ 1 ➡ ಈ ಘೋಷಣೆಯು ಕರ್ನಾಟಕದ ಇವಿ ಚಲನಶೀಲತೆಯತ್ತ ದಾಪುಗಾಲು ಎಂದೇ ಕರೆಯಲಾಗುತ್ತಿದೆ. ಭಾರತದ ಇವಿ ಪರಿವರ್ತನೆಗೆ ಈ ಯೋಜನೆಯು ಮತ್ತಷ್ಟು ವೇಗ ನೀಡುತ್ತದೆ. ರಾಜ್ಯದ ಹಸಿರು ಚಲಶೀಲತೆಗೆ ಉತ್ತೇಜನ ನೀಡುವ ಮೂಲಕ ಇಂಗಾಲ ಹೊರಸೂಸುವಿಕೆ ತಡೆಗಟ್ಟಲು ದೊಡ್ಡ ಕೊಡುಗೆ ನೀಡುತ್ತದೆ ಎಂದು ಹೇಳಿದರು. ಇವಿ ಬಳಕೆದಾರರು ಒಂದೇ ವಿಶ್ವಾಸಾರ್ಹ ಇಂಟರ್ಫೇಸ್ ಮೂಲಕ ಬಹು ಆಪರೇಟರ್‌ಗಳ ಚಾರ್ಜಿಂಗ್ ನೆಟ್‌ವರ್ಕ್‌ಗಳಲ್ಲಿ ಅನ್ವೇಷಿಸಲು, ಪ್ರವೇಶಿಸಲು ಮತ್ತು ಪಾವತಿಸಲು ವೇದಿಕೆಯು ಗುರಿಯನ್ನು ಹೊಂದಿದೆ. ಯುಪಿಐನ ಡಿಜಿಟಲ್ ಪಾವತಿಗಳ ರೂಪಾಂತರಕ್ಕೆ ಅದರ ಸಂಭಾವ್ಯ ಪರಿಣಾಮವನ್ನು ಹೋಲಿಸಿದಾಗ, ಈ ಉಪಕ್ರಮವು ಭಾರತದ ಇವಿ ಚಾರ್ಜಿಂಗ್ ಪರಿಸರ ವ್ಯವಸ್ಥೆಯನ್ನು ಗಮನಾರ್ಹವಾಗಿ ಬಲಪಡಿಸುತ್ತದೆ. ರಾಷ್ಟ್ರೀಯ ಏಕೀಕೃತ ಇವಿ ಚಾರ್ಜಿಂಗ್ ಅಪ್ಲಿಕೇಶನ್ ಏಕೀಕೃತ ಭಾರತ್ ಇ-ಚಾರ್ಜ್(ಯುಬಿಸಿ) ಕುರಿತು ಈಗಾಗಲೇ ವಿಸ್ತೃತವಾಗಿ ಕೆಲಸ ನಡೆಯುತ್ತಿದೆ ಎಂದರು.

4,874 ಇವಿ ಚಾರ್ಜಿಂಗ್ ಕೇಂದ್ರ ಸ್ಥಾಪನೆಗೆ ಅನುಮತಿ: 2070ರ ವೇಳೆಗೆ ಇಂಗಾಲದ ನಿವ್ವಳ ಶೂನ್ಯ ಹೊರಸೂಸುವಿಕೆಯನ್ನು ಸಾಧಿಸಲು ದೃಢವಾಗಿ ಬದ್ಧರಾಗಿದ್ದೇವೆ. ಅಲ್ಲದೆ, 2047ರ ವೇಳೆಗೆ ವಿಕಸಿತ ಭಾರತ ಸಾಧನೆಯ ದೃಷ್ಟಿಕೋನಕ್ಕೆ ಅನುಗುಣವಾಗಿ ಮುನ್ನಡೆಯುತ್ತಿದ್ದೇವೆ. ವಿವಿಧ ರಾಜ್ಯಗಳು ಮತ್ತು ಕೇಂದ್ರ ಸರ್ಕಾರಿ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ 4,874 ಇವಿ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಗೆ ಈವರೆಗೆ 503.86 ಕೋಟಿ ರೂ. ಮೌಲ್ಯದ ಪ್ರಸ್ತಾವನೆಗಳನ್ನು ಅನುಮೋದಿಸಲಾಗಿದೆ ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಇವಿ ಮೂಲಸೌಕರ್ಯಕ್ಕೆ 2 ಸಾವಿರ ಕೋಟಿ ರೂ.: ಪಿಎಂ ಇ-ಡ್ರೈವ್ ಯೋಜನೆಯನ್ನು ಭಾರತದ ಇವಿ ರೂಪಾಂತರದ ಮೂಲಾಧಾರವೆಂದು ವಿವರಿಸಿದ ಬಣ್ಣಿಸಿದ ಸಚಿವರು, 10,900 ಕೋಟಿ ರೂ.ಗಳ ಈ ಯೋಜನೆಯು, ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳು, ತ್ರಿಚಕ್ರ ವಾಹನಗಳು, ಬಸ್ಸುಗಳು ಮತ್ತು ಟ್ರಕ್‌ಗಳ ಅಳವಡಿಕೆಯನ್ನು ವೇಗಗೊಳಿಸುತ್ತಿದೆ ಮತ್ತು ಅದೇ ಸಮಯದಲ್ಲಿ ದೇಶಾದ್ಯಂತ ದೃಢವಾದ ಇವಿ ಚಾರ್ಜಿಂಗ್ ಮೂಲ ಸೌಕರ್ಯವನ್ನು ಸೃಷ್ಟಿಸುತ್ತಿದೆ. ದೇಶಾದ್ಯಂತ ಇವಿ ಸಾರ್ವಜನಿಕ ಚಾರ್ಜಿಂಗ್ ಮೂಲಸೌಕರ್ಯ ನಿಯೋಜನೆಗಾಗಿ 2,000 ಕೋಟಿ ರೂ.ಗಳನ್ನು ನಿರ್ದಿಷ್ಟವಾಗಿ ಮೀಸಲಿಡಲಾಗಿದೆ ಎಂದು ಕುಮಾರಸ್ವಾಮಿ ತಿಳಿಸಿದರು.

ಸಾಲಬಾಧೆಗೆ ರೈತ ಆತ್ಮಹತ್ಯೆ

• **ಮಳವಳ್ಳಿ:** ಸಾಲಬಾಧೆಯಿಂದ ತಾಲೂಕಿನ ಹೆಬ್ಬಣಿ ಗ್ರಾಮದ ಮಹದೇವಪ್ಪ(52) ಎಂಬ ರೈತನೊಬ್ಬ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ. ಗ್ರಾಮದ ಬಸವೇಶ್ವರ ದೇವಸ್ಥಾನದ ಅರ್ಚಕರಾಗುವುದರ ಜೊತೆಗೆ ಕೃಷಿ ಮಾಡಿಕೊಂಡಿದ್ದರು ಎನ್ನಲಾಗಿದೆ. ಏಳು ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಲು ತಾಲೂಕಿನ ಪಂಡಿತಹಳ್ಳಿ ಕೃಷಿಪತ್ತಿನ ಸಹಕಾರ ಸಂಘದಲ್ಲಿ 60 ಸಾವಿರ, ಕುರಿ ಸಾಕಾಣಿಕೆಗೆ 1.20 ಲಕ್ಷ ಸೇರಿದಂತೆ ಇತರ ವ್ಯಕ್ತಿಗಳಿಂದ ಸುಮಾರು 6 ಲಕ್ಷಕ್ಕೂ ಹೆಚ್ಚು ಸಾಲ ಮಾಡಿಕೊಂಡಿದ್ದರು. ಮಳೆಯ ಅಭಾವದಿಂದಾಗಿ ರಾಗಿ ಬೆಳೆಯಲ್ಲಿ ನಷ್ಟ ಹಾಗೂ ಅನಾರೋಗ್ಯದ ಸಮಸ್ಯೆಗಳಿಂದ ಸಾಲ ತೀರಿಸಲಾಗದೇ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಮೃತ ಪತ್ನಿ ದಾಕ್ಷಾಯಿಣಿ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೇಶದಲ್ಲಿ ಇಂಧನ ಬಿಕ್ಕಟ್ಟಿಲ್ಲ

ಪುಟ 1 ➡ ವಾಸ್ತವ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಮಾರಾಟ ಮಾಡುತ್ತಿರುವ ಚಿಲ್ಲರೆ ಮಾರಾಟಗಾರರು ಎಷ್ಟು ಸಮಯವರೆಗೆ ನಷ್ಟಗಳನ್ನು ಭರಿಸಬಲ್ಲರು ಎಂಬುದರ ಬಗ್ಗೆ ಒಂದಷ್ಟು ಹಂತದಲ್ಲಿ ಅಂದಾಜು ಅಥವಾ ಅವಲೋಕನ ಕೂಡ ಮುಖ್ಯವೆಂದು ಸಚಿವರು ಹೇಳಿದ್ದಾರೆ. ಶೀಘ್ರದಲ್ಲೇ ದರ ಹೆಚ್ಚಳ ಸಾಧ್ಯತೆಯಿದೆಯೇ ಎಂಬುದಕ್ಕೆ ಪ್ರತಿಕ್ರಿಯಿಸಲು ಸಚಿವರು ನಿರಾಕರಿಸಿದರು.

ತೈಲ ಕಂಪನಿಗಳು ದಿನಕ್ಕೆ 1 ಸಾವಿರ ಕೋಟಿ ರೂ. ನಷ್ಟ ಅನುಭವಿಸುತ್ತಿವೆ. ವೆಚ್ಚಕ್ಕಿಂತ ಕಡಿಮೆ ದರಕ್ಕೆ ಇಂಧನ ಮಾರಾಟದಿಂದಾಗಿರುವ ವ್ಯತ್ಯಯ ಮೊತ್ತ 1.98 ಲಕ್ಷ ಕೋಟಿ ರೂ.ಗಳಿಗೆ ತಲುಪಿದ್ದು, ಕಾಲು ವರ್ಷದ ಅವಧಿಯಲ್ಲಾಗುವ 1 ಲಕ್ಷ ಕೋಟಿ ನಷ್ಟವು ರಂಗದ ವಾರ್ಷಿಕ ಲಾಭಗಳನ್ನೇ ಕಬಳಿಸಿಬಿಡಲಿದೆ. 10 ವಾರಗಳ ಹಿಂದೆ ಪಶ್ಚಿಮ ಏಷ್ಯಾ ಬಿಕ್ಕಟ್ಟು ಶುರುವಾದ ಕ್ಷಣದಿಂದ ಸರಕಾರಿ ಸ್ವಾಮ್ಯದ ತೈಲ ಮಾರ್ಕೆಟಿಂಗ್ ಕಂಪನಿಗಳು ವಾಸ್ತವ ವೆಚ್ಚಕ್ಕಿಂತಲೂ ಕಡಿಮೆ ದರದಲ್ಲಿ ಅಬಾಧಿತವಾಗಿ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಎಲ್‌ಪಿಜಿ ಪೂರೈಸುತ್ತಿವೆ. ವಿದೇಶಗಳಲ್ಲಿ ಇವುಗಳ ದರದಲ್ಲಿ ಮಿತಿಮೀರಿ ಏರಿಕೆಯಾಗಿದೆ ಮತ್ತು ರೇಶನಿಂಗ್ ವ್ಯವಸ್ಥೆ ಜಾರಿಯಾಗಿದೆ.

ವೆಚ್ಚಕ್ಕಿಂತ ಕಡಿಮೆ ದರಕ್ಕೆ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಪೂರೈಕೆಯ ಪರಿಣಾಮ ಸರ್ಕಾರಿ ಸ್ವಾಮ್ಯದ ತೈಲ ಮಾರ್ಕೆಟಿಂಗ್ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೊರೇಶನ್(ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿ.(ಬಿಪಿಸಿಎಲ್), ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿ.ಗಳು(ಎಚ್‌ಪಿಸಿಎಲ್) ಕಂಡರಿಯದ ಪ್ರಮಾಣದಲ್ಲಿ ನಷ್ಟ ಅನುಭವಿಸುತ್ತಿವೆ. ಎಷ್ಟು ಸುದೀರ್ಘಾವಧಿವರೆಗೆ ತೈಲ ಕಂಪನಿಗಳು ಈ ರೀತಿ ನಷ್ಟವನ್ನು ಧೈರ್ಯದಿಂದ ಅನುಭವಿಸಬಲ್ಲವು ಎಂಬುದೀಗ ನಮ್ಮನ್ನು ಕಾಡುತ್ತಿರುವ ಆತಂಕವಾಗಿದೆ ಎಂದು ಸಚಿವರು, ಅಗಾಧ ನಷ್ಟದಿಂದಾಗಿ ಇಂಧನಗಳ ದರ ಶೀಘ್ರ ಏರುವುದೇ ಎಂಬ ಪ್ರಶ್ನೆಗೆ ಉತ್ತರಿಸಿದರು.

ಪ್ರಧಾನಿಗೆ ಭದ್ರತೆ ನೀಡದ ಸರ್ಕಾರ: ಶ್ರೀರಾಮುಲು

• **ಬೆಂಗಳೂರು:** ಪ್ರಧಾನಿಯವರು ಬೆಂಗಳೂರಿಗೆ ಬಂದಾಗ ನೂರು ಮಂದಿ ಇನ್ಸ್‌ಪೆಕ್ಟರ್‌ಗಳನ್ನು ಸರ್ಕಾರ ವರ್ಗಾವಣೆ ಮಾಡಿದೆ. ಇದಕ್ಕೆ ಅಂತಹ ತುರ್ತು ಏನಿತ್ತು. ಪ್ರಧಾನಿಯವರು ಸಾಗುವ ನಿಗದಿತ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿಗಳು ಸಿಕ್ಕಿವೆ. ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಯಾರು ಹೊಣೆ ಎಂದು ಮಾಜಿ ಸಚಿವ ಶ್ರೀರಾಮುಲು ಪ್ರಶ್ನಿಸಿದ್ದಾರೆ.


ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿ, ಪ್ರಧಾನಿಯವರು ಬಂದಾಗ ಕಾಂಗ್ರೆಸ್ ಸರ್ಕಾರ ಸರಿಯಾದ ಭದ್ರತೆ ನೀಡದೆ ಲೋಪ ಎಸಗಿದೆ. ಮೋದಿ ಅವರು ವಿಶ್ವದೆಲ್ಲೆಡೆ ಹೋದರೆ ಸರಿಯಾದ ಭದ್ರತೆ ಒದಗಿಸಲಾಗುತ್ತದೆ. ಹಾಗಿದ್ದಾಗ, ರಾಜ್ಯಕ್ಕೆ ಬಂದಾಗ ಭದ್ರತಾ ವ್ಯವಸ್ಥೆ ಸರಿ ಇರಲಿಲ್ಲ ಎಂದರೆ ಹೇಗೆ ಎಂದು ಪ್ರಶ್ನಿಸಿದರು.

ಚಾರಣಪಥ–ಸಂಚಾರಪಥ ತಾತ್ಕಾಲಿಕ ಸ್ಥಗಿತ: ಸಚಿವ

ಪುಟ 1 ➡ ಅರಣ್ಯ ಸಚಿವ ಖಂಡ್ರೆ ಚಾರಣ ಚಟುವಟಿಕೆಗಳನ್ನು ಸುರಕ್ಷಿತ ಮತ್ತು ಜವಾಬ್ದಾರಿಯುತ ರೀತಿಯಲ್ಲಿ ನಡೆಸುವಂತೆ ಸೂಚಿಸಿದ್ದಾರೆ. ಇತ್ತೀಚೆಗಷ್ಟೇ ಬಿಡುಗಡೆ ಮಾಡಿದ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ)ಗಳನ್ನು ಕಡ್ಡಾಯವಾಗಿ ಪಾಲಿಸುವಂತೆಯೂ ಸೂಚನೆ ನೀಡಿದ್ದಾರೆ. ಒಂದೊಮ್ಮೆ ಎಸ್‌ಒಪಿ ಪಾಲನೆಗೆ ಸಿದ್ಧತೆ ಮಾಡಿಕೊಳ್ಳದೇ ಇದ್ದಲ್ಲಿ ಅಂತಹ ಚಾರಣ ಪಥಗಳಲ್ಲಿ ಚಟುವಟಿಕೆಯನ್ನು ಸ್ಥಗಿತಗೊಳಿಸಲು ಸಚಿವರು ಸೂಚಿಸಿದ್ದಾರೆ. ಮುಖ್ಯ ವನ್ಯಜೀವಿ ಪರಿಪಾಲಕರಿಂದ ಸುತ್ತೋಲೆ ಕರ್ನಾಟಕ ಅರಣ್ಯ ಇಲಾಖೆ ಮತ್ತು ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯ ಮೇಲ್ವಿಚಾರಣೆಯಲ್ಲಿ ಕೈಗೊಳ್ಳುವ ಚಾರಣಪಥಗಳಲ್ಲಿ ಎಸ್‌ಒಪಿ ಪಾಲನೆಗೆ ಪೂರ್ವಸಿದ್ಧತೆ ಮಾಡಿಕೊಂಡು ನಂತರ ಚಾರಣ ಚಟುವಟಿಕೆ ಮುಂದುವರಿಸುವಂತೆ ಆದೇಶ ನೀಡಲಾಗಿದೆ. ಅಧಿಕೃತವಾಗಿ ಈ ಸಂಬಂಧ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು ಎರಡು ಪ್ರತ್ಯೇಕ ಸುತ್ತೋಲೆಗಳನ್ನು ಹೊರಡಿಸಿದ್ದಾರೆ.

ಬೆಟ್ಟಕ್ಕೆ ಜಾತ್ರೆ ವೇಳೆ ಮಾತ್ರ ಅವಕಾಶ

• **ಬೆಂಗಳೂರು:** ನಾಗಮಲೆಯಲ್ಲಿ ಚಿರತೆ ದಾಳಿಯಿಂದ ಬಾಲಕ ಮೃತಪಟ್ಟ ಹಿನ್ನೆಲೆಯಲ್ಲಿ ಮಹದೇಶ್ವರ ಬೆಟ್ಟಕ್ಕೆ ಶಿವರಾತ್ರಿ, ಯುಗಾದಿ ಜಾತ್ರೆ ವೇಳೆ ಮಾತ್ರವೇ ಕಾಲ್ನಡಿಗೆಯಲ್ಲಿ ಸಾಗಲು ಅವಕಾಶ ನೀಡುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ನಿರ್ದೇಶನ ನೀಡಿದ್ದಾರೆ.



ವಿಕಾಸಸೌಧದಲ್ಲಿ ಮಂಗಳವಾರ ಹಿರಿಯ ಅಧಿಕಾರಿಗಳು ಹಾಗೂ ಚಾಮರಾಜನಗರ ಅರಣ್ಯಾಧಿಕಾರಿಗಳೊಂದಿಗೆ ವರ್ಚುವಲ್ ಸಭೆ ನಡೆಸಿದ ಅವರು, ನಾಗಮಲೆಗೆ 14 ಕಿ.ಮೀ. ನಡೆದು ಹೋಗಲು ಅವಕಾಶ ನೀಡದೆ, ಕೇವಲ 3 ಕಿ.ಮೀ. ಮಾತ್ರ ಅವಕಾಶ ನೀಡಿ. ವಾಕಿ ಟಾಕಿ ಮತ್ತು ಅಗತ್ಯ ಸುರಕ್ಷತಾ ಸಲಕರಣೆಯೊಂದಿಗೆ ಮಾರ್ಗದರ್ಶಕರ (ಗೈಡ್) ಸೇವೆ ಒದಗಿಸುವಂತೆ ಸೂಚಿಸಿದರು.

ಟಿಕೆಟ್ ಕೌಂಟರ್ ಬಳಿಯಿಂದ ನಾಗಮಲೆಯ ಭಕ್ತರು ಜೀಪ್‌ನಲ್ಲಿ ಹೋಗುವುದನ್ನು ಕಡ್ಡಾಯ ಮಾಡಬೇಕು. ಉಳಿದ 3 ಕಿ.ಮೀ. ದುರ್ಗಮ ಅರಣ್ಯದ ಸಂಚಾರ ಪಥದ ಎರಡೂ ಬದಿಯಲ್ಲಿ ವನ್ಯಮೃಗಗಳು ಕಾಣುವಂತೆ ಗೋಚರರೇಖೆ (ವ್ಯೂ ಲೈನ್)ಯ ಕಳೆ ತೆಗೆಯಬೇಕು. ಅದೇ ರೀತಿ ಮಾದಪ್ಪನ ದರ್ಶನಕ್ಕೆ 7 ಕಿ.ಮೀ. ಬೆಟ್ಟ ಹತ್ತಿ ಹೋಗಲು ವರ್ಷವಿಡೀ ಅವಕಾಶ ನೀಡದೆ ಭಕ್ತರ ಸುರಕ್ಷತೆಯ ದೃಷ್ಟಿಯಿಂದ ಕೇವಲ ಶಿವರಾತ್ರಿ ಮತ್ತು ಯುಗಾದಿ ಸಂದರ್ಭದಲ್ಲಿ ಮಾತ್ರವೇ ಅವಕಾಶ ನೀಡಿ, ಆ ಸಂದರ್ಭದಲ್ಲಿ ಹೆಚ್ಚಿನ ಅರಣ್ಯ ಸಿಬ್ಬಂದಿಯನ್ನು ಭಕ್ತರ ಸುರಕ್ಷತೆಗಾಗಿ ನಿಯೋಜಿಸುವಂತೆ ಅವರು ನಿರ್ದೇಶಿಸಿದರು.


ಮಲೆ ಮಹದೇಶ್ವರ ಬೆಟ್ಟದ ಮೆಟ್ಟಿಲುಗಳ ಬಳಿ ಮತ್ತು ಟಿಕೆಟ್ ಕೌಂಟರ್ ಬಳಿ ಫಲಕಗಳನ್ನು ಹಾಕಿ ಆನೆ, ಚಿರತೆ, ಹುಲಿ ಸೇರಿದಂತೆ ವನ್ಯಮೃಗಗಳಿವೆ; ಬಸ್ ಸೌಲಭ್ಯ ಬಳಸಿಕೊಂಡು ಹೋಗುವುದು ಉತ್ತಮ ಎಂಬ ಜಾಗೃತಿ ಮೂಡಿಸಲೂ ಸಲಹೆ ನೀಡಿದರು.

ಕೇರಳ ಹೊಸ ಸಿಎಂ ಕೆಸಿವಿ?

ಪುಟ 1 ➡ ಕೇರಳ ವಿಧಾನಸಭೆಯ ವಿಪಕ್ಷ ನಾಯಕ (ಎಲ್‌ಒಪಿ) ವಿ.ಡಿ. ಸತೀಶನ್, ಹಿರಿಯ ನಾಯಕ ರಮೇಶ್ ಚೆನ್ನಿತ್ತಲ (ಮಾಜಿ ಎಲ್‌ಒಪಿ) ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೆಸರುಗಳು ಮುಖ್ಯಮಂತ್ರಿ ಆಕಾಂಕ್ಷಿಗಳ ಓಟದಲ್ಲಿವೆ. ಕೇರಳ ಮುಖ್ಯಮಂತ್ರಿ ಆಯ್ಕೆ ಅಂತಿಮಗೊಳ್ಳುವ ಮುನ್ನ ಕಾಂಗ್ರೆಸ್ ಹೈಕಮಾಂಡ್ ಇನ್ನೊಮ್ಮೆ ಸಭೆ ಸೇರಿ ಚರ್ಚೆ ನಡೆಸುವ ಸಾಧ್ಯತೆಯಿದೆ. ಈ ಸಭೆಯಲ್ಲಿ ಹಿರಿಯ ನಾಯಕಿ ಸೋನಿಯಾ ಗಾಂಧಿ ಮತ್ತು ಪ್ರಿಯಾಂಕಾ ವಾದ್ರಾ ಪಾಲ್ಗೊಳ್ಳುವ ಸಾಧ್ಯತೆ ಇದೆಯೆಂದು ತಿಳಿದುಬಂದಿದೆ. 140 ಕ್ಷೇತ್ರಗಳಿಗಾಗಿ ನಡೆದ ಕೇರಳ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 63 ಮತ್ತು ಮುಸ್ಲಿಂ ಲೀಗ್ 22 ಸ್ಥಾನಗಳನ್ನು ಗೆದ್ದುಕೊಂಡಿದ್ದು, ಯುಡಿಎಫ್ ಒಟ್ಟು 102 ಶಾಸಕರ ಬಲ ಹೊಂದಿದೆ.

ನಕಲಿ ದಾಖಲೆ: ತನಿಖೆಗೆ ಜೋಶಿ ಆಗ್ರಹ

• **ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್‌ನ ನಿವೃತ್ತ ಉದ್ಯೋಗಿಯಾಗಿರುವ ಪ್ರಭಾರಿ ವ್ಯವಸ್ಥಾಪಕ ಪಾರ್ಶ್ವನಾಥ್ ಎಂಬುವವರು ದುರುದ್ದೇಶದಿಂದ ನಕಲಿ ದಾಖಲೆ ಸೃಷ್ಟಿಸಿ ಸಾಹಿತ್ಯ ಪರಿಷತ್ ಆಡಳಿತಾಧಿಕಾರಿಗಳಿಗೂ ವಾಸ್ತವ ವಿಷಯ ಮುಚ್ಚಿಟ್ಟು ತಮ್ಮ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಹೇಳಿರುವ ಪಾರ್ಶ್ವನಾಥ್ ಎನ್ನುವವರ ವಿರುದ್ಧ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಮಹೇಶ್ ಜೋಶಿ ವಿವಿ ಪುರಂ ಪೊಲೀಸರಿಗೆ ದೂರು ನೀಡಿದ್ದಾರೆ.



ಸಾಹಿತ್ಯ ಪರಿಷತ್‌ನಲ್ಲಿ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಪಾರ್ಶ್ವನಾಥ್ ಎನ್ನುವವರು ನಿವೃತ್ತಿಯಾಗಿದ್ದಾರೆ. ನಿವೃತ್ತಿ ಬಳಿಕ ನನ್ನ ವಿರುದ್ಧ ಕೆಲವು ದಿನಾಂಕಗಳಿಲ್ಲದ ದಾಖಲೆಗಳನ್ನು ಸೃಷ್ಟಿಸಿ ಆಡಳಿತಾಧಿಕಾರಿಯಾಗಿರುವ ಕೆ.ಎಂ. ಗಾಯತ್ರಿ ಅವರಿಗೂ ವಾಸ್ತವ ವಿಷಯವನ್ನು ಮುಚ್ಚಿಟ್ಟು ನನ್ನ ವಿರುದ್ಧ ಕ್ರಮ ಕೈಗೊಳ್ಳಲು ಆಗ್ರಹಿಸಿ ರುತ್ತಾರೆ. ಆದರೆ, ನನ್ನ ವಿರುದ್ಧ ಮಾಡಿರುವ ಆರೋಪಗಳ ದಾಖಲೆಗಳನ್ನು ಮಾಹಿತಿ ಹಕ್ಕಿನಡಿ ಪಡೆದು ಪರಿಶೀಲಿಸಿದಾಗ, ಅವುಗಳಲ್ಲಿ ಯಾವುದೇ ದಿನಾಂಕಗಳಿಲ್ಲದಿರುವುದು ಹಾಗೂ ಹೈಕೋರ್ಟ್‌ನಲ್ಲಿ ಹೂಡಿರುವ ಪ್ರಕರಣದ ಕೇವಿಯಟ್ ಬಗ್ಗೆಯೂ ನಮೂದಿಸಿರುವ ಹಲವು ಸಂಶಯಕ್ಕೆ ಎಡೆಮಾಡಿದೆ. ಹೀಗಾಗಿ ಈ ದಾಖಲೆಗಳು ಮೇಲ್ನೋಟಕ್ಕೆ ನಕಲಿ ಎಂಬುದು ಸಂಶಯ ಮೂಡಿದ್ದು, ಈ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಿ ತಮಗೆ ನ್ಯಾಯ ಒದಗಿಸಬೇಕು ಎಂದು ಜೋಶಿ ಅವರು ನೀಡಿರುವ ದೂರಿನಲ್ಲಿ ಮನವಿ ಮಾಡಿದ್ದಾರೆ.

ಬಹುಮಾನ ಪಾವತಿಸಲು ಹೈಕೋರ್ಟ್ ನಿರ್ದೇಶನ

ಬೆಂಗಳೂರು: ಕಾಡುಗಳ್ಳ ವೀರಪ್ಪನ್ ಹಿಡಿಯಲು ನೇಮಕವಾಗಿದ್ದ ವಿಶೇಷ ಕಾರ್ಯಾಚರಣಾ ಪಡೆ (ಎಸ್‌ಟಿಎಫ್) ಭಾಗವಾಗಿದ್ದ 72 ಮಂದಿಗೆ ಬಹುಮಾನದ ಮೊತ್ತವನ್ನು ಮೂರು ತಿಂಗಳಲ್ಲಿ ಪಾವತಿಸುವಂತೆ ರಾಜ್ಯ ಸರ್ಕಾರ ಮತ್ತು ಅರಣ್ಯ ಇಲಾಖೆಗೆ ಹೈಕೋರ್ಟ್ ನಿರ್ದೇಶಿಸಿದೆ.

2005ರ ಜು. 8ರ ಸರ್ಕಾರಿ ಆದೇಶದ ಪ್ರಕಾರ ಫಲಾನುಭವಿಗಳಿಗೆ ಬಹುಮಾನ ವಿತರಿಸುವಂತೆ ನ್ಯಾ. ಸಚಿನ್ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠವು ಸರ್ಕಾರಕ್ಕೆ ಆದೇಶಿಸಿದೆ.

ಮೋದಿ ದ್ವೇಷಕ್ಕೆ ದೇಶಹಿತ ಬಲಿಕೊಡದಿರಿ: ಕಾಂಗ್ರೆಸಿಗರಿಗೆ ಚಾಟಿ ಬೀಸಿದ ಅಶೋಕ್

• **ಬೆಂಗಳೂರು:** ದೇಶದ ಹಿತದೃಷ್ಟಿಯಿಂದ ಚಿನ್ನ ಮತ್ತು ಇಂಧನ ಬಳಕೆಯನ್ನು ಕಡಿಮೆ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ಕರೆಗೆ ಕಾಂಗ್ರೆಸ್ ನಾಯಕರು ಕುತ್ಸಿತ ಟೀಕೆ ಮಾಡಿರುವುದನ್ನು ಬಿಜೆಪಿ ನಾಯಕ ಆರ್. ಅಶೋಕ್ ತೀವ್ರವಾಗಿ ತರಾಟೆಗೆತ್ತಿಕೊಂಡಿದ್ದಾರೆ. ಮೋದಿ ದ್ವೇಷಕ್ಕೆ ದೇಶಹಿತವನ್ನು ಬಲಿಕೊಡಬೇಡಿ ಎಂದು ಅವರು ಕಾಂಗ್ರೆಸ್ ನಾಯಕರಿಗೆ ಆಗ್ರಹಿಸಿದ್ದಾರೆ.



ಕಾಂಗ್ರೆಸ್ಸಿಗರ ಆರ್ಥಿಕ ಅಜ್ಞಾನ ಮತ್ತು ಅಂಧ ವಿರೋಧಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ? ಇತಿಹಾಸದ ಅರಿವೂ ಇಲ್ಲದ, ಆರ್ಥಿಕ ನಿರ್ವಹಣೆಯ ಗಂಧ-ಗಾಳಿಯೂ ಗೊತ್ತಿಲ್ಲದ ಇಂದಿನ ಕಾಂಗ್ರೆಸ್ ನಾಯಕರಿಗೆ ,ಪ್ರಧಾನಿ ನರೇಂದ್ರ ಮೋದಿ ಅವರ ಪ್ರತಿ ನಡೆಯನ್ನೂ ವಿರೋಧಿಸುವುದೇ ಒಂದು 'ನಿತ್ಯ ಕಾಯಕ'ವಾಗಿ ಬಿಟ್ಟಿದೆ ಎಂಬುದಾಗಿ ಅಶೋಕ್ ತಮ್ಮ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರದ ಹಿತದೃಷ್ಟಿಯಿಂದ ಪ್ರಧಾನಿ ನರೇಂದ್ರ ಮೋದಿಯವರು ನೀಡುವ ದೂರದೃಷ್ಟಿಯ ಆರ್ಥಿಕ ಸಲಹೆಗಳನ್ನು ಲೇವಡಿ ಮಾಡುವ ಈ ಕಾಂಗ್ರೆಸ್ಸಿಗರು ಒಮ್ಮೆ ತಮ್ಮದೇ ಪಕ್ಷದ ಇತಿಹಾಸವನ್ನು ತಿರುವಿ ಹಾಕಬೇಕು.1967 ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ದೇಶದ ಆರ್ಥಿಕ ಶಿಸ್ತಿಗಾಗಿ 'ಚಿನ್ನ ಕೊಳ್ಳಬೇಡಿ' ಎಂದು ಜನರಲ್ಲಿ ಮನವಿ ಮಾಡಿದ್ದರು. 2013 ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವಿದ್ದಾಗ ವಿತ್ತ ಸಚಿವ ಪಿ. ಚಿದಂಬರಂ ಅವರು ಚಾಲ್ತಿ ಖಾತೆ ಕೊರತೆ (ಸಿಎಡಿ) ಸರಿದೂಗಿಸಲು 'ಚಿನ್ನದ ಮೇಲಿನ ವ್ಯಾಮೋಹ ಬಿಡಿ' ಎಂದು ಪದೇ ಪದೇ ಜನತೆಯನ್ನು ಗೋಗರೆದಿದ್ದರು ಎಂಬುದನ್ನು ದಾಖಲೆ ಸಹಿತವಾಗಿ ನೆನಪಿಸಿಕೊಟ್ಟು ಅಶೋಕ್ ಕಾಂಗ್ರೆಸಿಗರ ಕುತ್ಸಿತ ರಾಜಕೀಯ ವಿರುದ್ಧ ಚಾಟಿ ಬೀಸಿದ್ದಾರೆ.

ಇದೆಂತಹ ಎಡಬಿಡಂಗಿತನ ?

'ದೊರೆ ಮಾಡಿದರೆ ದಂಡವಿಲ್ಲ' ಎಂಬಂತೆ, ಇಂದಿರಾ ಗಾಂಧಿ ಅಥವಾ ಸೋನಿಯಾ ಗಾಂಧಿ ಅವರ ಕಾಲದಲ್ಲಿ ಅಂದಿನ ಕಾಂಗ್ರೆಸ್ ಸರ್ಕಾರಗಳು ಕರೆ ನೀಡಿದರೆ ಅದು "ಆರ್ಥಿಕ ಶಿಸ್ತು " ಮತ್ತು "ಆರ್ಥಿಕ ಜವಾಬ್ದಾರಿ" ಆಗುತ್ತದೆ.ಆದರೆ ರಾಷ್ಟ್ರದ ಹಿತದೃಷ್ಟಿಯಿಂದ ಪ್ರಧಾನಿ ಮೋದಿ ಅವರು ಕರೆ ನೀಡಿದರೆ ಅದು ಇವರಿಗೆ ತಪ್ಪಾಗಿ ಕಾಣುತ್ತಿರುವುದು ಕಾಂಗ್ರೆಸ್ ನಾಯಕರ ಎಡಬಿಡಂಗಿತನಕ್ಕೆ ಹಿಡಿದ ಕನ್ನಡಿ ಎಂದು ಅಶೋಕ್ ಕುಟುಕಿದ್ದಾರೆ.

ಕೇವಲ ರಾಜಕೀಯ ಕಾರಣಕ್ಕಾಗಿ ದೇಶದ ಆರ್ಥಿಕತೆಯ ಬಗ್ಗೆ ಯಾವುದೇ ಸತರ್ಕವಿಲ್ಲದೆ ಮಾತನಾಡುವ ಕಾಂಗ್ರೆಸ್ ನಾಯಕರು ಮೊದಲು ಆರ್ಥಿಕತೆಯ ಮೂಲಪಾಠಗಳನ್ನು ಕಲಿಯಲಿ. ಮೋದಿಯವರನ್ನು ವಿರೋಧಿಸುವ ಭರದಲ್ಲಿ ದೇಶದ ಹಿತವನ್ನು ಬಲಿ ಕೊಡಬೇಡಿ ಎಂದು ಕಾಂಗ್ರೆಸಿಗರ ಕಿವಿಹಿಂಡಿದ್ದಾರೆ.

ಸಿಎಂ ಜತೆ ಚರ್ಚೆ



ರಾಜ್ಯ ವಾಲ್ಮೀಕಿ ಸಮುದಾಯದ ಮುಖಂಡರು ಮತ್ತು ಸ್ವಾಮೀಜಿಗಳ ನಿಯೋಗ ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗೃಹ ಕಚೇರಿ ಕೃಷ್ಣಾದಲ್ಲಿ ಭೇಟಿಯಾಗಿ ಪರಿಶಿಷ್ಟ ಜಾತಿ ಮೀಸಲಾತಿ ಪ್ರಮಾಣ ಹೆಚ್ಚಿಸುವ ಕುರಿತು ಚರ್ಚೆ ನಡೆಸಿತು.

ಟೈಮರ್ ಪತ್ತೆ, ಜಿಲೆಟಿನ್ ಕಡ್ಡಿ ಪ್ರಕರಣ ಸಮಗ್ರ ತನಿಖೆ: ಪರಂ

• **ಬೆಂಗಳೂರು:** ಜಿಲೆಟಿನ್ ಕಡ್ಡಿ ಹಾಗೂ ಟೈಮರ್ ಪತ್ತೆಯಾಗಿರುವ ಪ್ರಕರಣವನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ಈ ಕುರಿತು ಸಮಗ್ರ ತನಿಖೆ ಪ್ರಗತಿಯಲ್ಲಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಸ್ಫೋಟಕ ಇರಿಸಿರುವ ಬಗ್ಗೆ ಕರೆ ಮಾಡಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದು, ಆತನ ವಿಚಾರಣೆ ನಡೆಸಲಾಗುತ್ತಿದೆ. ಘಟನಾ ಸ್ಥಳದಲ್ಲಿ ಜಿಲೆಟಿನ್ ಕಡ್ಡಿ ಸೇರಿದಂತೆ ಪತ್ತೆಯಾಗಿರುವ ಎಲ್ಲಾ ವಸ್ತುಗಳನ್ನು ವಶಕ್ಕೆ ಪಡೆದು ವೈಜ್ಞಾನಿಕ ತನಿಖೆಗೆ ಒಳಪಡಿಸಲಾಗಿದೆ. ಈ ಪ್ರಕರಣದ ತನಿಖೆಯಲ್ಲಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಕೂಡ ಕೈಜೋಡಿಸುತ್ತಿದ್ದು, ರಾಜ್ಯ ಪೊಲೀಸರು ಅವರಿಗೆ ಸಂಪೂರ್ಣ ಸಹಕಾರ ನೀಡಲಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಭದ್ರತೆಯಲ್ಲಿ ಲೋಪವಿಲ್ಲ: ಪ್ರಧಾನಮಂತ್ರಿಯವರ ಭೇಟಿಯ ಹಿನ್ನೆಲೆಯಲ್ಲಿ ಬಿಗಿ ಭದ್ರತೆ ಇರುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನ್ವಯದೊಂದಿಗೆ ಹೈ-ಲೆವೆಲ್ ಸೆಕ್ಯೂರಿಟಿ ಒದಗಿಸುತ್ತವೆ. ಕಾರ್ಯಕ್ರಮ ಆರಂಭವಾಗುವ ಎರಡು ಗಂಟೆಗಳ ಮೊದಲು, ಈ ಸ್ಫೋಟಕಗಳು ಪತ್ತೆಯಾಗಿರುವುದು ಪೊಲೀಸರ ಜಾಗರೂಕತೆಗೆ ಸಾಕ್ಷಿಯಾಗಿದೆ. ಇದು ಒಂದು ರೀತಿಯಲ್ಲಿ ಉತ್ತಮ ಬೆಳವಣಿಗೆಯಾಗಿದ್ದು, ಅಹಿತಕರ ಘಟನೆ ನಡೆಯುವ ಮುನ್ನವೇ ಪತ್ತೆ ಹಚ್ಚಲಾಗಿದೆ ಎಂದರು.

ಭಯೋತ್ಪಾದನಾ ನಂಟು ಶಂಕೆ: ಈ ಪ್ರಕರಣಕ್ಕೆ ಭಯೋತ್ಪಾದನಾ ಚಟುವಟಿಕೆಗಳ ನಂಟು ಇರುವ ಸಾಧ್ಯತೆಗಳ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಹಂತದಲ್ಲಿ ಯಾವುದೇ ಖಚಿತ ತೀರ್ಮಾನಕ್ಕೆ ಬರುವುದು ಕಷ್ಟ. ತನಿಖೆ ಪೂರ್ಣಗೊಂಡ ನಂತರವಷ್ಟೇ ಸತ್ಯಾಸತ್ಯತೆ ಹೊರಬರಲಿದೆ. ಅಲ್ಲಿಯವರೆಗೆ ಕಾದು ನೋಡಬೇಕಿದೆ ಎಂದು ತಿಳಿಸಿದರು.

ಕಿರುಸುದ್ದಿ

ಸಾರಿಗೆ ನೌಕರರಿಗೆ ಶೇ.2.5 ವೇತನ ಹೆಚ್ಚಳ

• **ಬೆಂಗಳೂರು:** ಸಾರಿಗೆ ನೌಕರರಿಗೆ 2025 ಜ.1ರಿಂದ ಜಾರಿಗೆ ಬರುವಂತೆ ಶೇ2.5 ವೇತನ ಪರಿಷ್ಕರಣೆಗೆ ರಾಜ್ಯ ಸರ್ಕಾರವು ಅನುಮೋದನೆ ನೀಡಿದೆ. ಈ ವೇತನ ಪರಿಷ್ಕರಣೆ ಯಿಂದ ನಾಲ್ಕು ಸಾರಿಗೆ ನಿಗಮಗಳಿಗೆ ಪ್ರತಿ ತಿಂಗಳು 72.80 ಕೋಟಿ ರೂ., ಪ್ರತಿ ವರ್ಷ 873.64 ಕೋಟಿ ರೂ. ಹೆಚ್ಚುವರಿ ವೆಚ್ಚವಾಗಲಿದೆ. ನಾಲ್ಕು ಸಾರಿಗೆ ಸಂಸ್ಥೆಗಳ 1ಲಕ್ಷದ 5 ಸಾವಿರ ಸಿಬ್ಬಂದಿಗಳಿಗೆ ವೇತನ ಪರಿಷ್ಕರಣೆ ಅನ್ವಯವಾಗಲಿದೆ. ವೇತನ ಪರಿಷ್ಕರಣೆಯನ್ನು ಜ.1ಮಾಹೆಯ ವೇತನದಲ್ಲಿ ಅನುಷ್ಠಾನಗೊಳಿಸಿ ಎಲ್ಲಾ ಅರ್ಹ ಅಧಿಕಾರಿ ಮತ್ತು ನೌಕರರಿಗೆ ಪಾವತಿಸಲಾಗುತ್ತದೆ. ಈಗಾಗಲೇ 2023ರ ಮಾರ್ಚ್‌ನ ವೇತನ ಪರಿಷ್ಕರಣೆಯ 26 ತಿಂಗಳ ಹಿಂಬಾಕಿ ಮೊತ್ತ 1271.92 ಕೋಟಿ ರೂ. ಗಳಲ್ಲಿ ಮೊದಲ ಕಂತಿನ ಹಣ 450 ಕೋಟಿ ರೂ. ಸರ್ಕಾರ ಬಿಡುಗಡೆ ಮಾಡಿದ್ದು, ನೌಕರರ ಖಾತೆಗಳಿಗೆ ಜಮಾ ಮಾಡಲಾಗಿದೆ. 2025 ಜ.1ರಿಂದ ಜೂ.30 ರವರೆಗಿನ ವೇತನ ಪರಿಷ್ಕರಣೆ ಹೆಚ್ಚಳದ ಹಿಂಬಾಕಿ ಮೊತ್ತವನ್ನು ಮುಂದಿನ ದಿನಗಳಲ್ಲಿ ಪಾವತಿ ಮಾಡಲಾಗುವುದು ಎಂದು ಆದೇಶದಲ್ಲಿ ತಿಳಿಸಿದೆ.

ದೇಶಕ್ಕೆ ಬಿಜೆಪಿ ಉಪಯೋಗವೇ ಇಲ್ಲ: ಸಚಿವ ಸಂತೋಷ ಲಾಡ್

• **ಧಾರವಾಡ:** ದೇಶದ ಗುಡಿ-ಗುಂಡಾರ ಭೇಟಿ, ಫೋಟೋ ಶೂಟ್‌ಗಳಿಗೆ ನರೇಂದ್ರ ಮೋದಿ ಸಿಮೀತವಾಗಿದ್ದು, ಚುನಾವಣೆ ವೇಳೆ ಮಾತ್ರ ಪ್ರತ್ಯಕ್ಷವಾಗಿ ನಂತರ ಮರೆ ಆಗುವುದು ಮೋದಿ ಸ್ಕೀಮ್ ಎಂದು ಕಾರ್ಮಿಕ ಇಲಾಖೆಯ ಸಚಿವ ಸಂತೋಷ ಲಾಡ್ ವ್ಯಂಗ್ಯವಾಡಿದರು. ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕಳೆದ 11 ವರ್ಷಗಳಲ್ಲಿ ಮೋದಿ ಅವರು ಜನರಿಗೆ ಸಿಗುತ್ತಿಲ್ಲ. ದೇವಸ್ಥಾನಗಳಿಗೆ ಭೇಟಿ ನೀಡುತ್ತ ದೇಶದ ಅಭಿವೃದ್ಧಿ ಮರೆತಿದ್ದಾರೆ. ಬಿಜೆಪಿಯಿಂದ ದೇಶಕ್ಕೆ ನೈಯಾಪೈಸೆ ಉಪಯೋಗವಿಲ್ಲ ಎಂದು ಕಿಡಿಕಾರಿದರು. ಮೋದಿ ಅವರ ಆಡಳಿತದಲ್ಲಿ ಇಡೀ ದೇಶದಲ್ಲಿ ಒಂದು ಲಕ್ಷಕ್ಕೂ ಅಧಿಕ ಶಾಲೆಗಳು ಮುಚ್ಚಿವೆ. ಈ ಕುರಿತು ಸ್ವತಃ ಬಿಜೆಪಿ ಸರ್ಕಾರವೇ ಹೇಳಿದೆ. ಪ್ರಧಾನಿ ಹುದ್ದೆಯಲ್ಲಿ ಇದ್ದುಕೊಂಡು ಆನ್‌ಲೈನ್ ಕ್ಲಾಸ್ ಮಾಡುವಂತೆ ಹೇಳುವುದು ಸರಿಯಾದ ನಡೆ ಅಲ್ಲ ಎಂದು ಹೇಳಿದರು. ದೇಶದ ಹಲವು ರಾಜ್ಯಗಳಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ಹಾಗೂ ಭ್ರಷ್ಟಾಚಾರ ನಡೆಯುತ್ತಿವೆ. ಈ ಬಗ್ಗೆ ಯಾರು ಪ್ರಶ್ನಿಸುತ್ತಿಲ್ಲ ಎಂದರು.

ವಿದ್ಯಾರ್ಥಿಗಳ ಭವಿಷ್ಯದ ಜತೆ ಕೇಂದ್ರ ಚೆಲ್ಲಾಟ: ಹೆಬ್ಬಾಳ್ಕರ್

• **ಬೆಳಗಾವಿ:** ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆಯ ಸೋರಿಕೆಯಾಗಿದ್ದು, ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಕೇಂದ್ರ ಸರ್ಕಾರದ ಚೆಲ್ಲಾಟ ಆಡುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಆರೋಪಿಸಿದರು.



ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ವಿಚಾರವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿರುವ ಅವರು, ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಅತ್ಯಂತ ದುರದೃಷ್ಟಕರ ಮತ್ತು ಖಂಡನೀಯ. ಒಂದು ದೇಶದ ಅತ್ಯುನ್ನತ ಪರೀಕ್ಷೆಗಳನ್ನು ಕೂಡ ಪಾರದರ್ಶಕವಾಗಿ ನಡೆಸಲಾಗದ ಕೇಂದ್ರ ಸರ್ಕಾರದ ಆಡಳಿತ ವೈಫಲ್ಯಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕಿಲ್ಲ. ಪರೀಕ್ಷಾ ಅಕ್ರಮಗಳು ಮತ್ತು ಆಡಳಿತಾತ್ಮಕ ಅಸಮರ್ಥತೆಯಿಂದಾಗಿ ಇಂದು ನಮ್ಮ ದೇಶದ ಪ್ರತಿಭಾವಂತ ವಿದ್ಯಾರ್ಥಿಗಳು ಬೀದಿಗೆ ಬೀಳುವಂತಾಗಿದೆ ಎಂದರು.

ಕುಕ್ಕೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭವಿಷ್ಯ

ರಾಜ್ಯದಲ್ಲಿ ಬಿಜೆಪಿಗೆ ಅಧಿಕಾರ

• **ಸುಬ್ರಹ್ಮಣ್ಯ:** ಪಶ್ಚಿಮ ಬಂಗಾಳದ ಜನತೆಯ ತೀರ್ಪು ಹಿಂದೂ ವಿರೋಧಿ ನೀತಿಗಳಿಗೆ ಸ್ಪಷ್ಟ ಪ್ರತಿಕ್ರಿಯೆ ನೀಡಿದಂತಾಗಿದೆ. ಪ್ರಧಾನಿ ಮೋದಿ ಅವರ ನಾಯಕತ್ವದ ಮೇಲೆ ಇಟ್ಟಿರುವ ನಂಬಿಕೆಯಿಂದ ಜನರು ನಿರ್ಣಾಯಕ ತೀರ್ಪು ನೀಡಿದ್ದಾರೆ. ಅಸ್ಸಾಂ ಮತ್ತು ಪಾಂಡಿಚೇರಿ ರಾಜ್ಯಗಳಲ್ಲಿ ಬಿಜೆಪಿ ಪುನಃ ಅಧಿಕಾರಕ್ಕೆ ಬಂದಿರುವುದು ಆಡಳಿತ ಜನಪರತೆ ಮತ್ತು ಅಭಿವೃದ್ಧಿ ಕಾರ್ಯಗಳ ಫಲವಾಗಿದೆ. ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ದೊರೆತ ಯಶಸ್ಸು ಕಾರ್ಯಕರ್ತರ ಪರಿಶ್ರಮ ಮತ್ತು ಜನಬೆಂಬಲದಿಂದ ಸಾಧ್ಯವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಅವರು ವಾಸ್ತವ್ಯ ಹೂಡಿದ ಕುಕ್ಕೆ ಸುಬ್ರಹ್ಮಣ್ಯದ ಆರ್.ಎನ್.ಎಸ್ ವನ್ ವಸತಿ ಗೃಹದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಆತ್ಮ ವಿಶ್ವಾಸ ಹೆಚ್ಚಿಸಿದೆ: ಪಂಚ ರಾಜ್ಯಗಳ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು ದಾಖಲಿಸಿರುವುದು ಪಕ್ಷದ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ವಿವಿಧ ರಾಜ್ಯಗಳಲ್ಲಿ ಬಿಜೆಪಿ ಸಾಧಿಸಿರುವ ಗೆಲುವುಗಳು ಸಂಘಟನೆಯ ಶಕ್ತಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಮೇಲಿನ ಜನರ ವಿಶ್ವಾಸದ ಪ್ರತಿಫಲವಾಗಿವೆ ಎಂದರು. ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲೂ ಬಿಜೆಪಿ ಸ್ವಂತ ಶಕ್ತಿಯಿಂದ ಅಧಿಕಾರಕ್ಕೆ ಬರುವ ವಿಶ್ವಾಸವಿದೆ.ಜನತೆ ನಮಗೆ ಆಶೀರ್ವದಿಸಲಿದ್ದಾರೆ ಎಂದು ಹೇಳಿದರು.

ಸರಕಾರದೊಂದಿಗೆ ಕರಜೋಡಿಸಬೇಕು: ಪಶ್ಚಿಮ ಏಷ್ಯಾ ಯುದ್ಧ ಹಾಗೂ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಮಿತವ್ಯಯ ಕ್ರಮಗಳನ್ನು ಕೈಗೊಳ್ಳುವಂತೆ ಪ್ರಧಾನ ಮೋದಿ ನೀಡಿರುವ ಸಲಹೆಯನ್ನು ಕಾಂಗ್ರೆಸ್ ಟೀಕಿಸಿರುವುದಕ್ಕೆ ಪ್ರತಿಕ್ರಿಯಿಸಿದ ವಿಜಯೇಂದ್ರ, ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಜವಾಬ್ದಾರಿಯುತವಾಗಿ ವರ್ತಿಸಬೇಕಾದ ಕಾಂಗ್ರೆಸ್ ಅನಗತ್ಯ ರಾಜಕೀಯ ಟೀಕೆಗಳಲ್ಲಿ ತೊಡಗಿದೆ ಎಂದು ಆರೋಪಿಸಿದರು. ರಾಷ್ಟ್ರಹಿತದ ವಿಚಾರಗಳಲ್ಲಿ ಎಲ್ಲರೂ ಸರ್ಕಾರದೊಂದಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಯಡಿಯೂರಪ್ಪ ಅವರ ಹೋರಾಟದ ಬದುಕಿನ ವಿವಿಧ ಹಂತಗಳನ್ನು ಸ್ಮರಿಸಿದರು. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಕಳುಹಿಸಿದ್ದ ಎರಡು ಪುಟಗಳ ಸಂದೇಶವೂ ವಿಶೇಷ ಗಮನ ಸೆಳೆದಿದ್ದು, ಯಡಿಯೂರಪ್ಪ ಮತ್ತು ಮೋದಿ ಅವರ ನಡುವಿನ ಆತ್ಮೀಯ ಬಾಂಧವ್ಯವನ್ನು ಅದು ಪ್ರತಿಬಿಂಬಿಸಿತು ಎಂದು ಹೇಳಿದರು. ಯಡಿಯೂರಪ್ಪ ಅವರು ಕೇವಲ ನಾಯಕನಲ್ಲ, ಜನಶಕ್ತಿಯ ಪ್ರತೀಕ ಎಂಬುದನ್ನು ತೋರಿಸಿದೆ. ಕೇವಲ ಹದಿನೈದು ದಿನಗಳ ಅವಧಿಯಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ಆಯೋಜಿಸಲು ಕಾರ್ಯಕರ್ತರ ಸಮರ್ಪಿತ ಪರಿಶ್ರಮವೇ ಪ್ರಮುಖ ಕಾರಣ ಎಂದು ವಿಜಯೇಂದ್ರ ಹೇಳಿದರು. ಶಾಸಕರಾದ ಭಾಗೀರಥಿ ಮುರುಳ್ಯ, ಹರೀಶ್ ಪೂಂಜ, ಸುಬ್ರಹ್ಮಣ್ಯ ಬಿಜೆಪಿ ಶಕ್ತಿ ಕೇಂದ್ರದ ಪ್ರಮುಖ ರಾಜೇಶ್ ಎನ್.ಎಸ್., ಪ್ರಮುಖರಾದ ಪ್ರಸನ್ನ ದರ್ಬೆ ಮತ್ತಿತರರು ಉಪಸ್ಥಿತರಿದ್ದರು.



ಅಭಿಮಾನೋತ್ಸವ ಐತಿಹಾಸಿಕ ಕ್ಷಣ

ಚಿತ್ರದುರ್ಗದ ಕೋಟೆನಗರಿಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನದ 50ನೇ ವರ್ಷದ ಅಂಗವಾಗಿ ನಡೆದ 'ಅಭಿಮಾನೋತ್ಸವ' ಕಾರ್ಯಕ್ರಮ ರಾಜ್ಯ ರಾಜಕಾರಣದಲ್ಲಿ ಐತಿಹಾಸಿಕ ಕ್ಷಣವಾಗಿ ಗುರುತಿಸಿಕೊಂಡಿದೆ.ರಾಜ್ಯದ ಮೂಲೆಮೂಲೆಗಳಿಂದ ಲಕ್ಷಾಂತರ ಕಾರ್ಯಕರ್ತರು ಸ್ವಯಂಪ್ರೇರಿತವಾಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದು, ವಿವಿಧ ಸಮಾಜಗಳ ಸಾವಿರಾರು ಮಠಾಧೀಶರು ಭಾಗವಹಿಸಿರುವುದು ಕಾರ್ಯಕ್ರಮದ ವೈಶಿಷ್ಟ್ಯವಾಗಿತ್ತು ಎಂದರು.

ಉಪ ಚುನಾವಣೆ ಮಾನದಂಡವಲ್ಲ

ಇತ್ತೀಚಿನ ಉಪಚುನಾವಣೆ ಫಲಿತಾಂಶಗಳ ಕುರಿತು ಮಾತನಾಡಿದ ಅವರು, ಹಿಂದೆ ಆಡಳಿತ ಪಕ್ಷಗಳು ಉಪಚುನಾವಣೆಗಳಲ್ಲಿ ಗೆಲುವು ಸಾಧಿಸಿದ್ದರೂ ನಂತರದ ಸಾರ್ವತ್ರಿಕ ಚುನಾವಣೆಯಲ್ಲಿ ಸೋಲನುಭವಿಸಿದ ಹಲವಾರು ಉದಾಹರಣೆಗಳಿವೆ ಎಂದು ಹೇಳಿದ ಅವರು, ಈ ಫಲಿತಾಂಶವನ್ನು ಮುಂದಿನ ಚುನಾವಣೆಯ ಮಾನದಂಡವಾಗಿ ಪರಿಗಣಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಅನುಭವ ಮಂಟಪ ಶೀಘ್ರ ಪೂರ್ಣ: ಖಂಡ್ರೆ

• **ಬೆಂಗಳೂರು:** ಬಸವಕಲ್ಯಾಣದಲ್ಲಿ ನಿರ್ಮಿಸಲಾಗುತ್ತಿರುವ ಆಧುನಿಕ ಅನುಭವ ಮಂಟಪವನ್ನು ಬರುವ ಮಾರ್ಚ್ ತಿಂಗಳೊಳಗೆ ಪೂರ್ಣಗೊಳಿಸಲಾಗುವುದು. ಪ್ರಸ್ತ ಶೇ.70ರಷ್ಟು ಕಾಮಗಾರಿಯೂ ಪೂರ್ಣಗೊಂಡಿದೆ ಎಂದು ಅರಣ್ಯ ಸಚಿವ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಈಶ್ವರ ಖಂಡ್ರೆ ತಿಳಿಸಿದ್ದಾರೆ.



ಕಂದಾಯ ಸಚಿವ ಕೃಷ್ಣ ಭೈರೇಗೌಡ ಅಧ್ಯಕ್ಷತೆಯಲ್ಲಿ ವರ್ಚುವಲ್ ಮೂಲಕ ನಡೆದ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಭಾಗಿಯಾಗಿ ಮಾತನಾಡಿ, ಮುಂದಿನ ಮಾರ್ಚ್‌ನಲ್ಲಿ ಕಾಮಗಾರಿ ಮುಗಿಯ ಬೇಕಿದ್ದು ಕಾಮಗಾರಿಯನ್ನು ತ್ವರಿತಗೊಳಿಸುವ ಅಗತ್ಯವಿದೆ ಎಂದರು.

ಕಾಮಗಾರಿ ವಿಳಂಬ ವಾಗದಂತೆ ಕ್ರಮ ವಹಿಸಿ ಅನುಭವ ಮಂಟಪ ಹಾಗೂ ಇನ್ನಿತರ ಸ್ಮಾರಕಗಳ ಅಭಿವೃದ್ಧಿಯನ್ನು ಗಡುವಿನಲ್ಲಿ ಪೂರ್ಣ ಗೊಳಿಸಬೇಕು ಎಂದರು.

ಸಭೆಯಲ್ಲಿ ಬಸವ ಸಮಿತಿಯ ಅರವಿಂದ ಜತ್ತಿ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಟಾರಿಯಾ, ಬೀದರ್ ಜಿಲ್ಲಾಧಿಕಾರಿ ಶಿಲ್ಪಾಶರ್ಮಾ ಮತ್ತಿತರರು ಪಾಲ್ಗೊಂಡಿದ್ದರು.

280 ಕೋಟಿ ರೂ. ಮಂಜೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಕೂಡ ಪ್ರಗತಿ ಪರಿಶೀಲನೆ ಸಭೆ ನಡೆದಿದ್ದು, ಅವರ ಮಾರ್ಗದರ್ಶನದಂತೆ ಈಗಾಗಲೇ ಕ್ರಮ ವಹಿಸಲಾಗಿದೆ. ಜಿಲ್ಲಾಡಳಿತ ಮತ್ತು ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಹೆಚ್ಚು ಕ್ರಿಯಾಶೀಲವಾಗಿ ನಿಗದಿತ ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಶ್ರಮವಹಿಸಬೇಕು. 2023ರಿಂದೀಚೆಗೆ ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 280 ಕೋಟಿ ರೂ. ಗಳನ್ನು ಅನುಭವ ಮಂಟಪ ಅಭಿವೃದ್ಧಿಗೆ ಮಂಜೂರು ಮಾಡಿದ್ದಾರೆ. ಶೇ.65ರಷ್ಟು ಆರ್ಥಿಕ ಪ್ರಗತಿಯಾಗಿದೆ. ಶೇ.70ರಷ್ಟು ಕಾಮಗಾರಿಯೂ ಪೂರ್ಣಗೊಂಡಿದೆ ಎಂದು ಖಂಡ್ರೆ ತಿಳಿಸಿದರು.

ಮೋದಿ ಹೇಳಿಕೆ ಬಗ್ಗೆ ಕೈ ಸಣ್ಣತನ

• **ಬೆಂಗಳೂರು:** ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ಹೇಳಿಕೆ ಬಗ್ಗೆ ಪ್ರತಿಪಕ್ಷ ಕಾಂಗ್ರೆಸ್ ಸಣ್ಣತನದಿಂದ ಮಾತನಾಡುವುದು ಸರಿಯಲ್ಲ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಹರಿಹಾಯ್ದರು.



ಮಂಗಳವಾರ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಇತರ ಅನೇಕ ದೇಶಗಳಿಗೆ ಹೋಲಿಕೆ ಮಾಡಿದರೆ ಭಾರತದ ಆರ್ಥಿಕ ಪರಿಸ್ಥಿತಿ ಬಹಳ ಉತ್ತಮವಾಗಿದೆ. ಆದರೆ, ನಾವು ಕೂಡ ನಮ್ಮ ಹಣಕಾಸು ವ್ಯವಸ್ಥೆಯನ್ನು ಹಾಳು ಮಾಡಿಕೊಳ್ಳಬಾರದಲ್ಲವೇ ಎಂದರು.

ತೈಲ ಬಿಕ್ಕಟ್ಟು ಎಲ್ಲ ದೇಶಗಳನ್ನು ಬಾಧಿಸುತ್ತಿದೆ. ಭಾರತದಲ್ಲಿ ತೈಲ ಉತ್ಪಾದನೆ ಆಗುತ್ತಿಲ್ಲ, ಬದಲಿಗೆ ಬೇರೆ ದೇಶಗಳಿಂದಲೇ ಆಮದು ಮಾಡಿಕೊಳ್ಳಬೇಕಾಗುತ್ತದೆ ಎನ್ನುವುದು ಕಾಂಗ್ರೆಸ್ ಪಕ್ಷಕ್ಕೆ ಗೊತ್ತಿಲ್ಲವೇ? ರಾಷ್ಟ್ರದ ಹಿತ ದೃಷ್ಟಿಯಿಂದ ಪ್ರಧಾನಿಗಳು ಮಾತ್ರ ಈ ಕರೆ ನೀಡಿದ್ದಾರೆ. ಇದರ ಬಗ್ಗೆ ಕಾಂಗ್ರೆಸ್ ನಾಯಕರು ಸಣ್ಣತನದಿಂದ ಮಾತನಾಡುವುದು ಸರಿಯಲ್ಲ ಎಂದು ಕಿಡಿಕಾರಿದರು. ತಲಾ ಆದಾಯದಲ್ಲಿ ರಾಜ್ಯವು ಮುಂದೆ ಇದೆ ಎಂದು ಮುಖ್ಯಮಂತ್ರಿಗಳು ಹೇಳಿಕೊಳ್ಳುತ್ತಾರೆ.

ಆ ಮಾನದಂಡದಲ್ಲಿ ನಾವು ರಾಜ್ಯದ ಅಭಿವೃದ್ಧಿಯನ್ನು ಅಳೆಯಲು ಆಗುವುದಿಲ್ಲ. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದಲ್ಲಿ ನೋಡಿದರೆ ಜನ ಯಾವ ಪರಿಸ್ಥಿತಿಯಲ್ಲಿ ಇದ್ದಾರೆ ಅನ್ನೋದು ಗೊತ್ತಾಗುತ್ತದೆ ಎಂದು ಕೇಂದ್ರ ಸಚಿವರು ಕಟುವಾಗಿ ಟೀಕಿಸಿದರು. ರಾಷ್ಟ್ರದ ಜನತೆಯ ಹಿತದೃಷ್ಟಿಯಿಂದ ಪ್ರಧಾನಿಗಳು ಕಾಳಜಿ ವ್ಯಕ್ತಪಡಿಸಿದ್ದಾರೆ. ಮುಂದಿನ ದಿನಗಳಲ್ಲಿ ನಮ್ಮ ಹಣಕಾಸು ವ್ಯವಸ್ಥೆಗೆ ಹಿನ್ನಡೆ ಉಂಟಾಗಬಾರದು ಎಂದು ಅವರು ರಾಷ್ಟ್ರದ ಜನತೆಗೆ ಕೆಲವು ಅಗತ್ಯ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಇದರಲ್ಲಿ ತಪ್ಪು ಹುಡುಕುವಂಥದ್ದು ಏನಿದೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಕಾಂಗ್ರೆಸ್ಸಿಗರು ಚಿದಂಬರಂ ಹೇಳಿಕೆ ನೆನಪಿಸಿಕೊಳ್ಳಲಿ




ಪ್ರಧಾನಿ ಮೋದಿ ಅವರ ಸಲಹೆ ಕುರಿತು ಕಾಂಗ್ರೆಸ್ ನಾಯಕರ ಹೇಳಿಕೆಗೆ ಮಾಜಿ ಸಚಿವ ಶ್ರೀರಾಮುಲು ಪ್ರತಿಕ್ರಿಯಿಸಿದ್ದು, ಈ ಹಿಂದೆ ಕೇಂದ್ರದಲ್ಲಿ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ, ಹಣಕಾಸು ಸಚಿವ ಚಿದಂಬರಂ ಅವರ ಹೇಳಿಕೆಯನ್ನು ಕಾಂಗ್ರೆಸ್ಸಿಗರು ನೆನಪು ಮಾಡಿಕೊಳ್ಳಬೇಕು ತಿರುಗೇಟು ನೀಡಿದ್ದಾರೆ. ಅಮೆರಿಕ, ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದಿಂದ ದೇಶದಲ್ಲಿ ಕಷ್ಟದ ಪರಿಸ್ಥಿತಿ ಇದೆ. ಪೆಟ್ರೋಲ್, ಡೀಸೆಲ್ ಅನ್ನು ಮಿತವಾಗಿ ಬಳಸಿ ಎಂದು ಹೇಳಿದ್ದಾರೆ. ಇವುಗಳನ್ನು ಆಮದು ಮಾಡಿಕೊಳ್ಳಲು ತೊಂದರೆ ಇದೆ. ಆದ್ದರಿಂದ ಬಳಕೆಗೆ ಮಿತಿ ಇರಲಿ ಎಂದು ಪ್ರಧಾನಿ ಸಲಹೆ ನೀಡಿದ್ದಾರೆ. ಇದು ಬಿಟ್ಟರೆ ಬೇರೆ ಉದ್ದೇಶವಿಲ್ಲ. ಚಿದಂಬರಂ ಅವರ ಹೇಳಿಕೆಗಳನ್ನು ಮರೆತ ಕಾಂಗ್ರೆಸ್ ಅನ್ನು ದೇಶದ ಜನರು ಮರೆಯುತ್ತಾರೆ. ಕಾಂಗ್ರೆಸ್‌ನವರಿಗೆ ಬುದ್ಧಿ ಕಡಿಮೆ ಎಂದು ಶ್ರೀರಾಮುಲು ಲೇವಡಿ ಮಾಡಿದರು.

ಪ್ರತಿ ಟನ್ ಕಬ್ಬಿಗೆ 50 ರೂ. ಜಮೆ: ಸಿಎಂ ಸೂಚನೆ

• **ಬೆಂಗಳೂರು:** ದಕ್ಷಿಣ ಕರ್ನಾಟಕ ಭಾಗದ ಕಬ್ಬು ಬೆಳೆಗಾರರಿಗೆ ಪ್ರತಿ ಟನ್‌ಗೆ 50 ರೂ. ಜಮೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ದಕ್ಷಿಣ ಕರ್ನಾಟಕದ 7 ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರಿಗೆ ಆಗುತ್ತಿರುವ ಸಮಸ್ಯೆ ಬಗ್ಗೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಸಲ್ಲಿಸಿದ ಮನವಿಗೆ ಮುಖ್ಯಮಂತ್ರಿಗಳು ಸ್ಪಂದಿಸಿದ್ದು, ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸಕ್ಕರೆ ನಿರ್ದೇಶನಾಲಯದ ಆಯುಕ್ತರಿಗೆ ಸೂಚನೆ ನೀಡಿದ್ದಾರೆ. ಇದರ ಬೆನ್ನಲ್ಲೇ 7 ಸಕ್ಕರೆ ಕಾರ್ಖಾನೆಗಳು ರೈತರ ಖಾತೆ ವಿವರವನ್ನು ನೀಡಿದ್ದು, ರೈತರ ಖಾತೆಗಳಿಗೆ ಹಣ ಜಮೆ ಮಾಡುವಂತೆ ಖಜಾನೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ವಿವರಗಳನ್ನು ನೀಡಿದ್ದಾರೆ. ಶೀಘ್ರದಲ್ಲೇ ರೈತರಿಗೆ ಸರ್ಕಾರದ ಪಾಲಿನ 50 ರೂ. ಪ್ರೋತ್ಸಾಹ ಧನ ಜಮೆಯಾಗಲಿದೆ.



ನೀಟ್ ಅಕ್ರಮ: ತನಿಖೆಗೆ ಎಬಿವಿಪಿ ಆಗ್ರಹ

• **ಬೆಂಗಳೂರು:** ನೀಟ್ ಪರೀಕ್ಷಾ ವ್ಯವಸ್ಥೆಗೆ ಹೊಡೆತ ಮಾತ್ರವಲ್ಲ, ವರ್ಷವಿಡೀ ಶ್ರಮಿಸಿದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕೂ ಅನ್ಯಾಯವಾಗುತ್ತದೆ. ಈ ಬಗ್ಗೆ ಕೇಂದ್ರೀಯ ಸಂಸ್ಥೆಗಳು ನಿಷ್ಪಕ್ಷಪಾತ ಮತ್ತು ಸಮಯೋಚಿತ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಎಬಿವಿಪಿ ಒತ್ತಾಯಿಸಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ಎಬಿವಿಪಿಯ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯದರ್ಶಿ ಗೋಪಿ ರಂಗಸ್ವಾಮಿ, ದೇಶಾದ್ಯಂತ ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ನೀಟ್ ಪರೀಕ್ಷಾ ವ್ಯವಸ್ಥೆಯ ವಿಶ್ವಾಸಾರ್ಹತೆಯ ಬಗ್ಗೆ ಗಂಭೀರ ಕಳವಳವನ್ನು ಹುಟ್ಟುಹಾಕಿದೆ. ಪ್ರವೇಶ ಪರೀಕ್ಷೆಗಳ ಸಮಗ್ರತೆ ಮತ್ತು ವಿಶ್ವಾಸಾರ್ಹತೆಯ ಬಗ್ಗೆ ಯಾವುದೇ ರಾಜಿ ಮಾಡಿಕೊಳ್ಳಬಾರದು ಎಂಬುದು ಸ್ಪಷ್ಟವಾಗಿದೆ ಎಂದರು. ಪ್ರಶ್ನೆ ಪತ್ರಿಕೆ ಅಥವಾ ಸಂಬಂಧಿತ ಪ್ರಕ್ರಿಯೆಗಳು ಪರೀಕ್ಷೆಗೆ ಮೊದಲೇ ಕೆಲವು ವ್ಯಕ್ತಿಗಳನ್ನು ತಲುಪಿದ್ದರೆ, ಅದು ಪರೀಕ್ಷಾ ವ್ಯವಸ್ಥೆಗೆ ಹೊಡೆತ ಮಾತ್ರವಲ್ಲ, ವರ್ಷವಿಡೀ ಶ್ರಮಿಸಿದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕೂ ಅನ್ಯಾಯವಾಗುತ್ತದೆ. ಈ ಸಂಪೂರ್ಣ ವಿಷಯದ ಬಗ್ಗೆ ಕೇಂದ್ರೀಯ ಸಂಸ್ಥೆಗಳು ನಿಷ್ಪಕ್ಷಪಾತ ಮತ್ತು ಸಮಯೋಚಿತ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥರು, ಪರೀಕ್ಷಾ ಮಾಫಿಯಾ ಮತ್ತು ಯಾವುದೇ ಮಟ್ಟದಲ್ಲಿ ಸಹಕರಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತದೆ.

ದೇಶಾದ್ಯಂತ ಲಕ್ಷಾಂತರ ವಿದ್ಯಾರ್ಥಿಗಳು ವರ್ಷಗಳ ಕಠಿಣ ಪರಿಶ್ರಮ ಮತ್ತು ಹೋರಾಟದ ನಂತರ ನೀಟ್‌ನಂತಹ ಪರೀಕ್ಷೆಗಳಿಗೆ ಹಾಜರಾಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ, ಯಾವುದೇ ಅಕ್ರಮವು ಅವರ ನೈತಿಕತೆ ಮತ್ತು ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದ್ದರಿಂದ, ಇದೇ ವಿಷಯವನ್ನು ನಿಷ್ಪಕ್ಷಪಾತವಾಗಿ ತನಿಖೆ ಮಾಡುವುದು ಅತ್ಯಗತ್ಯ ಮತ್ತು ಅಪರಾಧಿಗಳನ್ನು ಯಾವುದೇ ಸಂದರ್ಭದಲ್ಲೂ ಬಿಡಬಾರದು. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಲ್ಲಿ ತಾಂತ್ರಿಕ ಭದ್ರತೆ, ಪ್ರಶ್ನೆ ಪತ್ರಿಕೆ ಗೌಪ್ಯತೆ, ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ವ್ಯವಸ್ಥೆಗಳನ್ನು ಬಲಪಡಿಸಬೇಕೆಂದು ಒತ್ತಾಯಿಸಿದ್ದಾರೆ.

ವಿಜಯಪುರ, ಇಂಡಿ ತಾಲೂಕುಗಳೇ ಹಾಟ್‌ಸ್ಪಾಟ್ | ಜನರಲ್ಲಿ ಆತಂಕ ಮೂಡಿಸಿದ ಬೀದಿನಾಯಿ ಕಡಿತ ಪ್ರಕರಣ

ನಾಲ್ಕು ತಿಂಗಳಲ್ಲಿ 13,992 ನಾಯಿ ದಾಳಿ ಪ್ರಕರಣ ಪತ್ತೆ

▸ **ಪರಶುರಾಮ ಶಿವಶರಣ**

ದಿಗಂತ ವಿಶೇಷ

• **ವಿಜಯಪುರ:** ಜಿಲ್ಲೆಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗುತ್ತಿದ್ದು, ಅದರಲ್ಲೂ ಈ ನಾಯಿಗಳ ಕಡಿತ ಪ್ರಕರಣಕ್ಕೆ ವಿಜಯಪುರ ಹಾಗೂ ಇಂಡಿ ತಾಲೂಕುಗಳೇ ಹಾಟ್‌ಸ್ಪಾಟ್ ಆಗಿವೆ ಎನ್ನುವುದು ತೀವ್ರ ಆತಂಕದ ಸಂಗತಿ.

ನಗರದ ಕೊಳಚೆ ಪ್ರದೇಶ ಸೇರಿದಂತೆ ಪ್ರತಿಷ್ಠಿತ ಬಡಾವಣೆಗಳಲ್ಲೂ ಬೀದಿ ನಾಯಿಗಳ ಉಪಟಳ ಹೆಚ್ಚುತ್ತಲೇ ಇದೆ. ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಪ್ರಸಕ್ತ ವರ್ಷವೂ ಬೀದಿ ನಾಯಿ ಕಡಿತ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದೆ. ಇಲ್ಲಿನ ರಸ್ತೆಗಳಲ್ಲಿ ಮಕ್ಕಳು, ವೃದ್ಧರು, ಮಹಿಳೆಯರು ಒಬ್ಬಂಟಿಯಾಗಿ ತೆರಳುವಂತಿಲ್ಲ. ಅದರಲ್ಲೂ ತಮ್ಮ ಮನೆಗಳ ಎದುರಿನಲ್ಲಿ ಪುಟ್ಟ ಮಕ್ಕಳು ಆಟವಾಡುವಂತಿಲ್ಲ. ಏಕಾಂಗಿಯಾಗಿ ಆಟವಾಡುವ ಪುಟ್ಟ ಮಕ್ಕಳು ಕಂಡರೆ ಸಾಕು ಬೀದಿ ನಾಯಿಗಳು ನರಭಕ್ಷಕನಂತೆ ಮಕ್ಕಳ ಮೈಮೇಲೆ ಎಗರಿ ಕಚ್ಚಿ, ಆಟ್ಟಾಡಿಸುತ್ತಿರುವುದು ದುರಂತ.

ನಗರದ ರಾಜಕುಮಾರ ಲೇಔಟ್‌ನ ಮನೆಯೊಂದರ ಎದುರು ಈಚೆಗೆ ಪುಟ್ಟ ಬಾಲಕ ವಿರಾಜ್ ಬಿರಾದಾರ (3) ಆಟವಾಡುತ್ತಿದ್ದ ವೇಳೆ ರಕ್ಕಸ ಬೀದಿ ನಾಯಿ, ಬಾಲಕನ ಮೇಲೆ ದಾಳಿ ಮಾಡಿ, ಬಾಯಿಯಲ್ಲಿ ಕಚ್ಚಿ ಎಳೆಯ್ದೊದಿತ್ತು. ಇದನ್ನ ಕಂಡ ಸ್ಥಳೀಯರು ನಾಯಿ ಬೆನ್ನತ್ತಿ ಓಡಿ ಹೋಗಿದ್ದರಿಂದ ಬಾಲಕನನ್ನು ರಕ್ಷಣೆ ಮಾಡಲಾಯಿತು. ಅದೃಷ್ಟವಶಾತ್ ಅಂತಹದೇನೂ ದುರಂತ ನಡೆಯಲಿಲ್ಲ.



ಜಿಲ್ಲೆಯಲ್ಲಿ ಬೀದಿ ನಾಯಿಗಳ ನಿಯಂತ್ರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಸುಪ್ರೀಂಕೋರ್ಟ್ ಆದೇಶದಂತೆ ಬೀದಿ ನಾಯಿಗಳ ಚಿಕಿತ್ಸೆ, ಪುನರ್ ವಸತಿಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

■ **ಡಾ.ಆನಂದ ಕೆ., ಜಿಲ್ಲಾಧಿಕಾರಿ, ವಿಜಯಪುರ**

ಆಘಾತ ಮೂಡಿಸುವ ನಾಯಿ ಕಡಿತ ಪ್ರಕರಣ

ಜಿಲ್ಲೆಯಲ್ಲಿ ನಾಯಿ ಕಡಿತ ಪ್ರಕರಣಗಳು ಕಳೆದ 2025ರಲ್ಲಿ ಒಟ್ಟು 32,317 ಕಂಡು ಬಂದಿದ್ದು, ಈ ಪೈಕಿ 3 ಜನ ಶಂಕಿತ ರೇಬಿಸ್‌ನಿಂದ ಸಾವಿಗೀಡಾಗಿದ್ದಾರೆ. ಇನ್ನು ಏಪ್ರಿಲ್ 2026ರ ವರೆಗೆ ಕೇವಲ 4 ತಿಂಗಳಲ್ಲಿ 13,992 ಪ್ರಕರಣ ದಾಖಲಾಗಿದ್ದು, ಈ ಪೈಕಿ ಓರ್ವ ಶಂಕಿತ ರೇಬಿಸ್‌ನಿಂದ ಮೃತಪಟ್ಟಿದ್ದಾರೆ. ಕಳೆದ 2025 ರಲ್ಲಿ ವಿಜಯಪುರ ತಾಲೂಕು 11,715, ಬಸವನಬಾಗೇವಾಡಿ 4,778, ಮುದ್ದೇಬಿಹಾಳ 3,239, ಇಂಡಿ 8,235, ಸಿಂದಗಿ 4,011 ಹಾಗೂ ಇತರೆ ಜಿಲ್ಲೆ 339 ಸೇರಿ ಒಟ್ಟು 32,317 ನಾಯಿ ಕಡಿತ ಪ್ರಕರಣ ದಾಖಲಾಗಿವೆ. ಇನ್ನು ಏಪ್ರಿಲ್ 2026ರ ವರೆಗೆ ವಿಜಯಪುರ ತಾಲೂಕು 4,611, ಬಸವನಬಾಗೇವಾಡಿ 1,870, ಮುದ್ದೇಬಿಹಾಳ 1,321, ಇಂಡಿ 4,008, ಸಿಂದಗಿ 2,023 ಹಾಗೂ ಇತರೆ ಜಿಲ್ಲೆ 159 ಸೇರಿ ಒಟ್ಟು 13,992 ನಾಯಿ ಕಡಿತ ಪ್ರಕರಣಗಳು ದಾಖಲಾಗಿವೆ. ಹೀಗೆ ಜಿಲ್ಲೆಯಲ್ಲಿ ಅತಿ ಹೆಚ್ಚು ನಾಯಿ ಕಡಿತ ಪ್ರಕರಣದಲ್ಲಿ ವಿಜಯಪುರ ತಾಲೂಕು ಮೊದಲ ಸ್ಥಾನದಲ್ಲಿದ್ದರೆ, ಇನ್ನು ಎರಡನೇ ಸ್ಥಾನದಲ್ಲಿ ಇಂಡಿ ತಾಲೂಕು ಆಗಿದ್ದು, ಈ ಅಂಕಿ-ಅಂಶ ಜನರನ್ನು ಬೆಚ್ಚಿ ಬೀಳಿಸುವಂತೆ ಮಾಡಿದೆ.

ಈ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಇದನ್ನು ಕಂಡ ಜನರ ಎದೆ ಝಲ್ ಎನ್ನುವಂತಾಗಿತ್ತು. ಸದ್ಯ ಬಾಲಕ ವಿರಾಜ್ ಚಿಕಿತ್ಸೆ ಪಡೆದು ಗುಣಮುಖನಾಗಿದ್ದಾನೆ.

ಗುಂಪಾಗಿತಿರುಗುವಬೀದಿನಾಯಿಗಳು: ಬೀದಿನಾಯಿಗಳು ಗುಂಪು ಗುಂಪಾಗಿ ರಸ್ತೆಗಳಲ್ಲಿ ಸಂಚರಿಸುತ್ತ, ಅಮಾಯಕ ಜೀವಗಳಿಗೆ ಕುತ್ತಾಗುತ್ತಿವೆ. ಮಕ್ಕಳು, ಮಹಿಳೆಯರು, ವೃದ್ಧರು ಒಬ್ಬಂಟಿಯಾಗಿ ಬಡಾವಣೆಗಳಲ್ಲಿ ಹಾಗೂ ತಮ್ಮದೇ ಮನೆ ಎದುರು ಸಂಚರಿಸಲು ಭೀತಿಗೊಳ್ಳುವಂತಾಗಿದೆ. ಮನುಷ್ಯನ ನಂಬಿಕಸ್ತ ಪ್ರಾಣಿ ನಾಯಿಗಳಾದರೂ, ಬೀದಿ ನಾಯಿಗಳು ತಮ್ಮ ಸೌಮ್ಯ ಸ್ವಭಾವ ಕಳೆದುಕೊಂಡು ಕ್ರೂರತನದಿಂದ ವರ್ತಿಸುತ್ತಿದ್ದು, ಈ ಬಗ್ಗೆ ಜಿಲ್ಲಾಡಳಿತ ಹಾಗೂ ಸಂಬಂಧಿಸಿದ ಇಲಾಖೆಗಳು ಗಂಭೀರತೆ ವಹಿಸಿ, ಸುಪ್ರೀಂಕೋರ್ಟ್ ಆದೇಶದನ್ವಯ ಇಂತಹ ನಾಯಿಗಳಿಗೆ ಸೂಕ್ತ ಚಿಕಿತ್ಸೆ ನೀಡಿ, ಪುನರ್ ವಸತಿ ಕಲ್ಪಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸುತ್ತಾರೆ.

ಪರರ ನಿಂದನೆಯಲ್ಲಿ ಸಿಎಂ ಕಾಲಹರಣ: ಜೋಶಿ

• **ನವದೆಹಲಿ:** ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬರೀ ಬೆಲೆ ಏರಿಕೆ, ತುಷ್ಟೀಕರಣ, ಶಾಸಕ-ಸಚಿವರ ತಲೆ ಎಣಿಕೆಯಲ್ಲೇ ಮುಳುಗಿದೆ. ಸಿಎಂ ತಮ್ಮನೆ ರಿಪೇರಿ ಬಿಟ್ಟು ಪರರ ನಿಂದನೆಯಲ್ಲಿ ಕಾಲಹರಣ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕಿಡಿ ಕಾರಿದ್ದಾರೆ.



ಪ್ರಧಾನಿ ಮೋದಿ ಅವರ ಭಾಷಣ ಸುಳ್ಳು ಮತ್ತು ದ್ವೇಷದಿಂದ ಕೂಡಿದೆ ಎಂದ ಸಿಎಂಗೆ ಖಾರವಾಗಿಯೇ ತಿರುಗೇಟು ನೀಡಿರುವ ಜೋಶಿ, ಪ್ರಧಾನಿ ಮೋದಿ ಅವರನ್ನು ಟೀಕಿಸುವ ಮುನ್ನ ಸಿದ್ದರಾಮಯ್ಯ ತಮ್ಮ ಸರ್ಕಾರದ ಆಡಳಿತ ವೈಫಲ್ಯ, ಅಧಿಕಾರಕ್ಕಾಗಿ ಕಿತ್ತಾಟ ಬಗ್ಗೆ ಉತ್ತರಿಸಲಿ ಎಂದು ಸವಾಲು ಹಾಕಿದ್ದಾರೆ. ಜಾಹೀರಾತುಗಳಲ್ಲೇ ಮುನ್ನಲೆಯಲ್ಲಿರುವ ಕಾಂಗ್ರೆಸ್ ಸರ್ಕಾರದ ಅಸಲಿಯತ್ತು ಈಗ ಬಯಲಾಗಿದೆ ಎಂದು ರಾಜ್ಯ ಸರ್ಕಾರದ ಆಡಳಿತ ವೈಫಲ್ಯಗಳನ್ನು ಒಂದೊಂದಾಗೇ ಪಟ್ಟಿ ಮಾಡಿ. ಗ್ಯಾರಂಟಿಗಳ ನೆಪದಲ್ಲಿ ಕಾಂಗ್ರೆಸ್ ಸರ್ಕಾರ ಕರ್ನಾಟಕವನ್ನು ಸಾಲದ ಶೂಲಕ್ಕೆ ತಳ್ಳಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಆರ್ಥಿಕ ಅಧೋಗತಿಗೆ ತಳ್ಳಿದ್ದಾರೆ: ಮಾತೆತ್ತಿದರೆ ತಾವೊಬ್ಬ 'ಆರ್ಥಿಕ ತಜ್ಞ' ಎನ್ನುವ ಸಿಎಂ ಕರ್ನಾಟಕದ ಆರ್ಥಿಕತೆಯನ್ನು ಅಧೋಗತಿಗೆ ತಳ್ಳಿದ್ದಾರೆ. ಅಲ್ಲದೆ, ಕುರ್ಚಿ ಕಿತ್ತಾಟದಲ್ಲಿ ಆಡಳಿತವೂ ಹಳಿ ತಪ್ಪಿದೆ. ಸಾಲದ್ದಕ್ಕೆ ಹಾಲು, ಇಂಧನ ಹೀಗೆ 48 ಅಗತ್ಯ ವಸ್ತುಗಳ ಬೆಲೆ ಹೆಚ್ಚಿಸಿ ಜನರಿಗೆ ದ್ರೋಹ ಮಾಡಿದೆ ಎಂದು ಹರಿ ಹಾಯ್ದಿದ್ದಾರೆ.

ಸಂಪಾದಕೀಯ

ವಿದ್ಯಾರ್ಥಿಗಳ ಸಂಕಷ್ಟಕ್ಕೆ ಯಾರು ಹೊಣೆ?

ದೇಶದ ಅತಿದೊಡ್ಡ ವೈದ್ಯಕೀಯ ಪ್ರವೇಶ ಪರೀಕ್ಷೆಯಾದ 'ನೀಟ್-ಯುಜಿ' ಮತ್ತೊಮ್ಮೆ ವಿವಾದಕ್ಕೆ ಸಿಲುಕಿದೆ. ಮೇ 3ರಂದು ನಡೆದ ನೀಟ್ ಯುಜಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಪರೀಕ್ಷೆಗಿಂತ ಮೊದಲೇ ಸೋರಿಕೆಯಾಗಿವೆ ಎಂಬ ಆರೋಪದಡಿ ಈಗ ಪರೀಕ್ಷೆಯನ್ನೇ ರದ್ದುಪಡಿಸಲಾಗಿದೆ. ಇಡೀ ಪರೀಕ್ಷೆಯನ್ನು ಮತ್ತೊಮ್ಮೆ ನಡೆಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ನಿರ್ಧರಿಸಿದೆ. ಪರೀಕ್ಷೆಯ ಮೊದಲು ಕೆಲವು ವಿದ್ಯಾರ್ಥಿಗಳ ಕೈಯಲ್ಲಿ ಹರಿದಾಡಿದ ಊಹಾ ಪತ್ರಿಕೆಯಲ್ಲಿ ಕಂಡುಬಂದ ಬಹುತೇಕ ಪ್ರಶ್ನೆಗಳು ಪರೀಕ್ಷಾ ಕಾಲದ ಪ್ರಶ್ನೆಪತ್ರಿಕೆಯಲ್ಲಿದ್ದ ಪ್ರಶ್ನೆಗಳೊಂದಿಗೆ ತಾಳೆಯಾಗಿರುವುದು ಬಳಿಕ ಕಂಡುಬಂದ ಹಿನ್ನೆಲೆಯಲ್ಲಿ ಆ ಪರೀಕ್ಷೆಯನ್ನು ರದ್ದುಪಡಿಸದೆ ಗತ್ಯಂತರವಿಲ್ಲವಾಗಿದೆ. ಆದರೆ ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಭದ್ರತೆಯ ಹೆಸರಲ್ಲಿ ಅತಿರೇಕವಾಗಿ ವರ್ತಿಸುವ, ಮೂಗುತಿ, ಕಿವಿಯೋಲೆಗಳನ್ನೂ ಕೂಡ ತೆಗೆಸುವವರಿಗೆ ಪ್ರಶ್ನೆಪತ್ರಿಕೆ ಸೋರಿಕೆಯಂತಹ ಅವಸ್ಥೆಯನ್ನು ತಡೆಯಲಾಗುವುದಿಲ್ಲ ಎನ್ನುವುದು ವಿಪರ್ಯಾಸ. ಪ್ರಶ್ನೆಗಳು ಸೋರಿಕೆಯಾಗಿರುವುದು ನಿಜವೇ ಆಗಿದ್ದಲ್ಲಿ, ಅದರಲ್ಲಿ ವ್ಯವಸ್ಥೆಯ ಒಳಗಿನ ಮಂದಿಯೇ ಶಾಮೀಲಾಗಿರುವ ಶಂಕೆಯೂ ಮೂಡುತ್ತದೆ. ಇದು ಎಲ್ಲಕ್ಕಿಂತ ಹೆಚ್ಚು ಗಂಭೀರ ವಿಚಾರ. ಇದು ವಿದ್ಯಾರ್ಥಿಗಳ ಭವಿಷ್ಯದ ಜತೆ ಚೆಲ್ಲಾಟವಾಡಿದಂತೆ!



ನಡೆದ ಪರೀಕ್ಷೆ ರದ್ದುಪಡಿಸಿ ಹೊಸ ಪರೀಕ್ಷೆ ನಡೆಸುವುದು ಇಲಾಖೆಯ ಪಾಲಿಗೆ ದೊಡ್ಡ ಕೆಲಸವೇನಲ್ಲ. ಆದರೆ ಇಲ್ಲಿ ಸಂಕಷ್ಟ ಅನುಭವಿಸುವವರು ತಿಂಗಳುಗಟ್ಟಲೆ ಅಧ್ಯಯನ ನಡೆಸಿ ಪರೀಕ್ಷೆ ಬರೆದ ಪ್ರಾಮಾಣಿಕ ವಿದ್ಯಾರ್ಥಿಗಳು. ಸುಮಾರು 22.79 ಲಕ್ಷ ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆ ಬರೆದಿದ್ದಾರೆ. ನೀಟ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ವಿದ್ಯಾರ್ಥಿಗಳು ಅದೆಷ್ಟು ಕಠಿಣ ಅಭ್ಯಾಸ ನಡೆಸಿರುತ್ತಾರೆ, ಅದೆಷ್ಟು ಮಾನಸಿಕ ಒತ್ತಡ ಅನುಭವಿಸಿರುತ್ತಾರೆ ಎಂಬುದು ತಿಳಿಯದ್ದಲ್ಲ. ವಿದ್ಯಾರ್ಥಿಗಳಷ್ಟೇ ಅಲ್ಲದೆ ಅವರ ಹೆತ್ತವರು ಕೂಡಾ ಇದೇ ಬಗೆಯ ಒತ್ತಡಗಳನ್ನು ಅನುಭವಿಸಿರುತ್ತಾರೆ. ಪರೀಕ್ಷೆ ಮುಗಿದೊಡನೆ ದೊಡ್ಡ ಹೊರೆಯೊಂದನ್ನು ತಲೆಯಿಂದ ಕೆಳಗಿಳಿಸಿ ನಿರಾಳತೆ ಅನುಭವಿಸಿದ ವಿದ್ಯಾರ್ಥಿಗಳು ಇನ್ನೀಗ ಮತ್ತೆ ಅದೇ ಬಗೆಯ ಪರೀಕ್ಷಾ ಸಿದ್ಧತೆ ಮಾಡಬೇಕಾಗಿದೆ ಎಂಬುದು ಮಾನಸಿಕ ಚಿತ್ರಹಿಂಸೆಯೇ ಸರಿ. ಹೊಸದಾಗಿ ಪರೀಕ್ಷೆ ನಡೆದು ನೇಮಕಾತಿ ಪ್ರಕ್ರಿಯೆ ಮುಗಿಯುವಾಗ ಬಹಳಷ್ಟು ಸಮಯವೂ ವ್ಯರ್ಥವಾಗಿರುತ್ತದೆ. ಇದು ಇನ್ನಿತರ ಸ್ಪರ್ಧಾತ್ಮಕ ಪರೀಕ್ಷಾ ಅರ್ಥಿಗಳ ಭವಿಷ್ಯದ ಮೇಲೂ ಪರಿಣಾಮ ಬೀರುತ್ತದೆ. ಒಟ್ಟಿನಲ್ಲಿ ವ್ಯವಸ್ಥೆಯ ಲೋಪಕ್ಕೆ ಪಾಪದ ವಿದ್ಯಾರ್ಥಿಗಳು ಬೆಲೆ ತೆರುವ ಸಂಕಷ್ಟ ಅನುಭವಿಸುವಂತಾಗಿದೆ.

ಮೋದಿ ಹೇಳಿದರೆ ಜನ ಯಾಕೆ ಕೇಳುತ್ತಾರೆ?

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು
vakradanta@gmail.com



ಪ್ರಧಾನಿ ನರೇಂದ್ರ ಮೋದಿಯವರು ಎರಡು- ಮೂರು ದಿನದಿಂದ ಮಿತ ಬಳಕೆ ಬಗ್ಗೆ, ಸ್ವಲ್ಪ ಸಮಯ ನಾವು ಅನುಸರಿಸಬೇಕಾದ ಸಂಯಮದ ಬಗ್ಗೆ ಹೇಳುತ್ತಿದ್ದಾರೆ. ಅವರು ಹಾಗೆ ಹೇಳುತ್ತಿದ್ದಂತೆ ಕಾಂಗ್ರೆಸ್ ನಾಯಕರೆಲ್ಲ ಭಾರೀ ಚುರುಕಾಗಿ ಪ್ರತಿಕ್ರಿಯಿಸಲಾರಂಭಿಸಿದ್ದಾರೆ. ಮೋದಿ ಆಡಳಿತ ವೈಫಲ್ಯ, ಅದಕ್ಕಾಗಿಯೇ ಅವರು ಜನರು ಮಿತ ಬಳಕೆ ಮಾಡಿ ಎಂದು ಹೇಳುತ್ತಿದ್ದಾರೆ, ಮೋದಿ ಭಕ್ತರಲ್ಲ ಈಗ ಮಿತ ಬಳಕೆ ಮಾಡಬೇಕಾದವರು ದೇಶ ವಿರೋಧಿಗಳು ಎನ್ನುತ್ತಾರೆ ಎಂದೆಲ್ಲ ಬೊಬ್ಬೆ ಹೊಡೆಯುತ್ತಿದ್ದಾರೆ.

ಯಾರು ಏನೇ ಬೊಬ್ಬೆ ಹೊಡೆಯಲಿ, ಕೂಗಾಡಲಿ, ವಾದ ಮಾಡಲಿ, ಆರೋಪಿಸಲಿ, ಆದರೆ ಜನ ನರೇಂದ್ರ ಮೋದಿಯವರು ಹೇಳಿದ್ದನ್ನು ನಂಬುತ್ತಾರೆ. ಅವರು ಒಂದು ಮಾತು ಹೇಳಿದರೆ ಅದನ್ನು ಪಾಲಿಸುವ ಕೋಟ್ಯಂತರ ಜನರಿದ್ದಾರೆ. ನರೇಂದ್ರ ಮೋದಿಯವರು ಇಂಧನ ಮಿತ ಬಳಕೆ ಮಾಡಿ, ಮನೆಯಿಂದಲೇ ಕೆಲಸ ಮಾಡಿ, ಚಿನ್ನ ಖರೀದಿ ಮುಂದೂಡಿ, ವಿದೇಶ ಪ್ರವಾಸಕ್ಕೆ ಹೋಗುವ ಬದಲು ಸ್ವದೇಶ ಪ್ರವಾಸ ಮಾಡಿ ಎಂದು ಹೇಳಿದ್ದರ ಹಿಂದೆ ಒಂದು ಕಾರಣವಿದೆ. ಇಸ್ರೇಲ್- ಅಮೆರಿಕ- ಇರಾನ್ ಯುದ್ಧದ ಪರಿಣಾಮದಿಂದ ಈಗಾಗಲೇ ಸಾಕಷ್ಟು ಆರ್ಥಿಕ ದುಷ್ಪರಿಣಾಮಗಳಾಗಿವೆ. ಅದಕ್ಕೂ ಮೊದಲು ಭಾರತಕ್ಕೆ ರಷ್ಯಾ ಕಡಿಮೆ ದರದಲ್ಲಿ ಕಚ್ಚಾ ತೈಲ ಮಾರಾಟ ಮಾಡುತ್ತಿತ್ತು. ರಷ್ಯಾದಿಂದ ತೈಲ ಖರೀದಿಸಿ, ಅದನ್ನು ಐರೋಪ್ಯ ರಾಷ್ಟ್ರಗಳಿಗೆ ಮಾರಾಟ ಮಾಡಿದ್ದರಿಂದ ಸಾಕಷ್ಟು ಲಾಭವಾಗಿತ್ತು. ಆ ಲಾಭದ ಬಲದಿಂದ ಇಂದಿಗೂ ಪೆಟ್ರೋಲ್- ಡೀಸೆಲ್ ಬೆಲೆ ಏರಿಕೆ ಮಾಡದೆ ಮುಂದುವರಿಯುತ್ತಿದ್ದೇವೆ. ಯುದ್ಧ ನಡೆಯುತ್ತಿದ್ದಾಗಲೂ ನಮ್ಮ ದೇಶದಲ್ಲಿ ಇಂಧನ ತೈಲಕ್ಕೆ ಸಮಸ್ಯೆ ಆಗದಂತೆ ನೋಡಿಕೊಳ್ಳಲಾಗಿದೆ. ನಮ್ಮ ಪಕ್ಕದ ಪಾಕಿಸ್ತಾನದಲ್ಲಿ ಪೆಟ್ರೋಲ್ ದರ ದುಪ್ಪಟ್ಟು ಹೆಚ್ಚಳವಾಗಿದ್ದರೆ, ವಿಶ್ವದ ಮುಂದುವರಿದ ದೇಶಗಳಲ್ಲೂ ಕೂಡ ಇಂಧನ ದರ ಹೆಚ್ಚಳವಾಗಿದೆ. ದೇಶವಾಸಿಗಳ ಹಿತ, ದೇಶದ ಹಿತ ಗಮನದಲ್ಲಿರಿಸಿಕೊಂಡು ಇಷ್ಟು ಸಮಯ ಇಂಧನ ತೈಲದ ದರ ಹೆಚ್ಚಳ ಮಾಡಲಾಗಿಲ್ಲ. ಆದರೆ ಎಷ್ಟು ಸಮಯ ಆ ಒತ್ತಡ ತಡೆಯಲು ಸಾಧ್ಯ? ಯುದ್ಧ ಸದ್ಯಕ್ಕೆ ನಿಂತಿದೆಯಾದರೂ, ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಯುದ್ಧ ಸಮಯದಲ್ಲಿ ಏರಿಕೆಯಾದ ಕಚ್ಚಾತೈಲ ದರ ಇನ್ನೂ ಇಳಿಕೆಯಾಗಿಲ್ಲ. ಯುದ್ಧ ಪರಿಸ್ಥಿತಿ ಇನ್ನೂ ಸಂಪೂರ್ಣ ತಿಳಿಯಾಗಿಲ್ಲ. ಈಗಲೂ ಅಲ್ಲಲ್ಲಿ ಸಣ್ಣಪುಟ್ಟ ದಾಳಿಗಳು ನಡೆಯುತ್ತಲೇ ಇವೆ. ಯುದ್ಧ ಸಮಯದಲ್ಲಿ ಅರಬ್ ರಾಷ್ಟ್ರಗಳ ತೈಲ ನಿಕ್ಷೇಪಗಳ ಮೇಲೆ ದಾಳಿ ನಡೆದಿದೆ. ಹಾಗೆಯೇ ಇರಾನ್‌ನ ತೈಲ ನಿಕ್ಷೇಪಗಳ ಮೇಲೂ ದಾಳಿ ನಡೆದಿದೆ. ಹಾಗಾಗಿ ವಿಶ್ವದಾದ್ಯಂತ ತೈಲ ಉತ್ಪಾದನೆಯೇ ಕಡಿಮೆಯಾಗಿದೆ. ಅದಕ್ಕೆ ತಕ್ಕ ಪ್ರಮಾಣದಲ್ಲಿ ಬಳಕೆ ಕಡಿಮೆಯಾಗದೆ ಇದ್ದರೆ, ಆವಾಗ ಸಹಜವಾಗಿ ಕೊರತೆ ಆಗಲೇಬೇಕಲ್ಲವೆ?

ಅದಕ್ಕಾಗಿಯೇ ಅನಗತ್ಯ ಬಳಕೆ ಕಡಿಮೆ ಮಾಡಿ ಎಂದು ಮೋದಿ ಹೇಳಿದ್ದು. ಅವರೆಲ್ಲೂ ಅಗತ್ಯ ಬಳಕೆ ಕಡಿಮೆ ಮಾಡಿ ಎಂದು ಹೇಳಿಲ್ಲ. ನರೇಂದ್ರ ಮೋದಿ ಹೀಗೆ ಹೇಳಿದ್ದಾರೆಂದರೆ ಅದರ ಹಿಂದೆ ಬಲವಾದ ಕಾರಣ ಇರಲೇಬೇಕು. ಅದಕ್ಕಾಗಿಯೇ ಅವರು ಜನರಿಗೆ ಈ ರೀತಿ ಕರೆ ನೀಡಿದ್ದಾರೆ. ಅವರು ಕರೆ ನೀಡಿದರೆ ಅದನ್ನು ಪಾಲಿಸುವ ದೊಡ್ಡ ಸಂಖ್ಯೆಯ ಜನ ದೇಶದಲ್ಲಿದ್ದಾರೆ. ಅದಕ್ಕೆ ಕಾರಣ ಅವರ ಮೇಲಿನ ನಂಬಿಕೆ.

ನರೇಂದ್ರ ಮೋದಿಗೆ ಯಾವುದೇ ಖಾಸಗಿ ಅಜೆಂಡಾಗಳಿಲ್ಲ ಎಂಬುದು ಜನರ ಅಚಲ ನಂಬಿಕೆ. ಅವರಿಗೆ ಕುಟುಂಬವಿಲ್ಲ. ಸ್ವಂತಕ್ಕಾಗಿ ಏನೂ ಮಾಡಿಕೊಂಡವರೂ ಅಲ್ಲ. 2002ರಿಂದ ಗುಜರಾತ್ ಮುಖ್ಯಮಂತ್ರಿಯಾಗಿ, 2014ರಿಂದ ದೇಶದ ಪ್ರಧಾನಿಯಾಗಿ ಅವರು ಮಾಡಿದ ಕೆಲಸವನ್ನು ಜನ ನೋಡಿದ್ದಾರೆ. ದೇಶದ ಹಿತಕ್ಕಾಗಿ ಮೋದಿಯವರು ಶ್ರಮಿಸುವುದನ್ನು ಕಂಡಿದ್ದಾರೆ. ಇಷ್ಟು ದೀರ್ಘಕಾಲ ರಾಜಕೀಯದಲ್ಲಿದ್ದು, ಉನ್ನತ



ಅಧಿಕಾರದಲ್ಲಿದ್ದು ಜನರ ನಂಬಿಕೆ ಉಳಿಸಿಕೊಂಡವರು ತುಂಬಾ ಕಡಿಮೆ. ನರೇಂದ್ರ ಮೋದಿಯವರು ಅಧಿಕಾರಕ್ಕೆ ಬರುವಾಗ ರಾಜಕಾರಣಿಗಳ ಮೇಲೆ ನಮ್ಮ ಜನ ಬಹುತೇಕ ನಂಬಿಕೆ ಕಳೆದುಕೊಂಡಿದ್ದರು. ರಾಜಕಾರಣಿಗಳು ಅಂದರೆ ಹೇಳುವುದು ಒಂದು, ಮಾಡುವುದು ಇನ್ನೊಂದು ಎಂಬಂತಾಗಿತ್ತು. ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಅಂತಹ ವ್ಯವಸ್ಥೆಯನ್ನು ಸರಿ ಮಾಡುವುದು ಸುಲಭದ ಕೆಲಸವೇನಲ್ಲ. ಆದರೂ 2014ರಿಂದ ಈವರೆಗೆ ಒಂದೇ ಒಂದು ಹಗರಣವಿಲ್ಲದೆ ಸರ್ಕಾರ ನಡೆಸುವ ಮೂಲಕ, ನಾನೂ ತಿನ್ನುವುದಿಲ್ಲ, ತಿನ್ನಲೂ ಬಿಡುವುದಿಲ್ಲ ಎಂಬ ಮಾತಿಗೆ ಬದ್ಧರಾಗಿ ನಡೆದುಕೊಂಡಿದ್ದಾರೆ. ಚುನಾವಣೆ ಸಮಯದಲ್ಲಿ ಜನರಿಗೆ ನೀಡಿದ ಭರವಸೆಗಳನ್ನು ಒಂದೊಂದಾಗಿ (ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ರದ್ದು, ರಾಮ ಮಂದಿರ ನಿರ್ಮಾಣ, ಒಂದು ದೇಶ ಒಂದು ಧ್ವಜ, ತ್ರಿವಳಿ ತಲಾಖ್ ರದ್ದು, ಕಡಿಮೆ ಕಾನೂನು- ಹೆಚ್ಚು ಕೆಲಸ) ಈಡೇರಿಸಿದ್ದಾರೆ. ಕೇವಲ ತಾವಷ್ಟೇ ಒಳ್ಳೆಯ ಆಡಳಿತ ನೀಡಿದ್ದಲ್ಲ, ಬದಲಾಗಿ ಬೇರೆ ಬೇರೆ ರಾಜ್ಯಗಳಲ್ಲಿ ಬಿಜೆಪಿಯ ಸರ್ಕಾರ ಸ್ಥಾಪನೆಯಾದಾಗ ಅಲ್ಲಿ ಕೂಡ ಉತ್ತಮ ನಾಯಕರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿ, ಅವರಿಂದಲೂ ಒಳ್ಳೆಯ ಆಡಳಿತ ಕೊಡಿಸಿದ್ದಾರೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ, ಮಧ್ಯಪ್ರದೇಶ ಮತ್ತು ಗುಜರಾತ್ ಸರ್ಕಾರಗಳು ಈಗ ತುಂಬಾ ವರ್ಷದಿಂದ ಅತ್ಯುತ್ತಮ ಆಡಳಿತ ನೀಡುತ್ತಿದ್ದಾರೆ. ಇದೆಲ್ಲದರಿಂದಾಗಿ ಜನರಿಗೆ ರಾಜಕಾರಣಿಗಳ ಮೇಲೆ, ಆಳುವವರ ಮೇಲೆ ಮತ್ತೆ ನಂಬಿಕೆ ಮೂಡಲಾರಂಭಿಸಿದೆ. ಜನ ನಂಬಿಕೆ ಇಟ್ಟು ಆರಿಸಿದಾಗ, ಆ ನಂಬಿಕೆ ಉಳಿಸುವ, ಆ ಮೂಲಕ ಮತ್ತೆ ಮತ್ತೆ ಆಯ್ಕೆಯಾಗುವ ಸಂಪ್ರದಾಯಕ್ಕೆ ಮೋದಿ ನಾಂದಿ ಹಾಡಿದ್ದಾರೆ. ಅದು ಜನರ ವಿಶ್ವಾಸ ಗಳಿಸಲು ಯಶಸ್ವಿಯಾಗಿದೆ.

ಕ್ಲಿಷ್ಟ ಸನ್ನಿವೇಶದಲ್ಲಿ ತುಂಬಾ ಕಷ್ಟಕರ ನಿರ್ಧಾರಗಳನ್ನು ದೇಶದ ಹಿತದ ಕಾರಣಕ್ಕೆ ತೆಗೆದುಕೊಂಡಿದ್ದಾರೆ. ಭಾರತದ ಮೇಲೆ ದಾಳಿ ನಡೆದಾಗೆಲ್ಲ ಅದಕ್ಕೆ ತಕ್ಕ ಪ್ರತ್ಯುತ್ತರ ನೀಡಿದ್ದಾರೆ. ವಿಶ್ವದಾದ್ಯಂತ ದೇಶಕ್ಕೊಂದು ಹೆಸರು, ಹೆಮ್ಮೆ ತಂದುಕೊಟ್ಟಿದ್ದಾರೆ. ಇದೆಲ್ಲವನ್ನೂ ನೋಡಿದ ದೇಶದ ಜನಕ್ಕೆ ನರೇಂದ್ರ ಮೋದಿಯವರ ಮೇಲೊಂದು ನಂಬಿಕೆ ಇದೆ. ಅದೇನೆಂದರೆ ದೇಶಕ್ಕೆ ಯಾವುದು ಹಿತವೊ ಅದನ್ನು ಅವರು ಮಾಡುತ್ತಾರೆ. ಅದರ ಹೊರತಾದ ಯಾವ ಉದ್ದೇಶವೂ ಅವರಲ್ಲಿಲ್ಲ ಎಂಬ ಅಚಲ ನಂಬಿಕೆ ಜನರಲ್ಲಿದೆ. ಆ ನಂಬಿಕೆಯನ್ನು ಅವರು ತಮ್ಮ ಶ್ರಮದ ಮೂಲಕ ಗಳಿಸಿಕೊಂಡಿದ್ದಾರೆ.

ತುಂಬಾ ಕಷ್ಟದ ಸನ್ನಿವೇಶದಲ್ಲಿ ನೇರವಾಗಿ ಜನರಲ್ಲಿ ಮನವಿ ಮಾಡುವ ಮೂಲಕ ಅದನ್ನು ಸಾಧಿಸಿದ್ದಾರೆ. ಉದಾಹರಣೆಗೆ ಪ್ರಧಾನಿಯಾದ ಮೊದಲ ಅವಧಿಯಲ್ಲಿ ಅಡುಗೆ ಅನಿಲಕ್ಕೆ ನೀಡಲಾಗುತ್ತಿದ್ದ ಸಬ್ಸಿಡಿ ನಿಲ್ಲಿಸುವ ಬದಲು, ಅವರು ಜನರೇ ಸ್ವಯಂ ಪ್ರೇರಿತರಾಗಿ ಸಬ್ಸಿಡಿ ತ್ಯಜಿಸುವಂತೆ ಕರೆ ನೀಡಿದ್ದರು. ಅವರು ಕರೆಯ ಹಿಂದಿನ ಉದ್ದೇಶ ಅರ್ಥಮಾಡಿಕೊಂಡ ಲಕ್ಷಾಂತರ ಜನ ಅಡುಗೆ ಅನಿಲ ಸಬ್ಸಿಡಿಯನ್ನು ತಾವಾಗೇ ತ್ಯಜಿಸಿದ್ದರು. ಅದರ ಬದಲು ಸರ್ಕಾರ ಸಬ್ಸಿಡಿ ರದ್ದುಪಡಿಸಿದ್ದರೆ ಅದು ಜನರ ವಿರೋಧಕ್ಕೆ ಕಾರಣವಾಗುತ್ತಿತ್ತು. ಕೊರೋನಾ ಸಂದರ್ಭದಲ್ಲಿ, ನೋಟು ರದ್ದತಿ ಸಮಯದಲ್ಲಿ ನರೇಂದ್ರ ಮೋದಿಯವರು ದೇಶವನ್ನು ಉದ್ದೇಶಿಸಿ ಮಾತನಾಡುವ ಮೂಲಕ ಜನರ ವಿಶ್ವಾಸ ಗೆದ್ದಿದ್ದರು.

ಆವಾಗಲೂ- ಈಗಲೂ ದೇಶದ ದೊಡ್ಡ ಸಂಖ್ಯೆಯ ಜನ ಅವರು ಹೇಳಿದ್ದನ್ನು ಅನುಸರಿಸಲು ಸಿದ್ಧರಿದ್ದಾರೆ ಎಂದರೆ ಅದಕ್ಕೆ ಕಾರಣ ಅವರ ಮೇಲಿನ ಭಕ್ತಿ, ಅಭಿಮಾನವಲ್ಲ. ಬದಲಾಗಿ ಅವರ ಮೇಲೆ ಜನರಿಗಿರುವ ವಿಶ್ವಾಸ, ನಂಬಿಕೆ. ಈಗಲೂ ಅವರೇನು ದಿನಕ್ಕೆ ಒಂದೇ ಹೊತ್ತು ಊಟ ಮಾಡಿ, ಬೆಳಗ್ಗೆದ್ದು ಚಾ ಕುಡಿಯಬೇಡಿ ಎಂದೇನೂ ಹೇಳಿಲ್ಲ. ಬದಲಾಗಿ ಅನಗತ್ಯ ಬಳಕೆಯನ್ನು ಅಥವಾ ಬೇಕಾಬಿಟ್ಟಿ ಬಳಕೆಯನ್ನು ಕಡಿಮೆ ಮಾಡೋಣ ಎಂದಷ್ಟೇ ಹೇಳಿದ್ದಾರೆ. ವಿದೇಶ ಪ್ರವಾಸಕ್ಕೆ ಹೋಗದಿದ್ದರೆ ಅದು ಪ್ರವಾಸವೇ ಅಲ್ಲ ಎಂದು ಕೆಲವರಿಗೆ ಅನ್ನಿಸಬಹುದು. ಆದರೆ ಆರು ತಿಂಗಳು ಅಥವಾ ಇದೊಂದು ವರ್ಷ ವಿದೇಶ ಪ್ರವಾಸ ಹೋಗದೆ ಇದ್ದರೆ ಜಗತ್ತೇನೂ ಮುಳುಗಿ ಹೋಗುವುದಿಲ್ಲ. ಅದರ ಬದಲು ನಮ್ಮ ದೇಶದ ಒಳಗೇ ಸಾಕಷ್ಟು ಸುಂದರ ಪ್ರವಾಸಿ ತಾಣಗಳಿವೆ, ಅವುಗಳನ್ನು ನೋಡಬಹುದು.

ನರೇಂದ್ರ ಮೋದಿಯವರು ಹೇಳಿದ್ದು ದೊಡ್ಡ ಸಂಖ್ಯೆಯ ಜನರಿಗೆ ಅರ್ಥವಾಗಿದೆ. ಅದರಲ್ಲಿ ಒಂದಷ್ಟು ಜನ ಅದನ್ನು ಪಾಲಿಸಿದರೂ ಅದು ದೊಡ್ಡ ಪರಿಣಾಮವನ್ನೇ ಬೀರುತ್ತದೆ. ಇನ್ನು ಮನೆ ಹೊತ್ತಿ ಉರಿಯುತ್ತಿರುವಾಗ ಅದರಲ್ಲೇ ಸಿಗರೇಟು ಹಚ್ಚಿಕೊಳ್ಳುವವರು ಇದ್ದೇ ಇರುತ್ತಾರೆ. ಅವರ ಬಗ್ಗೆ ಹೆಚ್ಚು ಗಮನಕೊಡುವ ಅಗತ್ಯವಿಲ್ಲ.

ಬಂಗಾರದ ಜಿಂಕೆ ಮತ್ತು ಆರ್ಥಿಕ ಆತ್ಮನಿಗ್ರಹ

ಚಿನ್ನವು ಬಹುಪಾಲು ಸಂದರ್ಭಗಳಲ್ಲಿ ಉತ್ಪಾದಕ ಆಸ್ತಿ ಅಲ್ಲ. ಆದರಿಂದ ಹೊಸ ಉತ್ಪಾದನೆ, ಉದ್ಯೋಗ ಅಥವಾ ಆರ್ಥಿಕ ಚಟುವಟಿಕೆ ಸೃಷ್ಟಿಯಾಗುವುದಿಲ್ಲ.

▸ ಡಾ. ರವೀಶ ಎನ್. ಎಸ್.

ಭಾರತೀಯ ಸಂಸ್ಕೃತಿಯಲ್ಲಿ ಸಂಪತ್ತು ಎಂದರೆ ಕೇವಲ ವೈಯಕ್ತಿಕ ಐಶ್ವರ್ಯವಲ್ಲ; ಅದು 'ಲಕ್ಷ್ಮಿ'ಯ ರೂಪ. ಆದರೆ ಆ ಸಂಪತ್ತು ರಾಷ್ಟ್ರದ ಹಿತಾಸಕ್ತಿಗೆ ಪೂರಕವಾಗಿರಬೇಕು ಎಂಬುದೇ ನಮ್ಮ ಸನಾತನ ಆರ್ಥಿಕ ತತ್ವದ ಮೂಲಸಾರ. ರಾಮಾಯಣದಲ್ಲಿ ಸೀತಾದೇವಿಯು ಕಾಂಚನ ಮೃಗದ ಹೊಳಪಿಗೆ ಮರುಳಾಗಿ ಅದನ್ನು ಪಡೆಯಬೇಕೆಂದು ಬಯಸಿದಾಗ, ಸಾಕ್ಷಾತ್ ಶ್ರೀರಾಮನೇ ಅದರ ಬೆನ್ನತ್ತಿ ಅರಣ್ಯಕ್ಕೆ ತೆರಳಬೇಕಾಯಿತು. ಆ ಒಂದು ಕ್ಷಣಿಕ ಮೋಹವೇ ರಾಮಾಯಣದ ಮಹಾಸಂಗ್ರಾಮಕ್ಕೆ ನಾಂದಿಯಾಯಿತು. ಇಂದಿನ ಜಾಗತಿಕ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿದರೆ, ಚಿನ್ನದ ಮೇಲಿನ ಅತಿಯಾದ ವ್ಯಾಮೋಹವೂ ಇದೇ ರೀತಿಯ ಆಧುನಿಕ 'ಮಾಯಾ ಜಿಂಕೆ'ಯಾಗಿದೆ. ಹೊಳೆಯುವ ಬಂಗಾರವು ವ್ಯಕ್ತಿಯ ಭದ್ರತೆಯ ಸಂಕೇತವಾಗಬಹುದು; ಆದರೆ ಅದರಿಂದಾಗಿ ದೇಶದ ಅಮೂಲ್ಯ ವಿದೇಶಿ ವಿನಿಮಯ ಸಂಪತ್ತು ಹೊರಹೋಗುವಾಗ, ಅದು ರಾಷ್ಟ್ರದ ಆರ್ಥಿಕ ಸ್ವಾವಲಂಬನೆಗೆ ಹೊಡೆತ ನೀಡುತ್ತದೆ.

ಅಯೋಧ್ಯಾಕಾಂಡದಲ್ಲಿಯೂ ಶ್ರೀರಾಮನು ಭರತನಿಗೆ ನೀಡುವ ಉಪದೇಶಗಳಲ್ಲಿ ಆರ್ಥಿಕ ನೈತಿಕತೆಯ ಸ್ಪಷ್ಟ ಚಿತ್ರಣ ಕಾಣಸುತ್ತದೆ. ಭರತನು ರಾಜ್ಯಭಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ಶ್ರೀರಾಮನು ಅನೇಕ ಪ್ರಶ್ನೆಗಳ ಮೂಲಕ ರಾಜಧರ್ಮವನ್ನು ನೆನಪಿಸುತ್ತಾನೆ. ಆದರಲ್ಲಿ ಗೋಸಂಪತ್ತಿನ ರಕ್ಷಣೆಯ ಬಗ್ಗೆ ವಿಶೇಷವಾಗಿ ಪ್ರಶ್ನಿಸುತ್ತಾನೆ "ಗೋವುಗಳನ್ನು ಸಮರ್ಪಕವಾಗಿ ಕಾಯಲಾಗುತ್ತಿದೆಯೇ? ಕೃಷಿ ಮತ್ತು ಪಶುಸಂಪತ್ತು ಸಮೃದ್ಧವಾಗಿದೆಯೇ?" ಎಂಬ ಅರ್ಥದ ಉಪದೇಶ ನೀಡುತ್ತಾನೆ. ಇಲ್ಲಿ 'ಗೋವು' ಎನ್ನುವುದು ಕೇವಲ ಹಸು ಅಥವಾ ಪಶುಸಂಪತ್ತಿನ ಸೀಮಿತ ಅರ್ಥದಲ್ಲಿಲ್ಲ; ಅದು ಸಮಾಜಕ್ಕೆ ಉತ್ಪಾದನೆ ನೀಡುವ ಸಂಪನ್ಮೂಲಗಳ ಪ್ರತೀಕವಾಗಿದೆ. ಕೃಷಿ, ಪಶುಸಂಗೋಪನೆ, ಜಲಸಂಪತ್ತು, ವ್ಯಾಪಾರ, ಕೈಗಾರಿಕೆ, ಮಾನವ ಸಂಪನ್ಮೂಲ ಇವೆಲ್ಲವೂ ರಾಷ್ಟ್ರದ ಜೀವಂತ ಆರ್ಥಿಕ ಶಕ್ತಿಗಳಾಗಿವೆ ಎಂಬ ಸಂದೇಶವನ್ನು ರಾಮಾಯಣವು ಸಾಂಕೇತಿಕವಾಗಿ ನೀಡುತ್ತದೆ. ಅಂದರೆ ಶ್ರೀರಾಮನ ದೃಷ್ಟಿಯಲ್ಲಿ 'ಉತ್ಪಾದಕ ಆರ್ಥಿಕತೆ'ಯೇ ರಾಮರಾಜ್ಯದ ಮೂಲತತ್ವ. ಅನಾವಶ್ಯಕ ವೈಭವ, ಸಂಗ್ರಹ ಮತ್ತು ನಿರ್ಜೀವ ಸಂಪತ್ತಿಗಿಂತ ಸಮಾಜಕ್ಕೆ ಮೌಲ್ಯ ಸೃಷ್ಟಿಸುವ ಸಂಪನ್ಮೂಲಗಳೇ ನಿಜವಾದ ರಾಷ್ಟ್ರಸಂಪತ್ತು ಎಂಬುದನ್ನು ರಾಮಾಯಣವೇ ಬಹಳ ಸೂಕ್ಷ್ಮವಾಗಿ ಬೋಧಿಸುತ್ತದೆ.



ಆರ್ಥಿಕ ದೃಷ್ಟಿಯಿಂದ ನೋಡಿದರೆ, 'ಉತ್ಪಾದಕ ಆಸ್ತಿ' ಎಂದರೆ ಸಮಾಜ ಮತ್ತು ಆರ್ಥಿಕತೆಗೆ ನಿರಂತರ ಮೌಲ್ಯ ಸೃಷ್ಟಿಸುವ ಸಂಪನ್ಮೂಲಗಳು. ಕೃಷಿಭೂಮಿ ಆಹಾರ ಉತ್ಪಾದಿಸುತ್ತದೆ; ಕಾರ್ಖಾನೆಗಳು ವಸ್ತುಗಳನ್ನು ನಿರ್ಮಿಸುತ್ತವೆ; ಯಂತ್ರೋಪಕರಣಗಳು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ; ಶಿಕ್ಷಣ ಮತ್ತು ಕೌಶಲ್ಯ ಮಾನವ ಸಂಪನ್ಮೂಲವನ್ನು ಬಲಪಡಿಸುತ್ತವೆ; ತಂತ್ರಜ್ಞಾನ ಮತ್ತು ಮೂಲಸೌಕರ್ಯ ದೇಶದ ಸ್ಪರ್ಧಾತ್ಮಕತೆಯನ್ನು ವೃದ್ಧಿಸುತ್ತವೆ. ಇವುಗಳೆಲ್ಲವೂ ಉದ್ಯೋಗ ಸೃಷ್ಟಿಸಿ, ಆದಾಯ ಹೆಚ್ಚಿಸಿ, ರಾಷ್ಟ್ರದ ಜಿಡಿಪಿಗೆ ಕೊಡುಗೆ ನೀಡುವ ಉತ್ಪಾದಕ ಆಸ್ತಿಗಳಾಗಿವೆ. ಆದರೆ ಚಿನ್ನವು ಬಹುಪಾಲು ಸಂದರ್ಭಗಳಲ್ಲಿ ಉತ್ಪಾದಕ ಆಸ್ತಿ ಅಲ್ಲ. ಅದು ಲಾಕರ್‌ಗಳಲ್ಲಿ, ಬ್ಯಾಂಕ್‌ಗಳ ವಾಲ್ಟ್‌ಗಳಲ್ಲಿ ಅಥವಾ ಮನೆಯ ಅಲಮಾರಿಗಳಲ್ಲಿ 'ನಿರ್ಜೀವ ಆಸ್ತಿ'ಯಾಗಿ ಉಳಿಯುತ್ತದೆ. ಆದರಿಂದ ಹೊಸ ಉತ್ಪಾದನೆ, ಉದ್ಯೋಗ ಅಥವಾ ಆರ್ಥಿಕ ಚಟುವಟಿಕೆ ಸೃಷ್ಟಿಯಾಗುವುದಿಲ್ಲ. ಆದರೆ ಅದೇ ಹಣ ಕೈಗಾರಿಕೆ, ಕೃಷಿ, ಮೂಲಸೌಕರ್ಯ, ಸ್ಟಾರ್ಟ್ ಅಪ್‌ಗಳು ಅಥವಾ ಸಂಶೋಧನಾ ವಲಯಗಳಿಗೆ ಹರಿದರೆ, ಅದು ದೇಶದ ಆರ್ಥಿಕ ಚಕ್ರವನ್ನು ಚುರುಕುಗೊಳಿಸುತ್ತದೆ.

ಹಾಗಾದರೆ ಈ 'ಚಿನ್ನದ ಗಣಿತ'ವೇನು? ಅಂಕಿ-ಅಂಶಗಳನ್ನು ನೋಡಿದರೆ ಪರಿಸ್ಥಿತಿಯ ತೀವ್ರತೆ ಸ್ಪಷ್ಟವಾಗುತ್ತದೆ. ಭಾರತವು 2025-26ರ ಆರ್ಥಿಕ ವರ್ಷದಲ್ಲಿ ಸುಮಾರು 72 ಬಿಲಿಯನ್ ಡಾಲರ್ ಮೌಲ್ಯದ ಚಿನ್ನವನ್ನು ಆಮದು ಮಾಡಿಕೊಂಡಿದೆ. ಕಳೆದ ಮೂರು ವರ್ಷಗಳಲ್ಲಿ ಈ ಪ್ರಮಾಣ ದ್ವಿಗುಣಕ್ಕಿಂತ ಹೆಚ್ಚಾಗಿದೆ. ಬೆಳ್ಳಿಯ ಆಮದು ಸೇರಿಸಿದರೆ ಸುಮಾರು 84 ಬಿಲಿಯನ್ ಡಾಲರ್ ವಿದೇಶಿ ವಿನಿಮಯ ನಿಧಿ ಅಮೂಲ್ಯ ಲೋಹಗಳ ಖರೀದಿಗಾಗಿ ಹೊರಹೋಗಿದೆ. ಇದೇ ವೇಳೆ ಭಾರತವು ತನ್ನ ಅಗತ್ಯದ ಸುಮಾರು 88.6% ಕಚ್ಚಾ ತೈಲವನ್ನು ವಿದೇಶಗಳಿಂದಲೇ ಆಮದು ಮಾಡಿಕೊಳ್ಳುತ್ತಿದೆ. ಒಂದು ಕಡೆ ತೈಲಕ್ಕಾಗಿ ಡಾಲರ್ ಹೊರಹೋಗುತ್ತಿದೆ; ಮತ್ತೊಂದು ಕಡೆ ಚಿನ್ನ ಮತ್ತು ಬೆಳ್ಳಿಗಾಗಿ ಡಾಲರ್ ಹೊರ ಹೋಗುತ್ತಿದೆ. ಪರಿಣಾಮವಾಗಿ ರೂಪಾಯಿ ಮೌಲ್ಯ ದುರ್ಬಲಗೊಳ್ಳುತ್ತದೆ; ವಿದೇಶಿ ವಿನಿಮಯ ಮೀಸಲು ನಿಧಿ ಕರಗುತ್ತದೆ; ದೇಶದ ಆರ್ಥಿಕ ಸ್ವಾವಲಂಬನೆ ಒತ್ತಡಕ್ಕೆ ಸಿಲುಕುತ್ತದೆ.

ಭಾರತದ ಮತ್ತೊಂದು ದೊಡ್ಡ ಸವಾಲು ಎಂದರೆ ಜಾಗತಿಕ ಇಂಧನ ಅಸ್ಥಿರತೆ. ಪಶ್ಚಿಮ ಏಷ್ಯಾದ ಯುದ್ಧ, ಸಮುದ್ರ ಮಾರ್ಗಗಳಲ್ಲಿನ ಉದ್ವಿಗ್ನತೆ ಮತ್ತು ಜಾಗತಿಕ ಸರಬರಾಜು ಸರಪಳಿಯ ವ್ಯತ್ಯಯಗಳಿಂದ ತೈಲ ಸಾಗಣೆ ವೆಚ್ಚಗಳು ಭಾರೀ ಪ್ರಮಾಣದಲ್ಲಿ ಏರಿಕೆ ಕಂಡಿವೆ. ಯುದ್ಧಪೂರ್ವ ಸ್ಥಿತಿಗಿಂತ ಸಾಗಣೆ ಮತ್ತು ವಿಮೆ ದರಗಳು ಹಲವು ಪಟ್ಟು ಹೆಚ್ಚಾಗಿವೆ. ಇದರ ನೇರ ಪರಿಣಾಮವಾಗಿ ಭಾರತಕ್ಕೆ ಬರುವ ಪ್ರತಿಯೊಂದು ಬ್ಯಾರೆಲ್ ತೈಲದ ವೆಚ್ಚ ಹೆಚ್ಚುತ್ತಿದೆ. ತೈಲ ಬೆಲೆ ಏರಿದಾಗ ದೇಶದ ವಿದೇಶಿ ವಿನಿಮಯ ಮೀಸಲು ನಿಧಿ ನಿಧಾನವಾಗಿ ಕರಗತೊಡಗುತ್ತದೆ. ಈಗಾಗಲೇ ಭಾರತದ ವಿದೇಶಿ ವಿನಿಮಯ ಮೀಸಲು ಸುಮಾರು 690 ಬಿಲಿಯನ್ ಡಾಲರ್ ಮಟ್ಟಕ್ಕೆ ಇಳಿದಿದೆ.

ಜಾಗತಿಕ ಮಟ್ಟದಲ್ಲಿ ಇಂಧನ ಬಿಕ್ಕಟ್ಟು ಉಲ್ಬಣಗೊಂಡಿರುವ ಈ ಸಂದರ್ಭದಲ್ಲಿ ಅನೇಕ ರಾಷ್ಟ್ರಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಐತಿಹಾಸಿಕ ಮಟ್ಟದಲ್ಲಿ ಏರಿಕೆ ಕಂಡಿವೆ. ಕೆಲವು ಯುರೋಪಿನ ರಾಷ್ಟ್ರಗಳಲ್ಲಿ ಇಂಧನ ದರಗಳು ಜನಜೀವನವನ್ನು ನೇರವಾಗಿ ಅಸ್ತವ್ಯಸ್ತಗೊಳಿಸುವಷ್ಟು ದುಬಾರಿಯಾಗಿವೆ. ಆದರೆ ಭಾರತದಲ್ಲಿ ಇನ್ನೂ ಒಂದು ರೀತಿಯ ಆರ್ಥಿಕ ಸ್ವಾಭಾವಿಕತೆ ಮತ್ತು ಸ್ಥಿರತೆ ಕಾಣಿಸುತ್ತಿದೆ. ಇದರ ಹಿಂದೆ ದೇಶದ ಆರ್ಥಿಕ ನಿರ್ವಹಣೆ, ಪರ್ಯಾಯ ಖರೀದಿ ವ್ಯವಸ್ಥೆಗಳು, ತಂತ್ರಾತ್ಮಕ ಸಮತೋಲನ ಮತ್ತು ಆಂತರಿಕ ಮಾರುಕಟ್ಟೆಯ ಸಾಮರ್ಥ್ಯ ಪ್ರಮುಖ ಕಾರಣಗಳಾಗಿವೆ. ಆದರೆ ಈ ಸ್ಥಿರತೆ ಶಾಶ್ವತ ಭದ್ರತೆಯ ಸಂಕೇತವಲ್ಲ. ಆಮದು ಅವಲಂಬಿತ ರಾಷ್ಟ್ರವಾದ ಭಾರತವು ದೀರ್ಘಕಾಲ ಸುರಕ್ಷಿತವಾಗಿರಬೇಕಾದರೆ, ಜವಾಬ್ದಾರಿಯುತ ಉಪಭೋಗ ಮತ್ತು ಮಿತವ್ಯಯದ ಸಂಸ್ಕೃತಿ ಬಲವಾಗಬೇಕು.

ರೂಪಾಯಿ ದುರ್ಬಲಗೊಂಡಾಗ ಅದರ ಹೊರೆ ಸಾಮಾನ್ಯ ಜನರ ಮೇಲೆ ಬೀಳುತ್ತದೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ರಸಗೊಬ್ಬರ, ಔಷಧೀಯ ಕಚ್ಚಾ ವಸ್ತುಗಳು ಮತ್ತು ಎಲೆಕ್ಟ್ರಾನಿಕ್ಸ್ ಸೇರಿದಂತೆ ಎಲ್ಲ ಆಮದು ವಸ್ತುಗಳ ಬೆಲೆ ಏರಿಕೆಯಾಗುತ್ತದೆ. ಇದೇ ಸಮಯದಲ್ಲಿ ಕೈಗಾರಿಕೆಗಳ ಉತ್ಪಾದನೆ ನಿಧಾನಗೊಳ್ಳುತ್ತದೆ; ಉದ್ಯೋಗ ಸೃಷ್ಟಿ ಕುಂಠಿತಗೊಳ್ಳುತ್ತದೆ ಮತ್ತು ಆರ್ಥಿಕ ಬೆಳವಣಿಗೆ ಮಂದಗತಿಯಾಗುತ್ತದೆ. ಅಂದರೆ ಒಂದೆಡೆ ಬೆಲೆ ಏರಿಕೆ, ಮತ್ತೊಂದೆಡೆ ಆರ್ಥಿಕತೆ ಕುಂಟುವುದು – ಈ ಎರಡೂ ಒಂದೇ ಸಮಯದಲ್ಲಿ ಸಂಭವಿಸುವ ಸ್ಥಿತಿಯೇ 'ಸ್ಟಾಗ್ಫ್ಲೇಷನ್' (Stagflation). ಸ್ಟಾಗ್ಫ್ಲೇಷನ್ ಯಾವುದೇ ದೇಶಕ್ಕೆ ಅತ್ಯಂತ ಅಪಾಯಕಾರಿ ಸ್ಥಿತಿ. ಏಕೆಂದರೆ ಬೆಲೆ ಏರಿಕೆಯನ್ನು ನಿಯಂತ್ರಿಸಲು ಬಡ್ಡಿದರ ಹೆಚ್ಚಿಸಿದರೆ ಕೈಗಾರಿಕೆಗಳಿಗೆ ಹೊಡೆತ ಬೀಳುತ್ತದೆ; ಉದ್ಯೋಗ ಕಡಿಮೆಯಾಗುತ್ತದೆ. ಮತ್ತೆ ಆರ್ಥಿಕತೆಯನ್ನು ಉತ್ತೇಜಿಸಲು ಬಡ್ಡಿದರ ಕಡಿಮೆ ಮಾಡಿದರೆ ಬೆಲೆ ಏರಿಕೆ ಮತ್ತಷ್ಟು ಜಾಸ್ತಿಯಾಗುತ್ತದೆ. ಹೀಗಾಗಿ ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ಎರಡೂ ಸಂಕಷ್ಟಕ್ಕೆ ಸಿಲುಕುತ್ತವೆ. ಮಧ್ಯಮ ವರ್ಗದ ಉಳಿತಾಯ ಕರಗತೊಡಗುತ್ತದೆ; ಸಣ್ಣ ಉದ್ಯಮಿಗಳು ಸಾಲದ ಬಲೆಗೆ ಸಿಲುಕುತ್ತಾರೆ; ರೈತರ ಉತ್ಪಾದನಾ ವೆಚ್ಚ ಹೆಚ್ಚಾಗುತ್ತದೆ; ಯುವಕರಿಗೆ ಉದ್ಯೋಗ ಸಿಗುವುದು ಕಷ್ಟವಾಗುತ್ತದೆ.

ಆದರೆ ಇಲ್ಲಿ ಒಂದು ದೊಡ್ಡ ಪ್ರಶ್ನೆ ಉದ್ಭವಿಸುತ್ತದೆ. ಇಷ್ಟು ಸಂಪನ್ಮೂಲಗಳಿರುವ ಭಾರತ ಏಕೆ ಇನ್ನೂ ಆಮದುಗಳ ಹಿಂದೆ ಓಡುತ್ತಿದೆ? ನಮ್ಮದು ಅತಿದೊಡ್ಡ ಯುವ ಜನಸಂಖ್ಯೆಯ ರಾಷ್ಟ್ರ, ವೇಗವಾಗಿ ಬೆಳೆಯುತ್ತಿರುವ ಡಿಜಿಟಲ್ ಆರ್ಥಿಕತೆ ಹೊಂದಿರುವ ರಾಷ್ಟ್ರ. ನಮ್ಮ ಪೂರ್ವಜರು ಕಡಿಮೆ ಸಂಪನ್ಮೂಲಗಳಲ್ಲಿಯೇ ಜಗತ್ತನ್ನು ಆಕರ್ಷಿಸುವಂಥ ಆರ್ಥಿಕ ವ್ಯವಸ್ಥೆ ನಿರ್ಮಿಸಿದ್ದರು. ಆದರೆ ಇಂದು ನಾವು ಉತ್ಪಾದನೆಗಿಂತ ಉಪಭೋಗದತ್ತ ಹೆಚ್ಚು ಓಡುತ್ತಿದ್ದೇವೆ. ವಿದೇಶಿ ವಸ್ತುಗಳತ್ತ ಆಕರ್ಷಿತರಾಗುತ್ತಿದ್ದೇವೆ. ಉಳಿತಾಯವನ್ನು ಉತ್ಪಾದಕ ಹೂಡಿಕೆಗೆ ಹರಿಸುವ ಬದಲು ನಿರ್ಜೀವ ಸಂಗ್ರಹಗಳತ್ತ ತಿರುಗಿಸುತ್ತಿದ್ದೇವೆ. ಇದೇ ಆತಂಕದ ಸಂಗತಿ. ಚಾಣಕ್ಯ ತನ್ನ 'ಅರ್ಥಶಾಸ್ತ್ರ'ದಲ್ಲಿ "ಕೋಶಮೂಲೋ ಹಿ ರಾಜಾ" ಎಂದು ಹೇಳಿದ್ದಾನೆ. ಅಂದರೆ ರಾಷ್ಟ್ರದ ಶಕ್ತಿ ಅದರ 'ಕೋಶ'ದಲ್ಲಿ ಅಡಗಿದೆ. ಇಲ್ಲಿ 'ಕೋಶ' ಎಂದರೆ ಕೇವಲ ಹಣದ ಖಜಾನೆ ಮಾತ್ರವಲ್ಲ; ಧಾನ್ಯ, ಚಿನ್ನ, ಸಂಪತ್ತು, ಪಶುಸಂಪತ್ತು, ಜಲಸಂಪತ್ತು ಮತ್ತು ಸಂಕಷ್ಟಕಾಲದಲ್ಲಿ ರಾಷ್ಟ್ರವನ್ನು ರಕ್ಷಿಸುವ ಎಲ್ಲಾ ರೀತಿಯ ಸಂಗ್ರಹಗಳ ಸಮಗ್ರ ಅರ್ಥ. ಪ್ರಾಚೀನ ಭಾರತೀಯ ಆರ್ಥಿಕ ಚಿಂತನೆಗಳಲ್ಲಿ 'ಸಂಗ್ರಹ' ಎಂಬುದು ವೈಯಕ್ತಿಕ ವೈಭವಕ್ಕಾಗಿ ಅಲ್ಲ; ಸಮಾಜ ಮತ್ತು ರಾಷ್ಟ್ರದ ರಕ್ಷಣೆಗೆ ಅಗತ್ಯವಾದ ಆರ್ಥಿಕ ಭದ್ರತಾ ವ್ಯವಸ್ಥೆಯಾಗಿತ್ತು. ಇದೇ ಕಾರಣಕ್ಕೆ ಭಾರತವನ್ನು ಒಂದು ಕಾಲದಲ್ಲಿ 'ಸೋನೆ ಕಿ ಚಿಡಿಯಾ' ಎಂದು ಕರೆಯಲಾಗುತ್ತಿತ್ತು. ಭಾರತದ ಶ್ರೀಮಂತಿಕೆ ಕೇವಲ ಚಿನ್ನದ ಪ್ರಮಾಣದಲ್ಲಲ್ಲ; ಅದರ ಹಿಂದೆ ಇದ್ದ ಆರ್ಥಿಕ ಶಿಸ್ತು, ಉತ್ಪಾದನಾ ಸಾಮರ್ಥ್ಯ, ಸಂಗ್ರಹ ಮನೋಭಾವ ಮತ್ತು ಸಮೂಹ ಹಿತದ ಚಿಂತನೆಯಲ್ಲಿತ್ತು.

ಭಾರತೀಯ ಸಂಸ್ಕೃತಿಯಲ್ಲಿ ದೇವಾಲಯಗಳು ಕೇವಲ ಆರಾಧನಾ ಕೇಂದ್ರಗಳಲ್ಲ; ಅವು ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದವು. ಜನರು ತಮ್ಮ ಸಂಪತ್ತಿನ ಒಂದು ಭಾಗವನ್ನು ದೇವರಿಗೆ ಸಮರ್ಪಿಸುತ್ತಿದ್ದರು. ಆದರ ಹಿಂದಿನ ಭಾವನೆ ಕೇವಲ ಭಕ್ತಿ ಮಾತ್ರವಲ್ಲ; ರಾಷ್ಟ್ರ ಅಥವಾ ಸಮಾಜಕ್ಕೆ ಆಪತ್ತು ಬಂದಾಗ ಆ ಸಂಪತ್ತು ಸಾರ್ವಜನಿಕ ಹಿತಕ್ಕಾಗಿ ಉಪಯೋಗವಾಗಬೇಕು ಎಂಬ ಆರ್ಥಿಕ ಚಿಂತನೆಯೂ ಅಡಗಿತ್ತು. ಯುದ್ಧ, ಕ್ಷಾಮ, ಪ್ರವಾಹ, ಬರ ಹಾಗೂ ಇತರೆ ವಿಪತ್ತುಗಳ ಸಂದರ್ಭಗಳಲ್ಲಿ ದೇವಾಲಯಗಳ ಸಂಗ್ರಹಗಳನ್ನು ಕೃಷಿ, ಅನ್ನಸತ್ರ, ಶಿಕ್ಷಣ ಮತ್ತು ರಾಜ್ಯರಕ್ಷಣೆಗೆ ಬಳಸಲಾಗುತ್ತಿತ್ತು.

ಇಂದು ನಾವು ಮತ್ತೆ ಆ ಚಿಂತನೆಯತ್ತ ಮರಳಬೇಕಾದ ಕಾಲ ಬಂದಿದೆ. ಅನಗತ್ಯ ಚಿನ್ನದ ಖರೀದಿ ಕಡಿಮೆಯಾಗಬೇಕು; ಸ್ಥಳೀಯ ಉತ್ಪನ್ನಗಳಿಗೆ ಆದ್ಯತೆ ಸಿಗಬೇಕು; ಸಮೂಹ ವಾಹನ ಬಳಕೆ, ಇಂಧನ ಮಿತವ್ಯಯ ಮತ್ತು ಜವಾಬ್ದಾರಿಯುತ ಉಪಭೋಗ ಜೀವನಶೈಲಿಯ ಭಾಗವಾಗಬೇಕು. ಭಾರತವು ಕೇವಲ 10% ಚಿನ್ನದ ಆಮದು ಕಡಿಮೆ ಮಾಡಿದರೂ ವರ್ಷಕ್ಕೆ ಸುಮಾರು 7 ರಿಂದ 8 ಬಿಲಿಯನ್ ಡಾಲರ್ ವಿದೇಶಿ ವಿನಿಮಯವನ್ನು ಉಳಿಸಬಹುದು. ಇಂಧನ ಬಳಕೆಯಲ್ಲಿ ಕೇವಲ 5% ಮಿತವ್ಯಯ ಸಾಧಿಸಿದರೂ ಸುಮಾರು 10 ರಿಂದ 12 ಬಿಲಿಯನ್ ಡಾಲರ್ ಮೌಲ್ಯದ ತೈಲ ಆಮದು ವೆಚ್ಚವನ್ನು ತಗ್ಗಿಸಬಹುದು. ಅಂದರೆ ಸಾಮಾನ್ಯ ನಾಗರಿಕರ ಸಣ್ಣ ಮಟ್ಟದ ಆತ್ಮನಿಗ್ರಹವೇ ರಾಷ್ಟ್ರದ ಮಟ್ಟದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಆರ್ಥಿಕ ಭದ್ರತೆಯಾಗಿ ಪರಿವರ್ತನೆಗೊಳ್ಳಬಹುದು. ನಿಜವಾದ ಶ್ರೀಮಂತಿಕೆ ದೇಹದ ಮೇಲೆ ಧರಿಸುವ ಬಂಗಾರದಲ್ಲಿಲ್ಲ; ಅದು ದೇಶದ ಶಿಕ್ಷಣ, ತಂತ್ರಜ್ಞಾನ, ಸಂಶೋಧನೆ, ಮಾನವ ಸಂಪನ್ಮೂಲ ಮತ್ತು ಆರ್ಥಿಕ ಸ್ಥಿರತೆಯಲ್ಲಿ ಅಡಗಿದೆ. ರಾಮಾಯಣದ ಮಾಯಾ ಜಿಂಕೆಯಂತೆ ಬಂಗಾರದ ಹೊಳಪು ಕ್ಷಣಿಕ ಆಕರ್ಷಣೆಯಾಗಿರಬಹುದು, ಆದರೆ ಅದರ ಬೆನ್ನತ್ತಿ ಹೋದರೆ ರಾಷ್ಟ್ರದ ಆರ್ಥಿಕ ಶಕ್ತಿಯೇ ಅಪಹರಣಕ್ಕೊಳಗಾಗುವ ಅಪಾಯವಿದೆ. ಆದ್ದರಿಂದ ಇಂದಿನ ಕಾಲಘಟ್ಟದಲ್ಲಿ 'ಆರ್ಥಿಕ ಆತ್ಮನಿಗ್ರಹ'ವೇ ದೇಶಭಕ್ತಿಯ ಹೊಸ ರೂಪವಾಗಿದೆ. ವೈಯಕ್ತಿಕ ವ್ಯಾಮೋಹಕ್ಕಿಂತ ರಾಷ್ಟ್ರೀಯ ಹಿತಾಸಕ್ತಿಯನ್ನು ಪರಮೋಚ್ಚ ಆಭರಣವನ್ನಾಗಿ ಧರಿಸಿದಾಗ ಮಾತ್ರ ಭಾರತವು 2047ರ 'ವಿಕಸಿತ ಭಾರತ'ದ ಕನಸನ್ನು ನನಸಾಗಿಸಿ ನಿಜವಾದ ಅರ್ಥದಲ್ಲಿ 'ವಿಶ್ವಗುರು'ವಾಗಲು ಸಾಧ್ಯ.

ಸಣ್ಣ ಪರಿವರ್ತನೆಗಳೇ ದೇಶಕ್ಕೆ ನೀಡುವ ಕೊಡುಗೆ

ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಇರಾನ್ ವಿರುದ್ಧದ ಅಮೆರಿಕಾ ಬೆಂಬಲಿತ ಯುದ್ಧದ ಪರಿಣಾಮ ಈಗ ಭಾರತಕ್ಕೂ ತಟ್ಟುತ್ತಿದೆ. ವಿಶ್ವದ ಎಲ್ಲೇ ಏನೇ ಆದರೂ ಜಾಗತೀಕರಣದ ಪರಿಣಾಮವಾಗಿ ನಮ್ಮ ದೈನಂದಿನ ಜೀವನದ ಮೇಲೂ ಅದು ಪರಿಣಾಮ ಬೀರುತ್ತದೆ. ಹೀಗಿರುವಾಗ ಕಳೆದ ಅನೇಕ ತಿಂಗಳಿನಿಂದ ಮುಂದುವರೆದಿರುವ ವಿಶ್ವಮಟ್ಟದ ಬಿಕ್ಕಟ್ಟು ನಮ್ಮನ್ನು ತಟ್ಟದಿರಲು ಹೇಗೆ ಸಾಧ್ಯ? ಆದರೂ ಇಲ್ಲಿಯವರೆಗೂ ಕೇಂದ್ರ ಸರ್ಕಾರ ಅವನ್ನೆಲ್ಲ ತುಂಬ ಚೆನ್ನಾಗಿಯೇ ನಿರ್ವಹಿಸುತ್ತಾ ಬಂದಿದೆ. ಈಗಾಗಲೇ ಅದೆಷ್ಟೋ ದೇಶಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತುಟ್ಟಿಯಾಗಿವೆ. ತಿಂಗಳುಗಳ ಹಿಂದೆಯೇ ಅನೇಕ ದೇಶಗಳು ಲಾಕ್ ಡೌನ್‌ನಂಥ ಸಂದರ್ಭವನ್ನು ಎದುರಿಸುತ್ತಿವೆ. ಆದರೆ ಇಂದಿನವರೆಗೂ ಭಾರತ ಮಾತ್ರ ಯಾವ ದಿಗ್ಬಂಧನವನ್ನೂ ಹಾಕದೆಯೇ ಜನರನ್ನು ಸ್ವತಂತ್ರವಾಗಿ ತಮ್ಮ ಜೀವನ ನಿರ್ವಹಣೆಯ ಆಯ್ಕೆಯೊಂದಿಗೆ ಬಿಟ್ಟುಬಿಟ್ಟಿದೆ. ಕೊರೋನಾ ಕಾಲದ ಸಂಕಟಗಳು ಮತ್ತೆ ಬರಬಹುದೆಂಬ ಊಹೆ ಇಡೀ ಪ್ರಪಂಚದಲ್ಲಿ ಹರಿದಾಡುತ್ತಿದೆ. ಯಾವಾಗ ಯುದ್ಧದ ಬಿಕ್ಕಟ್ಟು ಬಗೆಹರೀದೀತು ಎಂದು ಎಲ್ಲರೂ ಕಾಯುತ್ತಿದ್ದಾರೆ. ಆದರೆ ಅದು ಮುಗಿಯುತ್ತಲೇ ಇಲ್ಲ.

ಇಷ್ಟೆಲ್ಲ ನಡೆಯುತ್ತಿದ್ದರೂ ಭಾರತ ಮಾತ್ರ ಒಂದೇ ಒಂದು ರೂಪಾಯಿಯನ್ನೂ ಏರಿಸದೇ ಇಂಧನ ತೈಲದ ಪೂರೈಕೆಯನ್ನು ತೂಗಿಸಿಕೊಂಡು ಹೋಗುತ್ತಿದೆ. ಅನಿವಾರ್ಯವಾಗಿ ಏರಿಸಬೇಕಾಗಿ ಬಂದೊದಗಿದ್ದರೂ, ಕೇಂದ್ರ ಸರ್ಕಾರ ತನ್ನ ಪಾಲಿನ ಅಬಕಾರಿ ಸುಂಕ ಇಳಿಸುವ ಮೂಲಕ ತೈಲಬೆಲೆಯಲ್ಲಿ ಸ್ಥಿರತೆಯಿರುವಂತೆ ನೋಡಿಕೊಳ್ಳುತ್ತಿದೆ. ಆದರೂ ಹೊರ್ಮುಜ್ ಜಲಸಂಧಿಯ ಮೇಲಿನ ಇರಾನ್ ದೇಶದ ನಿಯಂತ್ರಣದಿಂದಾಗಿ ತೈಲಪೂರೈಕೆಯಲ್ಲಿ ವಿಪರೀತ ವ್ಯತ್ಯಯವುಂಟಾಗುತ್ತಿದೆ. ಇಂಧನ ತೈಲಗಳಿಗಾಗಿ ವಿದೇಶಗಳನ್ನೇ ಅವಲಂಬಿಸಬೇಕಾದ ಭಾರತವು ತನ್ನ ನೂರನಲವತ್ತು ಕೋಟಿ ಜನಸಂಖ್ಯೆಗೆ ಬೇಕಾದಷ್ಟು ಇಂಧನತೈಲವನ್ನು ತರುವುದಾದರೂ ಎಲ್ಲಿಂದ? ಎಷ್ಟೇ ದುಡ್ಡು ಕೊಟ್ಟರೂ ತೈಲವನ್ನು ತರುವ ಮಾರ್ಗವನ್ನೇ ಮುಚ್ಚಿದ ಮೇಲೆ ಇಂಧನತೈಲವನ್ನು ಪಡೆದುಕೊಳ್ಳುವ ಮಾರ್ಗ ಯಾರಿಗೂ ತಿಳಿದಿಲ್ಲ. ಹೀಗಿರುವಾಗ ಭಾರತಕ್ಕೆ ಇಂಧನತೈಲದ ಕೊರತೆ ಉಂಟಾಗುತ್ತಿರುವುದನ್ನು ತಪ್ಪಾಗಿ ಅರ್ಥೈಸುತ್ತಾ ಭಾರತದ ಆರ್ಥಿಕಸ್ಥಿತಿ ಹದಗೆಟ್ಟಿದೆ ಎಂದು ಅಪಪ್ರಚಾರ ಮಾಡುತ್ತ, ಭಾರತೀಯರನ್ನು ಮಾನಸಿಕವಾಗಿ ದುರ್ಬಲರನ್ನಾಗಿಸುವವರ ಉದ್ದೇಶ ಏನು ಎಂಬುದು ಯಾರಿಗೂ ತಿಳಿಯದ್ದೇನಲ್ಲ.

ಬದಲಾದ ಸನ್ನಿವೇಶದಲ್ಲಿ ದೇಶದ ಪ್ರಧಾನಿಗಳು ದೇಶದ ಜನತೆಗೆ ಸರಳ ಜೀವನವನ್ನು ನಡೆಸಲು ಕರೆ ಕೊಟ್ಟಿದ್ದಾರೆ. ವಿದೇಶೀ ವಿನಿಮಯದ ಮೇಲೆ ಪ್ರಭಾವ ಬೀರುವ ಚಿನ್ನದ ಖರೀದಿ, ವಿದೇಶ ಪ್ರವಾಸ ಮೊದಲಾದವುಗಳ ಮೇಲೆ ಸ್ವಯಂನಿಯಂತ್ರಣ ಹೇರಿಕೊಳ್ಳಲು ಅವರು ಸಲಹೆ ನೀಡಿದ್ದಾರೆ. ಆಹಾರತೈಲದ ಉಪಯೋಗವನ್ನು ಕಡಿತಗೊಳಿಸುವುದಕ್ಕೆ ತಿಳಿಸುತ್ತಾ, ಸಾರ್ವಜನಿಕ ಸಾರಿಗೆಗಳ ಬಳಕೆಯನ್ನು ಹೆಚ್ಚಿಸಲು ವಿನಂತಿಸಿಕೊಂಡಿದ್ದಾರೆ. ಒಬ್ಬ ಪ್ರಧಾನಿಯಾಗಿ, ಮುಂದಿನ ದಿನಗಳ ಆಪತ್ತನ್ನು ಎದುರಿಸಲು ತನ್ನ ದೇಶದ ಜನರಿಗೆ ಸ್ವಯಂ ನಿಯಂತ್ರಣ ಹೇರಿಕೊಳ್ಳಲು ಮನವಿ ಮಾಡಿಕೊಂಡಿರುವುದು ಎಲ್ಲ ದೇಶಭಕ್ತರೂ ಸ್ವಾಗತಿಸುವ ಅಂಶವೇ ಆಗಿದೆ. ಅವರೆಲ್ಲೂ ಯಾವುದನ್ನೂ ಮಾಡುವುದು ಬೇಡವೆಂದು ಆದೇಶವನ್ನು ನೀಡಿಲ್ಲ. ಆದರೆ ಕೊರೋನಾ ಸಂದರ್ಭದಲ್ಲಿ ಮಾಡಿದಂತೆ ಸರ್ಕಾರವೇ ಎಲ್ಲವನ್ನೂ ನಿಷೇಧಿಸಿ, ನಿಯಂತ್ರಣ ಹೇರುವ ಸಂದರ್ಭ ಬರದೇ ಇರಲಿ ಎಂಬ ಆಶಯ ಅವರ ಮಾತಿನಲ್ಲಿ ಧ್ವನಿಸುತ್ತದೆ. ಪ್ರಪಂಚದ ಎರಡನೆಯ ಅತಿ ಹೆಚ್ಚು ಜನಸಂಖ್ಯೆಯ ದೇಶದ ಜನರುಳ್ಳ ಭಾರತವು ಮನಸ್ಸು ಮಾಡಿದರೆ, ಸ್ವಯಂ ನಿಯಂತ್ರಣ ಹೇರಿಕೊಂಡರೆ ಮುಂದಿನ ಆಪತ್ತನ್ನು ಸುಲಭವಾಗಿ ಎದುರಿಸಬಹುದಾಗಿದೆ. ಯಾಕೆಂದರೆ, ಭಾರತವೀಗ ಎಲ್ಲ ರೀತಿಯ ಪರ್ಯಾಯ ವ್ಯವಸ್ಥೆಗೂ ಈ ಹಿಂದಿಗಿಂತ ಹೆಚ್ಚು ತೆರೆದುಕೊಂಡಿದೆ. ಅರ್ಥಾತ್, ಪರ್ಯಾಯ ಇಂಧನ ಮೂಲಗಳ ಬಳಕೆಯ ಮೂಲಕ ಇಂಧನ ತೈಲದ ಮೇಲಿನ ಅವಲಂಬನೆಯನ್ನು ಆದಷ್ಟು ಕಡಿಮೆ ಮಾಡುತ್ತಲೇ ಬಂದಿದೆ. ಈಗಾಗಲೇ ಪೆಟ್ರೋಲ್ ಹಾಗೂ ಡೀಸೆಲ್‌ನಲ್ಲಿ ಇಪ್ಪತ್ತು ಪ್ರತಿಶತ ಇಥೆನಾಲ್ ಮಿಶ್ರಣವನ್ನು ಭಾರತವು ಅನುಸರಿಸುತ್ತಿದೆ. ಆರಂಭದಲ್ಲಿ ಇದು ಪೂರ್ವಸಿದ್ಧತೆಯಿಲ್ಲದೇ ಕೈಗೊಂಡ ತಪ್ಪು ನಿರ್ಣಯವೆಂಬ ಅಭಿಪ್ರಾಯವನ್ನು ಮೂಡಿಸಲು ಯತ್ನಿಸಲಾಯಿತಾದರೂ, ಈಗಿನ ಸ್ಥಿತಿಯಲ್ಲಿ ಈ ನಿರ್ಣಯ ಆದೆಷ್ಟು ಮುಖ್ಯವಾದುದು ಎಂಬುದು ಈಗ ಅರಿವಿಗೆ ಬರುತ್ತಿದೆ.

ಇಥೆನಾಲ್ ಬಳಕೆಯಿಂದಾಗಿ ನಿತ್ಯವೂ ಇಪ್ಪತ್ತು ಪ್ರತಿಶತ ಇಂಧನತೈಲದ ನೈರ್ಭರ್ಯ ಕಡಿಮೆಯಾಗಿದೆ. ಇಥೆನಾಲ್ ಉತ್ಪಾದನೆ ಕೂಡ ಹೆಚ್ಚಿನ ಪ್ರಮಾಣದಲ್ಲಿ ಭಾರತದಲ್ಲಿಯೇ ಮುಂದಿನ ದಿನಗಳಲ್ಲಿ ಆಗಬಹುದು. ಈ ನಡುವೆ ಕೇಂದ್ರಸರ್ಕಾರ ಕಳೆದ ಒಂದು ದಶಕದಲ್ಲಿ ಸೋಲಾರ್ ವಿದ್ಯುತ್ತಿನ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚುವಂತೆ ಮಾಡಿದೆ. ಪೀ.ಎಲ್.ಐ ಯೋಜನೆಯ ಮೂಲಕ 24,000 ಕೋಟಿಗಳಷ್ಟು ಹೂಡಿಕೆಯ ದ್ವಾರಾ ಸೋಲಾರ್ ಪ್ಯಾನೆಲ್, ಸೆಲ್ ಮೊದಲಾದವುಗಳ ಉತ್ಪಾದನೆಗೆ ಒತ್ತು ನೀಡಿದೆ. ಸೋಲಾರ್ ವಿದ್ಯುತ್ತಿನ ಉತ್ಪಾದನೆಯ ಪ್ರಮಾಣ ಕೂಡ 2014ರಲ್ಲಿ ಇದ್ದ 2.3 ಗಿಗಾವ್ಯಾಟ್‌ನಿಂದ 2025ರಲ್ಲಿ 100 ಗಿಗಾವ್ಯಾಟ್‌ನಷ್ಟು ಹೆಚ್ಚಿದೆ. ಹೀಗೆ ಪರ್ಯಾಯ ಇಂಧನ ಮೂಲಗಳ ಬಳಕೆಯಲ್ಲಿನ ಹೆಚ್ಚಳವನ್ನು ಸಾಧಿಸುವ ಮೂಲಕ ಆತ್ಮನಿರ್ಭರವಾಗಲು ಭಾರತವು ಈ ಹಿಂದಿಗಿಂತ ಹೆಚ್ಚು ಶ್ರಮಿಸುತ್ತಿದೆ. ಒಂದು ವೇಳೆ ಭಾರತವು ಒಂದು ದಶಕದ ಹಿಂದೆ ಇದ್ದ ಸ್ಥಿತಿಯಲ್ಲೇ ಇದ್ದಿದ್ದರೆ ಇಂದು ಇಷ್ಟು ನಿರಾತಂಕವಾಗಿ ಇರಲು ಸಾಧ್ಯವಾಗುತ್ತಿರಲಿಲ್ಲ. ಈ ದೃಷ್ಟಿಯಿಂದ ನಾಗರಿಕರಾಗಿ ನಮ್ಮದೂ ಕರ್ತವ್ಯವಿದೆ. ಸರ್ಕಾರದ ವೇಗಕ್ಕೆ ಪ್ರಜೆಗಳೂ ಕೂಡ ತಮ್ಮ ಬಳಕೆ ಮತ್ತು ವ್ಯಯಕ್ಕೆ ಕಡಿವಾಣ ಹಾಕಿಕೊಳ್ಳಬೇಕಾಗುತ್ತದೆ. ಎಲ್ಲರ ಅಗತ್ಯವನ್ನು ತೀರಿಸುವ ಸಾಮರ್ಥ್ಯವಷ್ಟೇ ಪ್ರಕೃತಿಗಿದೆಯೇ ಹೊರತೂ, ಎಲ್ಲರ ಬಯಕೆಗಳನ್ನು ಪೂರೈಸುವಷ್ಟಲ್ಲ ಎಂಬ ಮಾತನ್ನು ನಾವೆಲ್ಲರೂ ನೆನಪಿಸಿಕೊಳ್ಳುವ ಸಂದರ್ಭ ಮತ್ತೆ ಹುಟ್ಟಿಕೊಂಡಿದೆ.

ದೇಶವನ್ನು ಭೋಗಭೂಮಿ ಎಂದು ಬಗೆಯುವುದು ನಮ್ಮ ಸಂಸ್ಕೃತಿಯಲ್ಲ. ನಾವು ಪ್ರಕೃತಿಯ ಆರಾಧಕರು. **ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ** ಎಂಬ ಗೀತಾವಾಕ್ಯದಂತೆ, ಪ್ರಕೃತಿಯನ್ನು ಉಳಿಸಿಕೊಳ್ಳುತ್ತಾ ಅದನ್ನು ಬಳಸಿಕೊಳ್ಳುವ ದಾಯಿತ್ವ ನಮ್ಮ ಮೇಲಿದೆ. ಬಳಸುವವನಿಗೆ ಉಳಿಸುವ ದಾಯಿತ್ವವು ಕೂಡ ಜೊತೆಯಲ್ಲೇ ಬರುತ್ತದೆ. ಇದನ್ನೇ ನಾಗರಿಕಪ್ರಜ್ಞೆ ಎನ್ನಲಾಗುತ್ತದೆ. ಜಾಗತಿಕ ಬಿಕ್ಕಟ್ಟು ಒದಗಿದ್ದು ಕೂಡ ವಿಶ್ವದ ನಾಯಕರ ದುರಾಸೆ ಮತ್ತು ಪ್ರತಿಷ್ಠೆಯ ಕಾರಣಕ್ಕೆ ಎಂಬುದು ನಿಜವಾದರೂ, ಈ ಸ್ಥಿತಿಯನ್ನು ದಾಟಲು ಮಾತ್ರ ನಾವೆಲ್ಲರೂ ಬಹಳ ಕಷ್ಟಪಡಬೇಕಾಗುತ್ತದೆ. **ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಮಹಾಜನಾಃ** ಎಂಬ ಮಾತಿನಂತೆ ಯಾವುದೋ ದೇಶಗಳು ಯಾವುದೋ ಲಾಭಕ್ಕಾಗಿ ಮಾಡುವ ಯುದ್ಧಗಳಿಂದಾಗಿ ಭಾರತದಂಥ ಸಾತ್ವಿಕ ದೇಶಕ್ಕೂ ಸಂಕಟ ಒದಗುತ್ತಿದೆ. ಇದರ ತೀವ್ರತೆಯನ್ನು ನಾಗರಿಕರೆಲ್ಲರೂ ಸ್ವನಿಯಂತ್ರಣವೆಂಬ ತಪಸ್ಸಿನ ಮೂಲಕ ಮಾತ್ರ ಹಾದುಬರಲು ಸಾಧ್ಯವಿದೆ. ಹಾಗೆಂದೇ ಪ್ರಧಾನಿಯವರು ಕೆಲವು ಸಲಹೆಗಳನ್ನು ನೀಡಿದ್ದಾರೆ. ಒಂದು ವರ್ಷ ಚಿನ್ನವನ್ನು ಕೊಳ್ಳಲೇಬಾರದು ಎಂದಾಗಲೀ, ಸ್ವವಾಹನವನ್ನು ಬಳಸಲೇಬಾರದು ಎಂದಾಗಲೀ ಅವರು ಸುಗ್ರೀವಾಜ್ಞೆ ಹೊರಡಿಸಿಲ್ಲ. ಬದಲಿಗೆ ತಾನು, ತನ್ನ ಸಂಸಾರವೆಂಬ ವ್ಯಷ್ಟಿಸ್ತರದಿಂದ ದೇಶವೆಂಬ ಸಮಷ್ಟಿ ಸ್ತರಕ್ಕೆ ನಮ್ಮ ಆಲೋಚನೆಗಳನ್ನು ಮತ್ತು ಜೀವನಸ್ತರವನ್ನು ಎತ್ತರಿಸಿಕೊಳ್ಳಲು ಅವರು ಕರೆ ಕೊಟ್ಟಿದ್ದಾರೆ ಅಷ್ಟೇ. ದೇಶಪ್ರೇಮಿಗಳಿಗೆ ಇದೊಂದು ಅವಕಾಶವೂ ಹೌದು. ವಸ್ತುತಃ ಅವರು ಕರೆಕೊಟ್ಟಿದ್ದು ಕೂಡ ದೇಶಭಕ್ತರಿಗೆ ಮಾತ್ರ. ಈ ದೇಶ ನನ್ನದು, ಈ ದೇಶದ ಋಣ ನನಗಿದೆ ಎಂದು ಭಾವಿಸುವವರು ಈಗ ಸ್ವನಿಯಂತ್ರಣದ ಮೂಲಕ ದೇಶದ ಸ್ಥಿರತೆಗೆ ಕೊಡುಗೆಯನ್ನು ಸಲ್ಲಿಸಲು ಇದೊಂದು ಸುವರ್ಣಾವಕಾಶ. ಅದು ಬಿಟ್ಟು ಹೆಸರಿನಲ್ಲಿ ಮಾತ್ರ ಗಾಂಧಿಯನ್ನು ಜೋಡಿಸಿಕೊಂಡು, ಚಿಂತನೆ ಮತ್ತು ಜೀವನಶೈಲಿಯಲ್ಲಿ ಸ್ವಾರ್ಥಿಗಳಾದರೆ ಏನುಪಯೋಗ?

ಒಂದು ವರ್ಷ ವಿದೇಶ ಪ್ರವಾಸ ಮಾಡುವ ಬದಲು ಭಾರತದಲ್ಲಿಯೇ ಇರುವ ಐತಿಹಾಸಿಕ ಸ್ಥಳಗಳಿಗೆ ಭೇಟಿ ಕೊಡಬಹುದು. ಆ ಮೂಲಕ ಭಾರತವರ್ಷದ ಭವ್ಯ ಇತಿಹಾಸವನ್ನು ಅರಿತಂತೆಯೂ ಆಗುತ್ತದೆ.

ವಿದೇಶೀ ವಿನಿಮಯದ ಉಳಿಕೆಯೂ ಆಗುತ್ತದೆ. ಜೀವನಕ್ಕೊಂದು ಪ್ರೇರಣೆಯೂ ಸಿಗುತ್ತದೆ. ಅದೇ ರೀತಿ ಸಾರ್ವಜನಿಕ ಸಾರಿಗೆ ಬಳಸುವುದು, ತೈಲವನ್ನು ಕಡಿಮೆ ಉಪಯೋಗಿಸುವುದು ಮೊದಲಾದ ಸಣ್ಣ ಸಣ್ಣ ಪರಿವರ್ತನೆಯ ಮೂಲಕವೂ ದೇಶಕ್ಕೆ ನಾವು ಕೊಡುಗೆಯನ್ನು ಸಲ್ಲಿಸಬಹುದು. ಉಳಿದಂತೆ ರಾಜಕೀಯ ದೃಷ್ಟಿಯಿಂದ ಬೇಕಾದಷ್ಟು ಕುತರ್ಕಗಳನ್ನೂ, ಆಕ್ಷೇಪಗಳನ್ನೂ ಮಾಡುತ್ತಾ ಕಾಲಹರಣ ಮಾಡಬಹುದು. ಆ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಆದರೆ ದೇಶ ಸಂಕಟದಲ್ಲಿದ್ದಾಗ ನೀವು ಯಾವ ರೀತಿ ದೇಶಕ್ಕೆ ಪೂರಕವಾಗಿ ಬದುಕಿದ್ದಿರಿ ಎಂಬುದು ಇತಿಹಾಸದಲ್ಲಿ ದಾಖಲಾಗುತ್ತದೆ. ದೇಶಕ್ಕಾಗಿ ಸರ್ವಸ್ವವನ್ನೇ ಕೊಟ್ಟ, ಬಲಿದಾನವನ್ನೇ ಮಾಡಿದವರ ಹೆಸರನ್ನು ಕೇಳಿರುವ ನಮಗೀಗ ದೇಶಕ್ಕಾಗಿ ಸಣ್ಣ ಪರಿವರ್ತನೆಯನ್ನು ಮಾಡಿಕೊಳ್ಳಲು ಸಾಧ್ಯವಿಲ್ಲವೇ? ಖಂಡಿತ ಸಾಧ್ಯವಿದೆ. ಪ್ರಯತ್ನಿಸೋಣ.

ಕಿರುಸುದ್ದಿ

ಸುಳ್ಯ: ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ

ಸುಳ್ಯ: ದೇವರಾಜ ಅರಸು ನಿಗಮ ವತಿಯಿಂದ ಮಹಿಳೆಯರಿಗೆ ಕೊಡಲ್ಪಡುವ ಹೊಲಿಗೆ ಯಂತ್ರ ವಿತರಣೆ ಕಾರ್ಯಕ್ರಮ ಸೋಮವಾರ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಿತು. ಅರ್ಜಿ ಸಲ್ಲಿಸಿ ಆಯ್ಕೆಗೊಂಡ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಿದ ಶಾಸಕಿ ಭಾಗೀರಥಿ ಮುರುಳ್ಯ, ದೇವರಾಜು ಅರಸು ನಿಗಮದಿಂದ ಸ್ವಉದ್ಯೋಗಕ್ಕೆ ಅರ್ಜಿ ಸಲ್ಲಿದ ಕೆಲವರಿಗೆ ಸಿಕ್ಕಿದ್ದು ಮುಂದೆ ಉಳಿದವರು ಅರ್ಜಿ ಸಲ್ಲಿಸಿದಾಗ ಮಾನದಂಡಗಳಂತೆ ಸಿಗಲಿದೆ. ಮಹಿಳೆಯರು ತಮ್ಮ ಉದ್ಯೋಗದಲ್ಲಿ ಹೊಸತನಗಳನ್ನು ಕಂಡುಕೊಳ್ಳುತ್ತಿದ್ದು, ಅವರ ಉತ್ಪನ್ನಗಳಿಗೆ ಕೇಂದ್ರ ಸರಕಾರ ಸೂಕ್ತ ಮಾರುಕಟ್ಟೆಯನ್ನು ಒದಗಿಸುವ ಕಾರ್ಯ ಮಾಡುತ್ತಿದೆ. ಗ್ರಾಮೀಣ ಉತ್ಪನ್ನಗಳನ್ನು ಮಾರಾಟ ಮಾಡಿ ಆರ್ಥಿಕ ಲಾಭವನ್ನು ಗಳಿಸಲು ಇದು ಸಹಕಾರಿಯಾಗಿದೆ ಎಂದು ಹೇಳಿದರು. ಈ ಸಂದರ್ಭ ಶಾಸಕರ ಸರಕಾರಿ ಆಪ್ತ ಸಹಾಯಕ ಹರೀಶ್ ಹಾಗೂ ಪ್ರಸಾದ್ ಕಾಟೂರ್ ಉಪಸ್ಥಿತರಿದ್ದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಹಾಯಕ ಅಭಿವೃದ್ಧಿ ಅಧಿಕಾರಿ ಜಯಶ್ರೀ ಕಾರ್ಯಕ್ರಮ ನಿರ್ವಹಿಸಿದರು.

ವ್ಯಕ್ತಿಯ ನಿಗೂಢ ಸಾವು

ಬೆಳ್ತಂಗಡಿ : ಇಲ್ಲಿನ ಸರಕಾರಿ ಆಸ್ಪತ್ರೆಯಲ್ಲಿ ಅನಾರೋಗ್ಯವೆಂದು ದಾಖಲಾಗಿದ್ದ ರೋಗಿಯೊಬ್ಬರ ಮೃತದೇಹ ಆಸ್ಪತ್ರೆಯ ವರಾಂಡದಲ್ಲಿ ಕಂಡು ಬಂದಿದ್ದು ಆಸ್ಪತ್ರೆಯಲ್ಲಿನ ನಿರ್ಲಕ್ಷ್ಯದಿಂದ ಈತ ಕುಸಿದು ಬಿದ್ದು ಸಾವನ್ನಪ್ಪಿದ್ದಾನೆ ಎಂಬ ಆರೋಪ ಕೇಳಿ ಬರುತ್ತಿದೆ. ಬೆಳ್ತಂಗಡಿ ತಾಲೂಕು ಸಾರ್ವಜನಿಕ ಸರಕಾರಿ ಆಸ್ಪತ್ರೆಗೆ ಬೆಳ್ತಂಗಡಿ ತಾಲೂಕಿನ ಪುದುವೆಟ್ಟು ಗ್ರಾಮದ ಪೆಲತ್ತಾಜೆ ನಿವಾಸಿ ಅಚ್ಚುತ (42) ಎಂಬವರು ಹೊಟ್ಟೆನೋವು ಎಂದು ಮೇ 10 ರಂದು ಮಧ್ಯಾಹ್ನ ದಾಖಲಾಗಿದ್ದರು. ಇವರು ಮೇ 11 ರಂದು ಬೆಳಗ್ಗೆ 5 ಗಂಟೆಗೆ ಸುಮಾರಿಗೆ ಆಸ್ಪತ್ರೆಯಿಂದ ಹೊರಗಡೆ ಹೋಗಿದ್ದು ಆಸ್ಪತ್ರೆಯ ಹಿಂಭಾಗದ ಡಯಾಲಿಸಿಸ್ ಕೇಂದ್ರದ ಬಳಿ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ. ಸಿಬ್ಬಂದಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸದೆ ಚಿಕಿತ್ಸೆಯಲ್ಲಿದ್ದ ರೋಗಿಯೊಬ್ಬರು ಹೊರ ಹೋಗುವಂತೆ ಮಾಡಿರುವುದು ಸಾವಿಗೆ ಕಾರಣ ಎಂದು ಸಾರ್ವಜನಿಕರು ಆರೋಪ ಮಾಡುತ್ತಿದ್ದಾರೆ. ಮೃತ ವ್ಯಕ್ತಿಯ ಕುಟುಂಬ ಬಡತನದಲ್ಲಿದ್ದು ಪತ್ನಿ ಕೂಲಿ ಕೆಲಸ ಮಾಡುತ್ತಿದ್ದು ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ವ್ಯಕ್ತಿ ಪತ್ತೆ

ಪೆರ್ಲ: ಪೈವಳಿಕೆಯಲ್ಲಿರುವ ತನ್ನ ಸಹೋದರಿಯ ಮನೆಗೆ ತೆರಳಿದ್ದ ವಾಣಿನಗರ ನಿವಾಸಿ ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ವಾಣಿನಗರ ನಿವಾಸಿ ಬೈಲಮೂಲೆ ನಿವಾಸಿ ದಿ.ನಾರಾಯಣ ನಾಯ್ಕರ ಪುತ್ರ ಬಾಲಕೃಷ್ಣ ನಾಯ್ಕ (40) ಮೃತಪಟ್ಟ ವ್ಯಕ್ತಿ. ಬಾಲಕೃಷ್ಣ ನಾಯ್ಕ ಅವರು ಸೋಮವಾರ ಬೆಳಗ್ಗೆ ಪೈವಳಿಕೆ ಬೋಳಂಗಳದಲ್ಲಿರುವ ಸಹೋದರಿಯ ಮನೆಗೆ ತೆರಳಿದ್ದರು. ಬಳಿಕ ಸಮೀಪದ ಶೆಡ್‌ನಲ್ಲಿ ವಿಶ್ರಾಂತಿ ಪಡೆಯುವುದಾಗಿ ತೆರಳಿದ್ದರು. ಆದರೆ ಸಂಜೆ ನೋಡಿದಾಗ ಶೆಡ್‌ನೊಳಗೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾದರು. ರಬ್ಬರ್ ಟ್ಯಾಪಿಂಗ್ ಕೆಲಸ ನಿರ್ವಹಿಸುತ್ತಿದ್ದ ಬಾಲಕೃಷ್ಣನ್ ಅವರು ಅವಿವಾಹಿತರಾಗಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶೈಲೇಶ್ ಕೆ., 'ಕರುಣಾಮೃತ', ಗಾಂಧಿನಗರ, ಕಾವೂರು
2. ಸತೀಶ್ ಪ್ರಭಾಕರ್ ಶೆಟ್ಟಿ, ಕ್ವೀನ್ ಗಾರ್ಡನ್, ವಸಾಯಿ, ಮುಂಬಾಯಿ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
3. ಮೇಘನಾಥ ಪಿ. ಶೆಟ್ಟಿ, ಮಲಾಡ್ (ಇ) ಮುಂಬಾಯಿ– ಕಟೀಲು ಪಿ.ಯು. ಕಾಲೇಜು ವಠಾರ.
4. ಇಂದಿರಾ ಶೆಡ್ತಿ ಮತ್ತು ಫೇಮಿಲಿ, ಪೆರ್ಗುಂಡಿ ಮನೆ, ಪಟ್ಟೆ ಕ್ರಾಸ್, ಏಳಿಂಜೆ.
5. ಡಾ| ಕೀರ್ತನ್ ಹೆಗ್ಡೆ, ಉದಲೆ ಹೌಸ್, ಕಾಂತಾವರ ದೇವಸ್ಥಾನ ವಠಾರದಲ್ಲಿ.
6. ಅಜಿತ್ ಚೌಟ, ಲ್ಯಾಂಡ್ ಮಾರ್ಕ್ ಟವರ್, ದಾದರ್, ಮುಂಬಾಯಿ–ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
7. ಜಯಂತ್, ಚಿತ್ರ ಪೂಜಾರಿ, ಪಿಲಿಂಜ ಮನೆ, ನೆಟ್ಲ, ಗೋಳ್ತಮಜಲು ವಯಾ ಕಲ್ಲಡ್ಕ, ಬಂಟ್ವಾಳ (ತಾ).

ಶ್ರೀ ಧರ್ಮಸ್ಥಳ ಮೇಳ
ಉಪ್ಪಿನಕುದ್ರುವಿನಲ್ಲಿ
ಸುಭಾಷ್ ಮತ್ತು ಮನೆಯವರು, ಅಂಗಡಿಬೆಟ್ಟು ಮನೆ

ಶ್ರೀ ಸಾಲಿಗ್ರಾಮ ಮೇಳ
ಹೊಸಕೊಪ್ಪ ಕೋಟೀಶ್ವರ ದೇವಸ್ಥಾನದಲ್ಲಿ
ವೀರ ಬರ್ಬರೀಕ-ತರಣಸೇನ

ಶ್ರೀ ಪಾವಂಜೆ ಮೇಳ
ನಾಗವೃಜ ಕ್ಷೇತ್ರ ಪಾವಂಜೆಯಲ್ಲಿ
ಸಮಗ್ರ ಭೀಷ್ಮ



ಕರ್ನಾಟಕ ಸರಕಾರದ ಸಣ್ಣ ನೀರಾವರಿ ಸಚಿವ ಬೋಸರಾಜು ಅವರು ಮಂಗಳವಾರ ಸಂಜೆ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭೇಟಿ ನೀಡಿದರು.ಅವರನ್ನು ಶಾಸಕಿ ಭಾಗೀರಥಿ ಮುರುಳ್ಯ ಮತ್ತು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್.ಎಸ್.ಇಂಜಾಡಿ ಸ್ವಾಗತಿಸಿದರು. ದೇವಳದ ಅರ್ಚಕ ರಾಜೇಶ್ ನಡ್ಯಂತಿಲ್ಲಾಯ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅಶೋಕ್ ನೆಕ್ರಾಜೆ, ಡಾ. ರಘು, ಪ್ರಮುಖರಾದ ಕೃಷ್ಣಪ್ಪ, ಎಇಒ ಎಸ್.ಜೆ.ಯೇಸುರಾಜ್, ಶಿಷ್ಟಾಚಾರ ವಿಭಾಗದ ಪ್ರಮೋದ್ ಕುಮಾರ್. ಎಸ್, ನೇಮಿಚಂದ್ರ ಉಪಸ್ಥಿತರಿದ್ದರು.

ಮೇ 15ರಂದು ಕೊಂಕಣಿ ಸಾಹಿತಿ ಎಚ್.ಎಂ. ಪೆರ್ನಾಲ್ ಅಭಿನಂದನಾ ಸಮಾರಂಭ

ಮಂಗಳೂರು: 2025ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮಂಗಳೂರಿನ ಕೊಂಕಣಿ ಸಾಹಿತಿ ಎಚ್.ಎಂ. ಪೆರ್ನಾಲ್ (ಹೆನ್ರಿ ಮೆಂಡೋನ್ಸಾ) ಅವರ ಅಭಿನಂದನಾ ಸಮಾರಂಭ ಮೇ 15ರಂದು ಸಂಜೆ 5.45ಕ್ಕೆ ನಗರದ ಪುರಭವನದಲ್ಲಿ ನಡೆಯಲಿದೆ.

ಸಂಜೆ 5.45ಕ್ಕೆ ಉಸ್ತಾದ್ ರಫೀಕ್ ಖಾನ್ ಮತ್ತು ಅವರ ತಂಡದಿಂದ 'ಸಿತಾರ್ ಫ್ಯೂಷನ್' ಎಂಬ ವಿಶಿಷ್ಟ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸಂಜೆ 6.30ಕ್ಕೆ ಎಡ್ಡಿ ಸಿಕ್ವೇರ ಮತ್ತು ಮುಹಮ್ಮದ್ ಮುಆದ್ ಜಿ.ಎಂ. ಅವರಿಂದ ಎಚ್.ಎಂ. ಪೆರ್ನಾಲ್ ಅವರ ಕವಿತೆಗಳ ಸಾದರೀಕರಣದ ಮೂಲಕ ಸುಂದರವಾದ ಕವಿತಾ ಸಂಭ್ರಮ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಸಂಜೆ 7ಕ್ಕೆ 'ಜಿವಿತಾಚೊ, ಸಾಹಿತ್ಯಾಚೊ ಸಂಭ್ರಮ್' ಅಂಗವಾಗಿ ಶಕುಂತಳಾ ಆರ್. ಕಿಣಿ ಮತ್ತು ವಿಲ್ಸನ್ ಕಟೀಲ್ ಅವರು ಎಚ್.ಎಂ. ಅವರೊಂದಿಗೆ ವಿಶೇಷ ಸಂವಾದ ನಡೆಸಲಿದ್ದಾರೆ ಎಂದು ಅಭಿನಂದನಾ ಸಮಿತಿ ಸಂಚಾಲಕ ಮೆಲ್ವಿನ್ ರೋಡ್ರಿಗಸ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



'ಅಭಿನಂದನ್ ಸಂಭ್ರಮ' ಸಂಜೆ 7.30ಕ್ಕೆ ಆರಂಭವಾಗಲಿದೆ. ಅನಿವಾಸಿ ಉದ್ಯಮಿ ಹಾಗೂ ದಾನಿ ಮೈಕಲ್ ಡಿಸೋಜ ಅಧ್ಯಕ್ಷತೆ ವಹಿಸುವರು. ಕವಿ ಹಾಗೂ ಸಾಹಿತಿ ಜಯಂತ್ ಕಾಯ್ಕಿಣಿ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಎಂಡಿವಿಕೆ–ಎಚ್ಚೆಮ್ ಅಭಿನಂದನ್ ಸಮಿತಿ ಹಾಗೂ ವಿವಿಧ ಕೊಂಕಣಿ ಸಂಘ–ಸಂಸ್ಥೆಗಳ ವತಿಯಿಂದ ಪೆರ್ನಾಲ್ ಅವರಿಗೆ ಸನ್ಮಾನ ನಡೆಯಲಿದೆ ಎಂದರು.

ಎಚ್.ಎಂ. ಪೆರ್ನಾಲ್ ಅವರ ಸಾಹಿತ್ಯ ವಿಮರ್ಶೆ ಕೃತಿ 'ಕೊಂಕಣಿ ಕಾವ್ಯೆಂ: ರುಪಾ ಆನಿ ರೂಪಕಾಂ ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಅವರು ಕಥೆಗಾರ, ಕವಿ, ವಿಮರ್ಶಕ, ಪ್ರಕಾಶಕ, ಪತ್ರಕರ್ತರಾಗಿ ಛಾಪು ಮೂಡಿಸಿದ್ದಾರೆ ಎಂದರು.

ಅಭಿನಂದನಾ ಸಮಿತಿಯ ಸದಸ್ಯರಾದ ಎಡ್ಡಿ ಸಿಕ್ವೇರ, ಟೈಟಸ್ ನೊರೊನ್ಹಾ ಉಪಸ್ಥಿತರಿದ್ದರು.

ವಿವೇಕಾನಂದ ಲಾ ಕಾಲೇಜಿನಲ್ಲಿ ನಡೆದ 3ನೇ ರಾಷ್ಟ್ರ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆ

ಹುಬ್ಬಳ್ಳಿಯ ವಿಶ್ವವಿದ್ಯಾನಿಲಯ ಚಾಂಪಿಯನ್

ಪುತ್ತೂರು: ಮೂರು ದಿನಗಳ ಕಾಲ ಪುತ್ತೂರು ನೆಹರುನಗರ ವಿವೇಕಾನಂದ ಕಾನೂನು ಕಾಲೇಜಿನ ಆವರಣದಲ್ಲಿ ನಡೆದ 3ನೇ ರಾಷ್ಟ್ರ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ (ಟೀಮ್ ವಿಭವ) ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಪಟ್ಟ ಪಡೆದುಕೊಂಡರೆ, ಬೆಂಗಳೂರಿನ ವಿಶ್ವವಿದ್ಯಾನಿಲಯ ಕಾನೂನು ಕಾಲೇಜ್ (ಪ್ರಭವ) ದ್ವಿತೀಯ ಸ್ಥಾನ ಪಡೆದು ರನ್ನರ್ಸ್ ಅಪ್ ಆಗಿದೆ.

ವೃತ್ತಿಗೂ ಆಯ್ಕೆ ಮುಖ್ಯ

ಮುಂದೆ ವಕೀಲ ವೃತ್ತಿಗೆ ಕಾಲಿಡಲಿರುವ ಕಾನೂನು ವಿದ್ಯಾರ್ಥಿಗಳು ಅನುಸರಿಸಬೇಕಾದ ಒಂದು ಉತ್ತಮ ಮಾರ್ಗವೆಂದರೆ ಅದು ಒಬ್ಬ ಅತ್ಯುತ್ತಮ ಸೀನಿಯರ್ ಅನ್ನು ಆಯ್ಕೆ ಮಾಡುವುದಾಗಿದೆ. ಈ ಮೂಲಕ ವೃತ್ತಿಯನ್ನು ಆರಂಭಿಸುವುದರಿಂದ ವಕೀಲ ವೃತ್ತಿಯ ಭವಿಷ್ಯವನ್ನು ಅದು ಸದೃಢಗೊಳಿಸುತ್ತದೆ ಎಂದು ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅಣಕು ನ್ಯಾಯಾಲಯ ಸ್ಪರ್ಧೆಯ ಅಂತಿಮ ಸ್ಪರ್ಧೆಯ ಮುಖ್ಯ ತೀರ್ಪುಗಾರರಾಗಿದ್ದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ನಗದು ಬಹುಮಾನ, ಟ್ರೋಫಿಯನ್ನು ವಿತರಿಸಿ ಮಾತನಾಡಿದರು. ಇಂದು ಕೃತಕ ಬುದ್ಧಿಮತ್ತೆ ಎಂಬುದು ಪ್ರತಿಯೊಂದು ಕ್ಷೇತ್ರದಲ್ಲೂ ತನ್ನ ಪ್ರಾಬಲ್ಯ ಸ್ಥಾಪಿಸುತ್ತಿದೆ. ಆದರೆ, ಕೃತಕ ಬುದ್ಧಿಮತ್ತೆ (ಎ.ಐ.) ಕೇವಲ ಮಾಹಿತಿ ಪಡೆಯಲು ಬಳಸುವ ಒಂದು



ಸಾಧನವೇ ಹೊರತು, ಅದು ಮಾನವನ ಮೆದುಳಿಗೆ ಬದಲಿಯಲ್ಲ. ತಂತ್ರಜ್ಞಾನಕ್ಕೆ ದಾಸರಾಗಿ ನಿಮ್ಮ ಸೃಜನಶೀಲತೆ ಮತ್ತು ಸ್ವತಂತ್ರ ಆಲೋಚನೆಯನ್ನು ಕಳೆದುಕೊಳ್ಳಬೇಡಿ. ನಿಮಗೆ ಸಂಪೂರ್ಣ ಅರಿವಿಲ್ಲದ ವಿಷಯಗಳ ಬಗ್ಗೆ ತೀರ್ಪು ನೀಡಲು ಹೋಗಬೇಡಿ ಎಂದು ಅವರು ತಿಳಿಸಿದರು.

ಮೌನವೂ ಭ್ರಷ್ಟಾಚಾರದ ಭಾಗ

ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ವಿ. ಶ್ರೀಶಾನಂದ ಮಾತನಾಡಿ, ಈ ವೃತ್ತಿಯಲ್ಲಿ ಯಶಸ್ವಿಯಾಗಲು ಕೇವಲ ಜ್ಞಾನವಲ್ಲ, ತೀವ್ರವಾದ ಉತ್ಸಾಹ ಮತ್ತು ವೃತ್ತಿಪರ ಶೈಲಿ ಮುಖ್ಯ ಎಂದು ಹೇಳಿದರು. ಕಾನೂನು ತಜ್ಞನಾಗಿ ಸೇವೆ ಮಾಡಲು ಇರುವ ಒಂದು ಉದಾತ್ತ ವೃತ್ತಿಯಾಗಿದ್ದು, ವಕೀಲರು ಸಮಾಜದಲ್ಲಿ ಮಾದರಿಯಾಗಿ ನಡೆದುಕೊಳ್ಳಬೇಕು. ಇಂದಿನ ದಿನಗಳಲ್ಲಿ ಜಗತ್ತು ಹಿಂಸೆಯಿಂದ ಬಳಲುತ್ತಿಲ್ಲ, ಬದಲಾಗಿ ಅನೇಕರ ಮೌನದಿಂದ ಬಳಲುತ್ತಿದೆ. ಹಾಗಾಗಿ ಅನ್ಯಾಯದ ವಿರುದ್ಧ ಮೌನವಾಗಿರುವುದು ಕೂಡ ಭ್ರಷ್ಟಾಚಾರದ ಒಂದು ಭಾಗವಾಗಿದೆ. ಹಾಗಾಗಿ ಸತ್ಯದ ಪರವಾಗಿ ಧ್ವನಿ ಎತ್ತಬೇಕು ಎಂದು ಹೇಳಿದರು.

ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ತ್ಯಾಗರಾಜ ಎನ್. ಇನಾವಲ್ಲಿ ಮಾತನಾಡಿ, ವಕೀಲರು ಹಾಗೂ ನ್ಯಾಯಾಂಗದ ಮೇಲೆ ಜನರಿಗೆ ನಂಬಿಕೆ ಇದೆ. ಹೀಗಾಗಿ ಯುವ ಕಾನೂನು ವಿದ್ಯಾರ್ಥಿಗಳು ಎಲ್ಲಾ ಕ್ಷೇತ್ರಗಳ ಬಗ್ಗೆಯೂ ತಮ್ಮ ಜ್ಞಾನವನ್ನು ವಿಸ್ತರಿಸಿಕೊಂಡು ಸಮಾಜಕ್ಕೆ ಮಾದರಿಯಾಗಬೇಕು. ಅದಕ್ಕೆ ಇಂತಹ ಅಣಕು ನ್ಯಾಯಾಲಯ ಸ್ಪರ್ಧೆಗಳು ಉಪಕಾರಿ ಆಗಲಿದೆ ಎಂದರು.

ನ್ಯಾಯಶಾಸ್ತ್ರದ ಅಡಿಪಾಯವಾಗಿರಬೇಕು

ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಹಾಗೂ ಅಖಿಲ ಭಾರತೀಯ ಅಧಿವಕ್ತ ಪರಿಷತ್‌ನ ಅಧ್ಯಕ್ಷ ಶ್ರೀನಿವಾಸ್ ಮೂರ್ತಿ ಕೊಂಡಾ ಮಾತನಾಡಿ, ನಾವು ಕಾನೂನು ಮತ್ತು ನ್ಯಾಯದ ಬಗ್ಗೆ ಮಾತನಾಡುವುದಾದರೆ ಕಾನೂನಿನ ನಾಲ್ಕು ಚೌಕಟ್ಟಿನಲ್ಲಿ ಕಾನೂನೇ ನ್ಯಾಯವಾಗಿದೆ. ಕಾನೂನು ಎಂಬುದು ಧರ್ಮದ ಅಕ್ಷರ ಮತ್ತು ನ್ಯಾಯ ಎಂಬುದು ಧರ್ಮದ ಆತ್ಮ. ಸಂಸ್ಕೃತಿ ಮತ್ತು ನಾಗರಿಕತೆಯ ಪರಿಕಲ್ಪನೆಯೇ ರಾಷ್ಟ್ರಪ್ರಜ್ಞೆಯ ಆಧಾರವಾಗಿದೆ. ನಮ್ಮ ಸಂಸ್ಕೃತಿ ಮತ್ತು ನಾಗರಿಕತೆಯೇ ನಮ್ಮ ನ್ಯಾಯಶಾಸ್ತ್ರದ ಅಡಿಪಾಯವಾಗಿರಬೇಕು ಎಂದರು.

ಹೈಕೋರ್ಟ್ ಹಿರಿಯ ವಕೀಲ ಹಾಗೂ ವಿವೇಕಾನಂದ ಕಾನೂನು ಕಾಲೇಜಿನ ಹಿರಿಯ ವಿದ್ಯಾರ್ಥಿ ರಾಜಶೇಖರ್ ಹಿಲ್ಯಾರ್, ಪುತ್ತೂರು ವಕೀಲರ ಸಂಘದ ಅಧ್ಯಕ್ಷ ಜಗನ್ನಾಥ ರೈ ಜಿ., ಸಂಸ್ಥೆಯ ಸಂಚಾಲಕ ವಿಜಯನಾರಾಯಣ ಕೆ.ಎಂ., ಕೋರ್ ಕಮಿಟಿ ನಿರ್ದೇಶಕ ಮನೋಹರ್ ಕೆ.ವಿ., ವಿವೇಕಾನಂದ ಕಾನೂನು ಕಾಲೇಜಿನ ಕಾನೂನು ಅಧ್ಯಯನ ವಿಭಾಗದ ನಿರ್ದೇಶಕ ಡಾ.ಬಿ.ಕೆ. ರವೀಂದ್ರ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪಾವನ ಪ್ರಾರ್ಥಿಸಿದರು. ಕಾರ್ಯಕ್ರಮ ಸಂಯೋಜಕಿ ಸಂಗೀತ ವರದಿ ನೀಡಿದರು. ವಿದ್ಯಾರ್ಥಿಗಳಾದ ದಿಲೀಪ್ ಬಿ.ಎಸ್., ದೇವಿಪ್ರಸಾದ್ ನ್ಯಾಯಾಧೀಶರನ್ನು ಪರಿಚಯಿಸಿದರು. ಪ್ರಾಂಶುಪಾಲೆ ಅಕ್ಷತಾ ಪಿ.ಎಸ್. ಸ್ವಾಗತಿಸಿ, ಸಂಯೋಜಕಿ ಸುಭಾಷಿಣಿ ಜಿ. ವಂದಿಸಿದರು. ವಿದ್ಯಾರ್ಥಿನಿ ವೈಷ್ಣವಿ ಕಾರ್ಯಕ್ರಮ ನಿರ್ವಹಿಸಿದರು.

ಸನ್ಮಾನದ ಗೌರವ

ಸಂಗ್ರಹ ಸಾಕ್ಷ್ಯಗಳ ಸುಧಾರಣಾ ಸಲಹಾ ಸಮಿತಿ ಸದಸ್ಯರಾಗಿ ಸುಪ್ರೀಂ ಕೋರ್ಟ್‌ನಿಂದ ನೇಮಕಗೊಂಡಿರುವ ಹೈಕೋರ್ಟ್ ಹಿರಿಯ ವಕೀಲ ಇಳಂತಿಲ ನಿವಾಸಿ ರಾಜಶೇಖರ್ ಹಿಲ್ಯಾರ್ ಮತ್ತು ಪಿಎಚ್‌ಡಿ ಪದವಿ ಪಡೆದ ವಿವೇಕಾನಂದ ಕಾನೂನು ಕಾಲೇಜಿನ ಪ್ರಾಂಶುಪಾಲೆ ಅಕ್ಷತಾ ಎ.ಪಿ. ಅವರನ್ನು ನ್ಯಾಯಾಧೀಶರು ಸನ್ಮಾನಿಸಿದರು.

ಪ್ರಶಸ್ತಿ ವಿಜೇತರ ಪಟ್ಟಿ

ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಪಟ್ಟ ಪಡೆದುಕೊಂಡ ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿವಿ (ಟೀಮ್ ವಿಭವ)ಗೆ ರೂ.30 ಸಾವಿರ ನಗದು ಮತ್ತು ಟ್ರೋಫಿ, ರನ್ನರ್ಸ್ ಅಪ್ ಬೆಂಗಳೂರಿನ ವಿಶ್ವವಿದ್ಯಾನಿಲಯ ಕಾನೂನು ಕಾಲೇಜ್ (ಪ್ರಭವ) ತಂಡಕ್ಕೆ ರೂ.20 ಸಾವಿರ ನಗದು ಮತ್ತು ಟ್ರೋಫಿ ವಿತರಿಸಲಾಯಿತು. ಅಭಿಮನ್ಯು ಪ್ರಶಸ್ತಿಯನ್ನು ಬೆಂಗಳೂರಿನ ಬಿಎಂಎಸ್ ಕಾಲೇಜ್, ವಿವೇಕಾನಂದ ಕಾಲೇಜ್ ಆಫ್ ಲಾ, ಸಿಬಿಆರ್ ಶಿವಮೊಗ್ಗ, ಸರಸ್ವತಿ ಕಾನೂನು ಕಾಲೇಜ್ ಚಿತ್ರದುರ್ಗ, ಮೈಸೂರು ವಿಶ್ವವಿದ್ಯಾಲಯ ಪಡೆದುಕೊಂಡಿತು. ಅತ್ಯುತ್ತಮ ಸಂಶೋಧಕ ಪ್ರಶಸ್ತಿಯನ್ನು ಮಂಗಳೂರಿನ ಎಸ್‌ಡಿಎಂ ಕಾನೂನು ಕಾಲೇಜ್, ಅತ್ಯುತ್ತಮ ವಾದ ಪತ್ರ ಪ್ರಶಸ್ತಿಯನ್ನು ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ಮಹಾವಿದ್ಯಾಲಯ, ಅತ್ಯುತ್ತಮ ಮಹಿಳಾ ನ್ಯಾಯವಾದಿ ಪ್ರಶಸ್ತಿಯನ್ನು ಬೆಂಗಳೂರಿನ ವಿಶ್ವವಿದ್ಯಾಲಯ ಕಾನೂನು ಕಾಲೇಜ್, ಅತ್ಯುತ್ತಮ ಪುರುಷ ನ್ಯಾಯವಾದಿ ಪ್ರಶಸ್ತಿಯನ್ನು ಮೈಸೂರಿನ ಜೆಎಸ್ ಎಸ್ ಕಾನೂನು ಕಾಲೇಜ್ ಪಡೆದುಕೊಂಡಿತು.

ಎಂಆರ್‌ಪಿಎಲ್ ಪ್ರಾಯೋಜಕತ್ವದ ನಾಲ್ಕನೇ ಶ್ರಮದಾನ

ಸ್ವಚ್ಛತೆ ದಿನನಿತ್ಯದ ಆಚರಣೆಯಾಗಲಿ

ಸುರತ್ಕಲ್: ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ದಿನನಿತ್ಯದ ಆಚರಣೆಯಾಗಲಿ ಎಂದು ನಿವೃತ್ತ ಹಿರಿಯ ಬ್ಯಾಂಕ್ ಅಧಿಕಾರಿ ಕೃಷ್ಣ ಕೆ. ಪೂಜಾರಿ ಹೇಳಿದರು.

ಪ್ರಸ್ತುತ ವಾಹನದಲ್ಲಿ ಓಡಾಡುವ ಜನ ರಸ್ತೆ ಬದಿಯಲ್ಲಿ ತ್ಯಾಜ್ಯ ಎಸೆದು ಹೋಗುವುದರಿಂದಾಗಿ ಪರಿಸರ ಹಾಳಾಗುತ್ತಿದ್ದು ಅಂತವರ ವಿರುದ್ಧ ಕಠಿಣ ಕ್ರಮದ ಅಗತ್ಯವಿದೆ. ಸಂಘ ಸಂಸ್ಥೆಗಳು ಸಮಾನ ಮನಸ್ಕರು, ಸಜ್ಜನರು ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಇತರರಿಗೂ ಮಾದರಿಯಾಗಬೇಕೆಂದರು. ಅವರು ಎಂಆರ್‌ಪಿಎಲ್ ಪ್ರಾಯೋಜಕತ್ವದೊಂದಿಗೆ ವಿವಿಧ ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ನಡೆಯುವ ಸ್ವಚ್ಛ ಸುರತ್ಕಲ್ ಅಭಿಯಾನ –2026ರ ನಾಲ್ಕನೇ ಶ್ರಮದಾನವನ್ನು ಕುಳಾಯಿ ಪರಿಸರದಲ್ಲಿ ಉದ್ಘಾಟಿಸಿ ಮಾತನಾಡುತ್ತಿದ್ದರು.



ರೋಟರಿ ಕ್ಲಬ್ ಬೈಕಂಪಾಡಿ, ಮಹಿಳಾ ಮಂಡಲ ಕುಳಾಯಿ, ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಕುಳಾಯಿ ಇದರ ಸಹಕಾರದಲ್ಲಿ ನಡೆದ ಸ್ವಚ್ಛತಾ ಶ್ರಮದಾನದಲ್ಲಿ ರೋಟರಿ ಕ್ಲಬ್ ಬೈಕಂಪಾಡಿ ಅಧ್ಯಕ್ಷ ದಿನೇಶ್ ಎಲ್. ಬಂಗೇರ, ಬಿ. ಬಿ. ರೈ, ಮಹೇಶ್ ಕುಮಾರ್, ಯೋಗೀಶ್ ನಾಯಕ್, ನಿತಿನ್ ಪ್ರಕಾಶ್, ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಕುಳಾಯಿ ಇದರ ಕೆ. ಪಿ. ಚಂದ್ರಶೇಖರ್, ಯೋಗೀಶ್ ಸನಿಲ್, ಚಂದ್ರಶೇಖರ್ ಎನ್. ಶೆಟ್ಟಿ. ದಿನೇಶ್ ದೇವಾಡಿಗ, ರತನ್ ಕುಮಾರ್, ಲಕ್ಷ್ಮಣ ಸಾಲಿಯಾನ್, ಭಾಸ್ಕರ ಅಮೀನ್. ವನಿತಾ ಯಶವಂತ್. ದೇವದಾಸ್, ಜಗನ್ನಾಥ್ ಶೆಟ್ಟಿ ,ಮುತ್ತಣ್ಣ, ಮಹಿಳಾ ಮಂಡಳಿಯ ಅಧ್ಯಕ್ಷರಾದ ರೇವತಿ ನವೀನ್, ಉಪಾಧ್ಯಕ್ಷೆ ದೇವಕಿ, ಮಾಜಿ ಅಧ್ಯಕ್ಷೆ ಮೀನಾಕ್ಷಿ ದೇವದಾಸ್ ನೇತೃತ್ವದಲ್ಲಿ ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿ ಹಾಗೂ ಕುಳಾಯಿ ವಿದ್ಯಾನಗರ ರಸ್ತೆಯಲ್ಲಿ ಸ್ವಯಂಸೇವಕರು ಸ್ವಚ್ಛತಾ ಶ್ರಮದಾನದಲ್ಲಿ ತೊಡಗಿಸಿಕೊಂಡರು.

ಸ್ವಯಂಸೇವಕರು ಪರಿಸರದ ಅಂಗಡಿ, ಮನೆ ಮಾಲೀಕರಿಗೆ ತಮ್ಮ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕಾದ ಅಗತ್ಯವನ್ನು ತಿಳಿ ಹೇಳಿದರು. ರೋಟರಿ ಕ್ಲಬ್ ಸುರತ್ಕಲ್‌ನ ಕಾರ್ಯದರ್ಶಿ ರಾಮ್ ಮೋಹನ್, ಗೋವಿಂದ ದಾಸ ಕಾಲೇಜಿನ ಆಡಳಿತಾತ್ಮಕ ನಿರ್ದೇಶಕ ರಮೇಶ್ ಭಟ್ ಎಸ್ ಜಿ, ನಿಕಟಪೂರ್ವ ಪ್ರಾಂಶುಪಾಲ ಕೃಷ್ಣಮೂರ್ತಿ, ಇನ್ನರ್ ವೀಲ್ ಕ್ಲಬ್ ಸುರತ್ಕಲ್‌ನ ಸಾವಿತ್ರಿ ರಮೇಶ್ ಭಟ್, ನಾಗರಿಕ ಸಲಹಾ ಸಮಿತಿಯ ಟ್ರಸ್ಟಿಗಳಾದ ಶ್ರೀನಿವಾಸ್ ರಾವ್, ಆನಂದ ಬಂಡಾರಿ, ಭರತ್ ಶೆಟ್ಟಿ, ರಮೇಶ ಅಳಪೆ, ಅನಿಲ್ ರಾವ್, ಹೊಸಬೆಟ್ಟು ನಾಗರಿಕ ಹಿತ ರಕ್ಷಣಾ ಸಮಿತಿಯ, ರಮೇಶ್ ಶೆಟ್ಟಿ, ಧನರಾಜ್ ಸನಿಲ್, ಪೂವಪ್ಪ ನಾಯ್ಕ್ ಉಪಸ್ಥಿತರಿದ್ದರು. ಸ್ವಚ್ಛ ಸುರತ್ಕಲ್ ಅಭಿಯಾನದ ಸಂಯೋಜಕ ಸತೀಶ್ ಸದಾನಂದ್ ಸ್ವಯಂ ಸೇವಕರಿಗೆ ಅಗತ್ಯ ಮಾಹಿತಿ ನೀಡಿದರು.

ಮರಕತ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ

ಅಭಿವೃದ್ಧಿ, ಬ್ರಹ್ಮಕಲಶೋತ್ಸವದ ಬಗ್ಗೆ ಸಭೆ

ಸುಬ್ರಹ್ಮಣ್ಯ: ನಾಲ್ಕೂರು ಗ್ರಾಮದ ಮರಕತ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಮುಂದಿನ ದಿನಗಳಲ್ಲಿ ಬ್ರಹ್ಮಕಲಶ ನಡೆಯಲಿರುವ ಹಿನ್ನಲೆಯಲ್ಲಿ ಪೂರ್ವಭಾವಿಯಾಗಿ ದೇವಸ್ಥಾನದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳು ಆಗಬೇಕಾಗಿದ್ದು, ಈ ನಿಮಿತ್ತ ದೇವಸ್ಥಾನದ ವಠಾರದಲ್ಲಿ ವ್ಯವಸ್ಥಾಪನಾ ಸಮಿತಿ ಹಾಗೂ ಬ್ರಹ್ಮಕಲಶೋತ್ಸವ ಸಮಿತಿಯ ಸಭೆ ನಡೆಯಿತು.



ಅಭಿವೃದ್ಧಿ ಕಾರ್ಯಗಳು

ದೇವರ ಪಂಚಲೋಹದ ಉತ್ಸವ ಮೂರ್ತಿ ರಚನೆ, ಗರ್ಭಗುಡಿ ಹಾಗೂ ನಮಸ್ಕಾರ ಮಂಟಪದ ಮೇಲ್ಛಾವಣಿಗೆ ತಾಮ್ರದ ಹೊದಿಕೆ, ಒಳಾಂಗಣ ಮತ್ತು ಹೋರಾಂಗಣದ ನೆಲಕ್ಕೆ ಶಿಲೆ ಕಲ್ಲು ಹಾಸುವುದು, ವಿಶಾಲವಾಗಿ ಇರುವ ಭೋಜನ ಶಾಲೆ, ದೇವಸ್ಥಾನದ ಪ್ರಧಾನ ದೈವವಾದ ಚಾಮುಂಡಿ ಗುಡಿಯ ಪುನರ್ ನಿರ್ಮಾಣ, ದೇವಸ್ಥಾನಕ್ಕೆ ಸಂಪರ್ಕ ವ್ಯವಸ್ಥೆ ಹಾಗೂ ದೇವಳಕ್ಕೆ ಸಂಬಂಧಪಟ್ಟಂತೆ ಇನ್ನಿತರ ಅಭಿವೃದ್ಧಿ ಕೆಲಸಗಳನ್ನು ಸುಮಾರು ರೂ.2.5 ಕೋಟಿ ವೆಚ್ಚದಲ್ಲಿ ನಡೆಸಲು ಸಭೆಯಲ್ಲಿ ಚರ್ಚಿಸಲಾಯಿತು.

ಪರಿಹಾರದ ಚರ್ಚೆ

ಸಭೆಯಲ್ಲಿ ಪರಿಹಾರಾರ್ಥವಾಗಿ ಪಂಜದ ಸೀಮೆ ದೇವಸ್ಥಾನದಲ್ಲಿ ಹಾಗೂ ಗ್ರಾಮದ ಶಿವ ಕ್ಷೇತ್ರದಲ್ಲಿ ಪ್ರಾರ್ಥಿಸುವುದು, ದೇವಸ್ಥಾನದ ಪ್ರಧಾನ ದೈವವಾದ ಶ್ರೀ ಚಾಮುಂಡಿ ಕ್ಷೇತ್ರದಲ್ಲಿ ತಂಬಿಲ ಸೇವೆ ನಡೆಸಿ ಪ್ರಾರ್ಥಿಸುವುದು, ಕ್ಷೇತ್ರದ ಬ್ರಹ್ಮರಾಕ್ಷಸನಿಗೆ ಹಾಲು ಪಾಯಸ, ನೈವೇದ್ಯ ಸಮರ್ಪಣೆ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಪಂಜ ದೇವಳದಲ್ಲಿ ಪ್ರಾರ್ಥನೆ

ಮರಕತದೇವಳದಲ್ಲಿ ವಿವಿಧ ಅಭಿವೃದ್ಧಿ ಕೆಲಸಗಳನ್ನು ಪ್ರಾರಂಭಿಸುವ ಸಲುವಾಗಿ ಸೋಮವಾರ ಸೀಮೆ ದೇವಸ್ಥಾನ ಪಂಜ ಶ್ರೀ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ವ್ಯವಸ್ಥಾಪನಾ ಹಾಗೂ ಬ್ರಹ್ಮಕಲಶೋತ್ಸವ ಸಮಿತಿ ಮತ್ತು ಇತರ ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳು ಸೇವೆ ಸಲ್ಲಿಸಿ ಕ್ಷೇತ್ರದಲ್ಲಿ ನಡೆಯುವ ಎಲ್ಲಾ ಕೆಲಸ ಕಾರ್ಯಗಳು ಸಾಂಗವಾಗಿ ನೆರವೇರಲಿ ಎಂದು ಪ್ರಾರ್ಥಿಸಿದರು.

ಈ ಸಂದರ್ಭ ಪಂಜ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಡಾ. ದೇವಿ ಪ್ರಸಾದ್ ಕಾನತ್ತೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ದೇವಸ್ಥಾನ ಸಮಿತಿ ಅಧ್ಯಕ್ಷೆ ನಿರ್ಮಲ ಪದ್ಮನಾಭ ಹಾಗೂ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಿನ್ಯಾಸ್ ಕೊಚ್ಚಿ ಮತ್ತಿತರರು ಉಪಸ್ಥಿತರಿದ್ದರು.

ಪಂಡಿತ್ ದೀನ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನದ ಕೊಡಗು ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗದಲ್ಲಿ ಸಂಸದ ಯದುವೀರ್

ಕಾರ್ಯಕರ್ತರ ವ್ಯಕ್ತಿತ್ವ ರೂಪಿಸಲು, ಶಿಸ್ತು ಮೂಡಿಸಲು ಸಹಕಾರಿ

ಕುಶಾಲನಗರ: ಪಂಡಿತ್ ದೀನ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನದ ಕೊಡಗು ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗ ಕಾರ್ಯಕ್ರಮ ಕೂಡುಮಂಗಳೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಚಿಕ್ಕತ್ತೂರಿನ ಖಾಸಗಿ ಸಭಾಂಗಣದಲ್ಲಿ ನಡೆಯಿತು.

ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಅವರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಅಧಿಕಾರ ಸೇವೆಗೆ ಇರುವ ಅವಕಾಶ

ಈ ಸಂದರ್ಭ ಮಾತನಾಡಿದ ಅವರು, ಇಂತಹ ಕಾರ್ಯಕ್ರಮಗಳು ಪಕ್ಷವನ್ನು ಮತ್ತಷ್ಟು ಬಲಪಡಿಸುತ್ತದೆ. ಜಿಲ್ಲಾ ಮಟ್ಟದಿಂದ ಹಿಡಿದು ರಾಷ್ಟ್ರ ಮಟ್ಟದವರೆಗೆ ಪ್ರತಿ ಹಂತದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಕಾರ್ಯಕರ್ತರ ವ್ಯಕ್ತಿತ್ವ ರೂಪಿಸಲು, ಶಿಸ್ತು ಮೂಡಿಸಲು ಸಹಕಾರಿಯಾಗಲಿದೆ. ನಿರ್ದಿಷ್ಟ ಗುರಿ ಹೊಂದಿರುವ ನಮ್ಮ ಪಕ್ಷ ಇತರೆ ಪಕ್ಷಗಳಿಗಿಂತ ಭಿನ್ನವಾಗಿದೆ. ಕೇವಲ ಅಧಿಕಾರ ಗಳಿಸುವುದು ಮಾತ್ರ ನಮ್ಮ ಉದ್ದೇಶವಲ್ಲ. ಉತ್ತಮ ಸೇವೆ ಸಲ್ಲಿಸಲು ಅಧಿಕಾರ ನಮಗೆ ಒಂದು ಸಾಧನವಷ್ಟೆ. ಪಕ್ಷದ ಮೂಲ ತತ್ವ ಸಿದ್ಧಾಂತ, ಪರಂಪರೆಯನ್ನು ಇಂದಿನ ಆಧುನಿಕ ಕಾಲಘಟ್ಟದ ಕಾರ್ಯಕರ್ತರಿಗೆ ಸ್ಮರಿಸಿ ಪಕ್ಷದೊಳಗೆ ಯಾವ ರೀತಿ ಕಾರ್ಯನಿರ್ವಹಿಸಬೇಕು, ಜನರಿಗೆ ಹೇಗೆ ಸೇವೆ ಸಲ್ಲಿಸಬೇಕು ಎಂಬುದನ್ನು ತಿಳಿಸಲು ಪ್ರಶಿಕ್ಷಣ ಕಾರ್ಯಕ್ರಮದ ಮೂಲಕ ಸಾಧ್ಯ ಎಂದರು.

ಜ್ವಲಂತ ಸಮಸ್ಯೆ ಮರೆತಿದೆ: ಇಂದಿನ ರಾಜ್ಯ ಸರಕಾರ ಕುರ್ಚಿ ಕಿತ್ತಾಟದಲ್ಲಿ ಜನರ ಜ್ವಲಂತ ಸಮಸ್ಯೆಗಳನ್ನು ಮರೆತಿದೆ. ಈ ಸರಕಾರಕ್ಕೆ ಪರ್ಯಾಯವಾಗಿ ಜನ ಸೇವೆಗೆ ಬಿಜೆಪಿ ಅನಿವಾರ್ಯ ಎಂಬ ಜನಾಭಿ ಪ್ರಾಯ ಹೊರಹೊಮ್ಮಬೇಕಿದೆ. ಆ ನಿಟ್ಟಿನಲ್ಲಿ ನಾವೆ ಲ್ಲರೂ ಶ್ರಮವಹಿಸಿ ಕಾರ್ಯನಿರ್ವಹಿಸೋಣ. ಜಿಲ್ಲೆಯಲ್ಲಿ ಕೂಡಾ ಮತ್ತೆ ಬಿಜೆಪಿ ವೈಭವ ಮರುಕಳಿಸುವಂತಾಗಬೇಕಿದೆ ಎಂದು ಆಶಯ ವ್ಯಕ್ತಪಡಿಸಿದರು.

ಕಾರ್ಯಕರ್ತರೇ ಮಾಲಕರು

ಮುಖ್ಯ ಅತಿಥಿಯಾಗಿದ್ದ ಬಿಜೆಪಿ ರಾಷ್ಟ್ರೀಯ ಸಮಿತಿ ಮಾಜಿ ಕಾರ್ಯದರ್ಶಿ, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಮಾತನಾಡಿ, ಬೇರೆ ಪಕ್ಷಗಳಿಂತೆ ಬಿಜೆಪಿ ಪಕ್ಷಕ್ಕೆ ಮಾಲಕರಿಲ್ಲ. ಬಿಜೆಪಿಯಲ್ಲಿ ಕಾರ್ಯಕರ್ತರೇ ಪಕ್ಷದ ಮಾಲಕರು. ಕಾರ್ಯಕರ್ತರನ್ನೇ ನಾಯಕರನ್ನಾಗಿ ಬೆಳೆಸುವ ವ್ಯವಸ್ಥೆಯನ್ನು ನಂಬಿರುವ ರಾಜಕೀಯ ಪಕ್ಷ. ಕಾರ್ಯಕರ್ತರು ಎಷ್ಟೇ ಹಿರಿಯರಾದರೂ, ಅನುಭವಿಗಳಾದರೂ ಕೂಡಾ ಕಾಲಕಾಲಕ್ಕೆ ಅವರನ್ನು ಮತ್ತಷ್ಟು ಪಕ್ವಗೊಳಿಸುವ ಅಗತ್ಯವಿದೆ. ಆದರ ಅಂಗವಾಗಿ ಈ ಪ್ರಶಿಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಇಲ್ಲಿ ಔಪಚಾರಿಕವಾಗಿ, ಅನೌಪಚಾರಿಕವಾಗಿ ಹಲವು ವಿಚಾರಗಳನ್ನು ತಿಳಿದುಕೊಳ್ಳಲು ಸಾಧ್ಯವಿದೆ. ವೈಯಕ್ತಿಕ ಅಭ್ಯಾಸಗಳನ್ನು, ವ್ಯಕ್ತಿಗತ ಸ್ವಭಾವಗಳನ್ನು ಪಕ್ಷದ ನೆಲೆಗಟ್ಟಿನಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಅನಿವಾರ್ಯತೆ ಇದೆ ಎಂದರು.



> ಸೈದ್ಧಾಂತಿಕ ಚಳುವಳಿಯ ಮೂಲಕ ಸಮಾಜ ಪರಿವರ್ತನೆ, ಹಾಗೂ ಕಾರ್ಯಕರ್ತರ ಸಂಘಟನೆಯ ಮೂಲಕ ಪಕ್ಷದ ಬಲವರ್ಧನೆ ಮುಖೇನ ಮಾರ್ಗದರ್ಶನದಲ್ಲಿ ಸಾಗಿ ರೂಪಿಸಿದ ಯೋಜನೆಗಳನ್ನು ಪೂರ್ಣಗೊಳಿಸಲು ಇಂತಹ ಪ್ರಶಿಕ್ಷಣ ಸಹಕಾರಿಯಾಗುವುದು.
> ■ ಸಿ.ಟಿ.ರವಿ

ಅಧ್ಯಕ್ಷತೆ ವಹಿಸಿದ್ದ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಪ್ರಶಿಕ್ಷಣ ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕವಾಗಿ ವಿವರಿಸಿದರು.

ವೇದಿಕೆಯಲ್ಲಿ ವಿಧಾನ ಸಭಾ ಮಾಜಿ ಸದಸ್ಯ ಎಂ.ಪಿ.ಅಪ್ಪಚ್ಚು ರಂಜನ್, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಪಿ .ಸುನಿಲ್ ಸುಬ್ರಮಣಿ, ಬಿಜೆಪಿ ಮಂಗಳೂರು ವಿಭಾಗ ಪ್ರಭಾರಿ ಹಾಗೂ ಜಿಲ್ಲಾ ಬಿಜೆಪಿ ನಿಕಟ ಪೂರ್ವ ಅಧ್ಯಕ್ಷ ಬಿ.ಬಿ. ಭಾರತೀಶ್, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ, ರಾಜ್ಯ ಸಹ ಸಂಯೋಜಕ ಎನ್.ವಿ. ಗಣೇಶ್, ಕಾರ್ಯಕ್ರಮದ ಸಂಯೋಜಕ ಎ.ಕೆ. ಮನುಮುತ್ತಪ್ಪ, ಮೈಸೂರು ವಿಭಾಗ ಸಂಯೋಜಕ ರಾಜೇಶ್, ಪ್ರಮುಖರಾದ ಸ್ವಾಮಿ, ಕಾರ್ಯಾಗಾರದ ಪ್ರಬಂಧಕರಾದ ಜಿಲ್ಲಾ ಯುವ ಮೋರ್ಚಾ ಕಾರ್ಯದರ್ಶಿ ರಕ್ಷಿತ್ ಮಾವಜಿ, ಸುಮನ್ ಗೌಡ, ಪ್ರಮೀಣ್ ಮಲ್ಲಜಿರ, ನವನೀತ್ ಪೊನ್ನಟ್ಟಿ, ರಾಮನಾಥನ್ ಸೇರಿದಂತೆ ಹಲವರು ಹಾಜರಿದ್ದರು.

ರೈಲು ನಿಲ್ದಾಣ ಪರಿಸರದಿಂದ ಬೈಕ್ ಕಳವು

ಕಾಸರಗೋಡು: ಕಾಸರಗೋಡು ರೈಲು ನಿಲ್ದಾಣ ಬಳಿ ನಿಲ್ಲಿಸಲಾಗಿದ್ದ 1.70 ಲಕ್ಷ ರೂಪಾಯಿ ಮೌಲ್ಯದ ಬುಲ್ಲೆಟ್ ಬೈಕ್ ಕಳವಿಗೀಡಾದ ಬಗ್ಗೆ ಕಾಸರಗೋಡು ಪೊಲೀಸರಿಗೆ ದೂರು ನೀಡಲಾಗಿದೆ. ಮಲಪ್ಪುರಂ ಪರಪ್ಪನಂಗಾಡಿ ಪುತ್ತರಿಕ್ಕಲ್ ನಿವಾಸಿ, ಬೋವಿಕ್ಕಾನದ ಅಕ್ಕರ ಫೌಂಡೇಶನ್‌ನ ಸಿಇಒ ಆಗಿರುವ ಮುಹಮ್ಮದ್ ಜಾಸಿಂ ಈ ಬಗ್ಗೆ ದೂರು ನೀಡಿದ್ದು, ಆದರಂತೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದಾರೆ.

ಮೇ 2ರಂದು ಬೈಕ್‌ನ್ನು ಕಾಸರಗೋಡು ರೈಲು ನಿಲ್ದಾಣ ಬಳಿ ನಿಲ್ಲಿಸಿ ಮಲಪ್ಪುರಂಗೆ ತೆರಳಿದ್ದು, ಬಳಿಕ ಮೇ 4ರಂದು ನೋಡಿದಾಗ ಬೈಕ್ ನಾಪತ್ತೆಯಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

IN THE COURT OF SENIOR CIVIL JUDGE AND JMFC BANTWAL

CRL. M.C: 118/2026

BETWEEN:

1. **SMT. SHAMBHAVI,** AGED 61 YEARS, W/O. CHANDRAHASA SHETTY, D/O. KUNHANNA SHETTY AND SMT. VITAMMA, R/ AT 21-250/1, NAGTHIMAR HOUSE, PANEMANGALORE VILLAGE, BONDALA, BANTWAL-574231
2. **MR. SEETHARAMA KUNHANNA SHETTY,** AGED 60 YEARS S/O. KUNHANNA SHETTY AND MT. VITAMMA R/AT 202, MADHAV KUNJ CHS A-4, MANGESHI SAHARA, NEAR CHATRI BUNGLOW, CHIKANGHAR, KALYAN WEST THANE, MAHARASHTRA-421301
3. **SMT. KUSUMAVATHI,** AGED 55 YEARS, W/O. VISHWANATHA SHETTY, D/O. KUNHANNA SHETTY AND SMT. VITAMMA, R/ AT, KANIYOORU, BORUKATTE, BELTHANGADY TALUK-574217

...PETITIONERS

AND

THE REGISTRAR OF BIRTH & DEATHS TOWN MUNICIPAL BANTWAL

...RESPONDENT

CITATION NOTICE

Whereas the above named petitioners have made an application to this Court seeking direction to enter the death event of the father of the petitioners Kunhanna Shetty in the death register maintained by the Respondent and that the above case stands posted to at 08-06-2026 11:00 AM before the above court of hearing. Be it known that persons desiring to oppose the same should file their objections if any in the said court on the said date and time, failing which the matter will be heard and determined. The case is posted on **08-06-2026 at 11:00 AM** for hearing before the grant of Death Certificate.

Given under my hand and seal of the court on this 11th day of May 2026

BY ORDER OF THE COURT

Sd/- CHIEF MINISTERIAL OFFICER

(SENIOR CIVIL JUDGE & JMFC BANTWAL DK)

Sd/- ADVOCATE FOR PETITIONERS

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದ ರಾವ್ ವೃತ್ತ, ಬೆಂಗಳೂರು – 560 009

ಸಂ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಎಸ್‌ಟಿಎಲ್/ಟೆಂಡರ್/2026–27 ದಿನಾಂಕ: 08.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕದಾದ್ಯಂತ ಕೆಆರ್‌ಐಡಿಎಲ್ ಉಪ ವಿಭಾಗಗಳಿಗೆ ಐಎಸ್ 1786 ಎಫ್‌ಇ 550 ರಂತೆ ಟಿಎಂಟಿ ಸ್ಟೀಲ್ ಬಾರ್‌ಗಳನ್ನು ಪೂರೈಸಲು ಕಳೆದ 3 ಹಣಕಾಸು ವರ್ಷಗಳಲ್ಲಿ ಕೆಳಗಿನ ಕೋಷ್ಟಕದಲ್ಲಿ ನಿಗದಿಪಡಿಸಿದ ವಾರ್ಷಿಕ ವಹಿವಾಟು ಹೊಂದಿರುವ ತಯಾರಕರು/ಪ್ರಾಥಮಿಕ ತಯಾರಕರು/ಏಜೆಂಟರು/ಡೀಲರ್‌ಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಂಸ್ಥೆಯು ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಸರ್ಕಾರಿ ಇಲಾಖೆಗಳು/ಅರೆ ಸರ್ಕಾರಿ ಇಲಾಖೆಗಳು/ಸಾರ್ವಜನಿಕ ವಲಯದ ಉದ್ದಿಮೆಗಳು ಮತ್ತು ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳು/ಕಂಪನಿಗಳಿಗೆ 1000 ಮೆಟ್ರಿಕ್ ಟನ್‌ರಷ್ಟು ಇದೇ ರೀತಿಯ ಪೂರೈಕೆಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರಬೇಕು. ಅರ್ಜಿಗಳನ್ನು ಇ–ಆಡಳಿತ ಸಚಿವಾಲಯದ ಮೂಲಕ ಮಾತ್ರ ಸಲ್ಲಿಸುವುದು. ನೂತನ ವೆಬ್‌ಸೈಟ್: **www.kppp.karnataka.gov.in** ಸಂಪರ್ಕ ಸಂಖ್ಯೆ: **+91 9240214000 / +91 9240214001.**

ಕ್ರ ಸಂ	ಟೆಂಡರ್‌ನ ವಿವರ	ಪ್ರಮಾಣ (ಮೆ.ಟ.ಗಳಲ್ಲಿ)	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ)	ಅಗತ್ಯವಿರುವ ಸಂಸ್ಥೆಯ ವಾರ್ಷಿಕ ವಹಿವಾಟು (ರೂ. ಲಕ್ಷಗಳಲ್ಲಿ)
1	ಟೆಂಡರ್ ಭಾಗ–I ಬೆಂಗಳೂರು ಮತ್ತು ಬಿಬಿಎಂಪಿ ವಲಯ	501	299.09	4.49	957.00
2	ಟೆಂಡರ್ ಭಾಗ–II, ಮೈಸೂರು ವಲಯ	619	363.97	5.46	1165.00
3	ಟೆಂಡರ್ ಭಾಗ–III, ಕೇಂದ್ರ (ಚಿತ್ರದುರ್ಗ) ವಲಯ	780	462.54	6.94	1480.00
4	ಟೆಂಡರ್ ಭಾಗ–IV, ಬೆಳಗಾವಿ ವಲಯ	715	425.06	6.38	1360.00
5	ಟೆಂಡರ್ ಭಾಗ–V, ಕಲಬುರಗಿ ವಲಯ	385	228.88	3.43	732.00

ಪೂರೈಕೆಯ ಅವಧಿ: ಪೂರೈಕೆ ಆದೇಶದ ದಿನಾಂಕದಿಂದ ಮೂರು ತಿಂಗಳು

• ವಿಚಾರಣೆಗೆ ಕೊನೆಯ ದಿನಾಂಕ ಮತ್ತು ಸಮಯ: **26.05.2026, ಮಧ್ಯಾಹ್ನ 2.00 ಗಂಟೆವರೆಗೆ.** • ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **26.05.2026, ಮಧ್ಯಾಹ್ನ 3.00 ಗಂಟೆವರೆಗೆ.** • ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **29.05.2026, ಮಧ್ಯಾಹ್ನ 3.00 ಗಂಟೆಗೆ.** • ಹಣಕಾಸು ಬಿಡ್ ತೆರೆಯುವ ದಿನಾಂಕ: **30.05.2026, ಮಧ್ಯಾಹ್ನ 3.00 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಮುಖ್ಯ ಅಭಿಯಂತರರು (ಉತ್ತರ)

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09.

ದೂರವಾಣಿ: 080–28015605, ಇ–ಮೇಲ್: ddworkskridl@gmail.com / tenderworks@kridl.net

ಸಹಿ/– ಮುಖ್ಯ ಅಭಿಯಂತರರು (ಉತ್ತರ)

ಹೆಸರು ಬದಲಾವಣೆ

ತೋನ್ಸೆ ಸಂಜಯ್ ನಾರಾಯಣ ಪೈ ಆದ ನಾನು, ತೋನ್ಸೆ ನಾರಾಯಣ ಮಾಧವ್ ಪೈ ಅವರ ಮಗನಾಗಿದ್ದು, ಕರ್ನಾಟಕದ ಉಡುಪಿಯ ಮಣಿಪಾಲದ ಅನಂತ ನಗರದ, ನಂ.16-125 ರಲ್ಲಿ ವಾಸಿಸುವ ನಾನು, ನನ್ನ ಹೆಸರನ್ನು ಟಿ. ಸಂಜಯ್ ಪೈ ಎಂದು ಬದಲಾಯಿಸಿಕೊಂಡಿದ್ದೇನೆ ಮತ್ತು ಇನ್ನು ಮುಂದೆ ಎಲ್ಲಾ ಉದ್ದೇಶಗಳಿಗಾಗಿ ಟಿ. ಸಂಜಯ್ ಪೈ ಎಂದು ಕರೆಯಲ್ಪಡುತ್ತೇನೆ ಹಾಗೂ ಕೆ.ಮುರಾರಿ ವಕೀಲರು ಹಾಗೂ ನೋಟರಿಯವರ ಸಮ್ಮುಖದಲ್ಲಿ ದಿ:12.05.2026ರಂದು ಈ ಪ್ರಮಾಣಪತ್ರ ಮಾಡಿಸಿರುತ್ತೇನೆ.

ಟಿ. ಸಂಜಯ್ ಪೈ

ಕರ್ನಾಟಕ ಸರಕಾರ

ಆಲೆಟ್ಟಿ ಗ್ರಾಮ ಪಂಚಾಯತ್ ಕಾರ್ಯಾಲಯ

ಟೆಂಡರ್ ದರ ಪಟ್ಟಿ ಪ್ರಕಟಣೆ

ವಿಷಯ:– 2026–27 ನೇ ಸಾಲಿನಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಡಿಯುವ ನೀರಿನ ಮೋಟಾರು ದುರಸ್ತಿ, ವಿದ್ಯುತ್ ದುರಸ್ತಿ, ಮತ್ತು ಬೀದಿದೀಪ ದುರಸ್ತಿಗಳನ್ನು ಮಾಡುವರೇ ಅಧಿಕೃತ ಇಲೆಕ್ಟ್ರಿಕಲ್/ಎಂಟರ್ ಪ್ರೈಸಸ್/ಏಜೆನ್ಸಿರವರಿಂದ ಟೆಂಡರ್ ಆಹ್ವಾನಿಸಿದೆ. ಗ್ರಾಮ ಪಂಚಾಯತ್‌ನ ವಿವಿಧ ಯೋಜನೆಗಳ ಕುಡಿಯುವ ನೀರಿನ ಅನುದಾನದಲ್ಲಿ ಪಾವತಿ ಮಾಡಲಾಗುವುದು.

ಕ್ರ. ಸಂ.	ಕಾಮಗಾರಿಯ ಹೆಸರು	ಮೀಸಲಿರಿಸಿದ ಅಂದಾಜು ಮೊತ್ತ	ಇಎಮ್‌ಡಿ ಮೊತ್ತ (ರೂ. ಗಳಲ್ಲಿ)	ಅರ್ಜಿ ಶುಲ್ಕ	ಯೋಜನೆ
1	ಸುಳ್ಯ ತಾಲೂಕು ಆಲೆಟ್ಟಿ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿನ ಕುಡಿಯುವ ನೀರಿನ ಮೋಟಾರುಗಳ ವೈಂಡಿಗ್, ಲಿಫ್ಟಿಂಗ್, ಅಳವಡಿಕೆ, ಇಲೆಕ್ಟಿಕ್ ದುರಸ್ತಿಗಳು, ಪೈಪುಲೈನ್ ದುರಸ್ತಿಗಳು ಮತ್ತು ಬೀದಿ ದೀಪಗಳ ದುರಸ್ತಿಗಳ ಅನುಷ್ಠಾನ	400000 (ನಾಲ್ಕು ಲಕ್ಷ ರೂಪಾಯಿಗಳು ಮಾತ್ರ)	1000	500.00	ಗ್ರಾಮ ಪಂಚಾಯತ್ ಅನುದಾನ ಕುಡಿಯುವ ನೀರಿನ ನಿರ್ವಹಣೆ ಮತ್ತು 15 ನೇ ಹಣಕಾಸು ನಿರ್ಭಂದಿತ ಅನುದಾನ ಮತ್ತು ಇತರ ಅನುದಾನ

1) ಟೆಂಡರ್ ಪ್ರಕಟಣೆ : **ದಿನಾಂಕ 12–05–2026** 2) ಟೆಂಡರ್ ಅರ್ಜಿ ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ: **ದಿನಾಂಕ 22–05–2026 ಸಮಯ ಅ. 5.00** 3) ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ, ಸ್ಥಳ ಮತ್ತು ಸಮಯ : **ದಿನಾಂಕ 26–05–2026 ಸ್ಥಳ: ಗ್ರಾ. ಪಂ. ಆಲೆಟ್ಟಿ ಸಮಯ ಪೂ. 11.30 ಗಂಟೆ** 4) ಟೆಂಡರ್ ತೆರೆಯುವುದು ದಿನಾಂಕ ಮತ್ತು ಸಮಯ: **ದಿನಾಂಕ 26–05–2026 ಸಮಯ ಅ. 12.15ಕ್ಕೆ ಗ್ರಾಮ ಪಂಚಾಯತು ಕಚೇರಿಯಲ್ಲಿ ಹಾಜರಿರುವ ಟೆಂಡರುದಾರರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು.**

ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ ಸಾರ್ವತ್ರಿಕ ರಜೆಯೆಂದು ಘೋಷಣೆಯಾಗಿದ್ದಲ್ಲಿ ಮುಂದಿನ ಕರ್ತವ್ಯ ದಿನಾಂಕಗಳನ್ನು ಪರಿಗಣಿಸಬೇಕು. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಗ್ರಾಮ ಪಂಚಾಯತ್ ನಿಂದ ಪಡೆದು ಟೆಂಡರ್‌ನಲ್ಲಿ ಭಾಗವಹಿಸುವುದು. ಕಛೇರಿ ವೇಳೆ ಆಲೆಟ್ಟಿ ಗ್ರಾಮ ಪಂಚಾಯತನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 9480862377

ಸಹಿ/– ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ ಆಲೆಟ್ಟಿ

ಸಹಿ/–ಆಡಳಿತಾಧಿಕಾರಿ, ಗ್ರಾಮ ಪಂಚಾಯತ ಆಲೆಟ್ಟಿ

ಕರ್ನಾಟಕ ಸರಕಾರ

ಅರಂತೋಡು ಗ್ರಾಮ ಪಂಚಾಯತ್ ಕಾರ್ಯಾಲಯ

ಟೆಂಡರ್ ದರ ಪಟ್ಟಿ ಪ್ರಕಟಣೆ

ವಿಷಯ:– 2026–27 ನೇ ಸಾಲಿನಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಡಿಯುವ ನೀರಿನ ಮೋಟಾರು ದುರಸ್ತಿ, ವಿದ್ಯುತ್ ದುರಸ್ತಿ, ಮತ್ತು ಬೀದಿದೀಪ ದುರಸ್ತಿಗಳನ್ನು ಮಾಡುವರೇ ಅಧಿಕೃತ ಇಲೆಕ್ಟ್ರಿಕಲ್/ಎಂಟರ್ ಪ್ರೈಸಸ್/ಏಜೆನ್ಸಿರವರಿಂದ ಟೆಂಡರ್ ಆಹ್ವಾನಿಸಿದೆ. ಗ್ರಾಮ ಪಂಚಾಯತ್‌ನ ವಿವಿಧ ಯೋಜನೆಗಳ ಕುಡಿಯುವ ನೀರಿನ ಅನುದಾನದಲ್ಲಿ ಪಾವತಿ ಮಾಡಲಾಗುವುದು.

ಕ್ರ. ಸಂ.	ಕಾಮಗಾರಿಯ ಹೆಸರು	ಮೀಸಲಿರಿಸಿದ ಅಂದಾಜು ಮೊತ್ತ	ಇಎಮ್‌ಡಿ ಮೊತ್ತ (ರೂ. ಗಳಲ್ಲಿ)	ಅರ್ಜಿ ಶುಲ್ಕ	ಯೋಜನೆ
1	ಸುಳ್ಯ ತಾಲೂಕು ಅರಂತೋಡು ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿನ ಕುಡಿಯುವ ನೀರಿನ ಮೋಟಾರುಗಳ ವೈಂಡಿಗ್, ಲಿಫ್ಟಿಂಗ್, ಅಳವಡಿಕೆ, ಇಲೆಕ್ಟಿಕ್ ದುರಸ್ತಿಗಳು, ಪೈಪುಲೈನ್ ದುರಸ್ತಿಗಳು ಮತ್ತು ಬೀದಿ ದೀಪಗಳ ದುರಸ್ತಿಗಳ ಅನುಷ್ಠಾನ	400000 (ನಾಲ್ಕು ಲಕ್ಷ ರೂಪಾಯಿಗಳು ಮಾತ್ರ)	1000	500.00	ಗ್ರಾಮ ಪಂಚಾಯತ್ ಅನುದಾನ ಕುಡಿಯುವ ನೀರಿನ ನಿರ್ವಹಣೆ ಮತ್ತು 15 ನೇ ಹಣಕಾಸು ನಿರ್ಭಂದಿತ ಅನುದಾನ ಮತ್ತು ಇತರ ಅನುದಾನ.

1) ಟೆಂಡರ್ ಪ್ರಕಟಣೆ ದಿನಾಂಕ : **12–05–2026.** 2) ಟೆಂಡರ್ ಅರ್ಜಿ ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ : **ದಿನಾಂಕ 25–05–2026 ಸಮಯ ಅ. 5.00.** 3) ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ, ಸ್ಥಳ ಮತ್ತು ಸಮಯ : **ದಿನಾಂಕ 27–05–2026, ಸ್ಥಳ: ಗ್ರಾ. ಪಂ. ಅರಂತೋಡು ಸಮಯ ಪೂ. 11.30 ಗಂಟೆ** 4) ಟೆಂಡರ್ ತೆರೆಯುವುದು ದಿನಾಂಕ ಮತ್ತು ಸಮಯ : **ದಿನಾಂಕ 27–05–2026 ಸಮಯ ಅ. 12.15ಕ್ಕೆ ಗ್ರಾಮ ಪಂಚಾಯತು ಕಚೇರಿಯಲ್ಲಿ ಹಾಜರಿರುವ ಟೆಂಡರುದಾರರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು.**

ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ ಸಾರ್ವತ್ರಿಕ ರಜೆಯೆಂದು ಘೋಷಣೆಯಾಗಿದ್ದಲ್ಲಿ ಮುಂದಿನ ಕರ್ತವ್ಯ ದಿನಾಂಕಗಳನ್ನು ಪರಿಗಣಿಸಬೇಕು. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಗ್ರಾಮ ಪಂಚಾಯತ್ ನಿಂದ ಪಡೆದು ಟೆಂಡರ್ ನಲ್ಲಿ ಭಾಗವಹಿಸುವುದು. ಕಛೇರಿ ವೇಳೆ ಅರಂತೋಡು ಗ್ರಾಮ ಪಂಚಾಯತನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 08257265224, 9480862379

ಸಹಿ/– ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ ಅರಂತೋಡು

ಸಹಿ/–ಆಡಳಿತಾಧಿಕಾರಿ, ಗ್ರಾಮ ಪಂಚಾಯತ ಅರಂತೋಡು

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ, ಕಾರ್ಯಾಲಯ, ಅಥಣಿ – 591304, ತಾ॥ ಅಥಣಿ ಜಿ॥ ಬೆಳಗಾವಿ.

ಸಂಖ್ಯೆ : ಕ.ನೀ.ನಿ.ನಿ./ಪು.ಪು.ವಿ./ಟೆಂಡರ್/ಅಥಣಿ/ಬಿ.ಎಲ್.ಆಯ್.ಎಸ್/ಎಫ್.ಆಯ್.ಸಿ/2026–27/190 ದಿನಾಂಕ : 08–05–2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

(ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕ.ನೀ.ನಿ.ನಿ. ಆರ್&ಆರ್ ವಿಭಾಗ ಅಥಣಿ, ಇವರು ಕೆ.ಪಿ.ಪಿ ಪೋರ್ಟಾಲ್ ಮುಖಾಂತರ ನೊಂದಾಯಿತ ಎರಡನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರು ಇವರಿಂದ **1) KPP I.NO - 4390, 2) KPP I.NO - 4391, 3) KPP I.NO - 4392, 4) KPP I.NO - 4393, 5) KPP I.NO - 4394, 6) KPP I.NO - 546 Call-2,** ಕಾಮಗಾರಿಗಳಿಗೆ ಕೆ.ಡಬ್ಲ್ಯೂ–4 ಟೆಂಡರ್‌ನ್ನು ಅಹ್ವಾನಿಸಿರುತ್ತಾರೆ.

ಗುತ್ತಿಗೆದಾರರು 02 – ಕವರ್ ಬಿಡ್ ಸಲ್ಲಿಕೆ ವಿಧಾನವನ್ನು ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ : **https://kppp.karnataka.gov.in** ಮೂಲಕ ಪಡೆದುಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸುವುದು.

ಟೆಂಡರಿಗಿಟ್ಟ ಮೊತ್ತ (ಜಿ.ಎಸ್.ಟಿ. ರಹಿತ) 1) ರೂ. 415.93 ಲಕ್ಷಗಳು, 2) ರೂ. 328.87 ಲಕ್ಷಗಳು, 3) ರೂ. 391.98 ಲಕ್ಷಗಳು, 4) ರೂ. 211.55 ಲಕ್ಷಗಳು, 5) ರೂ. 279.85 ಲಕ್ಷಗಳು, 6) ರೂ. 403.09 ಲಕ್ಷಗಳು ಇರುತ್ತವೆ. ಟೆಂಡರ್ ಅವಧಿ ಮಳೆಗಾಲ ಸಹಿತ ಕ್ರ.ಸಂ. 01 ರಿಂದ 06 (06) ತಿಂಗಳು.

1) ಇ–ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : **13–05–2026 10.30** ರಿಂದ ದಿನಾಂಕ : **20–05–2026** ರ ಸಂಜೆ **4.00** ರವರೆಗೆ, 2) ಆಕ್ಷೇಪಣೆಗಳನ್ನು ಸಲ್ಲಿಸುವ ದಿನಾಂಕ : **18–05–2026** ರ ಸಂಜೆ **4.00** ಘಂಟೆಯವರೆಗೆ, 3) ಬಿಡ್ ಪೂರ್ವ ಸಭೆಯು ಕಾ.ಇಂ. ಕ.ನೀ.ನಿ.ನಿ. ಪುವ & ಪುನಿ ವಿಭಾಗ, ಅಥಣಿ ಕಛೇರಿಯಲ್ಲಿ ಜರುಗಲಿದೆ. ದಿನಾಂಕ : **16–05–2026** ರ ಬೆಳಿಗ್ಗೆ **11.00** ಘಂಟೆಗೆ, 4) ಪೂರ್ಣವಾಗಿ ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **13–05–2026 10.30** ರಿಂದ ದಿನಾಂಕ : **20–05–2026** ರ ಸಂಜೆ **4.00** ರವರೆಗೆ, 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : **22–05–2026** ರ ಬೆಳಿಗ್ಗೆ **11.00** ಘಂಟೆಗೆ, 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : **25–05–2026** ರ ಬೆಳಿಗ್ಗೆ **11.00** ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆ ನಂತರ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಚೇರಿ ದೂರವಾಣಿ ಸಂಖ್ಯೆ : **08289–285031** ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪುವ ಮತ್ತು ಪುನಿ ವಿಭಾಗ, ಅಥಣಿ.

ಡಿಐಪಿಆರ್/ಬೆಳಗಾವಿ/233/ಮಣಿಪಾಲ್/2026–27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-519th) ಡ್ರಾ ಮೇ 12ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]

SR 502927 (KANNUR)

Cons Prize-Rs: 5000/-

SN 502927 SO 502927 SP 502927 SS 502927
ST 502927 SU 502927 SV 502927 SW 502927
SX 502927 SY 502927 SZ 502927

2nd Prize Rs: 30,00,000/- [30 Lakhs]

ST 629044 (THIRUVANANTHAPURAM)

3d Prize Rs: 5,00,000/- [5 Lakhs]

SV 550642 (ALAPPUZHA)

FOR THE TICKETS ENDING WITH THE FOLLOWING NUMBERS

4th Prize Rs.5,000/-

0780 1235 1305 1845 2117 2779 3171 3648 4387 4848 5015 5258 5962 7326 7794 7835 8016 8502 9261

5th Prize Rs.2,000/-

0592 3200 4033 5509 7296 7880

6th Prize Rs.1,000/-

0270 0315 0552 1162 1400 1459 1912 2218 2374 2670 2799 5078 5348 5374 5619 6053 6073 6719 7433 7978 8277 8306 8949 9087 9759

7th Prize Rs.500/-

0176 0184 0190 0376 0603 0645 1057 1394 1577 1731 1896 1909 2036 2061 2122 2536 3213 3241 3308 3354 3361 3441 3469 3544 4058 4400 4498 4758 4940 5155 5386 5815 5947 6172 6195 6378 6445 6462 6529 6645 6653 6685 7129 7256 7295 7383 7502 7574 7617 7719 7721 7782 8023 8198 8205 8330 8390 8528 8555 8557 8663 8695 8748 8774 8893 8939 9148 9295 9300 9566 9649 9702 9729 9830 9874 9894

8th Prize Rs.200/-

0047 0077 0240 0267 0316 0361 0483 0560 0573 0804 1019 1388 1415 1419 1693 1915 2072 2094 2290 2325 2485 2623 2629 2825 2993 3032 3247 3292 3372 3555 3596 3619 3655 3702 3705 3780 3827 3982 4068 4151 4284 4322 4505 4510 4594 4607 4612 4875 5067 5108 5492 5698 5805 5989 5995 6009 6100 6499 6628 6637 6644 6743 6900 6925 7039 7054 7059 7169 7301 7315 7572 7747 7791 7991 8136 8166 8333 8641 8690 8860 9121 9193 9497 9664 9679 9685 9754 9814 9818 9977

9th Prize Rs.100/-

0136 0216 0217 0220 0266 0429 0450 0487 0540 0554 0558 0575 0905 1004 1027 1029 1034 1106 1115 1290 1298 1317 1372 1381 1679 1709 1715 1796 1810 1878 1899 1968 2035 2255 2420 2484 2566 2592 2727 2769 2795 2816 2857 2921 3313 3601 3626 3694 3722 3798 3803 3824 3832 3891 4000 4099 4163 4396 4568 4573 4599 4609 4687 4701 4732 4759 4775 4777 4957 5140 5224 5230 5262 5274 5355 5550 5596 5716 5729 5785 5812 5894 5976 6043 6069 6109 6253 6277 6322 6391 6467 6478 6520 6609 6764 6774 6780 6869 6871 7199 7229 7271 7300 7309 7509 7575 7594 7652 7789 7826 7856 7901 7910 7919 7930 8080 8083 8128 8155 8211 8275 8316 8337 8368 8382 8419 8444 8542 8563 8618 8621 8736 8752 8825 8888 8954 9001 9019 9101 9167 9343 9382 9438 9653 9677 9747 9825 9832 9868 9943

ಪುತ್ತೂರು ಮಾರುಕಟ್ಟೆ ಧಾರಣೆ

12-05-2026

ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	445 - 475
ಚೋಲ್ ಅಡಿಕೆ	:	525 - 550
ಡಬಲ್ ಚೋಲ್	:	525 - 550
ಹೊಸ ಪಟೋರ	:	355 - 405
ಹಳೆ ಪಟೋರ	:	375 - 405
ಹೊಸ ಉಳ್ಳಿ	:	140 - 300
ಹಳೆ ಉಳ್ಳಿ	:	130 - 300
ಹೊಸ ಕೋಕಾ	:	325 - 345
ಹಳೆ ಕೋಕಾ	:	325 - 345
ಹೊಸ ಕರಿಗೋಟು	:	265 - 295
ಹಳೆ ಕರಿಗೋಟು	:	265 - 295
ಹಸಿ ಕೊಕ್ಕೋ	:	70 - 105
ಒಣ ಕೊಕ್ಕೋ	:	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 690

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	254.00
ಆರ್‌ಎಸ್‌ಎಸ್ 2	-	211.00
ಸ್ಕ್ರಾಪ್ 1	-	151.00
ಸ್ಕ್ರಾಪ್ 2	-	140.00

ಕಳೆದುಹೋಗಿದೆ

ಕಡಬ ತಾಲೂಕು, ಸುಬ್ರಹ್ಮಣ್ಯ ಗ್ರಾಮದ ನಂದನಮಜಲುಮನೆ ಎಂಬಲ್ಲಿ ವಾಸಿಸುತ್ತಿರುವ ದಿ। ಎನ್. ಸುಬ್ಬಪ್ಪರವರ ಮಗ, ಸುಮಾರು 47 ವರ್ಷ ಪ್ರಾಯದ, ಲೋಕೇಶ್ ಎನ್.ಎಸ್. ಆದ ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ನನ್ನ ಕಡಬ ತಹಶೀಲ್ದಾರರ ಕಚೇರಿಯ D.Dis.ARM/SR.No.172/2021-12 ರಂತೆ ದಿನಾಂಕ 07–09–2011ರಂದು SUL.73/56 ಕೋವಿ ಪರವಾನಿಗೆ, 2022ರಂದು ಕಡಬ ತಾಲೂಕು ಕಚೇರಿಯಲ್ಲಿ ನವೀಕರಿಸಿದ ಕೋವಿ ಪರವಾನಿಗೆ ಪುಸ್ತಕವು ದಿನಾಂಕ 20–01–2026ರಂದು ನನ್ನ ಮನೆಯಿಂದ ಸುಬ್ರಹ್ಮಣ್ಯಕ್ಕೆ ಹೋಗುತ್ತಿರುವಾಗ ಕಳೆದು ಹೋಗಿರುತ್ತದೆ. ಸಿಕ್ಕಿದವರು ಈ ಮೇಲಿನ ವಿಳಾಸಕ್ಕೆ ಹಿಂತಿರುಗಿಸಬೇಕಾಗಿ ವಿನಂತಿ.

IN THE COURT OF SENIOR CIVIL JUDGE AND JMFC BANTWAL

CRL. M.C: 117/2026

BETWEEN:

1. **SMT. SHAMBHAVI,** AGED 61 YEARS, W/O. CHANDRAHASA SHETTY, D/O. KUNHANNA SHETTY AND SMT. VITAMMA, R/ AT 21-250/1, NAGTHIMAR HOUSE, PANEMANGALORE VILLAGE, BONDALA, BANTWAL-574231
2. **MR. SEETHARAMA KUNHANNA SHETTY,** AGED 60 YEARS S/O. KUNHANNA SHETTY AND MT. VITAMMA R/AT 202, MADHAV KUNJ CHS A-4, MANGESHI SAHARA, NEAR CHATRI BUNGLOW, CHIKANGHAR, KALYAN WEST THANE, MAHARASHTRA-421301
3. **SMT. KUSUMAVATHI,** AGED 55 YEARS, W/O. VISHWANATHA SHETTY, D/O. KUNHANNA SHETTY AND SMT. VITAMMA, R/ AT, KANIYOORU, BORUKATTE, BELTHANGADY TALUK-574217

...PETITIONERS

AND

THE REGISTRAR OF BIRTH & DEATHS TOWN MUNICIPAL BANTWAL

...RESPONDENT

CITATION NOTICE

Whereas the above named petitioners have made an application to this Court seeking direction to enter the death event of the mother of the petitioners Vitamma in the death register maintained by the Respondent and that the above case stands posted to at 08-06-2026 11:00 AM before the above court of hearing. Be it known that persons desiring to oppose the same should file their objections if any in the said court on the said date and time, failing which the matter will be heard and determined. The case is posted on **08-06-2026 at 11:00 AM** for hearing before the grant of Death Certificate.

Given under my hand and seal of the court on this 11th day of May 2026

BY ORDER OF THE COURT

Sd/- CHIEF MINISTERIAL OFFICER

(SENIOR CIVIL JUDGE & JMFC BANTWAL DK)

Sd/- ADVOCATE FOR PETITIONERS

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:(36ಇ):2026–27:ಜೆಇ–1 ದಿನಾಂಕ: 11.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ) /3ನೇ ಕರೆ

ಲೆಕ್ಕಶೀರ್ಷಿಕೆ: **5054–04–337–0–01–154** ಜಿಲ್ಲಾ ರಸ್ತೆಗಳು ಸುಧಾರಣೆಯಡಿ ಇಂಡೆಂಟ್ ನಂ: 30116 ಈ ಕಾಮಗಾರಿಗೆ **3ನೇ ಕರೆಯಾಗಿ ಟೆಂಡರ್ ಕರೆಯಲಾಗಿದ್ದು,** ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 26.05.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಯ ಅಂದಾಜು ಮೊತ್ತ ರೂ.400.00 ಲಕ್ಷ ಆಗಿರುತ್ತದೆ ಮೇಲಿನ ಕಾಮಗಾರಿಗಳಿಗೆ ಕೆ.ಡಬ್ಲ್ಯೂ–4 ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ, ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಭಾಗೀಯ ಕಛೇರಿ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824–2423169.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

DIPR/DK/KSMCA/193/26-27 dt.12.05.2026

ಕರ್ನಾಟಕ ಸರ್ಕಾರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವಕ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.

ದೂರವಾಣಿ: (080) 22213009, 22211246 ಫ್ಯಾಕ್ಸ್: 080–22215602

ಸಂ: ಡಿವೈಇಎಸ್/ತಾಂಶಾ/ಕ್ರೀಯೋ/280/2025–26 ದಿನಾಂಕ:12.05.2026

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ವಿಷಯ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560 001 ಕರ್ನಾಟಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವಿವಿಧ ಕಾಮಗಾರಿಗಳಿಗಾಗಿ ಬೆಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ವಿವರ	ಟೆಂಡರ್‌ಗೆ ಇಟ್ಟ ಮೊತ್ತ	ಇ.ಎಂ.ಡಿ ಮೊತ್ತ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	ಬೆಂಗಳೂರಿನ ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದ ಮೇಲ್ಚಾವಣಿ ದುರಸ್ಥಿ ಮತ್ತು ಟವರ್ ದೀಪಗಳ ಸ್ಟ್ಯಾಂಡ್ ದುರಸ್ಥಿ ಕಾಮಗಾರಿ (Call-2)	ರೂ.236.69 ಲಕ್ಷಗಳು	ರೂ.3,55,044	27–05–2026 ಸಮಯ 16:00 ಗಂಟೆ	29–05–2026 ಸಮಯ 11:30 ಗಂಟೆ
2	ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ನಗರಸಭೆ ವ್ಯಾಪ್ತಿ–ಯಲ್ಲಿರುವ ಶ್ರೀ ಚನ್ನಬೈರೇಗೌಡ ಕ್ರೀಡಾಂಗಣದ ಅಭಿವೃದ್ಧಿ ಕಾಮಗಾರಿ	ರೂ.234.86 ಲಕ್ಷಗಳು	ರೂ.3,52,295	11–06–2026 ಸಮಯ 16:00 ಗಂಟೆ	12–06–2026 ಸಮಯ 16:30 ಗಂಟೆ
3	ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನ ಜಿಲ್ಲಾ ಕ್ರೀಡಾಂಗಣದಲ್ಲಿರುವ 400 ಮೀ ಸಿಂಥೇಟಿಕ್ ಅಥ್ಲೆಟಿಕ್ ಟ್ರ್ಯಾಕ್ ದುರಸ್ಥಿ (Call-3)	ರೂ.249.48 ಲಕ್ಷಗಳು	ರೂ.3,74,220	26–05–2026 ಸಮಯ 16:00 ಗಂಟೆ	27–05–2026 ಸಮಯ 11:30 ಗಂಟೆ

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–

ಸಹಾಯಕ ಕಾರ್ಯಪಾಲಕ ಅಭಿಯಂತರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, (ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)

ಡಿಐಪಿಆರ್/ಸಿಪಿ/604/ಸಿಸಿಎಲ್/2026–27

ಕರ್ನಾಟಕ ಸರಕಾರ

(ಜಲ ಸಂಪನ್ಮೂಲ ಇಲಾಖೆ)

ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ) ಬೇಲೂರು ಕೈಗಾರಿಕಾ ವಸಾಹತು, ಧಾರವಾಡ–580011

ಟೆಂಡರ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ)

ಮಾನ್ಯ ನಿರ್ದೇಶಕರು, ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ, ಬೇಲೂರು ಕೈಗಾರಿಕಾ ವಸಾಹತು, ಧಾರವಾಡ–580011 ಕಚೇರಿ ಅಡಿಯಲ್ಲಿ ಕೆಳಗಿನ ಅರ್ಹ **Nationalized Public sector banks and Private scheduled commercial banks** ರವರಿಂದ **competitive interest rates on fixed deposit** ಪ್ರತಿಶತ ದರದ ಟೆಂಡರನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ಆಹ್ವಾನಿಸಲಾಗಿದೆ.

Sl. No.	Name of Work	Amt. Rs. In Lakhs	Category	EMD Rs.	Period	Category / Class of Contractors
1	e-Tender invited from Private Scheduled Commercial Banks for providing competitive interest rates on Fixed deposit. No. WALMI/2026-27/SE0015	**75.20**	Fixed Deposit	**10000.00**	365 days	Private scheduled commercial banks
2	e-Tender invited from Nationalized Public Sector Banks for providing competitive interest rates on Fixed deposit.No.WALMI/2026-27/SE0014	**112.80**	Fixed Deposit	**10000.00**	365 days	Nationalized Public Sector Banks

ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ನಿಗದಿತ ಇ.ಎಮ್.ಡಿ ಶುಲ್ಕದೊಂದಿಗೆ **https://kppp.karnataka.gov.in** ಪೋರ್ಟಲ್‌ನಲ್ಲಿ, ಅರ್ಜಿಯನ್ನು ದಿನಾಂಕ : **12.05.2026** ರಿಂದ **27.05.2026** ರವರೆಗೆ ಡೌನಲೋಡ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **27.05.2026** ರಂದು ಸಂಜೆ 4.00 ಗಂಟೆಯ ವರೆಗೆ. ಬಿಡ್ ತೆರೆಯುವ ದಿನಾಂಕ : **29.05.2026** ರ ಬೆಳಿಗ್ಗೆ 11:00 ಗಂಟೆಯ ನಂತರ. ಇ.ಎಂ.ಡಿ. ವಿವರ, ಪೂರ್ವಾರ್ಹತೆ ಷರತ್ತುಗಳು, ಟೆಂಡರ ಷರತ್ತುಗಳು ಹಾಗೂ ಇತರೆ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ **(https://kppp.karnataka.gov.in)** ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 0836–2486680 ಸಂಪರ್ಕಿಸುವದು. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ನಿರ್ದೇಶಕರು, ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ. ಬೇಲೂರು ಕೈಗಾರಿಕಾ ವಸಾಹತು, ಧಾರವಾಡ– 580011

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/163/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಕ.ನೀ.ನಿ.ನಿ. ಮ.ಬ.ದಂ.ಕಾ.ನಿ. ವಿಭಾಗ ನಂ–5, ರೋಣ–582209

Ph & Fax No. 08381-267247 E-mail id : knnldiv5@gmail.com

ಸಂ : ಕನೀನಿನಿ/ಮಬದ–5/ಪಿ.ಬಿ/ಟೆಂಡರ/2026–27/115 ದಿನಾಂಕ : 12.05.2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ–2ನೇ ಕರೆ (ಕೆ.ಪಿ.ಪಿ.ಪಿ ವೇದಿಕೆ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾಫಿ ಬೋರ್ಡ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ ಮಬದಕಾನಿ ವಿಭಾಗ ನಂ.05 ರೋಣ ಇವರ ಕಛೇರಿ ಮೂಲಕ ರೋಣ ವಿಭಾಗದ ಕಾರ್ಯವ್ಯಾಪ್ತಿಯಡಿ ಇರುವ 4701 ಲೆಕ್ಕ ಶೀರ್ಷಿಕೆಯ ಕಾಲುವೆ ಆಧುನೀಕರಣ ಕಾಮಗಾರಿಗಳಿಗೆ ಮರು ಟೆಂಡರ್ ಕರೆಯಲಾಗಿದ್ದು, ಟೆಂಡರ್‌ಗಳನ್ನು ದ್ವಿ–ಲಕೋಟೆ ಪದ್ಧತಿ ಮೂಲಕ ಕರೆಯಲಾಗಿದ್ದು ವಿವರಗಳು ಈ ಕೆಳಗಿನಂತಿವೆ.

Sl No	Name of Work	Approximate amount put to tender (In Rs.) (Exluding GST)	EMD Amount (In Rs.)	Stipulated period for Completion	Class of Contractors
1)	Earthwork and lining for remodeling of Distributary-56B of Malaprabha Right Bank Canal ch:5.00-9.00 km including structures. (KNNL/2025-26/CN/WORK_INDENT4235/CALL-2)	**3,49,56,634.75**	**5,25,000.00**	**9** Months (Including monsoon)	KPWD Class-II & Above
2)	Earthwork and lining for remodeling of Itagi Distributary of Malaprabha Right Bank Canal ch:12.00-15.00 km including structures. (KNNL/2025-26/CN/WORK_INDENT4241/CALL-2)	**3,07,95,078.23**	**4,62,000.00**	**9** Months (Including monsoon)	KPWD Class-II & Above
3)	Earthwork and lining for remodeling of Itagi Distributary of Malaprabha Right Bank Canal ch:15.00-17.00 km including structures. (KNNL/2025-26/CN/WORK_INDENT4242/CALL-2)	**2,13,96,707.54**	**3,21,000.00**	**6** Months (Including monsoon)	KPWD Class-II & Above

ಬಿಡ್‌ಗಳನ್ನು ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಕೆ.ಪಿ.ಪಿ.ಪಿ ವೇದಿಕೆ ಮೂಲಕ ಮಾತ್ರ ಸಲ್ಲಿಸಬೇಕು. ಹೆಚ್ಚಿನ ವಿವರಗಳ ಕುರಿತಾದ ಮಾಹಿತಿಯನ್ನು ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ ಮಬದಕಾನಿ ವಿಭಾಗ ನಂ. 05 ರೋಣ ಇವರ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಪಡೆಯುವುದು. ಟೆಂಡರ್ ದಾಖಲಾತಿಗಳನ್ನು KPPP.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ : **13.05.2026** ರ ಬೆಳಿಗ್ಗೆ 11.00 ಘಂಟೆಗೆ ಪಡೆಯಬಹುದಾಗಿರುತ್ತದೆ, ಪ್ರೀ ಬಿಡ್ ಸಭೆಯ ದಿನಾಂಕ : **18.05.2026** ಬೆಳಿಗ್ಗೆ 11.00 ಘಂಟೆಗೆ ಸ್ಥಳ: ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ ಮಬದಕಾನಿ ವಿಭಾಗ ಸಂ. 05 ರೋಣ ಕಛೇರಿ ತಾ॥ ರೋಣ ಜಿ॥ ಗದಗ. ಟೆಂಡರ್ ವಿಚಾರಣೆಗಾಗಿ ಕೊನೆಯ ದಿನಾಂಕ : **21.05.2026** ರ ಸಾಯಂಕಾಲ 05:30 ಘಂಟೆವರೆಗೆ, ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **01.06.2026** ರ ಸಾಯಂಕಾಲ 04:30 ರವರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **02.06.2026** ರ ಸಾಯಂಕಾಲ 5.30 ಘಂಟೆಗೆ. ಮತ್ತು ಆರ್ಥಿಕ ಬಿಡ್‌ಗಳನ್ನು ದಿನಾಂಕ : **10.06.2026** ರಂದು ಬೆಳಿಗ್ಗೆ 11.00 ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆ ದೊರೆತ ನಂತರ ಹಾಜರಾಗಲು ಇಚ್ಛಿಸುವ ಗುತ್ತಿಗೆದಾರರ ಸಮ್ಮುಖದಲ್ಲಿ ಕಾರ್ಯನಿರ್ವಾಹಕ ಇಂಜನೀಯರರು ಕನೀನಿನಿ ಮಬದಕಾನಿ ವಿಭಾಗ ನಂ: 05, ರೋಣ ಕಛೇರಿಯಲ್ಲಿ ತೆರೆಯಲಾಗುವುದು. ಪೂರ್ಣವಿಲ್ಲದ ಟೆಂಡರ್‌ಗಳನ್ನು ಹಾಗೂ ಷರತ್ತುಬದ್ಧವಾಗಿ ಸಲ್ಲಿಸಿದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಅನುಮೋದಿಸುವ ಅಧಿಕಾರವನ್ನು ಹೊಂದಿರುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಸಹ ಹೊಂದಿರುತ್ತಾರೆ.

ಟೆಂಡರ್‌ಗಳ ಹೆಚ್ಚಿನ ಮಾಹಿತಿಯನ್ನು KPPP.karnataka.gov.in ಹಾಗೂ ಈ ಕಛೇರಿಯ ಮುಖಾಂತರ ಪಡೆಯಲು ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ ಮಬದಕಾನಿ ವಿಭಾಗ ನಂ. 5, ರೋಣ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/61/2026–27

ವಿಟಿಯು ಕುಲಪತಿ ನೇತೃತ್ವದ ನಿಯೋಗ ಭೇಟಿ
ತಂತ್ರಜ್ಞಾನಾಧಾರಿತ ಮಾಹಿತಿ ಸಂಗ್ರಹ



ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿದ್ಯಾಶಂಕರ್ ಅವರ ನೇತೃತ್ವದ ನಿಯೋಗ ಶೈಕ್ಷಣಿಕ–ಕೈಗಾರಿಕಾ ಸಹಭಾಗಿತ್ವದ ಭಾಗವಾಗಿ ಮಹಾರಾಷ್ಟ್ರದಲ್ಲಿರುವ ಆವಿಷ್ಕಾರ, ನಾವೀನ್ಯತೆ ಮತ್ತು ಉತ್ಕೃಷ್ಟ ತರಬೇತಿ ಕೇಂದ್ರ ಮತ್ತು ಇಂಡಮರ್ ಏವಿಯೇಷನ್ ಏರೋಸ್ಪೇಸ್ ಕೇಂದ್ರಗಳಿಗೆ ಭೇಟಿ ನೀಡಿತು.

ಭೇಟಿ ನೀಡಿ ಅಲ್ಲಿನ ನಾವೀನ್ಯತೆ, ಇಂಕ್ಯೂಬೇಷನ್, ಉದ್ಯಮಶೀಲತೆ ಮತ್ತು ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಉತ್ತೇಜಿಸುವ ಕೈಗಾರಿಕಾ ಮಾದರಿಯನ್ನು ಅಧ್ಯಯನ ಮಾಡಿತು. ಈಗಾಗಲೇ, ಅಲ್ಲಿನ ಕಾಲೇಜು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ತಂತ್ರಜ್ಞಾನಾಧಾರಿತ ಕಲಿಕೆಯ ಬಗ್ಗೆ ತಿಳಿದುಕೊಂಡಿತು. ಭೇಟಿಯ ವೇಳೆ ಕೃತಕ ಬುದ್ಧಿಮತ್ತೆ, ಏರೋಸ್ಪೇಸ್ ಮತ್ತು ರಕ್ಷಣಾ ತಂತ್ರಜ್ಞಾನಗಳು, ಯುಎವಿ ವ್ಯವಸ್ಥೆಗಳು, ಸ್ಮಾರ್ಟ್ ಮ್ಯಾನುಫ್ಯಾಕ್ಚರಿಂಗ್, ಬ್ಯಾಟರಿ ಮ್ಯಾನೇಜ್ಮೆಂಟ್ ಸಿಸ್ಟಮ್, ಕ್ವಾಂಟಮ್ ಸಂವಹನ ಮತ್ತು ಅಡ್ವಾನ್ಸ್ ಮೆಟೀರಿಯಲ್ಸ್ ಮುಂತಾದ ವಿಷಯಗಳ ಕುರಿತು ತಿಳಿದುಕೊಂಡಿತು.

ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಮಾತನಾಡಿ, ವಿಟಿಯು ಪ್ರಾಯೋಗಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಈ ನಿಟ್ಟಿನಲ್ಲಿ ಕೌಶಲ್ಯ ಕೇಂದ್ರಗಳಿಗೆ ಭೇಟಿ ನೀಡಿ ಇಲ್ಲಿ ನೀಡುತ್ತಿರುವ ತರಬೇತಿ ಕುರಿತು ಮಾಹಿತಿ ಪಡೆದಿದ್ದೇವೆ. ಮುಂದಿನ ದಿನಗಳಲ್ಲಿ ಈ ಕೇಂದ್ರಗಳೊಂದಿಗೆ ಸಹಭಾಗಿತ್ವ ಪಡೆದುಕೊಂಡು ನಮ್ಮ ವಿಟಿಯು ವಿದ್ಯಾರ್ಥಿಗಳಿಗೂ ಈ ರೀತಿಯ ಕೌಶಲ ಶಿಕ್ಷಣವನ್ನು ದೊರಕಿಸಿಕೊಡಲು ಆಲೋಚಿಸಿರುವುದಾಗಿ ತಿಳಿಸಿದರು.

ಈ ವೇಳೆ ವಿಟಿಯು ಕುಲಸಚಿವ(ಆಡಳಿತ)ಪ್ರಸಾದ ಬಿ.ರಾಂಪುರೆ, ಸಂಶೋಧನೆ ಮತ್ತು ಅಭಿವೃದ್ಧಿ ಏರೋಸ್ಪೇಸ್, ರಕ್ಷಣಾ ನಿರ್ದೇಶಕ ಡಾ.ಕಮಾಂಡರ್ ದೇವೇಂದ್ರ ಸಿಂಗ್, ವಿಶೇಷಾಧಿಕಾರಿ ಡಾ.ಅಜಿತ್ ಪದ್ಯಾಣ ಇತರರು ಇದ್ದರು.

ಒಳಚರಂಡಿ ಹೂಳೆತ್ತುವ ಕಾರ್ಯ ಶೀಘ್ರವೇ ಪೂರ್ಣ

ಬೆಂಗಳೂರು: ಮುಂದಿನ 15 ದಿನದಲ್ಲಿ ಒಳಚರಂಡಿ ಹೂಳೆತ್ತುವ ಕಾರ್ಯ ಪೂರ್ಣಗೊಳಿಸಿ ಎಂದು ಅಧಿಕಾರಿಗಳಿಗೆ ಜಲಮಂಡಳಿ ಅಧ್ಯಕ್ಷ ಡಾ.ರಾಮ್‌ಪ್ರಸಾತ್ ಮನೋಹರ್ ಸೂಚಿಸಿದ್ದಾರೆ.

ಜಲಮಂಡಳಿಯ ಕೇಂದ್ರ ಕಚೇರಿಯಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಮುಂಗಾರು ಪೂರ್ವಸಿದ್ಧತಾ ಸಭೆಯ ನಡೆಸಿರುವ ಅವರು, ಮುಂಬರುವ ಮಳೆಗಾಲದಲ್ಲಿ ನಗರದ ಜನತೆಗೆ ಯಾವುದೇ ರೀತಿಯ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಿ. ಮುಂದಿನ 15 ದಿನಗಳ ಒಳಗಾಗಿ ಒಳಚರಂಡಿ ಹೂಳೆತ್ತುವ ಕಾಮಗಾರಿಗಳನ್ನು ಸಂಪೂರ್ಣವಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದಾರೆ. ತುರ್ತು ಸಂದರ್ಭಗಳ ನಿರ್ವಹಣೆ ಕುರಿತು ಅಧಿಕಾರಿಗಳನ್ನು ಎಚ್ಚರಿಸಿದ ಡಾ. ರಾಮ್ ಪ್ರಸಾತ್ ಮನೋಹರ್, ಮಳೆಗಾಲದಲ್ಲಿ ಯಾವುದೇ ಪ್ರದೇಶದಲ್ಲಿ ಮ್ಯಾನ್‌ಹೋಲ್ ಕಟ್ಟಿಕೊಳ್ಳುವ ಅಥವಾ ಇನ್ನಿತರ ತೊಂದರೆಗಳು ಎದುರಾದರೆ, ತಕ್ಷಣವೇ ಸ್ಪಂದಿಸಲು ನಮ್ಮ ವ್ಯವಸ್ಥೆ ಸನ್ನದ್ಧವಾಗಿರಬೇಕು. ಇದಕ್ಕಾಗಿ ಪ್ರತಿಯೊಂದು ಕಾರ್ಪೋರೇಷನ್ ವ್ಯಾಪ್ತಿಗೂ ಒಂದು ಪ್ರತ್ಯೇಕ ತುರ್ತು ನಿರ್ವಹಣಾ ತಂಡವನ್ನು ಸದಾ ಸನ್ನದ್ಧ ಸ್ಥಿತಿಯಲ್ಲಿಟ್ಟುಕೊಳ್ಳಬೇಕು. ಸಾರ್ವಜನಿಕರ ದೂರುಗಳಿಗೆ ವಿಳಂಬವಿಲ್ಲದೆ ಪರಿಹಾರ ಒದಗಿಸಬೇಕು ಎಂದು ಸೂಚಿಸಿದ್ದಾರೆ.



ಜಾಗೃತಿ



ಕರ್ನಾಟಕ ಪಲ್ಮನಾಲಜಿಸ್ಟ್ ಅಸೋಸಿಯೇಷನ್ (ಕೆಪಿಎ)ಯಿಂದ ವಿಶ್ವ ಅಸ್ತಮಾ ದಿನ- 2026 ಅಂಗವಾಗಿ ಜಯನಗರದಲ್ಲಿ ಜಾಗೃತಿ ವಾಕಥಾನ್ ಹಮ್ಮಿಕೊಳ್ಳಲಾಗಿತ್ತು. ಅಸ್ತಮಾ ರೋಗದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಕಿರುಸುದ್ದಿ

ವಾಹನಗಳ ಪರಿವರ್ತನೆಗೆ ನೆರವಿಗೆ ಆಗ್ರಹ



ಬೆಂಗಳೂರು: ಎಲ್‌ಪಿಜಿ ದರ ಏರಿಕೆ ಮತ್ತು ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ಆಟೋ ಮತ್ತು ಟ್ಯಾಕ್ಸಿ ಚಾಲಕರು ತಮ್ಮ ವಾಹನಗಳನ್ನು ಸಿಎನ್‌ಜಿ ಮತ್ತು ಇವಿಗೆ ಪರಿವರ್ತನೆ ಮಾಡಲು ಸಹಾಯ ಧನ ನೀಡುವಂತೆ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟ ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ. ಈ ಸಂಬಂಧ ಮಂಗಳವಾರ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ನಟರಾಜ ಶರ್ಮ ನೇತೃತ್ವದ ನಿಯೋಗ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಸಲ್ಲಿಸಿದೆ. ಮಧ್ಯಪ್ರಾಚ್ಯದ ಯುದ್ಧದ ಕಾರಣದಿಂದ ದೇಶದಲ್ಲಿ ಎಲ್‌ಪಿಜಿ ಅಭಾವ ಹೆಚ್ಚಾಗಿ, ದರ ಕೂಡ ಏರಿಕೆಯಾಗಿದೆ. ಇದರಿಂದ ರಾಜ್ಯದಲ್ಲಿ ಎಲ್‌ಪಿಜಿ ಆಟೋ ಮತ್ತು ಟ್ಯಾಕ್ಸಿ ಚಾಲಕರು, ಮಾಲೀಕರು ಸಂಕಷ್ಟದಲ್ಲಿ ಸಿಲುಕಿದ್ದಾರೆ ಎಂದಿದೆ.

ಪ್ರಧಾನ ಮಂತ್ರಿ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಇಂಧನ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತ ಶರ್ಮ ಅವರು ಇವಿ ವಾಹನ, ಸಾರ್ವಜನಿಕ ಸಾರಿಗೆ, ಕಾರ್ ಪೂಲಿಂಗ್ ಮತ್ತು ಸಿಎನ್‌ಜಿಯನ್ನು ಬಳಸಲು ಕರೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಆಟೋ ಮತ್ತು ಟ್ಯಾಕ್ಸಿ ಚಾಲಕರು ತಮ್ಮ ವಾಹನಗಳನ್ನು ಇವಿ ಮತ್ತು ಸಿಎನ್ ಜಿಗೆ ಪರಿವರ್ತನೆ ಮಾಡಿಕೊಳ್ಳಲು ತಯಾರಿದ್ದು, ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಸಹಾಯ ಧನ ನೀಡಬೇಕು ಎಂದು ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟ ಮನವಿ ಮಾಡಿದೆ.

ಯುವಕನಿಗೆ ಚಾಕು ಇರಿತ: ಪ್ರಕರಣ ದಾಖಲು

ಬೆಂಗಳೂರು: ಆಟೋ ಗ್ಲಾಸ್ ಒಡೆದಿದ್ದನ್ನು ಪ್ರಶ್ನಿಸಿದ ಯುವಕನ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿರುವ ಘಟನೆ ಜಗಜೀವನರಾಮ್ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಈ ಸಂಬಂಧ ಅಶೋಕ ಅಲಿಯಾಸ್ ಸಣ್ಣ ಹಾಗೂ ಪ್ರಮೋದ್ ಎಂಬ ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ. ಮೇ 5ರಂದು ಸಂಜೆ ಸುಮಾರು 5.30ರ ಸಮಯದಲ್ಲಿ ವರಲಕ್ಷ್ಮೀ ಅವರ ಮನೆಯ ಮುಂದೆ ನಿಲ್ಲಿಸಿದ್ದ ಆಟೋದಲ್ಲಿ ಅವರ ಮಗ ರಾಜೇಶ್ ಕುಳಿತು ಮೊಬೈಲ್ ನೋಡುತ್ತಿದ್ದರು. ಈ ವೇಳೆ ಸ್ಥಳಕ್ಕೆ ಬಂದ ಆರೋಪಿ ಅಶೋಕ ಏಕಾಏಕಿ ತನ್ನ ಕೈಯಲ್ಲಿದ್ದ ಚಾಕುವಿನಿಂದ ಆಟೋದ ಮುಂಭಾಗದ ಗ್ಲಾಸ್‌ಗೆ ಹೊಡೆದು ಜಖಂ ಮಾಡಿದ್ದಾನೆ. ಇದನ್ನು ಗಮನಿಸಿದ ರಾಜೇಶ್, ಯಾಕೆ ಆಟೋ ಗ್ಲಾಸ್ ಹೊಡೆದೆ? ಎಂದು ಪ್ರಶ್ನಿಸಿದ್ದಾರೆ. ಇದರಿಂದ ಕುಪಿತಗೊಂಡ ಅಶೋಕನ ಜತೆಯಲ್ಲಿದ್ದ ಪ್ರಮೋದ್, ರಾಜೇಶ್‌ಗೆ ಕೈಯಿಂದ ಹೊಡೆದಿದ್ದಾನೆ. ತಕ್ಷಣವೇ ಅಶೋಕ ತನ್ನಲ್ಲಿದ್ದ ಚಾಕುವಿನಿಂದ ರಾಜೇಶ್ ಅವರ ತಲೆಯ ಭಾಗಕ್ಕೆ ಹಲ್ಲೆ ನಡೆಸಿದ್ದು, ತೀವ್ರ ರಕ್ತಗಾಯವಾಗಿದೆ. ಹಲ್ಲೆಯ ನಂತರ ಆರೋಪಿಗಳು ಅಲ್ಲಿದ್ದ ಜನರಿಗೆ ಹಾಗೂ ದೂರುದಾರರಿಗೆ ಚಾಕು ತೋರಿಸಿ ಬೆದರಿಕೆ ಹಾಕಿ ಸ್ಥಳದಿಂದ ಪರಾರಿಯಾಗಿದ್ದಾರೆ.

ಗಾಯಗೊಂಡ ರಾಜೇಶ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ತಾಯಿಯ ದೂರಿನ ಮೇರೆಗೆ ಜೆ.ಜೆ. ನಗರ ಪೊಲೀಸರು ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಲಂ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಸದ್ಯ ಪ್ರಕರಣದ ತನಿಖೆ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೇಂದ್ರ ಅಂತರ್ಜಲ ಮಂಡಳಿ ವರದಿ ಬಹಿರಂಗ | ಭವಿಷ್ಯದಲ್ಲಿ ನೀರಿನ ಸಮಸ್ಯೆ ಉಲ್ಬಣ ಸಾಧ್ಯತೆ
ಬೆಂಗಳೂರಿನಲ್ಲಿ ಅಂತರ್ಜಲ ಮಟ್ಟ ಪಾತಾಳಕ್ಕೆ

ಮಹೇಶ್ ಹೆಗಡೆ

ಬೆಂಗಳೂರು: ನಗರದ ಅಂತರ್ಜಲಮಟ್ಟ ಆತಂಕಕಾರಿ ಮಟ್ಟ ತಲುಪಿದೆ. ಭವಿಷ್ಯದಲ್ಲಿ ನೀರಿನ ಸಮಸ್ಯೆಯಾಗುವ ಮುನ್ಸೂಚನೆಯಾಗಿದೆ. ಇತ್ತೀಚೆಗೆ ಕೇಂದ್ರದಿಂದ ಬಿಡುಗಡೆಯಾಗಿರುವ ವರದಿಯ ಈ ಅಂಶವನ್ನು ಮತ್ತಷ್ಟು ದೃಢೀಕರಿಸಿದೆ.

ರಾಜ್ಯದಒಟ್ಟಾರೆಅಂತರ್ಜಲಮರುಪೂರಣದಲ್ಲಿಬೆಂಗಳೂರಿನ ಪಾಲು ಕೇವಲ ಶೇ. 3ಕ್ಕಿಂತ ಕಡಿಮೆ ಎನ್ನುವ ಆತಂಕಕಾರಿ ಅಂಶವನ್ನು ಕೇಂದ್ರ ಅಂತರ್ಜಲ ಮಂಡಳಿ(ಸಿಜಿಡಬ್ಲ್ಯುಬಿ) ವರದಿಯಿಂದ ಬಹಿರಂಗವಾಗಿದೆ. ಕೆರೆಗಳ ಪುನರುಜ್ಜೀವನ ಮತ್ತು ಮರುಪೂರಣ ಜಾಗೃತಿಯ ನಡುವೆಯೂ, ಅಂತರ್ಜಲ ಮಟ್ಟ ಕುಸಿಯುತ್ತಿರುವುದು ಆತಂಕಕ್ಕೆ ದಾರಿ ಮಾಡಿಕೊಟ್ಟಿದೆ.

ಕಳೆದ ವರ್ಷ ಕರ್ನಾಟಕದಲ್ಲಿ ಸುಮಾರು 19.3 ಲಕ್ಷ ಹೆಕ್ಟೇರ್-ಮೀಟರ್ ಅಂತರ್ಜಲ ಮರುಪೂರಣವಾಗಿದೆ. ಇದರಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಪಾಲು ತೀರಾ ಕಡಿಮೆಯಾಗಿದೆ. ಬೆಂಗಳೂರು ನಗರದಲ್ಲಿ ಸುಮಾರು 34 ಸಾವಿರ ಹೆಕ್ಟೇರ್-ಮೀಟರ್ ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ 18.6 ಸಾವಿರ ಹೆಕ್ಟೇರ್-ಮೀಟರ್ ಅಂತರ್ಜಲ ಮರುಪೂರಣವಾಗಿದ್ದು, ರಾಜ್ಯದ 31 ಜಿಲ್ಲೆಗಳಲ್ಲೇ ಅತ್ಯಂತ ಕಡಿಮೆಯಾಗಿದೆ.

ಅಂತರ್ಜಲ ಬಳಸುವಲ್ಲಿ ಬೆಂಗಳೂರೇ ಮೊದಲು: ಅಂತರ್ಜಲ ಮರುಪೂರಣದಲ್ಲಿ ಹಿಂದಿರುವ ಬೆಂಗಳೂರು ನಗರ, ಅದರ ಬಳಕೆಯಲ್ಲಿ ಮಾತ್ರ ಮುಂದಿದೆ. ರಾಜ್ಯದಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಅತಿ ಹೆಚ್ಚು ಅಂತರ್ಜಲ ಬಳಸುವ ಜಿಲ್ಲೆಯಾಗಿ



ಬೆಂಗಳೂರು ನಗರ ಹೊರಹೊಮ್ಮಿದೆ.

ಮರುಪೂರಣ ಕುಂಠಿತಕ್ಕೆ ಕಾರಣಗಳೇನು?: ತಜ್ಞರ ಪ್ರಕಾರ ಅಂತರ್ಜಲ ಮರುಪೂರಣವು ಮಳೆಯ ಪ್ರಮಾಣ, ಮಣ್ಣಿನ ಗುಣಲಕ್ಷಣ, ಭೂವೈಜ್ಞಾನಿಕ ರಚನೆ ಮತ್ತು ಸ್ಥಳಗಳ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಬೆಂಗಳೂರಿನಲ್ಲಿ ಅತಿಯಾದ ನಗರೀಕರಣದಿಂದ ಕಾಂಕ್ರೀಟ್ ಮಯವಾಗಿ ಮಳೆನೀರು ಭೂಮಿಗೆ ಇಳಿಯಲು ಜಾಗವೇ ಇಲ್ಲದಂತಾಗಿದೆ.ಬೋರ್‌ವೆಲ್ ಅವಲಂಬನೆ ಹೆಚ್ಚಾಗಿದೆ. ಮರುಪೂರಣಕ್ಕಿಂತಲೂ ಅಂತರ್ಜಲದ ಹೊರತೆಗೆಯುವಿಕೆ ವೇಗವಾಗಿ ನಡೆಯುತ್ತಿದೆ.ಕೆರೆಗಳ ಪುನರುಜ್ಜೀವನ ನಡೆದಿದ್ದರೂ, ಅವುಗಳ ಒಳಹರಿವಿನ ಮಾರ್ಗಗಳು ಒತ್ತುವರಿಯಾಗಿದೆ. ಈ ಎಲ್ಲ ಕಾರಣಗಳು ಅಂತರ್ಜಲ ಮರುಪೂರಣದ ಕುಂಠಿತಕ್ಕೆ ಕಾರಣವೆಂದು ತಜ್ಞರ ಅಭಿಪ್ರಾಯವಾಗಿದೆ.

ಮಳೆ ನೀರು ಜೀವಜಲದ ಮೂಲ. ಬೆಂಗಳೂರಿನಲ್ಲಿ ಮಳೆ ನೀರನ್ನು ಚರಂಡಿಗೆ ಬಿಟ್ಟು ಪ್ರವಾಹಕ್ಕೆ ಎಡೆಮಾಡಿಕೊಡುವುದಲ್ಲದೆ, ಜಲಕ್ಷಾಮ ಸೃಷ್ಟಿಗೆ ಕಾರಣವಾಗುತ್ತಿದೆ. ಮಳೆಗಾಲುವೆಗಳಲ್ಲಿ 100 ಮೀಟರ್‌ಗೆ ಒಂದು ಇಂಗು ಗುಂಡಿ ಮಾಡಬೇಕು.ಆದರೆ ತೀರ್ಮಾನ ತೆಗೆದುಕೊಳ್ಳುವವರಲ್ಲಿ ಇಚ್ಛಾಶಕ್ತಿಯ ಕೊರತೆ ಕಾಣುತ್ತಿದೆ.

■ ರಮೇಶ್ ಬಸಾಪುರ, ಪರಿಸರ ತಜ್ಞ

ನೀರಿನ ಸಮಸ್ಯೆಗೆ ಪರಿಹಾರವೇನು?

ಬೆಂಗಳೂರಿನ ನೀರಿನ ಬಿಕ್ಕಟ್ಟು ನೀಗಿಸಲು ಕನಿಷ್ಠ 10 ಲಕ್ಷ ಮರುಪೂರಣ ಬಾವಿಗಳು ಅಂದರೆ ಒಂದು ಮಿಲಿಯನ್ ಮರುಪೂರಣ ಬಾವಿಗಳು ಅಗತ್ಯವಿದೆ ಎಂದು ತಜ್ಞರ ಅಂದಾಜಾಗಿದೆ. ಬೆಂಗಳೂರು ಗ್ರಾಮಾಂತರದಲ್ಲಿ ಮರುಪೂರಣ ಪ್ರಮಾಣ ನಗರಕ್ಕಿಂತಲೂ ಕಡಿಮೆಯಿರುವುದು ಅಚ್ಚರಿ ಮೂಡಿಸಿದೆ. ಜಲ ಸಂರಕ್ಷಣೆಯ ಕ್ರಮಗಳನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳದಿದ್ದರೆ ಮುಂದಿನ ಪೀಳಿಗೆಗೆ ನೀರಿನ ಭದ್ರತೆ ಒದಗಿಸುವುದು ಕಷ್ಟಸಾಧ್ಯ ಎಂದು ತಜ್ಞರು ಎಚ್ಚರಿಸಿದ್ದಾರೆ. ಪೂರಕವಾಗಿ ಖಾಸಗಿ ಸಹಭಾಗಿತ್ವದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ನಗರದ 510 ಪಾರ್ಕ್‌ಗಳಲ್ಲಿ ಸುಮಾರು 4,000 ಮರುಪೂರಣ ಬಾವಿಯನ್ನು ನಿರ್ಮಿಸುವ ಗುರಿ ಹೊಂದಿದೆ.

ಹೆಚ್ಚು ಮರುಪೂರಣ
ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಆನೇಕಲ್ ಮತ್ತು ಗ್ರಾಮಾಂತರದಲ್ಲಿ ದೊಡ್ಡಬಳ್ಳಾಪುರ ಮುಂಚೂಣಿಯಲ್ಲಿವೆ.

ಕಡಿಮೆ ಮರುಪೂರಣ
ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು ಅತ್ಯಂತ ಹಿಂದುಳಿದಿದೆ. ಗ್ರಾಮಾಂತರ ಭಾಗದಲ್ಲಿ ದೇವನಹಳ್ಳಿಯಲ್ಲಿ ಮರುಪೂರಣ ಪ್ರಮಾಣ ಕಡಿಮೆ ಇದೆ.



ಜಿಂಕೆಕೊಂಬು ಮಾರಾಟ: ಬಂಧನ



ಬೆಂಗಳೂರು: ಜಿಂಕೆ ಕೊಂಬು ಮಾರಾಟ ಮಾಡುತ್ತಿದ್ದ ಅಂತಾರಾಜ್ಯ ಜಾಲವನ್ನು ಭೇದಿಸಿರುವ ಸಿಸಿಬಿ ಮತ್ತು ಚಿಕ್ಕಬಾಣಾವರ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿ, 10 ಲಕ್ಷ ರೂ. ಮೌಲ್ಯದ ಒಂದು ಜಿಂಕೆ ಕೊಂಬನ್ನು ವಶಕ್ಕೆ ಪಡೆದಿದ್ದಾರೆ.

ತಮಿಳುನಾಡು ಮೂಲದ ಮುರಳಿ (29), ಮಂಜುನಾಥ್ (39) ಹಾಗೂ ಕಾರ್ಯಪ್ಪ (53) ಬಂಧಿತ ಆರೋಪಿಗಳು. ಚಿಕ್ಕಬಾಣಾವರದ ಕಾಲೇಜೊಂದರ ಸಮೀಪ ಜಿಂಕೆ ಕೊಂಬು ಮಾರಾಟ ಮಾಡಲು ಈ ಮೂವರು ಆರೋಪಿಗಳು ಬರುತ್ತಿರುವ ಬಗ್ಗೆ ಸಿಸಿಬಿಯ ಸಂಘಟಿತ ಅಪರಾಧ ದಳಕ್ಕೆ (ಪೂರ್ವ) ಖಚಿತ ಮಾಹಿತಿ ದೊರೆತಿತ್ತು.

ಈ ಮಾಹಿತಿಯ ಆಧಾರದ ಮೇಲೆ ಪೊಲೀಸರು ದಾಳಿ ನಡೆಸಿ, ಮೂವರು ವ್ಯಕ್ತಿಗಳನ್ನು ಒಂದು ಜಿಂಕೆ ಕೊಂಬಿನ ಸಮೇತ ವಶಕ್ಕೆ ಪಡೆದಿದ್ದಾರೆ. ಬಂಧಿತರನ್ನು ವಿಚಾರಣೆಗೊಳಪಡಿಸಿದಾಗ, ಹೆಚ್ಚಿನ ಹಣದ ಆಸೆಗಾಗಿ ತಮಿಳುನಾಡಿನ ಕೃಷ್ಣಗಿರಿಯಿಂದ ಅಕ್ರಮವಾಗಿ ಜಿಂಕೆ ಕೊಂಬನ್ನು ಸಾಗಾಟ ಮಾಡಿಕೊಂಡು ಬಂದಿರುವುದಾಗಿ ಆರೋಪಿಗಳು ಒಪ್ಪಿಕೊಂಡಿದ್ದಾರೆ. ಅಲ್ಲದೆ, ಇದೇ ರೀತಿ ಈ ಹಿಂದೆ ಹಲವಾರು ಜನರಿಗೆ ಜಿಂಕೆ ಕೊಂಬುಗಳನ್ನು ಮಾರಾಟ ಮಾಡಿರುವುದಾಗಿಯೂ ಅವರು ಮಾಹಿತಿ ನೀಡಿದ್ದಾರೆ.

ಈ ಕುರಿತು ಚಿಕ್ಕಬಾಣಾವರ ಪೊಲೀಸ್ ಠಾಣೆಯಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆಯಲ್ಲಿ ಪ್ರಕರಣ ದಾಖಲಾಗಿದೆ. ಹೆಚ್ಚಿನ ತನಿಖೆಗಾಗಿ ನ್ಯಾಯಾಲಯ ಆರೋಪಿಗಳನ್ನು ಏಳು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಇವಿ ವಾಹನದ ಬೆಂಕಿ ತಗುಲಿ ವೃದ್ಧ ಸಾವು

ಬೆಂಗಳೂರು: ಚಾರ್ಜ್‌ಗೆ ಹಾಕಿದ್ದ ಎಲೆಕ್ಟ್ರಿಕಲ್ ದ್ವಿಚಕ್ರ ವಾಹನವೊಂದು ಮಧ್ಯರಾತ್ರಿ ಸ್ಫೋಟಗೊಂಡ ಪರಿಣಾಮ, ಮನೆಗೆ ಬೆಂಕಿ ಆವರಿಸಿ ವೃದ್ಧರೊಬ್ಬರು ಸಾವನ್ನಪ್ಪಿರುವ ಘಟನೆ ಹಲಸೂರಿನ ಮರ್ಫಿಟೌನ್‌ನಲ್ಲಿ ನಡೆದಿದೆ. ಆಟೋ ಚಾಲಕರಾಗಿದ್ದ ಲೂರ್ದ್ ನಾದನ್ (65) ಮೃತ ವ್ಯಕ್ತಿ. ಸೋಮವಾರ ರಾತ್ರಿ 11 ವೇಳೆಗೆ ತಮ್ಮ ಎಲೆಕ್ಟ್ರಿಕ್ ವಾಹನವನ್ನು ಚಾರ್ಜ್‌ಗೆ ಹಾಕಿ ಮಲಗಿದ್ದರು. ಮಂಗಳವಾರ ಬೆಳಗಿನ ಜಾವ 3 ಗಂಟೆ ವೇಳೆಗೆ ವಾಹನದ ಬ್ಯಾಟರಿ ಏಕಾಏಕಿ ಸ್ಫೋಟಗೊಂಡಿದೆ ಎನ್ನಲಾಗಿದೆ.ಸ್ಫೋಟದ ತೀವ್ರತೆಗೆ ಇಡೀ ಮನೆಗೆ ಬೆಂಕಿ ವ್ಯಾಪಿಸಿದ್ದು, ಗಾಢ ನಿದ್ರೆಯಲ್ಲಿದ್ದ ಲೂರ್ದ್ ನಾದನ್ ಅವರಿಗೆ ತೀವ್ರ ಸುಟ್ಟಗಾಯಗಳಾಗಿತ್ತು. ತಕ್ಷಣವೇ ಅವರನ್ನು ಚಿಕಿತ್ಸೆಗಾಗಿ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಪರೀಕ್ಷಿಸಿದ ವೈದ್ಯರು ಅವರು ಈಗಾಗಲೇ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ.

ಮಕ್ಕಳ ಹಕ್ಕು ರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರದ ಕುರಿತು ಶಿಬಿರ
ಪೋಕ್ಸೋ ಕಾಯ್ದೆ ಬಗ್ಗೆ ಅರಿವು ಮೂಡಿಸಿ

ಬೆಂಗಳೂರು: ಪೋಕ್ಸೋ ಕಾಯ್ದೆಯ ಕುರಿತು ಸಮಾಜದಲ್ಲಿ ಎಚ್ಚರಿಕೆ ಸಂದೇಶ ಬಿತ್ತರಿಸಬೇಕೆಂದು ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕಿ ಡಾ.ಸಿ.ವಿ.ಸ್ನೇಹಾ ಸೂಚಿಸಿದರು.

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ವಿಭಾಗ, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಪ್ರಕೃತಿ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಮಕ್ಕಳ ಹಕ್ಕುಗಳು ಮತ್ತು ಕಾನೂನುಗಳ ರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರದ ಕುರಿತು ವಿಶೇಷ ತರಬೇತಿ ಶಿಬಿರ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಬಾಲ್ಯ ವಿವಾಹ, ಬಾಲ ಕಾರ್ಮಿಕ



ಮತ್ತು ಬಾಲಗರ್ಭಿಣಿಯರ ಸಮಸ್ಯೆ, ಭ್ರೂಣ ಹತ್ಯೆ, ಭಿಕ್ಷಾಟನೆ ಮತ್ತು ವೇಶ್ಯಾವಾಟಿಕೆಗೆ ಮಕ್ಕಳ ದುರ್ಬಳಕೆ ಇತ್ಯಾದಿ ಸಾಮಾಜಿಕ ಪಿಡುಗುಗಳ ಬಗ್ಗೆ ಜನಜಾಗೃತಿ ಮೂಡಿಸುವ ಪ್ರಯತ್ನದಲ್ಲಿ ವಿದ್ಯಾರ್ಥಿಗಳು ಕೈಜೋಡಿಸುವಂತೆ ಮನವಿ ಮಾಡಿದರು.

ಕುಟುಂಬವೂ ಸೇರಿದಂತೆ ಸಮಾಜದ ವಿವಿಧ ಹಂತಗಳಲ್ಲಿ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ಹೆಣ್ಣು ಮಕ್ಕಳ ಲೈಂಗಿಕ ಶೋಷಣೆಯನ್ನು ತಡೆಗಟ್ಟಲು ಯುವ ಸಮೂಹ ಸಕ್ರಿಯವಾಗಿ ನೆರವಾಗಬೇಕೆಂದು ಹೇಳಿದರು.

ಕುಲಪತಿ ಪ್ರೊ.ರಮೇಶ್.ಬಿ.ಮಾತನಾಡಿ, ಕರ್ನಾಟಕ ದಲ್ಲಿ ಕಳೆದೊಂದು ವರ್ಷದಲ್ಲಿ ಸುಮಾರು 80 ಸಾವಿರ ಬಾಲಗರ್ಭಿಣಿ ಪ್ರಕರಣಗಳು ಪತ್ತೆಯಾಗಿರುವುದು ಆತಂಕದ ವಿಷಯವಾಗಿದೆ. ಹದಿಹರೆಯದ ಹೆಣ್ಣು ಮಕ್ಕಳನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ಆಕರ್ಷಿಸಿ ದುರ್ಬಳಕೆ ಮಾಡಿಕೊಳ್ಳುವ ವಂಚಕರ ಜಾಲದ ಬಗ್ಗೆ ಸದಾ ಜಾಗೃತವಾಗಿರಬೇಕೆಂದರು. ಬೆಂಗಳೂರು ನಗರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಲೀಲಾ ಕಲ್ಲಮ್ಮನವರ್, ಮಕ್ಕಳ ಕಲ್ಯಾಣ ಸಮಿತಿಯ ನಿಕಟಪೂರ್ವ ಅಧ್ಯಕ್ಷೆ ಮೀನಾ ಜೈನ್ ಮತ್ತು ಎನ್ ಫೋಲ್ಡ್ ಸಂಸ್ಥೆಯ ನಿರ್ದೇಶಕಿ ಮಿಷಿ ಕುಶಾಲಪ್ಪ ಉಪಸ್ಥಿತರಿದ್ದರು.

ತಂತ್ರಜ್ಞಾನ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರಕ್ಕೆ ಶಿಲಾನ್ಯಾಸ
ಆಧುನಿಕ ತಂತ್ರಜ್ಞಾನ ಕೇಂದ್ರ ಸ್ಥಾಪನೆ

ಬೆಂಗಳೂರು: ದೇಶದ ಉತ್ಪಾದನಾ ವಲಯವನ್ನು ಬಲಪಡಿಸಲು ಮತ್ತು ಜಾಗತಿಕ ಮಟ್ಟದಲ್ಲಿ ನಮ್ಮ ಕೈಗಾರಿಕೆಗಳು ಸ್ಪರ್ಧಿಸುವಂತೆ ಮಾಡಲು ಸರ್ಕಾರವು ಆಧುನಿಕ ತಂತ್ರಜ್ಞಾನ ಕೇಂದ್ರವನ್ನು ನಿರಂತರವಾಗಿ ಸ್ಥಾಪಿಸುತ್ತಿದೆ ಎಂದು ಕೇಂದ್ರ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಜಿತನ್ ರಾಮ್ ಮಾಂಝಿ ತಿಳಿಸಿದರು.

ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಮಂಗಳವಾರ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮದ ತಂತ್ರಜ್ಞಾನ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರಕ್ಕೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು. ಪ್ರಸ್ತುತ ದೇಶದಲ್ಲಿ ಒಟ್ಟು 53 ತಂತ್ರಜ್ಞಾನ ಕೇಂದ್ರಗಳಿವೆ. ಈ ಪೈಕಿ 29 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 15 ಕೇಂದ್ರಗಳ ನಿರ್ಮಾಣ ಪ್ರಗತಿಯಲ್ಲಿದ್ದು, 9 ಕೇಂದ್ರಗಳಲ್ಲಿ ಯಂತ್ರೋಪಕರಣಗಳ ಅಳವಡಿಕೆ ನಡೆಯುತ್ತಿದೆ ಎಂದರು. ಪೀಣ್ಯದಲ್ಲಿ ಸ್ಥಾಪನೆಯಾಗುತ್ತಿರುವ ಈ ಕೇಂದ್ರವು ದಕ್ಷಿಣ ಭಾರತದಲ್ಲೇ ಮೊದಲನೆಯದು. ದಿಲ್ಲಿಯ ನಂತರ ಇಂತಹ ಕೇಂದ್ರ ಬೆಂಗಳೂರಿನಲ್ಲಿ ಸ್ಥಾಪನೆಯಾಗುತ್ತಿರುವುದು ಹೆಮ್ಮೆಯ ವಿಷಯ. 2047ರ ವೇಳೆಗೆ ವಿಕಸಿತ ಭಾರತವನ್ನು ನಿರ್ಮಿಸುವ



ಸಂಕಲ್ಪದಲ್ಲಿ ಇಂತಹ ತಂತ್ರಜ್ಞಾನ ಕೇಂದ್ರಗಳು ಪ್ರಮುಖ ಪಾತ್ರ ವಹಿಸಲಿವೆ ಎಂದು ಹೇಳಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಎಂ.ಎಸ್.ಎಂ.ಇ ಸಚಿವಾಲಯದ ಕಾರ್ಯದರ್ಶಿ ಭರತ್ ಖೇರಾ ಮಾತನಾಡಿದರು. ಸಂಸದ ಡಾ. ಮಂಜುನಾಥ್, ಶಾಸಕರಾದ ಮುನಿರತ್ನ, ಎಸ್. ಮುನಿರಾಜು ಮತ್ತಿತರರು ಭಾಗವಹಿಸಿದ್ದರು.

ಮೇ 25ರಿಂದ ಸಿಇಟಿ ಸೀಟು ಹಂಚಿಕೆ ಮಂಥನ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಸಂಬಂಧ ಜಾಗೃತಿ ಮೂಡಿಸುವ ಸಿಇಟಿ ಸೀಟು ಹಂಚಿಕೆ ಮಂಥನ ಕಾರ್ಯಕ್ರಮವನ್ನು ಮೇ 25ರಿಂದ 30ರವರೆಗೆ ರಾಜ್ಯದ ಎಲ್ಲ ಸರ್ಕಾರಿ ಮತ್ತು ಅನುದಾನಿತ ಎಂಜಿನಿಯರಿಂಗ್, ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಚೇರಿಯಲ್ಲಿ ಹಮ್ಮಿಕೊಳ್ಳಲಾದ ಸೀಟು ಹಂಚಿಕೆ ಮಂಥನ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿ, ಪ್ರತಿ ಕಾಲೇಜಿನಿಂದಲೂ ಮೂರು-ನಾಲ್ಕು ಮಂದಿ ಉಪನ್ಯಾಸಕರನ್ನು ಆಹ್ವಾನಿಸಿ, ಸೀಟು ಹಂಚಿಕೆ ಬಗ್ಗೆ ಇಡೀ ದಿನ ತರಬೇತಿ ನೀಡಲಾಯಿತು. 170 ಕ್ಕೂಹೆಚ್ಚು ಉಪನ್ಯಾಸಕರು ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ತರಬೇತಿ ಪಡೆದ ಉಪನ್ಯಾಸಕರು ತಮ್ಮ ಕಾಲೇಜು ಗಳಲ್ಲಿ ನಡೆಯುವ ಸೀಟು ಹಂಚಿಕೆ ಮಂಥನದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು, ಪೋಷಕರಿಗೆ ಪ್ರಾತ್ಯಕ್ಷಿಕೆ ಮೂಲಕ ಜಾಗೃತಿ ಮೂಡಿಸ ಲಿದ್ದಾರೆ. ಕಳೆದ ಬಾರಿ ಕೇವಲ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ನಡೆದ ಈ ಮಂಥನ ಕಾರ್ಯಾಗಾರ ಈ ವರ್ಷ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿಯೂ ನಡೆಯಲಿದೆಂದು ವಿವರಿಸಿದರು.

ಕಳೆದ ವರ್ಷ ಕಡಿಮೆ ಅವಧಿಯಲ್ಲಿ ಕಾರ್ಯಕ್ರಮ



ಆಯೋಜಿಸಿದ್ದರಿಂದ ಕೆಲವು ಗೊಂದಲ ಆಗಿತ್ತು. ಆದರೆ ಈ ಬಾರಿ ಮುಂಗಡವಾಗಿ ದಿನಾಂಕ ಮತ್ತು ಸಮಯ ಕಾಯ್ದಿರಿಸಿಕೊಂಡು ಬರುವ ಹಾಗೆ ಕೆಇಎ ವತಿಯಿಂದಲೇ ಆ್ಯಪ್ ಬಿಡುಗಡೆ ಮಾಡಲಿದ್ದು, ಕೊನೆ ಕ್ಷಣದ ಗೊಂದಲಗಳಿಗೆ ತೆರೆ ಬೀಳಲಿದೆ. ಸ್ಲಾಟ್ ಬುಕ್ ಮಾಡಿಕೊಂಡು ಬಂದವರಿಗೇ ಕಾಲೇಜುಗಳಲ್ಲಿ ತರಬೇತಿ ಕಾರ್ಯಾಗಾರ ನಡೆಯಲಿದೆ. ಆಪ್ಷನ್ಸ್ ದಾಖಲು, ಸೀಟು ಹಂಚಿಕೆ, ಚಾಯ್ಸ್ ದಾಖಲು, ಶುಲ್ಕ ಪಾವತಿ ಹಾಗೂ ಪ್ರವೇಶದ ಬಗ್ಗೆ ಜಾಗೃತಿ ಮೂಡಿಸ ಲಾಗುತ್ತದೆ. ಈ ಹಂತಗಳ ಮಾಹಿತಿ ಇಲ್ಲದೆ ಅನೇಕರು ತೊಂದರೆಗೆ ಒಳಗಾಗುತ್ತಿದ್ದು, ಅದನ್ನು ತಪ್ಪಿಸುವ ಉದ್ದೇಶ ದಿಂದ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ವೈದ್ಯಕೀಯ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್ ಮಾತನಾಡಿ, ಮಂಥನ ಕಾರ್ಯಕ್ರಮದ ಸಂದರ್ಭದಲ್ಲಿ ಬರುವ ವಿದ್ಯಾರ್ಥಿಗಳು, ಪೋಷಕರಿಗೆ ಕಾಲೇಜುಗಳಲ್ಲಿನ ಶೈಕ್ಷಣಿಕ ವಾತಾವರಣ ತೋರಿಸುವ ಕೆಲಸವೂ ಮಾಡಬೇಕೆಂದು ಸಲಹೆ ನೀಡಿದರು.

ಮನೆಗಳಲ್ಲಿ ಚಿನ್ನಾಭರಣ ಕಳವು: ವಶ

ಬೆಂಗಳೂರು: ನಗರದಲ್ಲಿ ಮನೆ ಕಳ್ಳತನ ಮಾಡುತ್ತಿದ್ದ ಅಂತಾರಾಜ್ಯ ಕಳ್ಳರ ತಂಡ ಹಾಗೂ ಓರ್ವ ಕುಖ್ಯಾತ ಕಳ್ಳನನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದು, ಒಟ್ಟು 90 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಕೆ.ಆರ್.ಪುರಂ ಪೊಲೀಸ್ ಠಾಣಾ ವ್ಯಾಪ್ತಿಯ ಆನಂದಪುರದಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದಿದ್ದ ಕನ್ನ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ರಾಜಸ್ಥಾನ ಮೂಲದ ಗೋಪಾಲ್ (29), ಕೈಲಾಶ್ (30) ಹಾಗೂ ಉತ್ತರ ಪ್ರದೇಶ ಮೂಲದ ನಾಗೇಂದ್ರ ಸಹನಿ (36) ಬಂಧಿಸಿದ್ದಾರೆ.

ಬಂಧಿತರಿಂದ 40 ಲಕ್ಷ ರೂ. ಮೌಲ್ಯದ 196 ಗ್ರಾಂ ಚಿನ್ನಾಭರಣ, 1.756 ಕೆ.ಜಿ. ಬೆಳ್ಳಿ ಮತ್ತು 22 ಸಾವಿರ ನಗದು ವಶಪಡಿಸಿಕೊಳ್ಳಲಾಗಿದೆ. ಈ ತಂಡವು ಸಂಬಂಧಿಕರ ಮದುವೆಗೆ ತೆರಳಿದ್ದ ಪಿರ್ಯಾದುದಾರರ ಮನೆಯ ಬಾಗಿಲು ಮುರಿದು ಕಳ್ಳತನ ಮಾಡಿತ್ತು. ವೈಟ್‌ಫೀಲ್ಡ್ ಡಿಸಿಪಿ ಸೈದುಲು ಅಡಾವತ್ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದೆ.

ಕೋಣನಕುಂಟೆಯಲ್ಲಿ ಕಳವು: ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಪ್ರಕರಣ ಸಂಬಂಧ ಕೋಣನಕುಂಟೆ ಪೊಲೀಸರು ಮಂಡ್ಯ ಜಿಲ್ಲೆಯ



ಮದ್ದೂರು ಬಳಿ ಮಹೇಶ್ ಗೌಡ (36) ಆರೋಪಿಯನ್ನು ಬಂಧಿಸಿದ್ದಾರೆ. ಈತನ ಬಂಧನದಿಂದ ಕೋಣನಕುಂಟೆ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಒಟ್ಟು 5 ಮನೆ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ. ಆರೋಪಿಯಿಂದ 50 ಲಕ್ಷ ರೂ. ಮೌಲ್ಯದ 318 ಗ್ರಾಂ ಚಿನ್ನ ಮತ್ತು ಡೈಮಂಡ್ ಆಭರಣ ಹಾಗೂ 2. 435 ಕೆ.ಜಿ. ಬೆಳ್ಳಿಯ ವಸ್ತುಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಆರೋಪಿಯು ಕಳ್ಳತನ ಮಾಡಿದ ಮಾಲನ್ನು ಮದ್ದೂರಿನ ಜ್ಯುವೆಲ್ಲರಿ ಅಂಗಡಿಗಳಲ್ಲಿ ಅಡಮಾನ ವಿಟ್ಟು ಮಾರಾಟ ಮಾಡಿದ್ದಾಗಿ ಒಪ್ಪಿಕೊಂಡಿದ್ದಾನೆ. ನೈರುತ್ಯ ವಿಭಾಗದ ಡಿಸಿಪಿ ಅನಿತಾ ಬಿ. ಹದ್ದಣ್ಣನವರ ನೇತೃತ್ವದ ತಂಡ ಈ ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿದೆ. ಈ ಎರಡೂ ಪ್ರಕರಣಗಳ ಒಟ್ಟು ನಾಲ್ವರು ಆರೋಪಿಗಳನ್ನು ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಕಾವೂರು ಶ್ರೀ ರಾಘವೇಂದ್ರ ಮಠದಲ್ಲಿ ವಸಂತ ವೇದ ಪಾಠ ಶಿಬಿರಕ್ಕೆ ಚಾಲನೆ



ಸುರತ್ಕಲ್ : ಕಾವೂರು ಶ್ರೀ ರಾಘವೇಂದ್ರ ಮಠದಲ್ಲಿ ಶಿವಳ್ಳಿ ಸಭಾ ಮಂಗಳೂರು ಇದರ ಸಹಭಾಗಿತ್ವದಲ್ಲಿ ವಸಂತ ಶಿಬಿರವು ಶುಭಾರಂಭಗೊಂಡಿತು. ಸುಮಾರು 80 ಜನ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ನೋಂದಣಿಯಾಗಿದ್ದು ಮೂರು ವಿಭಾಗಗಳಲ್ಲಿ ಮಕ್ಕಳಿಗೆ ಪಾಠಗಳನ್ನು ಮಾಡಲಾಗುತ್ತಿದೆ. ಕಾವೂರು ರಾಘವೇಂದ್ರ ಮಠದ ವ್ಯವಸ್ಥಾಪಕರಾದ ಸುದರ್ಶನ ಬನ್ನಿಂತಾಯರವರು ದೀಪ ಬೆಳಗಿಸಿ ಶಿಬಿರವನ್ನು ಉದ್ಘಾಟಿಸಿದರು. ಶಿವಳ್ಳಿ ಸಭಾ ತಾಲೂಕು ಅಧ್ಯಕ್ಷರಾದ ಉದಯಶಂಕರ್ ಹಾಗೂ ಇತರ ತಾಲೂಕು ಪದಾಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು, ಶಿವಳ್ಳಿ ಸಭಾ ಕಾವೂರುವಲಯದಅಧ್ಯಕ್ಷರಾದಅರವಿಂದ ಹೆಬ್ಬಾರ್ ಹಾಗೂ ಕಾವೂರು ವಲಯದ ಅನೇಕ ಸದಸ್ಯರು ಉಪಸ್ಥಿತರಿದ್ದರು.

ಅನಂತರ ಭಜನೆ, ಜಪ, ದೇವ ಪೂಜಾ ಪದ್ಧತಿ, ವಾಯುಸ್ತುತಿ, ವೇದ ಪಾಠಗಳು, ವಿಷ್ಣು ಸಹಸ್ರನಾಮ, ಪಂಚಾಂಗ (ಜ್ಯೋತಿಷ್ಯ) ಕುಣಿತ ಭಜನೆ, ಸಂಸ್ಕೃತ ಸಂಭಾಷಣೆ, ರಂಗೋಲಿ, ಮುಖವರ್ಣಿಕೆ ಮುಂತಾದ ಅನೇಕ ತರಗತಿಗಳನ್ನು ನಡೆಸಲಾಗುತ್ತಿದೆ.

ಕಿರು ಸುದ್ದಿ

ರಾಷ್ಟ್ರ ಮಟ್ಟದ ಮಾಡೆಲಿಂಗ್ ಸ್ಪರ್ಧೆಯಲ್ಲಿ ಲೌಖ್ಯ ಎಸ್. ರೈ, ಸಚಿತಾ ರಾವ್ ಸಾಧನೆ




ಮಂಗಳೂರು: ಕಲ್ಲಿಕೋಟೆಯಲ್ಲಿ ಫ್ಯಾಶನ್ ರನ್ ವೇ ಸಂಸ್ಥೆಯು ಆಯೋಜಿಸಿದ 10 ನೇ ಆವೃತ್ತಿಯ ಜ್ಯೂನಿಯರ್ ಮಾಡೆಲ್ ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ನಗರದ ವೈರಾ ಪೇಜೆಂಟ್ರಿ ಮತ್ತು ಮಾಡೆಲಿಂಗ್ ಸ್ಕೂಲ್‌ನ ವಿದ್ಯಾರ್ಥಿಗಳಾದ 6 ವರ್ಷದ ಲೌಖ್ಯ ಎಸ್. ರೈ ಮತ್ತು 12 ವರ್ಷದ ಸಚಿತಾ ರಾವ್ ವಿಶೇಷ ಸಾಧನೆ ಮಾಡಿದ್ದಾರೆ. 6 ರಿಂದ 8 ವರ್ಷ ಮಹಿಳಾ ವಿಭಾಗದಲ್ಲಿ ಲೌಖ್ಯ ರೈ ಅವರು ಎಸ್‌ಆರ್‌ಟಿಒಡಿ ಜೆಎಂಐ ಇಂಡಿಯ ಟೈಟಲ್ ಮತ್ತು ಅಸಾಧಾರಣ ಪ್ರತಿಭೆ ಗರಿಯನ್ನು ತನ್ನದಾಗಿಸಿಕೊಂಡಿದ್ದಾರೆ. 10 ರಿಂದ 12 ವರ್ಷ ವಿಭಾಗದಲ್ಲಿ ಸಚಿತಾ ರಾವ್ ಅವರು ಮಿಸ್ ಪ್ರಿ ಟೀನ್ ಜೆಎಂಐ ಇಂಡಿಯ ಪ್ರಶಸ್ತಿ ಗೆದ್ದಿದ್ದಾರೆ. ಇದರೊಂದಿಗೆ ಈ ಇಬ್ಬರೂ ಸ್ಪರ್ಧಿಗಳು ಆಗಸ್ಟ್‌ನಲ್ಲಿ ಬ್ಯಾಂಕಾಕ್‌ನಲ್ಲಿ ನಡೆಯಲಿರುವ ಜ್ಯೂನಿಯರ್ ಮಾಡೆಲ್ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ ಎಂದು ವೈರಾ ಪೇಜೆಂಟ್ರಿ ಮತ್ತು ಮಾಡೆಲಿಂಗ್ ಸ್ಕೂಲ್‌ನ ತರಬೇತುದಾರರಾದ ಯಶಸ್ವಿನಿ ದೇವಾಡಿಗ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಲೌಖ್ಯ ರೈ ಅವರು ಸಚಿನ್ ಮತ್ತು ಸುಷ್ಮಾ ರೈ ದಂಪತಿ ಪುತ್ರಿ, ಸಚಿತಾ ರಾವ್ ಅವರು ಸಚಿನ್ ರಾವ್ ಮತ್ತು ಅಶ್ವಿನಿ ರಾವ್ ದಂಪತಿ ಪುತ್ರಿ ಎಂದು ತಿಳಿಸಿದರು.

ದಿ.ನವೀನ್ ಕುಮಾರ್ ರೈ ಮೇನಾಲ ಸ್ಮರಣಾರ್ಥ ನಾಳೆ ಬಸ್ಸು ತಂಗುದಾಣ ಲೋಕಾರ್ಪಣೆ



ಸುಳ್ಯ: ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ, ಬಿಜೆಪಿ ಮುಖಂಡ ದಿ. ನವೀನ್ ಕುಮಾರ್ ರೈ ಮೇನಾಲ ಸಂಸ್ಮರಣೆ ದಿನಾಚರಣೆ ಹಿನ್ನಲೆಯಲ್ಲಿ ಅವರ ನೆನಪಿನ ಸ್ಮಾರಕ ವಾಗಿ ನೂತನ ಬಸ್ಸು ತಂಗುದಾಣ ಲೋಕಾ ರ್ಪಣೆ ಮೇ 14ರಂದು ನಡೆಯ ಲಿದೆ. ದಿ. ನವೀನ್ ಕುಮಾರ್ ರೈ ಸಂಸ್ಮರಣೆಗಾಗಿ ಮೇನಾಲದಲ್ಲಿ ಅಭಿಮಾನಿಗಳು ಸ್ಮಾರಕ ಜೊತೆಗೆ ಬಸ್ಸು ತಂಗುದಾಣ ನಿರ್ಮಾಣ ಕೈಗೊಂಡಿದ್ದಾರೆ. ಅಜ್ಜಾವರ ದೇಗುಲದ ಕಾರ್ಯಕ್ರಮಕ್ಕೆ ಆಗಮಿಸುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸ್ಮಾರಕವನ್ನು ಲೋಕಾರ್ಪಣೆಗೊಳಿಸಲಿದ್ದಾರೆ ಎಂದು ಮೇನಾಲ ಅಭಿಮಾನಿ ಬಳಗ ತಿಳಿಸಿದೆ.

ಮೇ 15, 16: 'ಅಧಿಗಮ-ಜ್ಞಾನದ ಬಲವರ್ಧನೆ'

ಮಂಗಳೂರು: ಲೆಕ್ಕ ಪರಿಶೋಧಕ ಸದಸ್ಯರಿಗಾಗಿ ಐಸಿಎಐನ ಮಂಗಳೂರು ಶಾಖೆಯಿಂದ ಮೇ 15 ಮತ್ತು 16 ರಂದು ರಾಷ್ಟ್ರೀಯ ಸಮ್ಮೇಳನ 'ಅಧಿಗಮ-ಜ್ಞಾನದ ಬಲವರ್ಧನೆ' ಸಮಾವೇಶ ನಗರದ ಮೇರಿಹಿಲ್‌ನ ಪಾಲೆಮಾರ್ ಕನ್ವೆನ್ಶನ್ ಸೆಂಟರ್‌ನಲ್ಲಿ ನಡೆಯಲಿದೆ.

ಮೇ 15ರಂದು ಬೆಳಗ್ಗೆ 11ಕ್ಕೆ ನಿಟ್ಟೆ ವಿಶ್ವವಿದ್ಯಾಲಯ ಪ್ರೊ ಛಾನ್ಸಲರ್ ಡಾ. ಶಾಂತಾರಾಮ್ ಶೆಟ್ಟಿ ಉದ್ಘಾಟಿಸುವರು. ಮೊದಲ ದಿನ 4 ಹಾಗೂ 2ನೇ ದಿನ 3 ಗೋಷ್ಠಿಗಳು ನಡೆಯಲಿವೆ.ಮೊದಲ ಗೋಷ್ಠಿ ಮೇ.15 ರಂದು ಬೆಳಗ್ಗೆ 9.30 ರಿಂದ 11 ಗಂಟೆಯವರೆಗೆ ನಡೆಯಲಿದ್ದು, ಐಸಿಎಐನ ಕೇಂದ್ರ ಮಂಡಳಿಯ ಸದಸ್ಯ ಸಿಎ ದಯಾನಿವಾಸ ಶರ್ಮಾ ಮತ್ತು ಸಿಎ ಕಾರ್ತಿಕೇಯ ಶೆಣೈ ಅವರು ಡಿಜಿಟಲ್ ಯುಗದಲ್ಲಿ ಹೊಸ ಯುಗದ ವೃತ್ತಿಪರ ಅವಕಾಶಗಳು ಎಂಬ ವಿಷಯದ ಬಗ್ಗೆ ಮಾತನಾಡಲಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಸಿಎ ಡ್ಯಾನಿಯಲ್ ಮಾರ್ಷ್ ಪಿರೇರಾ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಳಗ್ಗೆ 11.30ಕ್ಕೆ ಎರಡನೇ ಅಧಿವೇಶನದಲ್ಲಿ ಸಂಸದ ಬ್ರಿಜೇಶ್ ಚೌಟ, ಮಿಥುನ್ ಡಿಸೋಜ ಭಾಗವಹಿಸುವರು. ಎಂ. ಆತ್ಮಿಕಾ ಅಮೀನ್ ಗೋಷ್ಠಿಯನ್ನು ನಡೆಸಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಮೂರನೇ ಗೋಷ್ಠಿಯಲ್ಲಿ ಸಿಎ ಉದಯ ಕುಲಕರ್ಣಿ, ಸಂಜೆ 4ಕ್ಕೆ ನಾಲ್ಕನೇ ಗೋಷ್ಠಿಯಲ್ಲಿ ಸಿಎ ಪಂಕಜ್ ಶಾ ಭಾಗವಹಿಸುವರು ಎಂದರು.

ಮಾ.16ರಂದು ಎಸಿಎಐನ ಕೇಂದ್ರ ಮಂಡಳಿ ಸದಸ್ಯ ಸಿಎ ಪ್ರಮೋದ್ ಜೈನ್ ಅವರು ಆದಾಯ ತೆರಿಗೆ ಕಾಯ್ದೆ-2025ರ ಅಡಿಯಲ್ಲಿ ಮರು ಮೌಲ್ಯಮಾಪನ ಪ್ರಕ್ರಿಯೆಗಳು ಎಂಬ ವಿಷಯದ ಬಗ್ಗೆ ಮಾತನಾಡಲಿದ್ದಾರೆ.

ಬಂಡವಾಳ ಮಾರುಕಟ್ಟೆಯ ಕುರಿತು ಸಿಎ ರಾಧಾ ಕೃತಿವಾಸನ್ ಮಾತನಾಡಲಿದ್ದು, ಬೆಂಗಳೂರಿನ ಕೆ.ಜಿ. ಆಚಾರ್ಯ ಆಂಡ್ ಕಂಪೆನಿಯ ಪಾಲುದಾರ, ಕರ್ಣಾಟಕ ಬ್ಯಾಂಕ್‌ನ ಲೆಕ್ಕ ಪರಿಶೋಧನಾ ಸಮಿತಿ ಮಂಡಳಿಯ ಅಧ್ಯಕ್ಷ ಸಿಎ ಗುರುರಾಜ್ ಆಚಾರ್ಯ ಅವರಿಂದ 2025ರ ಆದಾಯ ತೆರಿಗೆ ಅಧಿವೇಶನ ನಡೆಯಲಿದೆ. ಸಂಜೆ ಸಿಎ ಕುಟುಂಬದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದರು. ಉಪಾಧ್ಯಕ್ಷೆ ಸಿಎ ಮಮತಾ ರಾವ್, ಕಾರ್ಯದರ್ಶಿಸಿಎ ಬಾಲಸುಬ್ರಹ್ಮಣ್ಯ ಎನ್., ಖಜಾಂಚಿ ಸಿಎ ನಿತಿನ್ ಬಾಳಿಗಾ, ಸಿಕಾಸಾ ಅಧ್ಯಕ್ಷ ಸಿಎ ಗೌರವ್ ಹೆಗ್ಡೆ, ಸದಸ್ಯರಾದ ಸಿಎ ಪ್ರಶಾಂತ್ ಪೈ ಕೆ., ಕೃಷ್ಣಾನಂದ ಪೈ ಬಿ. ಉಪಸ್ಥಿತರಿದ್ದರು.

ನಿಧನ ಸುದ್ದಿ

ಕೃಷ್ಣಮೂರ್ತಿ ಅಡಿಗ



ಕೋಟ: ಸಾಲಿಗ್ರಾಮದಲ್ಲಿ 40 ವರ್ಷಗಳಿಂದ ಇಲೆಕ್ಟ್ರಿಕಲ್ ಅಂಗಡಿ ನಡೆಸುತ್ತಿದ್ದ, ಇನ್‌ವರ್ಟರ್ ರಿಪೇರಿಯಲ್ಲಿ ವಿಶೇಷ ಪರಿಣತಿ ಪಡೆದಿರುವ ಸಾಲಿಗ್ರಾಮ ಕೃಷ್ಣಮೂರ್ತಿ ಅಡಿಗ (60) ಅಲ್ಪಕಾಲದ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಜಯ ಪೂಜಾರಿ



ಬಂಟ್ವಾಳ: ಇಲ್ಲಿನ ಸಂಗಬೆಟ್ಟು ಗ್ರಾಮದ ಜಾಂಬಲ್ಕೆ ನಿವಾಸಿ, ದೈವಪಾತ್ರಿ ಜಯ ಪೂಜಾರಿ (42) ಇವರು ಅಸೌಖ್ಯದಿಂದ ಸ್ವಗೃಹದಲ್ಲಿ ನಿಧನರಾಗಿದ್ದಾರೆ. ಮೃತರು ಪತ್ನಿಯನ್ನು ಅಗಲಿದ್ದಾರೆ. ಮೃತರು ದೈವ ಪಾತ್ರಿ ಜೊತೆಗೆ ಅಡುಗೆ ತಯಾರಿ ಬಗ್ಗೆ ಪರಿಣತಿ ಹೊಂದಿದ್ದರು.



ಕಾಸರಗೋಡು ಎಡನೀರು ಶ್ರೀ ಮಠಕ್ಕೆ ಆಗಮಿಸಿದ ಶೃಂಗೇರಿ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ವಿಧುಶೇಖರ ಭಾರತೀ ಮಹಾ ಸ್ವಾಮೀಜಿಯವರು ಇತಿಹಾಸ ಪ್ರಸಿದ್ಧ ಶ್ರೀ ವಿಷ್ಣುಮಂಗಲ ದೇವಸ್ಥಾನಕ್ಕೆ ಭೇಟಿ ನೀಡಿದರು. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಹಾಗೂ ಕ್ಷೇತ್ರದ ಪದಾಧಿಕಾರಿಗಳು ಶ್ರೀಗಳನ್ನು ಗೌರವಾದರಗಳೊಂದಿಗೆ ಬರಮಾಡಿಕೊಂಡರು.

ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ ನೀಟ್ ಯುಜಿ-2026ರ ಪ್ರಶ್ನೆ ಪತ್ರಿಕೆ ಸೋರಿಕೆ : ಕ್ರಮಕ್ಕೆ ಕುಪ್ಮ ಕರ್ನಾಟಕ ಆಗ್ರಹ

ಮಂಗಳೂರು: ಮೇ 3ರಂದು ರಾಷ್ಟ್ರಮಟ್ಟದಲ್ಲಿ ನೀಟ್ ಯುಜಿ-2026ರ ಪರೀಕ್ಷೆಯನ್ನು ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರನಡೆಸಿದ್ದು, ಈ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದು ದೃಢ ಪಟ್ಟಿರುವ ಹಿನ್ನಲೆಯಲ್ಲಿ ನೀಟ್ ಯುಜಿ-2026ರ ಪರೀಕ್ಷೆಯನ್ನು ರದ್ದುಗೊಳಿಸುವ ನಿರ್ಣಯವನ್ನು ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ ತೆಗೆದುಕೊಂಡಿದೆ. ಪ್ರಶ್ನೆಪತ್ರಿಕೆಯನ್ನು ಸೋರಿಕೆ ಮಾಡಿರುವ ವ್ಯಕ್ತಿಗಳನ್ನು ಅಥವಾ ಸಂಸ್ಥೆಯ ಮೇಲೆ ಸೂಕ್ತವಾಗಿರುವ ಕಾನೂನು ಕ್ರಮವನ್ನು ಕೈಗೊಳ್ಳಬೇಕೆಂದು ಕುಪ್ಮ ಕರ್ನಾಟಕ ಆಗ್ರಹಿಸಿದೆ.

ಸುಮಾರು 23 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ವರ್ಷ ಪೂರ್ತಿ ತಯಾರಿಯನ್ನು ನಡೆಸಿ ಪರೀಕ್ಷೆಯನ್ನು ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಸಂದರ್ಭದಲ್ಲಿ ಮರು ಪರೀಕ್ಷೆಯನ್ನು ನಡೆಸುವುದರಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿದೆ.

ಆದ್ದರಿಂದ ತಪ್ಪಿತಸ್ಥರು ಯಾರೇ ಇದ್ದರೂ ಅವರನ್ನು ಯಾವುದೇ ಕಾರಣಕ್ಕೂ ಕಾನೂನಿನಿಂದ ತಪ್ಪಿಸಿಕೊಳ್ಳದಂತೆ ಕೇಂದ್ರ ತನಿಖಾ ತಂಡ ಸಿಬಿಐ ಮೂಲಕ ತನಿಖೆ

ನೀಟ್ ಮರು ಪರೀಕ್ಷೆ ವಿಷಾದನೀಯ

ರಾಷ್ಟ್ರೀಯಪರೀಕ್ಷಾ ಪ್ರಾಧಿಕಾರ ನೀಟ್-2026ರ ಪರೀಕ್ಷೆಯನ್ನು ರದ್ದುಗೊಳಿಸಿ ಮರು ಪರೀಕ್ಷೆ ನಡೆಸಲು ಮಾಡಿರುವ ನಿರ್ಧಾರಕ್ಕೆ ಕುಪ್ಮ ಕರ್ನಾಟಕ ವಿಷಾದ ವ್ಯಕ್ತಪಡಿಸುತ್ತಿದೆ ಎಂದು ರಾಜ್ಯ ಅಧ್ಯಕ್ಷ ಡಾ. ಮೋಹನ್ ಆಳ್ವ ಮತ್ತು ರಾಜ್ಯ ಕಾರ್ಯದರ್ಶಿ ಪ್ರೊ. ನರೇಂದ್ರ ಎಲ್. ನಾಯಕ್ ಪತ್ರಿಕಾ ಹೇಳಿಕೆಯ ಮೂಲಕ ತಿಳಿಸಿದ್ದಾರೆ.

ನಡೆಸಬೇಕೆಂದು ಕುಪ್ಮಾ ಕರ್ನಾಟಕ ಆಗ್ರಹಿಸಿದೆ. ಕೇಂದ್ರ ಸರ್ಕಾರವು ಇನ್ನು ಮುಂದಿನ ದಿನಗಳಲ್ಲಿ ಈ ತರಹದ ರಾಷ್ಟ್ರ ಮಟ್ಟದ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಗಳ ಸೋರಿಕೆ ನಡೆಯದಂತೆ ಮುತುವರ್ಜಿವಹಿಸಬೇಕು. ಇಂತಹ ಪ್ರಾಮುಖ್ಯ ಪರೀಕ್ಷೆಗಳನ್ನು ಆತ್ಮಸ್ಥೈರ್ಯದಿಂದ ಎದುರಿಸಲು ಭರವಸೆ ಮೂಡಿಸುವಂತಹ ವಾತಾವರಣ ನಿರ್ಮಿಸುವಂತೆ ಕುಪ್ಮ ಕರ್ನಾಟಕ ಆಗ್ರಹಿಸಿದೆ. ಸೋರಿಕೆಗಳಾದಲ್ಲಿ ಪ್ರಾಮಾಣಿಕವಾಗಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಮೇಲೆ ಗಂಭೀರ ಪರಿಣಾಮಗಳು ಬೀರುತ್ತದೆ.

ನಿಯಮ ಪಾಲಿಸಿದ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಮಾತ್ರ ಅನುಮತಿ ನೀಡಿ: ಉಡುಪಿ ಡಿಸಿ

ನಿಯಮ ಉಲ್ಲಂಘಿಸಿದರೆ ಕಾನೂನು ಕ್ರಮ

ಉಡುಪಿ: ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಅನುಮತಿ ನೀಡುವಾಗ ಸರಕಾರ ಜಾರಿಗೆ ತಂದಿರುವ ನಿಯಮಗಳನ್ನು ಪಾಲನೆ ಮಾಡಿದ ಸಂಸ್ಥೆಗಳಿಗೆ ಮಾತ್ರ ಅನುಮತಿ ನೀಡಬೇಕೆಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೂಚನೆ ನೀಡಿದರು.

ಅವರು ಮಂಗಳವಾರ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಪಿ.ಸಿ.ಪಿ.ಎನ್.ಡಿ.ಟಿ ಜಿಲ್ಲಾ ಮಟ್ಟದ ಸಕ್ಷಮ ಪ್ರಾಧಿಕಾರ ಸಮಿತಿ ಸಭೆ ಹಾಗೂ ಜಿಲ್ಲಾ ಮಟ್ಟದ ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿ ಮತ್ತು ಕುಂದು ಕೊರತೆ ನಿವಾರಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಸರಕಾರ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸುವ ಹಾಗೂ ನಿಯಂತ್ರಣದ ಉದ್ದೇಶದಿಂದ ಪಿಸಿಪಿಎನ್‌ಡಿಟಿ ಕಾಯಿದೆಯನ್ನು ಜಾರಿಗೆ ತಂದಿದೆ. ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಯಂತ್ರಗಳನ್ನು ತೆರೆಯಲು ಅರ್ಜಿ ಸಲ್ಲಿಸಿದಾಗ ಪಿ.ಸಿ.ಪಿ.ಎನ್.ಡಿ.ಟಿ ಕಾಯಿದೆಯ ಷರತ್ತುಗಳನ್ನು ಪೂರ್ಣ ಪ್ರಮಾಣದಲ್ಲಿ ಪಾಲನೆ ಮಾಡಿದ್ದಲ್ಲಿ ಮಾತ್ರ ಅವರುಗಳಿಗೆ ಅನುಮತಿ ನೀಡಬೇಕೆಂದು ಸೂಚನೆ ನೀಡಿದರು.

ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಕಾಯಿದೆ ಅನ್ವಯ ಕರ್ತವ್ಯ ನಿರ್ವಹಿಸುವ ರೇಡಿಯಾಲಜಿಸ್ಟ್ ವೈದ್ಯರುಗಳ ವಿವರಗಳನ್ನು ತಪ್ಪದೇ ಪ್ರದರ್ಶಿಸಬೇಕು.



ಸ್ಕ್ಯಾನಿಂಗ್ ಕೇಂದ್ರಗಳಲ್ಲಿ ಸರಕಾರದ ಅನುಮತಿ ಪತ್ರವನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು. ನಿಯಮಾನುಸಾರ ಅಗತ್ಯ ರಿಜಿಸ್ಟರ್‌ಗಳ ನಿರ್ವಹಣೆಯನ್ನು ವ್ಯವಸ್ಥಿತವಾಗಿ ಮಾಡಬೇಕು ಎಂದರು.

ಸ್ಕ್ಯಾನಿಂಗ್ ಕೇಂದ್ರಗಳಲ್ಲಿ ಸ್ಕ್ಯಾನಿಂಗ್ ಯಂತ್ರಗಳ ಬದಲಾವಣೆ ಮಾಡುವುದು ಅಥವಾ ಬೇರೆ ರೇಡಿಯಾಲಜಿಸ್ಟ್ ವೈದ್ಯರನ್ನು ಬದಲಾವಣೆ ಮಾಡುವಾಗ ಜಿಲ್ಲಾ ಮಟ್ಟದ ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯಬೇಕು. ಒಂದೊಮ್ಮೆ ಪಡೆಯದಿದ್ದರೆ ಅವರ ಮೇಲೆ ಕಾನೂನಿನ ಅನ್ವಯ ಕ್ರಮ ಕೈಗೊಳ್ಳಬೇಕು ಎಂದರು.

ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ಹಚ್ಚುವುದು, ಹತ್ಯೆ ಮಾಡುವುದು ಕಾನೂನಿನ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದೆ. ಈ ಬಗ್ಗೆ ಜಿಲ್ಲಾ ಮಟ್ಟದ ಸಮಿತಿಗಳು ಎಚ್ಚರವಹಿಸಬೇಕು. ಒಂದೊಮ್ಮೆ ಕಾಯ್ದೆಯನ್ನು ಉಲ್ಲಂಘಿಸಿದ್ದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದರು.

> **ರೋಗಿಗಳು ತಪಾಸಣೆಗಾಗಿ ಸ್ಕ್ಯಾನಿಂಗ್ ಕೇಂದ್ರಗಳಿಗೆ ಬಂದಂತಹ ಸಂದರ್ಭದಲ್ಲಿ ವೈದ್ಯರುಗಳ ಆಯ್ಕೆಗಳನ್ನು ಮಾಡಲು ಅನುಕೂಲ ಮಾಡಿಕೊಡುವುದರ ಜೊತೆಗೆ ಗಂಟೆಗಟ್ಟಲೇ ಕಾಯಿಸದೇ ತಪಾಸಣೆಗಳನ್ನು ಅಲ್ಪ ಕಾಲದಲ್ಲಿಯೇ ಪಡೆಯುವಂತೆ ಆಗಬೇಕು.**
> ■ **ಸ್ವರೂಪ ಟಿ.ಕೆ. , ಜಿಲ್ಲಾಧಿಕಾರಿ**

ಪಿ.ಸಿ.ಪಿ.ಎನ್.ಡಿ.ಟಿ ಜಿಲ್ಲಾ ಪರಿಶೀಲನಾ ಮತ್ತು ತಪಾಸಣಾ ಸಮಿತಿ ಸದಸ್ಯರು ಮೂರು ತಿಂಗಳ ಒಳಗಾಗಿ ಜಿಲ್ಲೆಯ ಎಲ್ಲಾ ನೋಂದಾಯಿತ ಸ್ಕ್ಯಾನಿಂಗ್ ಸೆಂಟರ್‌ಗಳ ಆಸ್ಪತ್ರೆಗಳಿಗೆ ಕಡ್ಡಾಯವಾಗಿ ಭೇಟಿ ನೀಡುವುದರೊಂದಿಗೆ ಪಿ.ಸಿ.ಪಿ.ಎನ್.ಡಿ.ಟಿ ಕಾಯ್ದೆಯ ಅನುಷ್ಠಾನದಲ್ಲಿ ಯಾವುದೇ ನ್ಯೂನ್ಯತೆಗಳು ಕಂಡುಬಂದಲ್ಲಿ ಸ್ಕ್ಯಾನಿಂಗ್ ಸೆಂಟರ್ ಹಾಗೂ ಆಸ್ಪತ್ರೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ 2025-26 ನೇ ಸಾಲಿನಲ್ಲಿ 1000 ಗಂಡು ಮಕ್ಕಳಿಗೆ 983 ಹೆಣ್ಣು ಮಕ್ಕಳಿದ್ದಾರೆ. ಹೆಣ್ಣು ಮಕ್ಕಳ ಲಿಂಗಾನುಪಾತ ಕಡಿಮೆ ಇರುವುದರಿಂದ ಆಗುವ ಸಾಮಾಜಿಕ ತೊಂದರೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು ಎಂದರು.

ತಾಲೂಕು ಪ್ರಾಧಿಕೃತ ಅಧಿಕಾರಿಗಳ ಪರಿಶೀಲನಾ ಸಮಿತಿಯು 2025 ರ ಸೆಪ್ಟಂಬರ್‌ನಿಂದ ಏಪ್ರಿಲ್ 2026 ರ ವರೆಗೆ ಉಡುಪಿಯ 120, ಕುಂದಾಪುರದ 94 ಹಾಗೂ ಕಾರ್ಕಳದ 120 ಖಾಸಗಿ ಆರೋಗ್ಯ ಸಂಸ್ಥೆಗಳಿಗೆ ಭೇಟಿ ನೀಡಿ, ಅಗ್ನಿ ನಿರೋಧಕ ಸಾಧನಗಳು ಇಲ್ಲದೇ ಇರುವ ಬಗ್ಗೆ ಹಾಗೂ ಕೆ.ಪಿ.ಎಂ.ಇ ಕೆಲವು ನಿಯಮಾವಳಿಗಳನ್ನು ಪಾಲಿಸದೇ ಇರುವ ಕಾರಣ ಕ್ರಮವಾಗಿ 102, 248 ಹಾಗೂ 65 ಆರೋಗ್ಯ ಸಂಸ್ಥೆಗಳಿಗೆ ನೋಟೀಸ್ ನೀಡಲಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಬಸವರಾಜ ಹುಬ್ಬಳ್ಳಿ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ಶ್ರೀರಾಮ್ ರಾವ್ ಕೆ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಸುಬ್ರಹ್ಮಣ್ಯ, ಪೌರಾಯುಕ್ತ ಮಹಾಂತೇಶ್ ಹಂಗರಗಿ, ತಾಲೂಕು ವೈದ್ಯಾಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಬಂಟರ ಯಾನೆ ನಾಡವರ ಮಾತೃಸಂಘ | ಚುನಾವಣಾ ಆಯೋಗ ಘೋಷಣೆ

2026 -29ರ ಪದಾಧಿಕಾರಿಗಳ ಅವಿರೋಧ ಆಯ್ಕೆ



ಮಂಗಳೂರು: ಬಂಟರ ಯಾನೆ ನಾಡವರ ಮಾತೃ ಸಂಘದ 2026 -29 ಸಾಲಿನ ಅಧ್ಯಕ್ಷರಾಗಿ ಮಾಲಾಡಿ ಅಜಿತ್ ಕುಮಾರ್ ರೈ ಕೊಡಿಯಾಲ್‌ಗುತ್ತು, ಉಪಾಧ್ಯಕ್ಷರಾಗಿ ಕಾವು ಹೇಮನಾಥ ಶೆಟ್ಟಿ, ಪ್ರಧಾನ ಕಾರ್ಯದರ್ಶಿಯಾಗಿ ಎಂ. ಕರುಣಾಕರ ಶೆಟ್ಟಿ, ಕೋಶಾಧಿಕಾರಿಯಾಗಿ ಸಿಎ ರಾಮ್‌ಮೋಹನ್ ರೈ ಹಾಗೂ ಜೊತೆ ಕಾರ್ಯದರ್ಶಿಯಾಗಿ ಪುಂಚಮೆ ಪದ್ಮನಾಭ ಶೆಟ್ಟಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷರು ಸೇರಿ 83 ಸದಸ್ಯರ ಕಾರ್ಯ ಕಾರಿ ಸಮಿತಿ ಯನ್ನು ಚುನಾವಣಾ ಆಯೋಗ ಅಧಿಕೃತವಾಗಿ ಘೋಷಿಸಿದೆ. ಮುಖ್ಯ ಚುನಾವಣಾಧಿಕಾರಿಯಾಗಿದ್ದ ವಕೀಲ ಉಮೇಶ್ ಶೆಟ್ಟಿ ಶೆಡ್ಡೆ ಹೊಸಲಕ್ಕೆ ಅವರು ಅಧ್ಯಕ್ಷ ಹಾಗೂ ಇತರ ಪದಾಧಿಕಾರಿಗಳ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಉಪ ಚುನಾವಣಾಧಿಕಾರಿಯಾದ ವಕೀಲ ನವೀನ್ ಕುಮಾರ್ ಶೆಟ್ಟಿ ಹಾಗೂ ಚುನಾವಣಾಧಿಕಾರಿ ಪಿ ಸದಾಶಿವ ಶೆಟ್ಟಿ ಉಪಸ್ಥಿತರಿದ್ದರು.

ಹೈಯರ್ ಸೆಕೆಂಡರಿ ಸಪ್ಲಿಮೆಂಟರಿ ಪರೀಕ್ಷಾ ಫಲಿತಾಂಶ ಪ್ರಕಟ

ಕಾಸರಗೋಡು: ಕಳೆದ ಮಾರ್ಚ್ ತಿಂಗಳಲ್ಲಿ ನಡೆದ ಹೈಯರ್ ಸೆಕೆಂಡರಿ ಒಂದನೇ ವರ್ಷದ ಸಪ್ಲಿಮೆಂಟರಿ ಇಂಪ್ರೂವ್‌ಮೆಂಟ್ ಪರೀಕ್ಷಾ ಫಲಿತಾಂಶ ಪ್ರಕಟಿಸಲಾಗಿದೆ. ಅದರಲ್ಲಿ ಶೇಕಡಾ 57.06 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಒಟ್ಟು 2,55,585 ಮಂದಿ ಈ ಪರೀಕ್ಷೆಗೆ ಹಾಜರಾಗಿದ್ದು, 1,45,842 ಮಂದಿ ತೇರ್ಗಡೆ ಹೊಂದಿದ್ದಾರೆ.

ಅತೀ ಹೆಚ್ಚು ಎಂಬಂತೆ ಕಾಮರ್ಸ್ ವಿಭಾಗದಲ್ಲಿ ಶೇಕಡಾ 62.55 ಮಂದಿ ಉತ್ತೀರ್ಣರಾಗಿದ್ದಾರೆ. ಉಳಿದಂತೆ ಸಯನ್ಸ್ ವಿಭಾಗದಲ್ಲಿ ಶೇಕಡಾ 56.58, ಹ್ಯುಮಾನಿಟಿಕ್ಸ್‌ನಲ್ಲಿ ಶೇಕಡಾ 50.13 ಮತ್ತು ಟೆಕ್ನಿಕಲ್ ವಿಭಾಗದಲ್ಲಿ ಶೇಕಡಾ 30.75 ಮಂದಿ ತೇರ್ಗಡೆ ಹೊಂದಿದ್ದಾರೆ. ಮರು ಮೌಲ್ಯಮಾಪನೆ, ಸೂಕ್ತ ಪರಿಶೀಲನೆ, ಉತ್ತರ ಪತ್ರಿಕೆಗಳ ಪ್ರತಿಗಳು ಆಗ್ರಹಿಸುವ ವಿದ್ಯಾರ್ಥಿಗಳು ಮೇ 15ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಈ ಕುರಿತಾದ ಹೆಚ್ಚಿನ ಮಾಹಿತಿಗಳು ವೆಬ್‌ಸೈಟ್‌ನಲ್ಲಿ ಲಭಿಸಬಹುದು.

ಮಲ್ಪೆ ಕಡಲತೀರದಲ್ಲಿ ಮೇ 15ರಿಂದ 'ಆನಂದ ಶರಧಿ' ಸಂಭ್ರಮ

ಆಧ್ಯಾತ್ಮಿಕತೆ-ಕೃಷಿ ಮೇಳದ ಸಂಗಮ

ಉಡುಪಿ: ಆಚಾರ್ಯ ಮಧ್ವರಿಗೆ ಶ್ರೀಕೃಷ್ಣನ ಮೂರ್ತಿ ಲಭಿಸಿದ ಪುಣ್ಯಭೂಮಿಯಾದ ಮಲ್ಪೆಯ ಕಡಲತೀರದಲ್ಲಿ ಕೇವಲ ಮೋಜು-ಮಸ್ತಿಗೆ ಸೀಮಿತವಾಗದೆ, ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕಂಪನ್ನು ಪಸರಿಸುವ ಉದ್ದೇಶದಿಂದ 'ಆನಂದ ಶರಧಿ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮಲ್ಪೆಯ ಶ್ರೀಕೃಷ್ಣ ಪರಿಸರ ಪ್ರತಿಷ್ಠಾನದ ಆಶ್ರಯದಲ್ಲಿ, ಆದಮಾರು ಕಿರಿಯ ಶ್ರೀಗಳಾದ ಶ್ರೀ ಈಶಪ್ರಿಯತೀರ್ಥ ಶ್ರೀಪಾದರ ನೇತೃತ್ವದಲ್ಲಿ ಮೇ 15ರಿಂದ 31ರ ವರೆಗೆ ಈ ವೈವಿಧ್ಯಮಯ ಸಮಾರಂಭ ನಡೆಯಲಿದೆ.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಕಾರ್ಯಕ್ರಮದ ಸಂಘಟನಾ ಕಾರ್ಯದರ್ಶಿ ವಿಜಯ ಕೊಡವೂರು ಅವರು, ಅಷ್ಟಮಠಗಳ ಯತಿಗಳ ಸಂಕಲ್ಪದಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದು ತಿಳಿಸಿದರು. ಮಲ್ಪೆಯ ಕಡಲತೀರವನ್ನು ಕೇವಲ ಪ್ರವಾಸಿ ತಾಣವಾಗಿ ನೋಡದೆ, ಅದನ್ನು ಶ್ರದ್ಧಾಭಕ್ತಿಯ ಕೇಂದ್ರವಾಗಿಸುವುದು ಮತ್ತು ಗ್ರಾಮೀಣ ಬದುಕಿನ ಕಲೆಗಳಿಗೆ ಜೀವ ತುಂಬುವುದು ಈ ಯೋಜನೆಯ ಮುಖ್ಯ ಆಶಯವಾಗಿದೆ.



ಭಜನಾ ಸ್ಪರ್ಧೆ ಮತ್ತು ಶೋಭಾಯಾತ್ರೆ

ಮೇ 18ರಂದು ಮಧ್ಯಾಹ್ನ 3.30ಕ್ಕೆ ವಡಭಾಂಡೇಶ್ವರದ ಬಲರಾಮ ದೇವಸ್ಥಾನದಿಂದ ಆನಂದ ಶರಧಿ ನಿವೇಶನದವರೆಗೆ ಭವ್ಯ ಶೋಭಾಯಾತ್ರೆ ಹಮ್ಮಿಕೊಳ್ಳಲಾಗಿದೆ. ಇದರ ಬೆನ್ನಲ್ಲೇ ಮಹಿಳೆಯರು, ಪುರುಷರು ಹಾಗೂ ಮಕ್ಕಳಿಗಾಗಿ ಪ್ರತ್ಯೇಕ ಭಜನಾ ಸ್ಪರ್ಧೆಗಳು ನಡೆಯಲಿದ್ದು, ವಿಜೇತ ತಂಡಗಳಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು. ಈ ಸ್ಪರ್ಧೆಯಲ್ಲಿ ಸುಮಾರು 60ಕ್ಕೂ ಹೆಚ್ಚು ತಂಡಗಳು ಭಾಗವಹಿಸುವ ನಿರೀಕ್ಷೆಯಿದೆ.

ಕೃಷಿ ಮೇಳ ಮತ್ತು ಸಾಂಸ್ಕೃತಿಕ ವೈಭವ

ಕಾರ್ಯಕ್ರಮದ ಅಂಗವಾಗಿ ಮೇ 15ರಿಂದ ಮೂರು ದಿನಗಳ ಕಾಲ ಬೃಹತ್ ಕೃಷಿ ಮೇಳ ಹಾಗೂ ಹಲಸು-ಮಾವು ಮೇಳ ನಡೆಯಲಿದೆ. ಅಂದು ಅಪರಾಹ್ನ 4 ಗಂಟೆಗೆ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥರು, ಸೋದೆ ಶ್ರೀ ವಿಶ್ವವಲ್ಲಭತೀರ್ಥರು ಮತ್ತು ಆದಮಾರು ಶ್ರೀ ಈಶಪ್ರಿಯತೀರ್ಥ ಶ್ರೀಪಾದರು ಪಾಲ್ಗೊಳ್ಳಲಿದ್ದಾರೆ. ನೇಕಾರಿಕೆ, ಕುಂಬಾರಿಕೆ ಹಾಗೂ ಕೃಷಿ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಈ ಮೇಳದಲ್ಲಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.

ಗ್ರಾಮೀಣ ಕ್ರೀಡೆ ಮತ್ತು ಮಾತೃವಂದನ

ಮೇ 24ರಂದು ಬೆಳಿಗ್ಗೆ 7 ಗಂಟೆಯಿಂದ ಕಬಡ್ಡಿ, ಚೆನ್ನೆಮಣೆ ಹಾಗೂ ಕುಟ್ಟಿದೊಣ್ಣೆಯಂತಹ ಅಪರೂಪದ ಗ್ರಾಮೀಣ ಕ್ರೀಡೆಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದ ಸಮಾರೋಪ ದಿನವಾದ ಮೇ 31ರಂದು 'ಮಾತೃವಂದನ' ಕಾರ್ಯಕ್ರಮ ನಡೆಯಲಿದ್ದು, ಖ್ಯಾತ ಚಿಂತಕಿ ಬಿ.ವಿ. ಆರತಿ ಅವರು ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಅಂದೇ ವಿವಿಧ ಸ್ಪರ್ಧೆಗಳ ಬಹುಮಾನ ವಿತರಣೆಯೂ ಜರುಗಲಿದೆ.

ಸುದ್ದಿಗೋಷ್ಠಿಯಲ್ಲಿ ಸಂಘಟನಾ ಕಾರ್ಯದರ್ಶಿ ಗೋವಿಂದರಾಜ್, ತಾರಾ ಆಚಾರ್ಯ, ಸುಮಿತ್ರ ಕೆರೆ ಮಠ, ಕಮಲಾವತಿ, ರಾಧಾಕೃಷ್ಣ ಮೆಂಡನ್, ಶ್ರೀಕಾಂತಭಟ್, ಸಂತೋಷ್ ಉದ್ಯಾವರ, ಚಂದ್ರಕಾಂತ್ ಕೆ.ಎನ್. ಸೇರಿದಂತೆ ಸಮಿತಿಯ ಪ್ರಮುಖರು ಉಪಸ್ಥಿತರಿದ್ದರು.

'ಧರ್ಮಸ್ಥಳ ಗ್ರಾಮದಲ್ಲಿ ಶವ ಹೂತಿಡಲಾಗಿದೆ 'ಪ್ರಕರಣ | ಹೊಂಡ ತೋಡಿದ್ದೇ ಬಂತು | ಬಿಲ್ ಪಾಸ್ ಮಾಡುವುದು

ಜೆಸಿಬಿ ಬಾಡಿಗೆ, ಕಾರ್ಮಿಕರಿಗೆ ಕೂಲಿ ಹಣ ಇನ್ನೂ ಬಂದಿಲ್ಲ!

ಬೆಳ್ತಂಗಡಿ: ಧರ್ಮಸ್ಥಳ ಗ್ರಾಮದಲ್ಲಿ ಶವ ಹೂತಿಡಲಾಗಿದೆ ಎಂದು ಗುಲ್ಲೆಬ್ಬಿಸಲಾದ ಪ್ರಕರಣಕ್ಕೆ ಸಂಬಂಧಿಸಿ ರಾಜ್ಯ ಸರಕಾರ ಎಸ್‌ಐಟಿ ರಚಿಸಿ ನಡೆಸಿದ ತನಿಖೆ ಸಂದರ್ಭ ದುಡಿದ ಕಾರ್ಮಿಕರ ವೇತನ, ಜೆಸಿಬಿ ಬಾಡಿಗೆ ಇನ್ನೂ ಪಾವತಿಯಾಗಿಲ್ಲ ಎಂಬ ಕೂಗು ಕೇಳಿಬಂದಿದೆ.

ಎಸ್‌ಐಟಿ ತನಿಖೆ ಶುರುವಾಗಿ ಮಾಸ್ಕ್‌ಮ್ಯಾನ್ ಚಿನ್ನಯ್ಯನನ್ನು ಆತ ಹೇಳಿದ ಸ್ಥಳಕ್ಕೆ ಕರೆದುಕೊಂಡು ಬಂದು, ಸ್ಥಳ ಗುರುತು ಮಾಡಿ ಒಟ್ಟು 17 ಕಡೆಗಳಲ್ಲಿ ಹೊಂಡಗಳನ್ನು ತೋಡಿ ಶೋಧನೆ ನಡೆಸಲಾಗಿತ್ತು. ಈ ಸಂದರ್ಭ ಹಲವು ಕೂಲಿಯಾಳುಗಳು ದುಡಿದಿದ್ದು, ಜೆಸಿಬಿಯನ್ನೂ ಬಳಸಲಾಗಿತ್ತು.

2025ರ ಜು.28ರಂದು ಎಸ್‌ಐಟಿ ಚಿನ್ನಯ್ಯನನ್ನು ಕರೆದುಕೊಂಡು ಬಂದು ಸ್ಥಳ ಗುರುತು ಮಾಡಿತ್ತು. ಅಂದಿನಿಂದಲೇ ಎಸ್ ಐಟಿ ತಂಡದ ಸಹಾಯಕ್ಕೆ ಕೂಲಿ ಯಾಳುಗಳು ದುಡಿದಿದ್ದರು. ಜು.29ರಂದು ಶೋಧನೆ ಪ್ರಕ್ರಿಯೆ ಮಾನವ ಶ್ರಮದ ಮೂಲಕ ಶುರುವಾಯಿತು. ಮಣ್ಣು ಅಗೆತ ಕಷ್ಟವಾದಾಗ ಜೆಸಿಬಿ



ತರಿಸಲಾಯಿತು. ಬಳಿಕ ಹಲವು ದಿನಗಳವರೆಗೂ ಮಾನವ ಶ್ರಮ ಹಾಗೂ ಜೆಸಿಬಿ ಮೂಲಕ ಕೆಲಸ ನಡೆದಿದೆ.

10 ತಿಂಗಳಾದರೂ ಹಣ ಬಂದಿಲ್ಲ

ಆ.13ರವರೆಗೂ ಶೋಧ ನಡೆಸಲಾಗಿತ್ತು. 2, 3, 4, 5 ಪಾಯಿಂಟ್ ಹೊರತುಪಡಿಸಿ ಉಳಿದೆಲ್ಲ ಪಾಯಿಂಟ್‌ನಲ್ಲೂ ಒಟ್ಟು ಹತ್ತು ದಿನ ಜೆಸಿಬಿಯಿಂದ ಕೆಲಸ ಮಾಡಲಾಗಿತ್ತು. 13ನೇ ಪಾಯಿಂಟ್ ದೊಡ್ಡದಾಗಿ ಅಗೆದ ಕಾರಣ ಸಣ್ಣ ಹಾಗೂ ದೊಡ್ಡ ಎರಡು ಜೆಸಿಬಿ ಬಳಸಲಾಗಿತ್ತು. ಕೆಲ ದಿನಗಳಲ್ಲಿ ಜೆಸಿಬಿ ಬೇಕಾಗುತ್ತದೆ, ಬೇರೆ ಹೋಗಬೇಡಿ ಅಂತ ಜೆಸಿಬಿಯನ್ನು ಸುಮ್ಮನೆ ನಿಲ್ಲಿಸಿದ್ದರು. ಇದನ್ನು ಜೆಸಿಬಿ ಮಾಲೀಕರು ಲೆಕ್ಕ ಹಾಕದೇ ಕೇವಲ ದುಡಿದ ಗಂಟೆಯನ್ನು ಮಾತ್ರ ಲೆಕ್ಕ ಹಾಕಿ ಒಟ್ಟು 71,500 ರೂ. ಬಿಲ್ ಮಾಡಿ ಕೊಟ್ಟಿದ್ದಾರೆ. ಆದರೆ ಜೆಸಿಬಿ ಬಾಡಿಗೆ ಇನ್ನೂ ಬಂದಿಲ್ಲ.

> **ಈ ಪ್ರಕರಣದಲ್ಲಿ ಸರಕಾರ ಎಸ್ ಐಟಿ ರಚನೆ ಮಾಡಿದ್ದು, ಇದಕ್ಕೆ ಬೇಕಾದ ಅಗತ್ಯ ಅನುದಾನವನ್ನು ಸರಕಾರವೇ ನೀಡುತ್ತದೆ. ನಮ್ಮ ಇಲಾಖೆ ಕಾರ್ಯಾಚರಣೆಯ ಒಂದು ಭಾಗವಾಗಿ ಕೆಲಸ ನಿರ್ವಹಿಸಿದೆ.**
> ■ **ಸ್ಟೆಲ್ಲಾ ವರ್ಗೀಸ್, ಅಸಿಸ್ಟೆಂಟ್ ಕಮಿಷನರ್, ಪುತ್ತೂರು**

> **ಬಿಲ್ ಪಾವತಿ ಬಾಕಿ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಈ ಬಗ್ಗೆ ಪರಿಶೀಲನೆ ನಡೆಸಲಾಗುವುದು. ನಾವು ಕೇವಲ ತನಿಖೆ ಮಾತ್ರ ಮಾಡಿದ್ದೇವೆ.**
> ■ **ಪ್ರಣವ್ ಮೊಹಾಂತಿ, ಮುಖ್ಯಸ್ಥ ಎಸ್‌ಐಟಿ ತಂಡ**

ಜು.28ರಂದು ಚಿನ್ನಯ್ಯನನ್ನು ಕರೆದು ಕೊಂಡು ಬಂದು ಮೊದಲು ಪಾಯಿಂಟ್ ಗುರುತು ಮಾಡುವಲ್ಲಿಂದ ಆರಂಭಗೊಂಡು ಆ.13ರಂದು ಶೋಧ ಕೊನೆಗೊಳ್ಳುವವರೆಗೂ ಬೇರೆ ಬೇರೆ ಪಂಚಾಯತ್ ವ್ಯಾಪ್ತಿಯ ಕಾರ್ಮಿಕರನ್ನು ಕರೆಸಿಕೊಳ್ಳಲಾಗಿತ್ತು. ಎಸ್‌ಐಟಿ ತಂಡಕ್ಕೆ ಬೇಕಾದ ಕೂಲಿಯಾಳುಗಳು, ಜೆಸಿಬಿ, ಇತರ ಸಾಮಗ್ರಿಗಳನ್ನು ಒದಗಿಸುವ ಜವಾಬ್ದಾರಿಯನ್ನು ಸ್ಥಳೀಯ ಧರ್ಮಸ್ಥಳ ಗ್ರಾಪಂಗೆ ವಹಿಸಲಾಗಿತ್ತು. ಆದರಂತೆ ಸ್ಥಳೀಯ ಗ್ರಾಪಂ ಎಸ್‌ಐಟಿ ತಂಡದ ನಿರ್ದೇಶನದಂತೆ ಎಲ್ಲ ಅಗತ್ಯಗಳನ್ನು ಒದಗಿಸಿದ್ದರು. ಆದರೆ ಪಂಚಾಯತ್ ಹಣವನ್ನು ಎಸ್‌ಐಟಿ ಕೆಲಸಕ್ಕೆ ಭರಿಸುವಂತಿಲ್ಲ ಎನ್ನಲಾಗಿದೆ. ಇದನ್ನು ಎಸ್‌ಐಟಿ ಟೀಂ ಭರಿಸಬೇಕಂತೆ. ಹೀಗಾಗಿ ಬಾಕಿ ಬಿಲ್‌ನ್ನು ಯಾರಲ್ಲಿ ಕೇಳುವುದು ಎನ್ನುವ ಗೊಂದಲವಿದೆ.

ದಿನನಿತ್ಯ 10-12 ಕಾರ್ಮಿಕರು ಎಸ್‌ಐಟಿ ತಂಡಕ್ಕೆ ಸಹಾಯವಾಗಿ ದುಡಿಯುತ್ತಿದ್ದರು. ಆದರೆ ಕಾರ್ಮಿಕರ ಕೂಲಿ ಕೊಡದೇ ಬಾಕಿ ಉಳಿಸಿಕೊಳ್ಳಲಾಗಿದೆ. ಕಾರ್ಮಿಕರದ್ದು ಒಟ್ಟು 80 ಸಾವಿರಕ್ಕೂ ಅಧಿಕ ಹಣ ಕೊಡುವುದು ಬಾಕಿ ಇದೆ. ಇದೀಗ ಕಾರ್ಮಿಕರು ದುಡಿದ ಹಣಕ್ಕಾಗಿ ಅಲೆದಾಡುವಂತಾಗಿದೆ. ಕೆಲವು ದಿನಗಳಲ್ಲಿ ಎಸ್ ಐಟಿ ತಂಡಕ್ಕೆ ಕುಳಿತುಕೊಳ್ಳಲು ಶಾಮಿಯಾನ ವ್ಯವಸ್ಥೆ ಮಾಡಲಾಗಿತ್ತು. ಇದರ ಬಿಲ್ ಕೂಡ ಬಾಕಿ ಇದೆ. ಹಾರೆ, ಪಿಕಾಸು, ನೀರಿನ ಬಾಟಲಿ, ಕೂಲಿಯಾಳುಗಳನ್ನು ಕರೆತಂದ ವಾಹನ ಬಾಡಿಗೆ ಹೀಗೆ ಒಟ್ಟು 2 ಲಕ್ಷಕ್ಕೂ ಅಧಿಕ ಬಿಲ್ ಕೊಡಲು ಬಾಕಿ ಇದೆ.

ಪ್ರಧಾನಿ ಮೋದಿ ಮನವಿ

ಏಕೈಕವೂ ಅಲ್ಲ, ಅತಿಯಾದದ್ದೂ ಅಲ್ಲ

ಜಾಗತಿಕ ಬಿಕ್ಕಟ್ಟಿನ ಸಮಯದಲ್ಲಿ, ಸರ್ಕಾರಗಳು ನಿಯಮಿತವಾಗಿ ನಾಗರಿಕರಿಗೆ ಬಳಕೆಯನ್ನು ಕಡಿತಗೊಳಿಸಲು, ಪ್ರಯಾಣವನ್ನು ಕಡಿಮೆ ಮಾಡಲು ಮತ್ತು ಇಂಧನವನ್ನು ಉಳಿಸಲು ಒತ್ತಾಯಿಸುತ್ತಿವೆ. ಸಂಯಮಕ್ಕಾಗಿ ಪ್ರಧಾನಮಂತ್ರಿ ಮೋದಿ ಅವರ ಮನವಿಯು ಈ ವಿಶ್ವಾದ್ಯಂತದ ಮಾದರಿಯ ಒಂದು ಭಾಗವಾಗಿದೆ. 2026ರ ತೈಲ ಬಿಕ್ಕಟ್ಟನ್ನು ಎದುರಿಸಲು ಅನೇಕ ರಾಷ್ಟ್ರಗಳು ಕೇವಲ ಮನವಿಗಳಿಗಿಂತಲೂ ಮೀರಿ ಇಂಧನ ಪಡಿತರ, ಕಡ್ಡಾಯವಾಗಿ ಮನೆಯಿಂದ ಕೆಲಸ (ವರ್ಕ್ ಫ್ರಮ್ ಹೋಮ್), ಇಂಧನ ಮಿತಿಗಳು, ಕಡಿಮೆ ವೇಗದ ಮಿತಿಗಳು ಮತ್ತು ಪ್ರಯಾಣದ ನಿರ್ಬಂಧಗಳಂತಹ ಕಡ್ಡಾಯ ಆದೇಶಗಳನ್ನು ಜಾರಿಗೊಳಿಸಿವೆ.

ಜಾಗತಿಕ ಸಂದರ್ಭ: ಚಲನಶೀಲತೆ ಮತ್ತು ಇಂಧನ ಸಂಯಮದ ಕುರಿತ ಕ್ರಮ ಯಾಕೆ ಅನಿವಾರ್ಯ?

- 3 ದೇಶಗಳಲ್ಲಿ ಅಡುಗೆ ಎಣ್ಣೆ/ಅನಿಲ ಬಳಕೆ ಕಡಿಮೆ
- 13 ದೇಶಗಳಲ್ಲಿ ವರ್ಕ್ ಫ್ರಮ್ ಹೋಮ್!
- 35 ದೇಶಗಳಲ್ಲಿ ಸಾರ್ವಜನಿಕ ಸಾರಿಗೆ ಬಳಕೆಗೆ ಪ್ರೋತ್ಸಾಹ
- ಇವಿಗಳ ಪ್ರಚಾರ ಹೆಚ್ಚಳ
- ಸಾರ್ವಜನಿಕ ಕಟ್ಟಡಗಳಲ್ಲಿ ತಾಪಮಾನದ ಸೆಟ್ ಪಾಯಿಂಟ್‌ಗಳ ಮಿತಿ

ಮನೆಯಿಂದ ಕೆಲಸ / ಹೊಂದಾಣಿಕೆ ವ್ಯವಸ್ಥೆ

ಪ್ರಯಾಣವನ್ನು ಕಡಿತಗೊಳಿಸಲು ಅನೇಕ ದೇಶಗಳು ನಾಗರಿಕ ಉದ್ಯೋಗಿಗಳಿಗೆ ದೂರಸ್ಥ ಕೆಲಸವನ್ನು ಪ್ರೋತ್ಸಾಹಿಸುತ್ತವೆ ಅಥವಾ ಕಡ್ಡಾಯಗೊಳಿಸುತ್ತವೆ ಮತ್ತು ಖಾಸಗಿ ವಲಯದಲ್ಲಿಯೂ ಇದನ್ನು ಉತ್ತೇಜಿಸುತ್ತವೆ.

ಉದಾಹರಣೆಗಳು:

★ಪಾಕಿಸ್ತಾನ (ವಾರಕ್ಕೆ 4 ದಿನ ಕೆಲಸ + 50% ದೂರಸ್ಥ ಕೆಲಸ)
★ಇಂಡೋನೇಷ್ಯಾ (ಶುಕ್ರವಾರಗಳಂದು ಮನೆಯಿಂದ ಕೆಲಸ)
★ಶ್ರೀಲಂಕಾ (ಬುಧವಾರಗಳಂದು ಕಚೇರಿಗಳಿಗೆ ಬೀಗ)
★ಕೊರಿಯಾ (ಹೊಂದಿಕೊಳ್ಳುವ ವ್ಯವಸ್ಥೆಗಳು)
★ಕಾಂಬೋಡಿಯಾ
★ಲಾವೋ ಪಿಡಿಆರ್
★ಮಲೇಷ್ಯಾ
★ಫಿಲಿಪೈನ್ಸ್
★ಥೈಲ್ಯಾಂಡ್
★ವಿಯೆಟ್ನಾಂ, ಪೆರು, ಈಜಿಪ್ಟ್.
(ಈ ದೇಶಗಳಲ್ಲೂ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ.)





40ಕ್ಕೂ ಹೆಚ್ಚು ದೇಶಗಳಿಂದ ಕ್ರಮ

ಜಾಗತಿಕ ಇಂಧನ ಬಿಕ್ಕಟ್ಟುಗಳಿಗೆ ಪ್ರತಿಕ್ರಿಯೆಯಾಗಿ, ಐಜಿಸಿ (ಐಇಎ) ಟ್ರ್ಯಾಕರ್ ಸುಮಾರು 40 ದೇಶಗಳು (ಜೊತೆಗೆ ಯುರೋಪಿಯನ್ ಕಮಿಷನ್) ಕೈಗೊಂಡ ತುರ್ತು ಇಂಧನ ಸಂರಕ್ಷಣಾ ಕ್ರಮಗಳನ್ನು ದಾಖಲಿಸಿದೆ. 40ಕ್ಕೂ ಹೆಚ್ಚು ದೇಶಗಳು ಇಂಧನ ಮತ್ತು ಚಲನಶೀಲತೆಯ ಮೇಲೆ ಕ್ರಮ ಕೈಗೊಂಡಿವೆ.

ಹೊಸ ಪರಿಹಾರ ಪರಿಚಯ: ಮುಂದುವರಿದ ಆರ್ಥಿಕತೆಗಳು, ಅಬಕಾರಿ ಸುಂಕ ಕಡಿತ, ರಾಜ್ಯ ನೆರವು ಚೌಕಟ್ಟು, ಅಕ್ರಮ ಬೆಲೆ ಏರಿಕೆ ವಿರುದ್ಧ ಎಚ್ಚರಿಕೆ ಮತ್ತು ಸಾರಿಗೆ, ಕೃಷಿ ಹಾಗೂ ಹೆಚ್ಚಿನ ಮೈಲೇಜ್ ಬಳಸುವವರಿಗಾಗಿ ವಲಯ-ನಿರ್ದಿಷ್ಟ ಪರಿಹಾರಗಳನ್ನು ಪರಿಚಯಿಸಿವೆ.

ಏನೇನು ಪರಿಹಾರ?

3 ದೇಶಗಳು ಅಡುಗೆ ಎಣ್ಣೆ/ಅನಿಲ ಬಳಕೆಯನ್ನು ಕಡಿಮೆ ಮಾಡಲು ನೇರ ಕ್ರಮಗಳನ್ನು ಜಾರಿಗೆ ತಂದಿವೆ (ಪಡಿತರ, ಸಿಲಿಂಡರ್‌ಗಳನ್ನು ಅರ್ಧದಷ್ಟು ತುಂಬಿಸುವುದು ಅಥವಾ ಎಲೆಕ್ಟ್ರಿಕ್/ಪಿಎನ್‌ಜಿ ಪರ್ಯಾಯಗಳಿಗೆ ಬದಲಾಯಿಸುವುದು).

18 ದೇಶಗಳು ಮೊಬೈಲಿಟಿ ಕಡಿತ ತಂತ್ರಗಳನ್ನು ಅಳವಡಿಸಿಕೊಂಡಿವೆ. (ಇಂಧನ ಪಡಿತರ/ಮಿತಿಗಳು, ಪರ್ಯಾಯ ದಿನಗಳ ಚಾಲನೆ, ಸಾರ್ವಜನಿಕ ಸಾರಿಗೆ/ಕಾರ್‌ಪೂಲಿಂಗ್ ಪ್ರೋತ್ಸಾಹ, ಖಾಸಗಿ/ಸರ್ಕಾರಿ ವಾಹನಗಳ ಮೇಲೆ ಮಿತಿ ಮತ್ತು ಇವಿಗೆ ಪ್ರೋತ್ಸಾಹ).

13 ದೇಶಗಳು, ವಿಶೇಷವಾಗಿ ಸಾರ್ವಜನಿಕ ವಲಯದಲ್ಲಿ ಮನೆಯಿಂದ ಕೆಲಸ (ವರ್ಕ್ ಫ್ರಾಮ್ ಹೋಮ್) ಮತ್ತು ದೂರಸ್ಥ-ಕೆಲಸದ ವ್ಯವಸ್ಥೆಗಳನ್ನು ಉತ್ತೇಜಿಸಿವೆ.

ಬಹುತೇಕ ದೇಶಗಳು (35ಕ್ಕೂ ಹೆಚ್ಚು) ಸಾರ್ವಜನಿಕ ಅಭಿಯಾನಗಳು, ತಂಪುಗೊಳಿಸುವಿಕೆ/ಬೆಳಕಿನ ಮಿತಿಗಳು, ಸರ್ಕಾರಿ ಪ್ರಯಾಣದ ನಿರ್ಬಂಧಗಳು ಮತ್ತು ಸಾಮಾನ್ಯ ದಕ್ಷತಾ ಅಭಿಯಾನಗಳ ಮೂಲಕ ವ್ಯಾಪಕ ಇಂಧನ ಬಳಕೆ ಕಡಿತದ ಉಪಕ್ರಮಗಳನ್ನು ಪ್ರಾರಂಭಿಸಿವೆ.

ತಂಪುಗೊಳಿಸುವಿಕೆ/ ಎಸಿ ಮಿತಿ

ವಿದ್ಯುತ್ ಉಳಿಸಲು ಕಚೇರಿಗಳು ಮತ್ತು ಸಾರ್ವಜನಿಕ ಕಟ್ಟಡಗಳಲ್ಲಿ ತಾಪಮಾನದ ಸೆಟ್‌ಪಾಯಿಂಟ್‌ಗಳನ್ನು ನಿಗದಿಪಡಿಸುವುದು.

ಉದಾಹರಣೆ:

- ಬಾಂಗ್ಲಾದೇಶ (25 ಕೆಸಿ)
- ಸಿಂಗಾಪುರ (25 ಕೆಸಿ, ಫ್ಯಾನ್‌ಗಳಿಗೆ ಆದ್ಯತೆ ನೀಡಿ)
- ಕಾಂಬೋಡಿಯಾ (2425ಕೆಸಿ)
- ಮಲೇಷ್ಯಾ (24ಕೆಸಿ)
- ಶ್ರೀಲಂಕಾ (26ಕೆಸಿ)
- ಥೈಲ್ಯಾಂಡ್ (26ಕೆಸಿ)
- ಜೋರ್ಡಾನ್ (ಸಾರ್ವಜನಿಕ ಕಚೇರಿಗಳಲ್ಲಿ ಎಸಿ ನಿಷೇಧ).

ಶಾಲೆ, ವಿಶ್ವವಿದ್ಯಾಲಯ ಮೇಲೆ ನಿರ್ಬಂಧ

ಕ್ಲಾಸ್‌ಗಳನ್ನು ಕಡಿಮೆ ಮಾಡುವುದು ಅಥವಾ ಆನ್‌ಲೈನ್ ತರಗತಿಗಳಿಗೆ ಮನ್ನಣೆ.



ಉದಾಹರಣೆಗಳು

- ಬಾಂಗ್ಲಾದೇಶ (ವಿಶ್ವವಿದ್ಯಾಲಯಗಳ ಮುಚ್ಚುಗಡೆ)
- ಶ್ರೀಲಂಕಾ (ಬುಧವಾರಗಳಂದು ರಜೆ)
- ಲಾವೋ ಪಿಡಿಆರ್ (3 ದಿನಗಳಿಗೆ ಕಡಿತಗೊಳಿಸುವುದು)
- ಪಾಕಿಸ್ತಾನ (100% ಆನ್‌ಲೈನ್)

ವಿಮಾನ ಪ್ರಯಾಣ ನಿರ್ಬಂಧ



ಅಂತಾರಾಷ್ಟ್ರೀಯ ಪ್ರವಾಸಗಳ ಮೇಲೆ ಮಿತಿ.

ಉದಾಹರಣೆ



- **ಜೋರ್ಡಾನ್ (ತಾತ್ಕಾಲಿಕ ನಿಷೇಧ)**
- **ಪಾಕಿಸ್ತಾನ (ವಿದೇಶಿ ಪ್ರಯಾಣದ ಮೇಲೆ ನಿಷೇಧ)**
- **ಈಜಿಪ್ಟ್, ಇಂಡೋನೇಷ್ಯಾ, ಮಲೇಷ್ಯಾ, ಕೊರಿಯಾ (ಸಾರ್ವಜನಿಕ ವಲಯದ ಬೆಸ-ಸಮ ನಿಯಮ)**
- **ಪನಾಮ, ಟಾಂಜಾನಿಯಾ (ಸಾರ್ವಜನಿಕ ಬಸ್ ಪ್ರಯಾಣ).**

ಸಾರ್ವಜನಿಕ ಅಭಿಯಾನ ಮತ್ತು ಆದೇಶ

ಇಂಧನ ಅಥವಾ ವಿದ್ಯುತ್ ಉಳಿಸಲು (ಬೆಳಕು, ಸಾಧನಗಳು ಇತ್ಯಾದಿ) ಗ್ರಾಹಕರು, ವ್ಯವಹಾರಗಳು ಮತ್ತು ಕಚೇರಿಗಳನ್ನು ಒತ್ತಾಯಿಸುವುದು. ಪಟ್ಟಿಯಲ್ಲಿರುವ ಬಹುತೇಕ ಎಲ್ಲಾ ದೇಶಗಳಲ್ಲಿ ಇದು ವ್ಯಾಪಕವಾಗಿದೆ.

ಉದಾಹರಣೆ

- **ಆಸ್ಟ್ರೇಲಿಯಾ:** ಪ್ರತಿಯೊಂದು ಸಣ್ಣ ಉಳಿತಾಯದಿಂದ ನೆರವು.
- **ಕಾಂಬೋಡಿಯಾ:** ವಿದ್ಯುತ್ ಬಳಕೆಯನ್ನು ಕಡಿಮೆ ಮಾಡಲು ಸಾರ್ವಜನಿಕರಿಗೆ ಒತ್ತಾಯಿಸುತ್ತಿರುವ ಸರ್ಕಾರಿ ಸ್ವಾಮ್ಯದ ವಿದ್ಯುತ್ ಕಂಪನಿ.
- **ಕೊರಿಯಾ:** ಪ್ರಾಯೋಗಿಕ ಉಳಿತಾಯ ಕ್ರಮಗಳ ಕುರಿತು ಸಾರ್ವಜನಿಕ ಅಭಿಯಾನವನ್ನು ನಡೆಸುವುದು.
- **ಸಿಂಗಾಪುರ:** ಇಂಧನ ಸಂರಕ್ಷಿಸಲು ಮತ್ತು ದಕ್ಷ ಸಾಧನಗಳನ್ನು ಬಳಸಲು ಸಾರ್ವಜನಿಕರಿಗೆ ಒತ್ತಾಯಿಸುವುದು. ಉದ್ಯಮ ದಕ್ಷತಾ ಅನುದಾನವನ್ನು ಎಲ್ಲಾ ವಲಯಗಳಿಗೆ ವಿಸ್ತರಿಸುವುದು. ಲೆಟ್ಸ್ ಸೇವ್ ಎನರ್ಜಿ ಟುಗೆದರ್ ಅಭಿಯಾನವನ್ನು ಪ್ರಾರಂಭಿಸುವುದು ಹಾಗೂ ಕ್ಲೈಮೇಟ್ ವೋಚರ್ ಯೋಜನೆಯನ್ನು ಬಳಸಿಕೊಳ್ಳಲು ಪ್ರೋತ್ಸಾಹಿಸುವುದು.
- **ನೆದರ್ಲ್ಯಾಂಡ್ಸ್:** ರಾಷ್ಟ್ರೀಯ ತೈಲ ಬಿಕ್ಕಟ್ಟಿನ ಯೋಜನೆಯ ಹಂತ 1 ಅನ್ನು ಪ್ರಾರಂಭಿಸುವುದು. ಸೌರ ಪಿವಿ ಅಳವಡಿಕೆ, ಗ್ಯಾಸ್ ಬಾಯ್ಲರ್‌ಗಳ ಬದಲಿಗೆ ಹೀಟ್ ಪಂಪ್‌ಗಳ ಬಳಕೆ ಮತ್ತು ಮನೆಗಳ ಮರುಹೊಂದಿಸುವಿಕೆ ನೆರವಿನಿಂದ ಕುಟುಂಬಗಳು ಮತ್ತು ವ್ಯವಹಾರಗಳಿಗಾಗಿ ಉದ್ದೇಶಿತ ದಕ್ಷತೆಯ ಪ್ಯಾಕೇಜ್ ಅನ್ನು ಪರಿಚಯಿಸುವುದು.
- **ಪಾಕಿಸ್ತಾನ:** ಇಂಧನ ಉಳಿಸಲು ಸ್ಥಳೀಯ ಸರ್ಕಾರಗಳಿಗೆ ಸೂಚಿಸುವುದು. ಯಾವುದೇ ಅಧಿಕೃತ ಔತಣಕೂಟಗಳಿಲ್ಲ, ಯಾವುದೇ ಭೌತಿಕ ಸಭೆಗಳಿಲ್ಲ. ಮಾರುಕಟ್ಟೆಗಳು ಮತ್ತು ವಾಣಿಜ್ಯ ಕೇಂದ್ರಗಳನ್ನು ರಾತ್ರಿ 8 ರಿಂದ ಮತ್ತು ಆಹಾರ ಹಾಗೂ ಕಾರ್ಯಕ್ರಮಗಳ ಸಂಸ್ಥೆಗಳನ್ನು ರಾತ್ರಿ 10 ರಿಂದ ಮುಚ್ಚುವುದು.
- **ಮಡಗಾಸ್ಕರ್:** 15 ದಿನಗಳವರೆಗೆ ರಾಷ್ಟ್ರವ್ಯಾಪಿ ಇಂಧನ ತುರ್ತುಸ್ಥಿತಿಯನ್ನು ಘೋಷಿಸುವುದು.
- **ಸ್ಪೇನ್:** ನವೀಕರಣಗಳು, ಸೌರ ಇಂಧನ ಅಳವಡಿಕೆ ಮತ್ತು ವಿದ್ಯುದ್ದೀಕರಣ ಕ್ರಮಗಳಿಗಾಗಿ ವೈಯಕ್ತಿಕ ಆದಾಯ ತೆರಿಗೆಯನ್ನು ಕಡಿತಗೊಳಿಸುವುದು.
- **ಥೈಲ್ಯಾಂಡ್:** ಬೇಡಿಕೆಯನ್ನು ಸೀಮಿತಗೊಳಿಸಲು ಕಚೇರಿ ಉದ್ಯೋಗಿಗಳನ್ನು ಕೇಳುವುದು (ಮೆಟ್ಟಿಲುಗಳನ್ನು ಬಳಸುವುದು, ಸಾಧನಗಳನ್ನು ಸ್ಥಗಿತಗೊಳಿಸುವುದು ಸೇರಿದಂತೆ). ಗ್ರಾಮೀಣ ಬೀದಿ ದೀಪಗಳನ್ನು ಕಡಿಮೆ ಮಾಡುವುದು.
- **ಯುನೈಟೆಡ್ ಕಿಂಗ್‌ಡಮ್:** ಕುಟುಂಬಗಳು ಅನಿಲ ಅಥವಾ ತೈಲ ಆಧಾರಿತ ತಾಪನದಿಂದ ಹೀಟ್ ಪಂಪ್‌ಗಳಿಗೆ ಮತ್ತು ಇತರ ಮನೆ ಮರುಹೊಂದಿಸುವಿಕೆ ಕ್ರಮಗಳಿಗೆ ಬದಲಾಯಿಸಲು ಅನುದಾನವನ್ನು ಹೆಚ್ಚಿಸುವುದು.
- **ವಿಯೆಟ್ನಾಂ:** ಇಂಧನ ಉಳಿಸಲು ಸಹಾಯ ಮಾಡಲು ಸ್ಥಳೀಯ ಸರ್ಕಾರಗಳಿಗೆ ಕೇಳುವುದು.

ಸಾರಿಗೆ ಮತ್ತು ಇಂಧನ ಕ್ರಮಗಳು



ಪಡಿತರ, ಬೆಸ-ಸಮ ನಿಯಮ, ವೇಗದ ಮಿತಿ, ಸಾರ್ವಜನಿಕ ಸಾರಿಗೆ/ಇವಿಗಳ ಪ್ರಚಾರ, ಜೈವಿಕ ಇಂಧನ ಮಿಶ್ರಣ.

ಉದಾಹರಣೆಗಳು:

- ಕೊರಿಯಾ (ಬೆಸ-ಸಮ ವಾಹನ ಚಾಲನೆ ಮಾಡದ ದಿನಗಳು)
- ಶ್ರೀಲಂಕಾ (ಕ್ಯೂಆರ್ ಕೋಡ್ ಪಡಿತರ), ಮ್ಯಾನ್ಮಾರ್ (ಪರ್ಯಾಯ ದಿನಗಳು + ಇವಿ ಟ್ರೇಡ್-ಇನ್)
- ಬಾಂಗ್ಲಾದೇಶ (ಇಂಧನ ಮಿತಿ)
- ಪಾಕಿಸ್ತಾನ (ಉಚಿತ ಸಾರ್ವಜನಿಕ ಸಾರಿಗೆ, ವೇಗದ ಮಿತಿಗಳು)
- ಇಂಡೋನೇಷ್ಯಾ (ಬಯೋಡೀಸೆಲ್ + ಇವಿ ಉತ್ತೇಜನ).

ಗಮನಾರ್ಹ ವಿಶಾಲ ಕ್ರಮ

ದಕ್ಷತೆ ಮತ್ತು ವಿದ್ಯುದ್ದೀಕರಣದ ಉತ್ತೇಜನ



ಸೌರ ಅಳವಡಿಕೆಗಳು, ಎಲ್‌ಇಡಿ ಮರು ಹೊಂದಿಸುವಿಕೆಗಳು, ಹೀಟ್ ಪಂಪ್ ಅನುದಾನಗಳು (ಉದಾಹರಣೆಗೆ: ಯುಕೆ, ನೆದರ್ಲ್ಯಾಂಡ್ಸ್, ಸ್ಪೇನ್), ಇವಿ ಅಳವಡಿಕೆ (ಫ್ರಾನ್ಸ್, ಯುಕೆ, ಚಿಲಿ, ಕಾಂಬೋಡಿಯಾ, ಲಾವೋ ಪಿಡಿಆರ್, ಮ್ಯಾನ್ಮಾರ್, ಥೈಲ್ಯಾಂಡ್).

ತುರ್ತು ಘೋಷಣೆ

ಮಡಗಾಸ್ಕರ್ (15 ದಿನಗಳು), ಮಾರ್ಷಲ್ ದ್ವೀಪಗಳು (90 ದಿನಗಳು), ಟುವಾಲು (ಒಂದು ದ್ವೀಪದಲ್ಲಿ 2 ವಾರಗಳು), ಫಿಲಿಪ್ಪೈನ್ಸ್/ಶ್ರೀಲಂಕಾ: ರಾಷ್ಟ್ರೀಯ ಇಂಧನ ತುರ್ತುಸ್ಥಿತಿ.

ಉದ್ದೇಶಿತ ನಿರ್ಬಂಧಗಳು



ಎಲ್‌ಪಿಜಿ (ಅನಿಲ) ಸಿಲಿಂಡರ್ ಅರ್ಧ-ತುಂಬಿಸುವಿಕೆ (ಮಾಲ್ಡೀವ್ಸ್, ನೇಪಾಳ), ಮಾರುಕಟ್ಟೆ ಮುಚ್ಚುವಿಕೆಗಳು (ಪಾಕಿಸ್ತಾನ), ಜಾಹೀರಾತು ಫಲಕಗಳ ದೀಪಗಳನ್ನು ಆರಿಸುವುದು (ಈಜಿಪ್ಟ್, ಶ್ರೀಲಂಕಾ).

ಇಂದು ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಬೆಂಗಳೂರು ಪೈಪೋಟಿ

ಗೆದ್ದರೆ ಪ್ಲೇಆಫ್‌ಗೆ ಆರ್‌ಸಿಬಿ!

• **ರಾಯ್ಪುರ:** ನಂಬರ್ ಒನ್ ಸ್ಥಾನದಲ್ಲಿರುವ ಆರ್‌ಸಿಬಿ ಪ್ಲೇಆಫ್ ಖಾತ್ರಿಗಾಗಿ ಕೆಕೆಆರ್‌ನೊಂದಿಗೆ ಬುಧವಾರದಂದು ಸೆಣಸಾಡಲಿದೆ. ಮೊದಲನೇ ಸ್ಥಾನದಲ್ಲಿರುವ ಆರ್‌ಸಿಬಿ ಅರ್ಹತೆ ಪಡೆಯುವ ಪ್ರಮುಖ ತಂಡವಾಗಿದ್ದರೂ ಪ್ಲೇಆಫ್ ಇನ್ನೂ ಕಟ್ಟಿಟ್ಟ ಬುತ್ತಿಯಾಗಿಲ್ಲ. ಟಾಪ್ ಎರಡರಲ್ಲೇ ಉಳಿಯಬೇಕಾದರೆ ಈ ಪಂದ್ಯ ಪ್ರಮುಖ ಪಾತ್ರ ವಹಿಸಲಿದೆ. ಇತ್ತ ಕೆಕೆಆರ್ ಗೆದ್ದರೆ ಮಾತ್ರ ತಾಂತ್ರಿಕವಾಗಿ ಪಂದ್ಯಾವಳಿಯಲ್ಲಿ ಉಳಿದರೂ ಪ್ಲೇಆಫ್‌ಗೇರಬೇಕಾದರೆ ಮಿರ್ಯಾಕಲ್ ಒಂದು ನಡೆಯಲೇಬೇಕಿದೆ.

ರಾಯ್ಪುರದ ಬೌಲಿಂಗ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬೆಂಗಳೂರಿಗಿದು ಎರಡನೇ ತವರಾಗಿದ್ದು, ಈ ಹಿಂದೆ ಮುಂಬೈ ವಿರುದ್ಧ ಥ್ರಿಲ್ಲಿಂಗ್ ಪಂದ್ಯದಲ್ಲಿ ಗೆದ್ದಿದೆ. ಸಮತೋಲಿತ ತಂಡವಾಗಿದ್ದರೂ ಆರ್‌ಸಿಬಿಗೆ ಬ್ಯಾಟಿಂಗ್ ಕುಸಿತ ಹಿನ್ನಡೆ ತಂದಿದೆ. ಅತ್ತ ಕೆಕೆಆರ್ ಪರ ಫಿನ್ ಅಲೆನ್ ಅಬ್ಬರದ ಶತಕ ಬಾರಿಸಿದ ನಂತರ ಭರವಸೆಯೊಂದಿಗೆ ಮೈದಾನಕ್ಕಿಳಿಯಲಿದೆ. ಅಂಕಪಟ್ಟಿ ಹೊಡೆದಾಟ ದೃಷ್ಟಿಯಲ್ಲಿ ಇದು ಮಹತ್ವದ ಪಂದ್ಯವಾಗಿದ್ದು, ಕುತೂಹಲ ಮೂಡಿಸಿದೆ.

ಆರ್‌ಸಿಬಿಗೆ ಭುವಿ ಭರವಸೆ: ಈ ಆವೃತ್ತಿಯಲ್ಲಿ ಆರ್‌ಸಿಬಿಗೆ ಗೆಲುವಿನ ಹಿಂದಿರುವ ಪ್ರಮುಖ ಶಕ್ತಿಯಾಗಿ ಭುವನೇಶ್ವರ್ ಕುಮಾರ್ ಪಾತ್ರವಹಿಸಿದ್ದಾರೆ. ಪ್ರತಿ ಪಂದ್ಯದಲ್ಲಿ ಬೌಲಿಂಗ್ ಮೂಲಕ ಎದುರಾಳಿಗೆ ಕಾಡುವ ಅವರು, ಗೆಲುವಿನಲ್ಲಿ ಮಿಂಚುತ್ತಿದ್ದಾರೆ. ದೊಡ್ಡ ದೊಡ್ಡ ಬ್ಯಾಟರ್‌ಗಳನ್ನು ಆರಂಭದಲ್ಲೇ ಕಟ್ಟಿಹಾಕಿರುವ ಅವರು, ಆಡಿರುವ ಪಂದ್ಯಗಳಲ್ಲಿ ಬರೋಬ್ಬರಿ 21 ವಿಕೆಟ್ ಪಡೆದು ಪರ್ಪಲ್ ಕ್ಯಾಪ್ ಪಡೆದವರಾಗಿದ್ದಾರೆ. ಇತ್ತ ಅವರಿಗೆ ಜೋಶ್ ಹ್ಯಾಜೆಲ್ವುಡ್ ಜೋಶ್ ತುಂಬುತ್ತಿರುವುದೇ ದೊಡ್ಡ ಬಲ. ಕಳೆದ ಪಂದ್ಯದಲ್ಲಿ ಬ್ಯಾಟಿಂಗ್ ಮಾಡಬೇಕಾದ ಸಮಯ ಬಂದಾಗಲೂ ಭುವಿ ಸೈ ಅಂದಿದ್ದು, ತಂಡಕ್ಕೆ ವಿಶ್ವಾಸ ದ್ವಿಗುಣಗೊಳಿಸಿದೆ. ಬ್ಯಾಟಿಂಗ್ ವಿಚಾರದಲ್ಲೇ ಆರ್‌ಸಿಗೆ ತಲೆನೋವಾಗಿದೆ. ಸಾಲ್ಟ್ ಬದಲಿ ಆಟಗಾರರಾಗಿ ಕಣಕ್ಕಿಳಿದಿರುವ ಜೇಕಬ್ ಬೆಥಲ್ ಹೇಳಿಕೊಳ್ಳುವ ಪ್ರದರ್ಶನ ನೀಡಿಲ್ಲ. ಸ್ಫೋಟಕ ಬ್ಯಾಟಿಂಗ್ ಮೂಲಕ ಆರೆಂಜ್ ಕ್ಯಾಪ್ ಪೈಪೋಟಿಯಲ್ಲಿ ಪ್ರಬಲ ಸ್ಪರ್ಧಿಯಾಗಿರುವ ವಿರಾಟ್ ಕೊಹ್ಲಿ ಎರಡು ಪಂದ್ಯಗಳಲ್ಲಿ ಶೂನ್ಯ ಸುತ್ತಿರುವುದು ತಂಡಕ್ಕೆ ಹಿನ್ನಡೆ ತಂದಿದೆ. ಇತ್ತ ಮೂರನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸುವ ಪಡಿಕ್ಕಲ್ ಪ್ರಭಾವ ಮೂಡಿಸಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ನಾಯಕ ಪಾಟಿದಾರ್ ತಮ್ಮ ಲಯದಲ್ಲಿದ್ದು, ಭರ್ಜರಿ ಪ್ರದರ್ಶನದೊಂದಿಗೆ ಮಿಂಚಿದ್ದಾರೆ. ಆದರೆ ಕೆಳಕ್ರಮಾಂಕದಲ್ಲಿ ರನ್ ಬರುತ್ತಿಲ್ಲ. ಡೇವಿಡ್ ಮಿಂಚಿದರೂ, ಜಿತೇಶ್ ಶರ್ಮ ಪರದಾಡುತ್ತಿದ್ದಾರೆ. ರೋಮಾರಿಯೋ ಶೇಫರ್ಡ್ ಬ್ಯಾಟ್‌ನಿಂದ ರನ್ ಬರುತ್ತಿಲ್ಲ. ಆದಾಗ್ಯೂ ಆಲ್ ರೌಂಡರ್ ಕೃಣಾಲ್ ಪಾಂಡ್ಯ ಹೆಚ್ಚುವರಿ ಬ್ಯಾಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ತಂಡಕ್ಕೆ ಆನೆ ಬಲ ತಂದಿದೆ.

ಗೆಲುವಿನ ಹಂಬಲದಲ್ಲಿ ಕೆಕೆಆರ್: ಗೆಲುವಿಗೂ ಮುನ್ನವೇ ಅರ್ಧದಷ್ಟು ಪಂದ್ಯಗಳಲ್ಲಿ ಸೋತಿರುವ ಕೆಕೆಆರ್ ದ್ವಿತೀಯಾರ್ಧದಲ್ಲಿ ಭರ್ಜರಿ ಪ್ರದರ್ಶನ ನೀಡಿದೆ. ಕೊನೆ ಕಳೆದ ಪಂದ್ಯದಲ್ಲಿ ಫಿನ್ ಅಲೆನ್ ಅಬ್ಬರದ ಶತಕ ಬಾರಿಸಿರುವುದು ತಂಡಕ್ಕೆ ಸಿಕ್ಕ ದೊಡ್ಡ ಬಲವಾಗಿದೆ. ಹಿಂದಿನ ಪಂದ್ಯಗಳಲ್ಲಿ ಸ್ಪಿನ್ನರ್‌ಗಳಾದ ಸುನಿಲ್ ನರೈನ್ ಹಾಗೂ ವರುಣ್ ಚಕ್ರವರ್ತಿ ಮಿಂಚಿದ್ದಾರೆ. ಅತ್ತ ಅನುಕುಲ್ ರಾಯ್ ಉತ್ತಮ ಇಂಪ್ಯಾಕ್ಟ್ ಮಾಡಿದ್ದಾರೆ. ಅಜಿಂಕ್ಯಾ ರಹಾನೆ, ರಘುವಂಶಿ ಲಯಕ್ಕೆ ಮರಳಬೇಕಿದೆ. ತಂಡದಲ್ಲಿ ಸ್ಥಾನ ಪಡೆದರೂ ಮನೀಶ್ ಪಾಂಡೆ ಅವಕಾಶಗಳನ್ನು ಪಡೆದಿಲ್ಲ. ರಿಂಕು ಸಿಂಗ್ ಕೂಡ ಲಯಕ್ಕೆ ಮರಳಿದಂತಿದೆ. ಬೌಲಿಂಗ್ ವಿಭಾಗಕ್ಕೆ ಬಂದರೆ ವೇಗಿಗಳ ಕಮ್ಮಿ ತಂಡಕ್ಕೆ ಕಾಡುತ್ತಿದೆ. ವೈಭವ್ ಆರೋರಾ ಹಿನ್ನಡೆ ಅನುಭವಿಸಿದ್ದಾದರೂ ಕಾರ್ತಿಕ್ ತ್ಯಾಗಿ ಗಮನಾರ್ಹ ಪ್ರದರ್ಶನ ನೀಡುತ್ತಿದ್ದಾರೆ. ವೇಗದ ಜತೆಗೆ ಬ್ಯಾಟಿಂಗ್ ಬಲ ಹೆಚ್ಚಿಸಿಕೊಂಡರೆ, ತಂಡ ವಿಶ್ವಾಸದಲ್ಲಿ ಕಾಣಿಸಿಕೊಳ್ಳಬಹುದಾಗಿದೆ.




ಪಂದ್ಯದ ವಿವರ
ಯಾವಾಗ: ಬುಧವಾರ, ಎಲ್ಲಿ: ರಾಯ್ಪುರ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ರಾಯ್ಪುರ ಪಿಚ್ ಸವಾಲು

ರಾಯ್ಪುರದ ಪಿಚ್ ಬ್ಯಾಟರ್‌ಗಳಿಗೆ ಕಾಟ ನೀಡಿದ್ದಂತೂ ಸುಳ್ಳಲ್ಲ. ಕಳೆದ ಪಂದ್ಯದಲ್ಲಿ ಅದು ಸ್ಪಷ್ಟವಾಗಿ ಗೋಚರಿಸಿದೆ. ಹೆಚ್ಚಿನ ಕ್ರ್ಯಾಕ್‌ಗಳಿರುವುದು ಬೌಲರ್‌ಗಳಿಗೆ ಬಲ ತಂದಿದೆ. ಸ್ಪಿನ್ನರ್‌ಗಳಿಗೆ ಲಾಭವಿಲ್ಲವಾದರೂ ಭುವ ನೇಶ್ವರ್, ಕಾರ್ತಿಕ್ ತ್ಯಾಗಿ ಅಂಥ ಬೌಲರ್‌ಗಳಿಗೆ ಬಲ ಹೆಚ್ಚಿಸಿದೆ. ಇದುವರೆಗೂ 7 ಐಪಿಎಲ್ ಪಂದ್ಯಗಳು ಅಲ್ಲಿ ನಡೆದಿದ್ದು, ಆರ್‌ಸಿಬಿ ಪೇರಿಸಿ ರುವ 167 ಸ್ಕೋರೇ ದೊಡ್ಡದಾಗಿದೆ. ಆವರೇಜ್ ಸ್ಕೋರ್ 149 ರನ್ ಇದೆ. ಫಿನ್ ಆಲೆನ್ ಅಂಥ ಸ್ಫೋಟಕ ಬ್ಯಾಟರ್‌ಗಳಿಗೆ ದೊಡ್ಡ ಸವಾಲಾಗಿದೆ.

ಪಂಜಾಬ್‌ಗೆ ಸಂಕಷ್ಟ



• **ಧರ್ಮಶಾಲಾ:** ಮೊದಲಾರ್ಧದಲ್ಲಿ ಜಯದ ಓಕುಳಿಯಲ್ಲಿ ತೊಯ್ದಿದ್ದ ಪಂಜಾಬ್ ಕಿಂಗ್ಸ್ ದ್ವಿತೀಯಾರ್ಧ ಶುರುವಾದಾಗಿನಿಂದ ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿದೆ. ಗೆಲ್ಲಲೇಬೇಕಾದ ಪಂದ್ಯದಲ್ಲಿ ದಿಲ್ಲಿ ವಿರುದ್ಧ 3 ವಿಕೆಟ್‌ನಿಂದ ಸೋತ ಶ್ರೇಯಸ್ ಅಯ್ಯರ್ ಪಡೆ ಅಗ್ರಸ್ಥಾನದಿಂದ ಇಳಿದ ನಂತರ ಪ್ಲೇಆಫ್‌ಗಾಗೇ ಪರದಾಟ ನಡೆಸುವ ಸ್ಥಿತಿಗೆ ಬಂದಿದೆ.

- ದಿಲ್ಲಿ ವಿರುದ್ಧ ಪರಾಭವ
- ಸತತ ನಾಲ್ಕನೇ ಸೋಲು ಕಂಡ ಅಯ್ಯರ್ ಪಡೆ

ಸಂಕ್ಷಿಪ್ತ ಸ್ಕೋರ್
ಪಂಜಾಬ್ 20 ಓವರ್‌ಗಳಲ್ಲಿ 210/5: ಶ್ರೇಯಸ್ 59, ಪ್ರಿಯಾಂಶ್ 56; ಮಾಧವ್ 40/2
ದಿಲ್ಲಿ 19 ಓವರ್‌ಗಳಲ್ಲಿ 216/7: ಅಕ್ಷರ್ 56, ಡೇವಿಡ್ 51; ಅರ್ಷದೀಪ್ 21/2

210 ರನ್ ಗುರಿ ಬೆನ್ನತ್ತುವಾಗ ದಿಲ್ಲಿ 33ಕ್ಕೆ 3, 74ರನ್‌ಗೆ ನಾಲ್ಕನೇ ವಿಕೆಟ್ ಕಳೆದುಕೊಂಡಿತು. ಪ್ರಮುಖ ವಿಕೆಟ್ ಕಳೆದುಕೊಂಡ ಹಂತದಲ್ಲಿ ದಿಲ್ಲಿ ಅನುಭವವಿಲ್ಲದ ಆಟಗಾರರನ್ನು ತಂಡದಲ್ಲಿಟ್ಟುಕೊಂಡಿತ್ತು. ಪಂದ್ಯದಲ್ಲಿ ಪಂಜಾಬ್ ಪಂದ್ಯದಲ್ಲಿ ಪ್ರಭಾವಶಾಲಿ ಯಾಯಿತು ಅನ್ನುವಷ್ಟರಲ್ಲಿ ಡೇವಿಡ್ ಮಿಲ್ಲರ್-ಅಕ್ಷರ್ ಜೊತೆಯಾಟವಾಡಿದರು. ಹೋಪ್ ಉಳಿಸಿಕೊಂಡ ದಿಲ್ಲಿ ಮೂವರು ಅನುಭವ ಇಲ್ಲದ ಬ್ಯಾಟರ್‌ಗಳ ಬಲದಿಂದ 19 ಓವರ್ ಮಾತ್ರದಲ್ಲಿ 216 ರನ್ ಗಳಿಸಿತು. 7 ವಿಕೆಟ್ ಪಡೆದುಕೊಂಡ ಪಂಜಾಬ್ ಡೆತ್ ಓವರ್‌ನಲ್ಲಿ ಒತ್ತಡ ನಿವಾರಿಸಲಿಲ್ಲ. ಟಾಸ್ ಗೆದ್ದ ದಿಲ್ಲಿ ಬ್ಯಾಟಿಂಗ್ ಆಹ್ವಾನ ಕೊಟ್ಟಿತು. ಪಂಜಾಬ್ ಪರ ಪ್ರಿಯಾಂಶ್ ಆರ್ಯ(56) ಭರ್ಜರಿ ಬ್ಯಾಟಿಂಗ್ ಮಾಡಿದರು. ಅರ್ಧಶತಕದ ನಂತರ ಶ್ರೇಯಸ್ ಅಯ್ಯರ್ (59) ಅರ್ಧಶತಕದೊಂದಿಗೆ ಮಿಂಚಿದರು. ಮಧ್ಯಮ ಕ್ರಮಾಂಕದಲ್ಲಿ ಕೂಪರ್(38) ಮಿಂಚಿದ ನಂತರ ಅಂತಿಮ ಓವರ್‌ಗಳಲ್ಲಿ ಸೂರ್ಯಾಂಶ್ ಮಿಂಚಿದರು. ಪಂಜಾಬ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 210 ರನ್ ಗಳಿಸಿತು. ಗುರಿ ಬೆನ್ನತ್ತಿದ ದಿಲ್ಲಿ ಕ್ಯಾಪಿಟಲ್ಸ್‌ಗೆ ಆರಂಭಿಕ ಆಘಾತವಾದರೂ ಡೇವಿಡ್ ಮಿಲ್ಲರ್(51), ಅಕ್ಷರ್ ಪಟೇಲ್(56) ಆಸರೆ ಪಡೆಯಿತು. ಇಂಪ್ಯಾಕ್ಟ್ ಆಟಗಾರರಾಗಿ ಬಂದ ಅಷುತೋಶ್ (24) ರನ್ ಬಾರಿಸಿದರೆ, ಮಾಧವ್(18★) ರನ್ ಗಳಿಸಿ ಪಂದ್ಯ ಗೆಲ್ಲಿಸಿದರು. ದಿಲ್ಲಿ 19 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 216 ರನ್ ಗಳಿಸಿತು.

ಜಿಟಿ ಪ್ಲೇಆಫ್ ಖಚಿತ

• **ಅಹಮದಾಬಾದ್:** ವೇಗಿಗಳ ದಾಳಿಗೆ ತತ್ತರಿಸಿದ ಹೈದರಾಬಾದ್ ತಂಡವು ಕೇವಲ 86 ರನ್‌ಗಳಿಗೆ ಆಲೌಟ್ ಆಗಿದ್ದು, ಗುಜರಾತ್ ವಿರುದ್ಧದ ಪಂದ್ಯದಲ್ಲಿ 82 ರನ್‌ಗಳ ಹೀನಾಯ ಸೋಲು ಕಂಡಿದೆ. ಮಹತ್ವ ಪಂದ್ಯದಲ್ಲಿ ಸುದರ್ಶನ್ ಮತ್ತು ಸುಂದರ್ ಆಟದೊಂದಿಗೆ ಬ್ಯಾಟಿಂಗ್‌ನಲ್ಲಿ ಮಿಂಚಿದ ಗುಜರಾತ್ ವೇಗಿಗಳ ಬಲದೊಂದಿಗೆ ಹೈದರಾಬಾದ್ ತಂಡದ ಬೆವರಿಳಿಸಿತು. ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 168 ರನ್ ಗಳಿಸಿತು. ಗುರಿ ಬೆನ್ನತ್ತಿದ ಹೈದರಾಬಾದ್ 86 ರನ್‌ಗಳಿಗೆ ಪತನಗೊಂಡಿತು. ಈ ಗೆಲುವಿನೊಂದಿಗೆ ಗುಜರಾತ್ ಬಹುತೇಕ ಪ್ಲೇಆಫ್ ಗೇರಿದ್ದಲ್ಲದೆ, ಹೈದರಾಬಾದ್ ತಂಡವನ್ನು ಕೆಳನೂಕಿ ಅಗ್ರಸ್ಥಾನಕ್ಕೇರಿದೆ.

ಸುದರ್ಶನ್ ಆಸರೆ: ಟಾಸ್ ಸೋತ ಗುಜರಾತ್ ಟೈಟಾನ್ಸ್ ಬ್ಯಾಟಿಂಗ್ ಗಿಳಿಯಿತು. ಗಿಲ್ ಬೇಗನೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಜಾಸ್ ಬಟ್ಲರ್ 11 ಬಾಲ್‌ಗಳಲ್ಲಿ 7 ರನ್ ಗಳಿಸಿ ಇನ್ನೇನು ಸ್ಫೋಟಕ ಬ್ಯಾಟಿಂಗ್ ಶುರು ಮಾಡಬೇಕು ಅನ್ನುವಷ್ಟರಲ್ಲಿ ಪ್ರಫುಲ್ ಹಿಂಗೆ ವಿಕೆಟ್ ಕಿತ್ತರು. 26 ರನ್ ಮಾತ್ರಕ್ಕೆ ವಿಕೆಟ್ ಬಿದ್ದರೂ ಸುದರ್ಶನ್ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. ನಿಶಾಂತ್ ಸಿಂಧು ಮಧ್ಯಮ ಕ್ರಮಾಂಕದಲ್ಲಿ ಬರುತ್ತಲೇ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 14 ಬಾಲ್ ಎದುರಿಸಿದ ಸಿಂಧು 22 ರನ್‌ಗೆ ಕ್ಯಾಚಿತ್ತರು. ವಾಷಿಂಗ್ಟನ್ ಸುಂದರ್ ಸುದರ್ಶನ್‌ಗೆ ಸಾಥ್ ಕೊಟ್ಟರು. ಸುದರ್ಶನ್ ಅರ್ಧಶತಕ ಬಾರಿಸಿದರು. 61 ರನ್ ಗಳಿಸಿದ ಸುದರ್ಶನ್ 2 ಸಿಕ್ಸ್, 5 ಬೌಂಡರಿ ಬಾರಿಸಿ ವಿಕೆಟ್ ಒಪ್ಪಿಸಿದರು.

ವಾಷಿ ಅಬ್ಬರ: ಕೊನೆಯಲ್ಲಿ ವಾಷಿಂಗ್ಟನ್ ಸುಂದರ್ ಅಬ್ಬರಿಸಿದರು. ಡೆತ್ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 7 ಬೌಂಡರಿ 1 ಸಿಕ್ಸರ್ ಬಾರಿಸಿದ ಅವರು 33 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು.

ಹೈದರಾಬಾದ್ ತತ್ತರ: ಗುರಿ ಬೆನ್ನತ್ತಿದ ಹೈದರಾಬಾದ್ ತತ್ತರಿಸಿತು. ವೇಗಿಗಳಾದ ಜೇಸನ್ ಹೋಲ್ಡರ್ ಮತ್ತು ಕಾಗಿಸೋ ರಬಾಡ ಬೌಲಿಂಗ್ ದಾಳಿಗೆ ಬಸವಳಿದ ಹೈದರಾಬಾದ್ ಬ್ಯಾಟರ್‌ಗಳು, ಒಂದೊಂದು ರನ್‌ಗೂ ಪರದಾಡಿದರು. ಸಲೀಲ್ ಆರೋರಾ 16 ರನ್ ಗಳಿಸಿದ್ದೇ ತಂಡದಲ್ಲಿ ಬ್ಯಾಟರ್ ಗಳಿಸಿದ್ದ ಅತಿ ಹೆಚ್ಚು ರನ್ ಆಗಿತ್ತು. ಪ್ರತಿಯೊಬ್ಬ ಬ್ಯಾಟರ್ ಒಂದೊಂದು ರನ್‌ಗೆ ಪರದಾಡಿದರು. ಗುಜರಾತ್ ಪರ ರಬಾಡ 3, ಹೋಲ್ಡರ್ 3, ಕೃಷ್ಣ 2, ಸಿರಾಜ್ ಮತ್ತು ರಶೀದ್ ಖಾನ್ ತಲಾ ಒಂದು ವಿಕೆಟ್ ಪಡೆದರು.

ಸಾತ್ವಿಕ್-ಚಿರಾಗ್ ಶುಭಾರಂಭ

• **ಹೊಸದಿಲ್ಲಿ:** ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ಭಾರತದ ಪಾರುಪತ್ಯ ಥೈಲ್ಯಾಂಡ್ ಓಪನ್ ವರೆಗೂ ವಿಸ್ತರಿಸಿದೆ. ಭಾರತದ ಭರವಸೆಯ ಮತ್ತು ಅಗ್ರ ಜೋಡಿ ಸಾತ್ವಿಕ್-ಚಿರಾಗ್ ಇಂಡೋನೇಷ್ಯಾದ ಮುಹ್ ಪುತ್ರಾ ಮತ್ತು ಬಗಾಸ್ ಮೌಲಾನಾ ಅವರನ್ನು ಸೋಲಿಸಿ ಎರಡನೇ ಸುತ್ತಿಗೆ ಲಗ್ಗೆ ಹಾಕಿದರು. ಹಿಂದೆ ನಡೆದ ಪಂದ್ಯಾವಳಿಯಿಂದ ದೂರ ಉಳಿದಿದ್ದ ಈ ಜೋಡಿ ಗೆಲುವಿನೊಂದಿಗೆ ಬ್ಯಾಡ್ಮಿಂಟನ್ ಮೈದಾನಕ್ಕೆ ಕಾಲಿಟ್ಟಿದೆ.

ಸಾತ್ವಿಕ್‌ಗೆ ಆದ ಗಾಯದಿಂದಾಗಿ ಥಾಮಸ್ ಕಪ್‌ನಿಂದ ದೂರ ಉಳಿದಿದ್ದ ಈ ಜೋಡಿ ಆರಂಭಿಕ ಪಂದ್ಯದಲ್ಲಿ 3-0ರಿಂದ ಪ್ರಭಾವಶಾಲಿ ಗೆಲುವು ಸಾಧಿಸಿದ್ದು, ಸ್ಪಷ್ಟ ಸಂದೇಶ ನೀಡಿತು. ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲಿನಿಂದಲೂ ಆಕ್ರಮಣಕಾರಿಯಾಗಿ ಆಡಿ ಗೆದ್ದಿತು. ಸಾತ್ವಿಕ್ ನೆಟ್ ಪಾಯಿಂಟ್‌ನತ್ತ ಗಮನ ಹರಿಸಿದರೆ, ತಾಂತ್ರಿಕ ಆಟದೊಂದಿಗೆ ಮಿಂಚಿದ ಚಿರಾಗ್ ಸ್ಮ್ಯಾಷ್‌ಗಳೊಂದಿಗೆ ಗಮನ ಸೆಳೆದರು. ಬ್ರೇಕ್ ಪಾಯಿಂಟ್, ಟೈಮ್ ಮತ್ತು ಗ್ಯಾಪ್‌ಗಳೊಂದಿಗೆ ಈ ಜೋಡಿ ಕೊನೆವರೆಗೂ ಒತ್ತಡ ಹೇರಿತು. ಕೊನೆಯಲ್ಲಿ ಸಾತ್ವಿಕ್-ಚಿರಾಗ್ ಜೋಡಿ 21-19, 21-23, 21-10 ರಿಂದ ಗೆದ್ದರು. ಮುಂದಿನ ಸುತ್ತಿನಲ್ಲಿ ಈ ಇಬ್ಬರು ಮಲೇಷ್ಯಾದ ಬ್ಯಾನ್-ಹೈಕಲ್ ಜೋಡಿ ಎದುರು ಆಡಲಿದ್ದಾರೆ.


ವೇಟ್‌ಲಿಫ್ಟಿಂಗ್‌ಗೆ ವಿಶೇಷ ಒತ್ತು: ಸಾಯ್

• **ಹೊಸದಿಲ್ಲಿ:** ಈ ವರ್ಷದ ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು ಏಷ್ಯನ್ ಕ್ರೀಡಾಕೂಟಕ್ಕೆ ಸಜ್ಜಾಗುತ್ತಿರುವ ವೇಟ್‌ಲಿಫ್ಟರ್‌ಗಳಿಗೆ ಅಂತಾರಾಷ್ಟ್ರೀಯ ಮಾನ್ಯತೆ ಮತ್ತು ದೀರ್ಘಾವಧಿಯ ರಾಷ್ಟ್ರೀಯ ತರಬೇತಿ ಶಿಬಿರಗಳಿಗೆ ಸುಮಾರು 1.95 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ ಎಂದು ಭಾರತೀಯ ಕ್ರೀಡಾ ಪ್ರಾಧಿಕಾರ ತಿಳಿಸಿದೆ. ಸೋಮವಾರದಿಂದ ಪ್ರಾರಂಭವಾಗಿ ಮೇ 17 ರವರೆಗೆ ನಡೆಯಲಿರುವ ಗಾಂಧಿನಗರದಲ್ಲಿ ನಡೆಯಲಿರುವ ಏಷ್ಯನ್ ಸೀನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಭಾಗವಹಿಸುವಿಕೆಗಾಗಿ ಸರ್ಕಾರ ಸುಮಾರು 70.45 ಲಕ್ಷ ರೂ.ಗಳನ್ನು ಮಂಜೂರು ಮಾಡಿತ್ತು. ಆರಂಭಿಕ ತಂಡವು 22 ಕ್ರೀಡಾಪಟುಗಳು, ಆರು ತರಬೇತುದಾರರು, ಐದು ಸಹಾಯಕ ಸಿಬ್ಬಂದಿ ಮತ್ತು ಮೂವರು ರೆಫರಿಗಳನ್ನು ಒಳಗೊಂಡಿದೆ. ಭಾರತೀಯ ಕ್ರೀಡಾ ಪ್ರಾಧಿಕಾರ ಅಂತಾರಾಷ್ಟ್ರೀಯ ಸ್ಪರ್ಧಾತ್ಮಕ ಮಾನ್ಯತೆ ಮತ್ತು ದೀರ್ಘಾವಧಿಯ ರಾಷ್ಟ್ರೀಯ ತರಬೇತಿ ಶಿಬಿರಗಳಿಗಾಗಿ ಸುಮಾರು 1.95 ಕೋಟಿ ರೂ.ಗಳ ಸಂಯೋಜಿತ ಹೂಡಿಕೆಯೊಂದಿಗೆ ಭಾರತೀಯ ವೇಟ್‌ಲಿಫ್ಟಿಂಗ್‌ಗೆ ತನ್ನ ಬೆಂಬಲವನ್ನು ತೀವ್ರಗೊಳಿಸಿದೆ ಎಂದು ಸಾಯ್ ಹೇಳಿಕೆಯಲ್ಲಿ ತಿಳಿಸಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ

5982



ಎಡದಿಂದ ಬಲಕ್ಕೆ

1.ಮಾಧ್ಯಮಗಳಲ್ಲಿ ಹಣ ನೀಡಿ ಕೊಡುವ ಪ್ರಕಟಣೆಗಳು (4)
2.ದರ ಕಡೆಯಲ್ಲಿರುವ ಕಿಟಕಿ (4)
4.ಅಧಿಕವಾದ ಹಿರಿಮೆ ತಿರುಗಿದೆ (4)
6.ಮೊಗದ ನಡುವೆ ಪ್ರಥಮ ಸ್ಥಾನದಲ್ಲಿರುವವನಿದ್ದಾನೆ (4)
7.ನೊಗ ಹೊತ್ತು ಬಂದ ವೀಕ್ಷಕ (3)
8.ಇಪ್ಪತ್ತೇಳು ನಕ್ಷತ್ರಗಳಲ್ಲಿ ಐದನೆಯದು (4)
9.ಪರಾಕ್ರಮಿಗಳು ನಿಲ್ಲುವ ಸ್ಥಳ-ರಣರಂಗ (4)
11.ಇದು ರೂಢಿಯಿಂದ ಬಂದದ್ದು (3)
12.ನೀಲಾಗಸ (3)
13.ತುಂಬ ಸೂಕ್ಷ್ಮ ತೆರಿಂದ ಕೂಡಿದ್ದು (3)
15.ಈತ ಅಪಹಾಸ್ಯಕ್ಕೊಳಗಾದವನು (4)
16.ಭಯೋತ್ಪಾದಕ ವ್ಯಕ್ತಿ ತಿರುಗಿದ್ದಾನೆ (4)

ಮೇಲಿನಿಂದ ಕೆಳಕ್ಕೆ

1.ಅರಿವು-ಎಚ್ಚರದಿಂದ ಇರುವ ಸ್ಥಿತಿ (3)
3.ಸಣ್ಣ ಗೆಜ್ಜೆಗಳ ಕಾಲಿನ ನಗ ತಲೆಕೆಳಗಾಗಿದೆ (3)
5.ಈಕೆ ಮನಕ್ಕಾನಂದ ನೀಡುವವಳು (4)
6.ಮೊರದ ನಡುವೆ ಇರುವ ಮೀನುಗಾರ (4)
8.ಜಿಂಕೆಯನ್ನು ಸವಾರಿ ಮಾಡುವವನು-ವಾಯು (5)
10.ನೋವು ಮುಂತಾದವು ಶಾಂತವಾಗುವಿಕೆ ತಲೆಕೆಳಗಾಗಿದೆ (5)
13.ರಕ್ತ ಹರಿಯುವ ಮಿಡಿತ (2)
14.ಶಾಖದಿಂದ ಉಕ್ಕುವಿಕೆ-ಮನಸ್ಸಿನಲ್ಲಿ ನೋಯು (2)

5981 ಉತ್ತರ

ಎಡದಿಂದ ಬಲಕ್ಕೆ:
1.ದಿವ್ಯವಾಣಿ 3.ದಿನಚರಿ
5.ದಿನಕರ 8.ದಾರುಕರ್ಮ
10.ಸಂಕೇತ 12.ಆಲಸಿ
14.ದೂಳಿತ 16.ವರನಟ
17.ಕಾಯಗಟ್ಟು

ಮೇಲಿನಿಂದ ಕೆಳಕ್ಕೆ :
2.ವಾರ್ಧಕ 4.ನಜರು
6.ನರಕುಲ 7.ರಸಂ
8.ದಾತ 9.ಕರಾವಳಿ
11.ಕೇವಲಮಿತ್ರ
12.ಆರ್ದ್ರಭಾವ
13.ಸಿರಿತನ
14.ದೂರಾನ್ವಯ
15.ತಲೆಕಟ್ಟು

ಕಿರುಸುದ್ದಿ

ಇಂದು ಶೃಂಗೇರಿ ಶ್ರೀವಿಧುಶೇಖರ ಭಾರತೀ, ನಾಳೆ ಬಿಎಸ್‌ವೈ ಸುಳ್ಯಕ್ಕೆ

ಸುಳ್ಯ: ಅಜ್ಜಾವರ ಶ್ರೀ ಮಹಿಷಮರ್ದಿನೀ ದೇವಸ್ಥಾನದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀಮಾತಾ ಸಭಾಭವನದ ಲೋಕಾರ್ಪಣಾ ಸಮಾರಂಭ ಮೇ 14ರಂದು ನಡೆಯಲಿದ್ದು, ಲೋಕಾರ್ಪಣೆ ಕಾರ್ಯಕ್ರಮಕ್ಕೆ ಶೃಂಗೇರಿ ವಿಧುಶೇಖರಭಾರತೀ ಸ್ವಾಮೀಜಿ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆಗಮಿಸಲಿದ್ದಾರೆ. ಬಿ.ಎಸ್. ಯಡಿಯೂರಪ್ಪ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅಜ್ಜಾವರ ಗ್ರಾಮದ ಮಹಿಷಮರ್ದಿನೀ ದೇವಸ್ಥಾನಕ್ಕೆ ಸರಕಾರದಿಂದ ರೂ.60 ಲಕ್ಷ ಅನುದಾನ ಮಂಜೂರು ಗೊಂಡಿದ್ದು ಆ ಬಳಿಕ ಅಭಿವೃದ್ಧಿ ಕಾರ್ಯಗಳು ನಡೆದು ಇದೀಗ ಲೋಕಾರ್ಪಣೆಗೆ ಸಿದ್ಧಗೊಂಡಿದೆ. ಮೇ 13ರಂದು ಶೃಂಗೇರಿ ಶ್ರೀಗಳು ಅಜ್ಜಾವರಕ್ಕೆ ಆಗಮಿಸಲಿದ್ದು, ಮೇ 14ರಂದು ಸಭಾಭವನದ ಉದ್ಘಾಟನೆ ನಡೆಯಲಿದೆ. ಸಭಾ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಹಾಗೂ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಸಂಸದ ಕ್ಯಾ.ಬ್ರಿಜೇಶ್ ಚೌಟ, ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ, ಕರ್ಣಾಟಕ ಬ್ಯಾಂಕ್ ಅಧ್ಯಕ್ಷ ಪ್ರದೀಪ್ ಕುಮಾರ್ ಪಂಜ ಭಾಗವಹಿಸಲಿದ್ದಾರೆ.

ಕುಕ್ಕೆ: ದೇವರ ದರುಶನಕ್ಕೆ ಹೆಚ್ಚುವರಿ ಸಮಯ ಲಭ್ಯ

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಶ್ರೀ ದೇವರ ದರುಶನಕ್ಕೆ ಒಂದು ಗಂಟೆ ಹೆಚ್ಚುವರಿ ಸಮಯವನ್ನು ನೀಡಲಾಗಿದೆ. ಇದರಿಂದ ಭಕ್ತರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ ತಿಳಿಸಿದ್ದಾರೆ. ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವಾಲಯದಲ್ಲಿ ದೇವರ ದರ್ಶನ ಸಮಯದಲ್ಲಿ ಅಲ್ಪ ಬದಲಾವಣೆ ಮಾಡಲಾಗಿದೆ ಈ ಹಿಂದೆ ಮಧ್ಯಾಹ್ನ 1.30ರಿಂದ 3.30ರವರೆಗೆ ದೇವರ ದರುಶನಕ್ಕೆ ಅವಕಾಶ ಇರಲಿಲ್ಲ. ಇದನ್ನು ಆಡಳಿತ ಮಂಡಳಿಯ ನಿರ್ಣಯದ ಮೇರೆಗೆ 2ರಿಂದ 3 ಗಂಟೆ ತನಕ ಮಾತ್ರ, ಒಂದು ಗಂಟೆಯಷ್ಟೆ ದರ್ಶನ ಬಂದ್ ಮಾಡಿ ಭಕ್ತರಿಗೆ ದೇವರ ದರ್ಶನಕ್ಕೆ ಹೆಚ್ಚುವರಿ ಒಂದು ಗಂಟೆ ನೀಡಲಾಗಿದೆ. ಬೆಳಗ್ಗೆ 6.30 ಂದ 2 ಗಂಟೆ ತನಕ ಅಪರಾಹ್ನ 3ರಿಂದ 8.30ರ ತನಕ ದೇವರ ದರ್ಶನ ಇರಲಿದೆ. ಈ ನಡುವೆ ಶ್ರೀ ದೇವರ ಮಧ್ಯಾಹ್ನ ಮತ್ತು ರಾತ್ರಿ ಮಹಾಪೂಜೆಯ ಸಮಯ ಮಾತ್ರ ಈ ಹಿಂದಿನಂತೆ ಅಲ್ಪ ಕಾಲ ದೇವರ ದರ್ಶನ ಸ್ಥಗಿತಗೊಳಿಸಲಾಗುತ್ತದೆ.

ವರದಕ್ಷಿಣೆ ಕಿರುಕುಳ: ಪತಿ ವಿರುದ್ಧ ದೂರು

ಉಡುಪಿ: ಗುಂಡಿಬೈಲಿನಲ್ಲಿ ವರದಕ್ಷಿಣೆ ಕಿರುಕುಳ ಹಾಗೂ ಪತ್ನಿಯ ಕೊಲೆಗೆ ಯತ್ನಿಸಿದ ಗಂಭೀರ ಪ್ರಕರಣವೊಂದು ದಾಖಲಾಗಿದೆ. ಗುಂಡಿಬೈಲು ನಿವಾಸಿ ಜಯಲಕ್ಷ್ಮೀ (38) ಅವರಿಗೆ ಪತಿ ಜಗದೀಶ್ ಬಾಬು ಮದುವೆಯ ವೇಳೆ ನೀಡಿದ 15 ಪವನ್ ಚಿನ್ನ ಹಾಗೂ ಹಣದ ಹೊರತಾಗಿ, ವಿದೇಶದಲ್ಲಿ ಕಂಪನಿ ಆರಂಭಿಸಲು ಹೆಚ್ಚುವರಿ 5 ಲಕ್ಷ ರೂ. ವರದಕ್ಷಿಣೆಗಾಗಿ ಪೀಡಿಸುತ್ತಿದ್ದ ಎನ್ನಲಾಗಿದೆ. ಆರೋಪಿಯು ವಸುಮತಿ ಎಂಬಾಕೆಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದು, ಇದನ್ನು ಪ್ರಶ್ನಿಸಿದ ಪತ್ನಿಗೆ ಜೀವ ಬೆದರಿಕೆ ಹಾಕಿದ್ದಲ್ಲದೆ, ಏಪ್ರಿಲ್ 4 ರಂದು ಮಕ್ಕಳನ್ನು ಬಲವಂತವಾಗಿ ಕರೆದೊಯ್ದಿದ್ದ. ಮೇ 11 ರಂದು ಮನೆಗೆ ಅಕ್ರಮವಾಗಿ ನುಗ್ಗಿದ ಆರೋಪಿಯು ಬೆಲೆಬಾಳುವ ದಾಖಲೆಗಳು, ಮೊಬೈಲ್ ಹಾಗೂ ಚಿನ್ನಾಭರಣಗಳನ್ನು ಕಳ್ಳತನ ಮಾಡಿದ್ದಾನೆ. ನಂತರ ಪತ್ನಿಯ ಕುತ್ತಿಗೆಗೆ ಶಾಲು ಬಿಗಿದು ಕೊಲೆಗೆ ಯತ್ನಿಸಿ, ಮನಬಂದಂತೆ ಹಲ್ಲೆ ನಡೆಸಿ ಪರಾರಿಯಾಗಿದ್ದಾನೆ. ಈ ಕೃತ್ಯಕ್ಕೆ ಎರಡನೇ ಪತ್ನಿ ವಸುಮತಿ ಹಾಗೂ ಮದುವೆಗೆ ಸಹಕರಿಸಿದ ಗೀತಾ ಸೇರಿದಂತೆ ಒಟ್ಟು ಐವರ ವಿರುದ್ಧ ಉಡುಪಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಗಿಯದ ಮುಖ್ಯಮಂತ್ರಿ ಚರ್ಚೆ: ಈ ವರ್ಷದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಘೋಷಣೆಯಲ್ಲಿ ಅನಿಶ್ಚಿತತೆ

ಕಾಸರಗೋಡು: ರಾಜ್ಯದಲ್ಲಿ ಹೊಸ ಸರ್ಕಾರ ಅಧಿಕಾರ ವಹಿಸಿಕೊಳ್ಳದ ಕಾರಣ ಈ ವರ್ಷದ ಎಸ್‌ಎಸ್‌ಎಲ್‌ಸಿ ಫಲಿತಾಂಶಗಳ ಘೋಷಣೆಯಲ್ಲಿ ಅನಿಶ್ಚಿತತೆ ಇದೆ. ಈ ಹಿಂದೆ ಘೋಷಿಸಿದಂತೆ ಮೇ 15ರಂದು ಫಲಿತಾಂಶಗಳನ್ನು ಪ್ರಕಟಿಸಬೇಕಿತ್ತು. ಮೌಲ್ಯಮಾಪನ ಮತ್ತು ಇತರ ಕಾರ್ಯವಿಧಾನಗಳನ್ನು ಪೂರ್ಣಗೊಳಿಸಿದ ನಂತರ ಪರೀಕ್ಷಾ ಮಂಡಳಿಯು ಮೇ 13ರಂದು ಸಭೆ ಸೇರಲಿದೆ. ಅವರು ಫಲಿತಾಂಶಗಳನ್ನು ಅಂತಿಮಗೊಳಿಸುತ್ತಾರೆಯಾದರೂ, ಹಿಂದಿನ ವೇಳಾಪಟ್ಟಿಯಂತೆ ಶುಕ್ರವಾರ ಫಲಿತಾಂಶಗಳನ್ನು ಘೋಷಿಸಬೇಕೆ ಎಂದು ಇನ್ನೂ ನಿರ್ಧರಿಸಲಾಗಿಲ್ಲ. ಪರೀಕ್ಷಾ ಮಂಡಳಿ ಸಭೆ ಸೇರಿದರೆ ಫಲಿತಾಂಶಗಳ ಘೋಷಣೆಗೆ ಅಧಿಕೃತ ಕಾರ್ಯವಿಧಾನಗಳನ್ನು ಪೂರ್ಣಗೊಳಿಸಲು ಇನ್ನೊಂದು ದಿನ ಬೇಕಾಗುತ್ತದೆ. ಅದರಂತೆ ಮಂಡಳಿಯ ಸಭೆ ಬುಧವಾರಕ್ಕೆ ನಿಗದಿಯಾಗಿದ್ದು, ಎಂದಿನಂತೆ ಮುಂದಿನ ಕಾರ್ಯವಿಧಾನವನ್ನು ಪೂರ್ಣಗೊಳಿಸಲಾಯಿತು ಮತ್ತು ಶುಕ್ರವಾರ ಫಲಿತಾಂಶಗಳ ಘೋಷಣೆಗೆ ಸಿದ್ಧತೆಗಳನ್ನು ಪರೀಕ್ಷಾ ಭವನದಲ್ಲಿ ಪೂರ್ಣಗೊಳಿಸಲಾಗಿದೆ. ಆದರೆ ಸರ್ಕಾರ ಅಥವಾ ಸಚಿವರು ಇಲ್ಲದ ಕಾರಣ ಫಲಿತಾಂಶಗಳನ್ನು ಯಾರು ಘೋಷಿಸುತ್ತಾರೆ ಎಂಬುದು ಪ್ರಶ್ನೆಯಾಗಿದೆ.

ವಿವಾಹ ಭರವಸೆ ನೀಡಿ ಹಣ ಪಡೆದು ಯುವತಿಗೆ ವಂಚನೆ: ಯುವಕನ ವಿರುದ್ಧ ಕೇಸು

ಕಾಸರಗೋಡು: ಮ್ಯಾಟ್ರಿಮೋನಿ ಸೈಟ್‌ನಲ್ಲಿ ಪರಿಚಯಗೊಂಡ ಯುವತಿಯನ್ನು ಅತ್ಯಾಚಾರಗೈದಿರುವುದಾಗಿ ನೀಡಿದ ದೂರಿನಂತೆ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ವಿದ್ಯಾನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವಾಸಿಸುವ 32ರ ಹರೆಯದ ಯುವತಿ ನೀಡಿದ ದೂರಿನಂತೆ ವಡಗರ ನಿವಾಸಿ ಮುಹಮ್ಮದ್ ಶಮ್ನಾಸ್ ಎಂಬಾತನ ವಿರುದ್ಧ ಕಾಸರಗೋಡು ಮಹಿಳಾ ಪೊಲೀಸರು ಕೇಸು ದಾಖಲಿಸಿದ್ದಾರೆ. ಯುವತಿಗೆ ವಿವಾಹ ಭರವಸೆ ನೀಡಿ ಎಂಟೂವರೆ ಲಕ್ಷದಷ್ಟು ರೂಪಾಯಿಯನ್ನು ವಸೂಲು ಮಾಡಿ ಅತ್ಯಾಚಾರಗೈದಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ. ಬಳಿಕ ಶಮ್ನಾಸ್ ಆಕೆಯಿಂದ ದೂರವಿದ್ದು, ಸಂಬಂಧವನ್ನು ರದ್ದುಗೊಳಿಸಲು ಯತ್ನಿಸಿರುವುದಾಗಿ ಹೇಳಲಾಗಿದೆ.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆ | ಸೂಕ್ತ ಕ್ರಮಕ್ಕೆ ಸೂಚನೆ

ಮೃತರ ಖಾತೆಗೆ 22 ಕೋ.ರೂ.

ಮಂಗಳೂರು: ಗೃಹಲಕ್ಷ್ಮಿ ಫಲಾನುಭವಿಗಳ ಪೈಕಿ ಕೆಲವರು ಮೃತಪಟ್ಟಿದ್ದರೂ ಅವರ ಬ್ಯಾಂಕ್ ಖಾತೆಗೆ ಇನ್ನೂ ಹಣ ಜಮೆಯಾಗುತ್ತಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಮೃತಪಟ್ಟ ಫಲಾನುಭವಿಗಳ ಖಾತೆಗೆ ಜಮೆಯಾಗಿರುವ ಹಣವನ್ನು ಮರಳಿ ಪಡೆಯಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮವಹಿಸಬೇಕು ಎಂದು ದ.ಕ. ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ ಸೂಚಿಸಿದರು.

ಅವರು ಮಂಗಳವಾರ ದ.ಕ ಜಿ.ಪಂ.ನಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಈಗಾಗಲೇ ಮರಣ ಹೊಂದಿದ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಖಾತೆಗೆ ರೂ.22 ಕೋಟಿ ಅನುದಾನ ವರ್ಗಾವಣೆ ಆಗಿದೆ ಎಂಬ ಮಾಹಿತಿಯನ್ನು ರಾಜ್ಯ ಕಚೇರಿಯಿಂದ ತಿಳಿಸಿರುವ ಬಗ್ಗೆ ಅವರು ವಿಷಾದ ವ್ಯಕ್ತಪಡಿಸಿ, ಫಲಾನುಭವಿಗಳ ಖಾತೆಗೆ ಜಮೆಯಾಗಿರುವ ಸಹಾಯಧನ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡುವ ಬಗ್ಗೆ ಫಲಾನುಭವಿಗಳ ಮಾಹಿತಿಯನ್ನು ಪಡೆಯಲು ಕ್ರಮವಹಿಸಬೇಕು ಎಂದು ಹೇಳಿದರು. ಇಲಾಖೆಯ ಮಾಹಿತಿಯಲ್ಲಿ ಜೀವಂತವಿರುವ ಗೃಹಲಕ್ಷ್ಮಿ ಫಲಾನುಭವಿಯು ಮರಣ ಹೊಂದಿರುವುದಾಗಿ ದಾಖಲಾಗಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಮುಂದಿನ ಸಭೆಗೆ ವರದಿ ಸಲ್ಲಿಸುವಂತೆ ಅಧ್ಯಕ್ಷರು ಸೂಚಿಸಿದರು.



ದ.ಕ. ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆ

ಗೃಹಲಕ್ಷ್ಮಿ ಯೋಜನೆಯಡಿ 4,25,759 ಒಟ್ಟು ಪಡಿತರ ಚೀಟಿ ಹೊಂದಿರುವ ಫಲಾನುಭವಿಗಳ ಪೈಕಿ ಈವರೆಗೆ ಒಟ್ಟು 1,548 ಫಲಾನುಭವಿಗಳು ನೊಂದಾಯಿಸಿಕೊಂಡಿದ್ದು, ಒಟ್ಟು 3,82,178 ಫಲಾನುಭವಿಗಳು ನೊಂದಾಯಿಸಿಕೊಂಡಿರುತ್ತಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮರಣ ಹೊಂದಿದ ಫಲಾನುಭವಿಯ ಹೆಸರು, ಖಾತೆ ಸಂಖ್ಯೆ ಹಾಗೂ ಬ್ಯಾಂಕಿನ ವಿವರಗಳು ಇದ್ದಲ್ಲಿ ಬ್ಯಾಂಕ್ ಮುಖಾಂತರ ಕ್ರಮ ಕೈಗೊಳ್ಳಬಹುದು. ಇಲ್ಲವಾದಲ್ಲಿ ಗ್ರಾಮದಲ್ಲಿ ಮರಣಹೊಂದಿದವರ ಮಾಹಿತಿ ಗ್ರಾಮ ಕರಣಿಕರ ಕಚೇರಿಯಲ್ಲಿ ಲಭ್ಯವಿರುತ್ತದೆ. ಅಂತಹ ಮಾಹಿತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪಡೆದಲ್ಲಿ ಮರಣ ಹೊಂದಿದ ಫಲಾನುಭವಿಯ ಖಾತೆಗೆ ಸಹಾಯಧನ ಬಿಡುಗಡೆ ಮಾಡುವುದನ್ನು ತಡೆಹಿಡಿಯಬಹುದು. ಮೃತ ಫಲಾನುಭವಿಯ ಮರಣ ಪ್ರಮಾಣ ಪತ್ರ ಬಂದ ತಕ್ಷಣ ಫಲಾನುಭವಿಗಳ ಪಟ್ಟಿಯಿಂದ ಹೆಸರನ್ನು ತೆಗೆಯಬೇಕು. ಅವರ ಹೆಸರು, ಬ್ಯಾಂಕ್ ವಿವರಗಳಿದ್ದಲ್ಲಿ ಬ್ಯಾಂಕ್ ಮುಖಾಂತರ ಖಾತೆಯನ್ನು ಸ್ಥಗಿತಗೊಳಿಸಲು ಕ್ರಮವಹಿಸಬೇಕು ಎಂದು ಅವರು ಸೂಚಿಸಿದರು.

ಅನ್ನಭಾಗ್ಯ ಯೋಜನೆಯಡಿ ಅರ್ಕುಳ ಪಡಿತರ ಅಂಗಡಿ ತೆರೆಯುವ ಬಗ್ಗೆ ವಿಷಯವು ಪ್ರಸ್ತಾಪವಾಗಿ 7 ತಿಂಗಳಾಗಿದ್ದರೂ, ಇನ್ನೂ ಸಮಸ್ಯೆ ಬಗೆಹರಿದಿರುವುದಿಲ್ಲ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಸದಸ್ಯರು ವಿಚಾರಿಸಿದಾಗ ಸರ್ಕಾರದ ಆದೇಶದ ಪ್ರಕಾರ ಜಿಲ್ಲಾಧಿಕಾರಿಗಳ ಸಮಿತಿಯಲ್ಲಿ ಅನುಮೋದನೆಯಾದ ನಂತರ ಪಡಿತರ ಅಂಗಡಿಯನ್ನು ತೆರೆಯಲಾಗುವುದೆಂದು ಇಲಾಖಾಧಿಕಾರಿಗಳು ತಿಳಿಸಿದಾಗ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಲ್ಲಿ ಸದರಿ ಸಭೆಯಲ್ಲಿ ಚರ್ಚೆಯಾಗುತ್ತಿದ್ದ ವಿಷಯಗಳಿಗೆ ಹಲವು ತಿಂಗಳಿನಿಂದ ಸಮಸ್ಯೆ ಬಗೆಹರಿದಿರುವುದಿಲ್ಲ. ಜಿಲ್ಲಾಧಿಕಾರಿಗಳ ಸಮಿತಿಯಲ್ಲಿ ಅನುಮೋದನೆಯಾಗಬೇಕಾದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಇಂತಹ ಸಮಸ್ಯೆಯನ್ನು ಬಗೆಹರಿಸಲು ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಸೂಚಿಸಿದರು. ಪಡಿತರ ಚೀಟಿ ಸೇವೆಗಳಿಗಾಗಿ ಬಯೋಮೆಟ್ರಿಕ್ ಅಥವಾ ಹೆಬ್ಬೆರಳು ಗುರುತನ್ನು ನೀಡಲು ಸಂಬಂಧಪಟ್ಟ ಕೇಂದ್ರಗಳಿಗೆ ಭೇಟಿ ನೀಡಿದಾಗ ಹೆಬ್ಬೆರಳು ಗುರುತು ಮ್ಯಾಚ್ ಆಗದಂತಹ ಪರಿಸ್ಥಿತಿ ಬಂದಿದೆ. ಇಂತಹ ಸಮಸ್ಯೆ ತುಂಬಾ ವಯಸ್ಸಾದ, ನಡೆಯಲು ಅಸಾಧ್ಯವಾದ ಪಡಿತರ ಚೀಟಿದಾರರಿಗೆ ತುಂಬಾ ತೊಂದರೆಯಾಗುತ್ತಿದ್ದು, ಈ ಬಗ್ಗೆ ಗಂಭೀರವಾಗಿ ಪರಿಗಣಿಸಿ ಇಂತಹ ಸಮಸ್ಯೆಗೆ ವಿನಾಯಿತಿ ನೀಡುವಂತೆ ಅಧ್ಯಕ್ಷರು ತಿಳಿಸಿದರು.

ಜಿ.ಪಂ. ಯೋಜನಾ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿ ಸುಷ್ಮಾ ಕೆ.ಎಸ್., ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಜೋಕಿಂ ಡಿಸೋಜಾ, ನಾರಾಯಣ ನಾಯಕ್, ಸದಸ್ಯ ರಾದ ಅರುಣ್ ಕುಮಾರ್ ಶೆಟ್ಟಿ, ಆಲ್ವಿನ್ ಕ್ಲೆಮೆಂಟ್ ಕುಟಿನ್ಹ, ಜಯಂತಿ ಬಿಎ, ಶಾಹುಲ್ ಹಮೀದ್, ಉಮಾನಾಥ್ ಶೆಟ್ಟಿ, ಪದ್ಮನಾಭ ಸಾಲ್ಯಾನ್, ಸುಧೀರ್ ಕುಮಾರ್ ಶೆಟ್ಟಿ ಮತ್ತಿತರರಿದ್ದರು.

ಕೆಎಸ್‌ಆರ್‌ಟಿಸಿ ಜಾಗ ಒತ್ತುವರಿ

ನೆಲ್ಯಾಡಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಜಾಗವನ್ನು ಒತ್ತುವರಿ ಮಾಡಲಾಗಿದ್ದು, ಬಸ್ ನಿಲ್ದಾಣ ಆದ ನಂತರ 2 ಮನೆಗಳಿಗೆ 94 ಸಿ ನೀಡಲಾಗಿದೆ. 3 ಮನೆಗಳಿಗೆ ರಸ್ತೆ ನಿರ್ಮಿಸಲು ಸದರಿ ಜಾಗವನ್ನು ಉಪಯೋಗಿಸಿಕೊಳ್ಳಲಾಗಿದೆ. ಸುಮಾರು 30 ಸೆಂಟ್ಸ್ ಜಾಗ ಕೆ.ಎಸ್.ಆರ್.ಟಿ.ಸಿ. ಗೆ ಅನುಮೋದನೆಯಾದ ನಂತರ ಒತ್ತುವರಿಯಾಗಿದೆ. ಜಾಗವನ್ನು ಒತ್ತುವರಿ ಮಾಡಿರುವವರಿಗೆ ಸೂಕ್ತ ಕ್ರಮವಾಗಬೇಕೆಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಸದಸ್ಯರು ತಿಳಿಸಿದಾಗ ಈ ಬಗ್ಗೆ ಪರಿಶೀಲನೆ ಮಾಡಲಾಗುವುದೆಂದು ಇಲಾಖಾಧಿಕಾರಿಗಳು ತಿಳಿಸಿದರು. ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸುವಂತೆ ಭರತ್ ಮುಂಡೋಡಿ ಸೂಚಿಸಿದರು.

ಆಟೋ ರಿಕ್ಷಾದಲ್ಲಿ 25 ಲಕ್ಷ ರೂ. ಮೌಲ್ಯದ ಚಿನ್ನವಿದ್ದ ಬ್ಯಾಗ್ ಮರೆತು ಹೋಗಿದ್ದ ಮಹಿಳೆ!

ಮಂಗಳೂರು: ಸುಮಾರು 25 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣವಿದ್ದ ಬ್ಯಾಗನ್ನು ಮಹಿಳೆಯೊಬ್ಬರು ಆಟೋ ರಿಕ್ಷಾದಲ್ಲಿಯೇ ಬಿಟ್ಟುಹೋಗಿದ್ದು, ಆಟೋ ಚಾಲಕನ ಪ್ರಾಮಾಣಿಕತೆಯಿಂದಾಗಿ ಚಿನ್ನ ಮಹಿಳೆಯ ಕೈ ಸೇರಿದೆ.

ಲೊಲಿಟಾ ಎಂಬವರು ನಗರದ ಮಲ್ಲಿಕಟ್ಟೆಯಿಂದ ಮೇರಿಹಿಲ್ ಕಡೆಗೆ ಆಟೋದಲ್ಲಿ ಪ್ರಯಾಣಿಸಿದ್ದರು. ಪ್ರಯಾಣದ ವೇಳೆ ಅಪಾರ ಪ್ರಮಾಣದ ಚಿನ್ನವಿದ್ದ ವ್ಯಾನಿಟಿ ಬ್ಯಾಗನ್ನು ಆಟೋರಿಕ್ಷಾದ ಸೀಟ್‌ನಲ್ಲಿ ಇಟ್ಟಿದ್ದು, ಇಳಿಯುವಾಗ ಬ್ಯಾಗ್ ಕೊಂಡೊಯ್ಯಲು ಮರೆತುಬಿಟ್ಟಿದ್ದರು. ಕೆಲವು ಹೊತ್ತಿನ ನಂತರ ಬ್ಯಾಗ್ ಮರೆತಿರುವುದು ಅವರ ಗಮನಕ್ಕೆ ಬಂದಿದ್ದು, ತಕ್ಷಣ ಪೊಲೀಸರನ್ನು ಸಂಪರ್ಕಿಸಿದ್ದಾರೆ. ವಿಚಾರ ತಿಳಿಯುತ್ತಿದ್ದಂತೆ ಮಂಗಳೂರು ಪೂರ್ವ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಠಾಣೆಯ ಅಧಿಕಾರಿ ಸಿಬಂದಿ ಕೂಡಲೇ ಕಾರ್ಯಪ್ರವೃತ್ತರಾಗಿ ಆಟೋ ಚಾಲಕ ರೋಶನ್ ಎಂಬವರನ್ನು ಪತ್ತೆ ಹಚ್ಚಿದ್ದಾರೆ. ಆಟೋ ಚಾಲಕರಲ್ಲಿ ಚಿನ್ನದ ಬ್ಯಾಗ್ ಪತ್ತೆಯಾಗಿದ್ದು, ಬಳಿಕ ಪೊಲೀಸ್ ಉಪ ನಿರೀಕ್ಷಕರ ಸಮ್ಮುಖದಲ್ಲಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು.



ಚೆಕ್ ಬೌನ್ಸ್ ಪ್ರಕರಣ ಇತ್ಯರ್ಥಕ್ಕೆ ವಿಶೇಷ ಲೋಕ ಅದಾಲತ್

55,335 ಪ್ರಕರಣ ಇತ್ಯರ್ಥಕ್ಕೆ ಬಾಕಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 55,335 ವಿವಿಧ ರೀತಿಯ ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇವೆ. ಈ ಪೈಕಿ ಚೆಕ್ ಬೌನ್ಸ್ ಪ್ರಕರಣಗಳೇ ಅಧಿಕವಾಗಿವೆ. 13,357 ಚೆಕ್ ಬೌನ್ಸ್ ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇವೆ ಎಂದು ದ.ಕ. ಜಿಲ್ಲಾ ಪ್ರಧಾನ ನ್ಯಾಯಾಧೀಶ ಬಸವರಾಜ ತಿಳಿಸಿದರು.

ಮಂಗಳೂರಿನಲ್ಲಿರುವ ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದೆಲ್ಲೆಡೆ ಚೆಕ್ ಬೌನ್ಸ್ ಪ್ರಕರಣಗಳು ಹೆಚ್ಚಿರುವುದ ರಿಂದ ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಜುಲೈ 17 ಮತ್ತು ನವೆಂಬರ್ 21ರಂದು ವಿಶೇಷ ಲೋಕ ಅದಾಲತ್ ಆಯೋಜಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಅದಾಲತ್ ನಡೆಯಲಿದೆ ಎಂದರು.

ಆ.21ರಿಂದ 23: 'ಸಮಾಧಾನ ಸಮಾರೋಹ್'

ಸುಪ್ರೀ ಕೋರ್ಟ್‌ನಲ್ಲಿ ಬಾಕಿ ಇರುವ, ರಾಜೀ ಸಂಧಾನದ ಮೂಲಕ ಇತ್ಯರ್ಥ ಮಾಡಿಕೊಳ್ಳಬಹುದಾದ ಪ್ರಕರಣಗಳನ್ನು ಬಗೆಹರಿಸಲು ಆ.21ರಿಂದ 23ರ ವರೆಗೆ ಸಮಾಧಾನ ಸಮಾರೋಹ್ ಎಂಬ ವಿಶೇಷ ಲೋಕ ಅದಾಲತ್ ಆಯೋಜಿಸಲಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ಇಂತಹ 43 ಪ್ರಕರಣಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ನ್ಯಾಯಾಧೀಶರಾದ ಬಸವರಾಜ ತಿಳಿಸಿದರು.

ರಾಜ್ಯದಲ್ಲಿ ಸುಮಾರು 4,328 ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇದೆ. ಕಾನೂನು ಸೇವಾ ಸಮಿತಿ ವ್ಯಾಪ್ತಿಯಲ್ಲಿ ಪ್ರಕರಣಗಳು ಬಾಕಿ ಇದ್ದಲ್ಲಿ ನೋಟೀಸು ಜಾರಿ ಮಾಡಿ ಸೂಕ್ತ ಮಧ್ಯಸ್ಥಿಕೆದಾರರ ನೇಮಕದೊಂದಿಗೆ ಮಧ್ಯಸ್ಥಿಕೆಗೆ ಸ್ಥಳಾವಕಾಶ ಒದಗಿಸಲಾಗುತ್ತದೆ. ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ತಮ್ಮ ಪ್ರಕರಣಗಳ ರಾಜಿ ಬಗ್ಗೆ ಯಾವುದೇ ಅನುಮಾನ ಇರುವವರು ಸ್ಥಳೀಯ ತಾಲೂಕು ಕಾನೂನು ಸೇವಾ ಸಮಿತಿ ಅಥವಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವನ್ನು ಸಂಪರ್ಕಿಸಬಹುದು ಎಂದು ಅವರು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಸಿವಿಲ್ ನ್ಯಾಯಾಧೀಶರಾದ ಜೈಬುನ್ನೀಸಾ ಉಪಸ್ಥಿತರಿದ್ದರು.



> **ರಾಜೀಯಲ್ಲಿ ಇತ್ಯರ್ಥ**
> ರಾಜೀ ಸಂಧಾನದ ಮೂಲಕ ಇತ್ಯರ್ಥ ಮಾಡಲು ಸಾಧ್ಯವಾದ ಈ ಪ್ರಕರಣಗಳನ್ನು ವಿಶೇಷ ಲೋಕ ಅದಾಲತ್ ಮೂಲಕ ಬಗೆಹರಿಸಲಾಗುವುದು. ಮಾರ್ಚ್‌ನಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 3,197 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, 19.06 ಕೋಟಿ ರೂ.ಗಳ ಪರಿಹಾರ ಮೊತ್ತವನ್ನು ವಿತರಿಸಲಾಗಿದೆ.
> ■ ಬಸವರಾಜ, ದ.ಕ. ಜಿಲ್ಲಾ ಪ್ರಧಾನ ನ್ಯಾಯಾಧೀಶ

ಸಮಸ್ಯೆ ನಿವಾರಣೆಗೆ ಉಡುಪಿ ಡಿಸಿಗೆ ಸಂಸದ ಕೋಟ ಪತ್ರ

ಪಿಎಂ ಕುಸುಮ್ ಯೋಜನೆಗೆ ತಡೆ

ಉಡುಪಿ: ರೈತರಿಗೆ ಸೌರಶಕ್ತಿಯ ಮೂಲಕ ವಿದ್ಯುತ್ ಒದಗಿಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ 'ಪಿಎಂ ಕುಸುಮ್' ಯೋಜನೆಯು ಉಡುಪಿ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ಅನಗತ್ಯ ಹಠಮಾರಿತನದಿಂದಾಗಿ ನೆನೆಗುದಿಗೆ ಬಿದ್ದಿದೆ. ಈ ವಿಷಯದಲ್ಲಿ ಜಿಲ್ಲಾಧಿಕಾರಿಗಳು ತಕ್ಷಣಮಧ್ಯಪ್ರವೇಶಿಸಿ, ಸುಮಾರು 20 ಕೋಟಿ ರೂಪಾಯಿ ವೆಚ್ಚದ ಈ ಯೋಜನೆಯನ್ನು ತುರ್ತಾಗಿ ಅನುಷ್ಠಾನಗೊಳಿಸಬೇಕೆಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.



ಅರಣ್ಯ ಇಲಾಖೆಯ ಹಠಮಾರಿತನ ಮತ್ತು ಯೋಜನೆಯ ವಿಳಂಬ

ಮೇ 2ರಂದು ನಡೆದ 'ದಿಶಾ' ಸಮಿತಿಯ ಸಭೆಯಲ್ಲಿ ಕುಸುಮ್–ಸಿ ಯೋಜನೆಯ ತ್ವರಿತ ಅನುಷ್ಠಾನದ ಬಗ್ಗೆ ಸವಿಸ್ತಾರವಾಗಿ ಚರ್ಚಿಸಲಾಗಿತ್ತು. ಈ ಯೋಜನೆಗಾಗಿ ಕಂದಾಯ ಇಲಾಖೆಯು ಈಗಾಗಲೇ ಜಾಗವನ್ನು ಗುರುತಿಸಿ ಮೆಸ್ಕಾಂ ಇಲಾಖೆಗೆ ವರ್ಗಾಯಿಸಲು ಆದೇಶ ಹೊರಡಿಸಿದೆ. ಆದರೆ, ಈ ಜಾಗದಲ್ಲಿರುವ ಅಕೇಶಿಯಾ ಮರಗಳನ್ನುತೆರವುಗೊಳಿಸಲು ಅರಣ್ಯ ಇಲಾಖೆಯು ಅನುಮತಿ ನೀಡದೆ ವಿಳಂಬ ನೀತಿಯನ್ನು ಅನುಸರಿಸುತ್ತಿದೆ. ಈ ಜಾಗವು 'ಡೀಮ್ಡ್ ಫಾರೆಸ್ಟ್' ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಮತ್ತು ಸಹಾಯಕ ಕಮಿಷನರ್ ಅವರು ಸ್ಪಷ್ಟಪಡಿಸಿದರೂ, ಅರಣ್ಯ ಇಲಾಖೆಯು ಗೊಂದಲ ಸೃಷ್ಟಿಸಿ ಕೇಂದ್ರದ ಅನುದಾನ ವಾಪಸ್ ಹೋಗುವಂತಹ ಪರಿಸ್ಥಿತಿಯನ್ನು ನಿರ್ಮಿಸಿದೆ ಎಂದು ಸಂಸದರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೂರು ತಾಲೂಕುಗಳ ಕೃಷಿಕರಿಗೆ ಅನ್ಯಾಯ

ಪ್ರಧಾನಮಂತ್ರಿ ಕಿಸಾನ್ ಉರ್ಜಾ ಸುರಕ್ಷಾ ಏವಂ ಉತ್ಥಾನ್ ಮಹಾ ಅಭಿಯಾನ್ ಯೋಜನೆಗಾಗಿ ಬೈಂದೂರು ತಾಲೂಕಿನ ಕಿರಿಮಂಜೇಶ್ವರ ಗ್ರಾಮದಲ್ಲಿ 13 ಎಕರೆ, ಬ್ರಹ್ಮಾವರ ತಾಲೂಕಿನ ಕಾವಡಿ ಗ್ರಾಮದಲ್ಲಿ 5 ಎಕರೆ ಮತ್ತು ಕಾಪು ತಾಲೂಕಿನ ಬೆಳ್ಳೆ ಗ್ರಾಮದಲ್ಲಿ 9 ಎಕರೆ ಜಾಗವನ್ನು ಮೀಸಲಿರಿಸಲಾಗಿತ್ತು. ಕಿರಿಮಂಜೇಶ್ವರ ಮತ್ತು ಬೆಳ್ಳೆ ಗ್ರಾಮಗಳಲ್ಲಿ ಜಾಗವನ್ನು ಸಮತಟ್ಟು ಮಾಡಲು ಅರಣ್ಯ ಇಲಾಖೆಯ ಅನುಮತಿ ಸಿಗದ ಕಾರಣ ಕೆಲಸ ಸ್ಥಗಿತಗೊಂಡಿದೆ. ಈ ಅಡಚಣೆಯಿಂದಾಗಿ ರೈತಾಪಿ ವರ್ಗಕ್ಕೆ ಸಿಗಬೇಕಾದ ಪ್ರಯೋಜನಗಳು ತಪ್ಪುತ್ತಿವೆ ಎಂದು ಸಂಸದರ ಕಚೇರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

> **ಜಿಲ್ಲಾ ಮಟ್ಟದ ಸಮಿತಿ ರಚನೆಗೆ ಆಗ್ರಹ**
> ಈ ಗಂಭೀರ ಸಮಸ್ಯೆಯ ಕುರಿತು ಈಗಾಗಲೇ ರಾಜ್ಯ ಅರಣ್ಯ ಸಚಿವ ಈಶ್ವರ ಖಂಡ್ರೆ ಮತ್ತು ಇಲಾಖೆಯ ಉನ್ನತ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಸಚಿವರು ಸೂಚನೆ ನೀಡಿದರೂ ಸ್ಥಳೀಯ ಅರಣ್ಯ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ಸಂಸದರು ದೂರಿದ್ದಾರೆ. ಈ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿಗಳು ತಕ್ಷಣ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ, ಅರಣ್ಯ ಇಲಾಖೆಯ ಗೊಂದಲಗಳನ್ನು ಬಗೆಹರಿಸುವ ಮೂಲಕ ಕೇಂದ್ರ ಸರ್ಕಾರದ ಈ ಮಹತ್ವದ ಯೋಜನೆಯನ್ನು ಕೂಡಲೇ ಅನುಷ್ಠಾನಗೊಳಿಸಬೇಕು ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿಯವರು ಬರೆದಿರುವ ಸುದೀರ್ಘ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಸಹಕಾರ ಸಂಘಗಳ ತಿದ್ದುಪಡಿ ಕಾಯ್ದೆಗೆ ತಡೆ

ಮಂಗಳೂರು: ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಕಾಯ್ದೆ, 2025ಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯ ಕೆಲವು ತಿದ್ದುಪಡಿಗಳ ಜಾರಿಗೆ ಕರ್ನಾಟಕ ಹೈಕೋರ್ಟ್ ಮಹತ್ವದ ಮಧ್ಯಂತರ ತಡೆ ನೀಡಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಅವರ ಏಕಸದಸ್ಯ ಪೀಠ, ಸರ್ಕಾರದ ಅಧಿಸೂಚನೆಯ ಜಾರಿಗೆ ಮಧ್ಯಂತರ ತಡೆ ಆದೇಶ ಹೊರಡಿಸಿದೆ.

ಅರ್ಜಿದಾರರ ಪರ ವಾದ

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ್, ರಾಜ್ಯ ಸರ್ಕಾರ 2025ರ ಸೆ. 12ರಂದು ಹೊರಡಿಸಿದ ತಿದ್ದುಪಡಿ ಅಧಿಸೂಚನೆಯ ಮೂಲಕ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಸೆಕ್ಷನ್ 53–A ಮೂಲಕ ಸಹಕಾರ ಸಂಘಗಳ ಸಮಿತಿಗಳಿಗೆ ನಾಮನಿರ್ದೇಶಿತ ಸದಸ್ಯರನ್ನು ನೇಮಕ ಮಾಡುವ ಅಧಿಕಾರ ಪಡೆದಿರುವುದು, ಸಹಕಾರ ಸಂಘಗಳ ಮೂಲ ತತ್ವಗಳನ್ನೇ ದುರ್ಬಲಗೊಳಿಸುವ ಕ್ರಮವಾಗಿದೆ. ಇದು ಸಹಕಾರ ಸಂಘಗಳ ಸ್ವಾಯತ್ತತೆ ಮತ್ತು ಪ್ರಜಾಪ್ರಭುತ್ವದ ವ್ಯವಸ್ಥೆಗೆ ಧಕ್ಕೆಯನ್ನು ತಂದಿದೆ ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಈ ವಾದವನ್ನು ಆಲಿಸಿದ ಬಳಿಕ ನ್ಯಾಯಾಲಯವು ತಿದ್ದುಪಡಿ ಮಾಡುವ ಕಾರ್ಯಾಚರಣೆ ಮತ್ತು ಸೆಕ್ಷನ್ 53–A ನ ಸೇರ್ಪಡೆಯನ್ನು ವಿಸ್ತೃತವಾಗಿ ಪರಿಗಣಿಸುವ ಅಗತ್ಯವಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿ, ಕರ್ನಾಟಕ ಸರ್ಕಾರ ಅಧಿಸೂಚನೆ ಮೂಲಕ ಜಾರಿಗೆ ತಂದ ತಿದ್ದುಪಡಿ ಕಾಯ್ದೆಯ ತಿದ್ದುಪಡಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಅರ್ಜಿದಾರರ ಪರವಾಗಿ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ್, ವಕೀಲರಾದ ರಕ್ಷಿತ್ ಕುಮಾರ್ ಜೈನ್ ನಾರಾವಿ, ಮೊಹಮದ್ ತಾಹೀರ್ ವಾದಿಸಿದ್ದರು ಎಂದು ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಶಶಿ ಕುಮಾರ್ ರೈ ಬಾಲ್ಯೊಟ್ಟು ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ನಾರ್ಕೋ ಕೋ ಆರ್ಡಿನೇಷನ್ ಸೆಂಟರ್ ಸಮಿತಿ ಸಭೆ | ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಸೂಚನೆ

ಮಕ್ಕಳು ಮಾದಕ ವ್ಯಸನಕ್ಕೆ ಬಲಿಯಾಗದಂತೆ ಎಚ್ಚರ ವಹಿಸಿ

ಮಂಗಳೂರು: ಯುವಪೀಳಿಗೆ ಮಾದಕ ದ್ರವ್ಯಗಳಿಗೆ ಬಲಿಯಾಗುವ ಸಾಧ್ಯತೆ ಹೆಚ್ಚಾಗಿರುವುದರಿಂದ ಈ ಬಗ್ಗೆ ಎಚ್ಚರ ಅತೀ ಅಗತ್ಯ. ಮಾದಕ ವ್ಯಸನ ಚಟಕ್ಕೆ ಬಲಿಯಾಗಿ ಮುಂದೆ ಸಂಭವಿಸುವ ಅನಾಹುತಗಳ ಬಗ್ಗೆ ಅರಿವು ಮೂಡಿಸಲು ಅಧಿಕಾರಿಗಳು ಹೆಚ್ಚಿನ ಕ್ರಮವಹಿಸುವಂತೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಸೂಚಿಸಿದರು.

ಅವರು ಮಂಗಳವಾರ ನಗರದ ಕುದ್ಮುಲ್ ರಂಗರಾವ್ ಪುರಭವನದಲ್ಲಿ ನಡೆದ ಜಿಲ್ಲಾ ಮಟ್ಟದ ನಾರ್ಕೋ ಕೋ ಆರ್ಡಿನೇಷನ್ ಸೆಂಟರ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಲ್ಲಿ ಮಾದಕ ದ್ರವ್ಯಗಳ ಆಕರ್ಷಣೆಗೊಳಗಾಗುವ ಸಾಧ್ಯತೆ ಹೆಚ್ಚಾಗಿರುವುದರಿಂದ ಇದರ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಬೇಕು. ಮಾದಕ ವ್ಯಸನಕ್ಕೆ ಒಮ್ಮೆ ಒಗ್ಗಿಕೊಂಡರೆ ಅದರಿಂದ ಹೊರಬರುವುದು ಕಷ್ಟ. ಈ ಅಂಶವನ್ನು ಮಕ್ಕಳಿಗೆ ಮನವರಿಕೆ ಮಾಡಬೇಕು. ನಿರಂತರ ಜಾಗೃತಿಯಿಂದ ಮಾತ್ರ ಬದಲಾವಣೆ ಕಂಡುಕೊಳ್ಳಲು ಸಾಧ್ಯ ಎಂದರು.

ಅಪ್ರಾಪ್ತ ವಯಸ್ಸಿನಲ್ಲಿ ಮಾದಕ ವ್ಯಸನಕ್ಕೆ ತುತ್ತಾದಲ್ಲಿ ಆರೋಗ್ಯದ ಮೇಲೆ ಪರಿಣಾಮ ಬೀರಿ ಮಕ್ಕಳು ಖಿನ್ನತೆಗೆ ಒಳಗಾಗುತ್ತಾರೆ. ಮಕ್ಕಳ ಚಲನವಲನಗಳ ಬಗ್ಗೆ ಪೋಷಕರು ಹಾಗೂ ಶಿಕ್ಷಕರು ನಿಗಾವಹಿಸಬೇಕು. ಇಲ್ಲವಾದಲ್ಲಿ ಕುಟುಂಬದ ಸ್ವಾಸ್ಥ್ಯ ಹಾಳಾಗುತ್ತದೆ. ಮಕ್ಕಳನ್ನು ಉತ್ತಮ ಪಥದಲ್ಲಿ ಕೊಂಡೊಯ್ಯುವಲ್ಲಿ ಹೆತ್ತವರು ಮತ್ತು ಪೋಷಕರ ಪಾತ್ರ ಮಹತ್ತರವಾದುದು. ತಮ್ಮ ಮಗುವಿನ ಬಗ್ಗೆ ಹೆತ್ತವರು ನಿಗಾವಹಿಸಬೇಕು ಎಂದು ಜಿಲ್ಲಾಧಿಕಾರಿ ಸಲಹೆ ನೀಡಿದರು.

ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಮಾತನಾಡಿ, ಮಾದಕ ವ್ಯಸನವು ವ್ಯಕ್ತಿಯ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಜೀವನವನ್ನು ನಾಶಪಡಿಸುವ ಒಂದು ಗಂಭೀರ ಪಿಡುಗು. ಮಾದಕ ವಸ್ತುವಿನ ಚಟವು ಮೆದುಳಿನ ಮೇಲೆ ದೀರ್ಘಕಾಲದ ನಕಾರಾತ್ಮಕ ಪರಿಣಾಮ ಬೀರುತ್ತದೆ. ಆದ್ದರಿಂದ ಮಕ್ಕಳು ಇದಕ್ಕೆ ಬಲಿಬೀಳದಂತೆ ಎಚ್ಚರವಹಿಸಬೇಕು ಎಂದರು.

ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಎಲ್ಲಾ ಕಾಲೇಜುಗಳಲ್ಲಿ ಪ್ರತೀ ತಿಂಗಳಿಗೊಮ್ಮೆ ತಪಾಸಣೆ ನಡೆಸಿ ಕೌನ್ಸಿಲಿಂಗ್ ನಡೆಸುವುದರೊಂದಿಗೆ, ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು. ಚಿಕಿತ್ಸಾ ಕೇಂದ್ರಗಳು ಮತ್ತು ತಜ್ಞರ ಸಹಾಯದಿಂದ ಚಟದಿಂದ ಮುಕ್ತರಾಗಲು ಸಾಧ್ಯವಿದೆ ಎಂದು ಕಮಿಷನರ್ ಹೇಳಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ.ಅರುಣ್ ಕೆ, ಉಪಪೊಲೀಸ್ ಆಯುಕ್ತ ಮಿಥುನ್ ಎಚ್.ಎನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಅನಿಲ್ ಕುಮಾರ್ ಭೂಮರೆಡ್ಡಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



> ಮಾದಕ ವ್ಯಸನ ತಡೆಯುವಲ್ಲಿ ಅಧಿಕಾರಿಗಳು ನಿರಂತರ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಶಾಲಾ–ಕಾಲೇಜುಗಳು ಹಾಗೂ ಹಾಸ್ಟೆಲ್‌ಗಳಲ್ಲಿ ಮಕ್ಕಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು.
> ■ ದರ್ಶನ್ ಎಚ್.ವಿ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 13, ಮೇ 2026 e-mail diganthamlr@gmail.com | Website www.hosadigantha.com

ಸುದ್ದಿ ಅಪ್‌ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಇಂದಿನ ಹವಾಮಾನ



ದಕ್ಷಿಣ ಕನ್ನಡ 34° 27°

ಉಡುಪಿ 34° 28°

ಉಬ್ರಂಗಳ ಶ್ರೀಕ್ಷೇತ್ರದಲ್ಲಿ ಧರೆಗಿಳಿಯಿತು ದೈವಿಕ ಲೋಕ



ಕಾಸರಗೋಡು ಜಿಲ್ಲೆ ಬದಿಯಡ್ಕ ಸಮೀಪದ ಕುಂಬ್ಡಾಜೆಯ ಬಡಗು ಶಬರಿಮಲೆ ಉಬ್ರಂಗಳ ಶ್ರೀ ಮಹಾದೇವ ಪಾರ್ವತಿ ಶ್ರೀ ಶಾಸ್ತಾರ ದೇವಸ್ಥಾನದಲ್ಲಿ 18 ಮೆಟ್ಟಿಲುಗಳಿಗೆ ಹಿತ್ತಾಳೆ ಕವಚದ ಲೋಕಾರ್ಪಣೆ, ಭವ್ಯ ಮಹೋತ್ಸವ ಭಕ್ತರನ್ನು ಭಾವಪರವಶವಾಗಿಸಿತು. (ಪುಟ 3)

ಬಡಗು ಶಬರಿಮಲೆಯ ಹದಿನೆಂಟು ಮೆಟ್ಟಿಲಿಗೆ ಹಿತ್ತಾಳೆ ಕಳೆ

ಭಕ್ತಗಡಣದ ಹರುಷ ಹೆಚ್ಚಿಸಿದ ವಾದ್ಯಘೋಷ



ಹಿತ್ತಾಳೆ ಕವಚದಲ್ಲಿ ಶೋಭಿಸುತ್ತಿರುವ ಶ್ರೀಕ್ಷೇತ್ರದ 18 ಮೆಟ್ಟಿಲುಗಳು



ಆಗಸವ ಚುಂಬಿಸಿತು 101 ಚೆಂಡೆಗಳಲ್ಲಿ ಏಕಕಾಲಕ್ಕೆ ಮೊಳಗಿದ ಧ್ವನಿ





ಬಡಗು ಶಬರಿಮಲೆ ಉಬ್ರಂಗಳ ಶ್ರೀ ಕ್ಷೇತ್ರದಲ್ಲಿತ್ತು ಶ್ರೀಗಳ ಸಾನ್ನಿಧ್ಯ

ಸುತ್ತಮುತ್ತ

ಮಂಗಳೂರು ನಗರವನ್ನು ನಡುಗಿಸಿದ ಗುಡುಗು, ಸಿಡಿಲು: ಎಲ್ಲೆಡೆ ಜಡಿಮಳೆ

ಮಂಗಳೂರು: ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಂಗಳವಾರ ರಾತ್ರಿ ಉತ್ತಮ ಮಳೆಯಾಗಿದೆ. ರಾತ್ರಿ ಎಂಟು ಗಂಟೆಯ ಸುಮಾರಿಗೆ ಆರಂಭವಾದ ಮಳೆ ಕೆಲವು ತಾಸುಗಳ ಕಾಲ ಮುಂದುವರಿದು ಸುಡು ಬಿಸಿಲಿಗೆ ಕಾದ ಕಬ್ಬಿಣದಂತಾಗಿದ್ದ ಇಳೆಗೆ ತಂಪೆರೆಯಿತು. ಹಠಾತ್ ಬಿದ್ದ ಮಳೆಯಿಂದ ನಗರದಲ್ಲಿ ವಾಹನ ಸಂಚಾರ ಒಂದಿಷ್ಟು ವ್ಯತ್ಯಯವಾಗಿತ್ತು.

ಗುಡುಗು, ಸಿಡಿಲು ಸಹಿತ ಗಾಳಿ, ಮಳೆಯ ಆರ್ಭಟಕ್ಕೆ ನಲುಗಿಹೋದ ಬಂಟ್ವಾಳ

ಬಂಟ್ವಾಳ: ಮಂಗಳವಾರ ಸಂಜೆ ಬಂಟ್ವಾಳ, ಬಿ.ಸಿ.ರೋಡು ಸಹಿತ ತಾಲೂಕಿನ ಕೆಲ ಪ್ರದೇಶಗಳಲ್ಲಿ ಗುಡುಗಿನ ಅಬ್ಬರ ಗಾಳಿ, ಮಳೆಯಾಗಿದೆ. ಮಧ್ಯಾಹ್ನದ ಬಳಿಕ ಮೋಡ ಕವಿದ ವಾತಾವರಣವಿದ್ದು,ಸಂಜೆಯ ವೇಳೆಗೆ ಗುಡುಗಿನೊಂದಿಗೆ ಗಾಳಿಮಳೆಯಾಗಿದೆ. ಬಂಟ್ವಾಳ ಸಮೀಪದ ಸಿದ್ದಕಟ್ಟೆ, ಹೊಕ್ಕಾಡಿಗೋಳಿ ಭಾಗದಲ್ಲಿ ವಿಪರೀತ ಗಾಳಿ, ಮಳೆಗೆ ರಸ್ತೆ ಬದಿಯ ಮರಗಳು ಧರಾಶಾಹಿಯಾಗಿದೆ. ಸ್ಥಳೀಯರು ಮರವನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಮಳೆಯಿಂದಾಗಿ ಒಂದಷ್ಟು ತಂಪಿನ ವಾತಾವರಣ ಸೃಷ್ಟಿಯಾಯಿತು.

ಭಾರೀ ಗಾಳಿಮಳೆಗೆ ಹಾರಿಹೋದ ತಾಕೋಡೆ ಅಂಚೆ ಕಚೇರಿಯ ಹಂಚು

ಮೂಡುಬಿದಿರೆ: ಮಂಗಳವಾರ ಬೀಸಿದ ಭಾರೀ ಗಾಳಿ ಮಳೆಗೆ ತಾಕೋಡೆ ಅಂಚೆಕಚೇರಿಯ ಮೇಲ್ಛಾವಣಿಯ ಹಂಚುಗಳು ಹಾರಿ ಹೋಗಿ ಹಾನಿ ಸಂಭವಿಸಿದೆ. ಅನಿರೀಕ್ಷಿತ ಗಾಳಿಯ ವೇಗಕ್ಕೆ ಹೆಂಚುಗಳು ಉರುಳಿ ಬಿದ್ದ ಪರಿಣಾಮ ಕಚೇರಿಯೊಳಗೆ ಮಳೆ ನೀರು ನುಗ್ಗಿದೆ. ಮಧ್ಯಾಹ್ನದ ಬಳಿಕ ರಜೆ ಇದ್ದ ಕಾರಣ ಕಚೇರಿಯು ಮುಚ್ಚಲ್ಪಟ್ಟಿತ್ತು, ಇದರಿಂದಾಗಿ ಅನಾಹುತ ತಪ್ಪಿದೆ. ಕಚೇರಿಯಲ್ಲಿದ್ದ ದಾಖಲೆಗಳಿಗೆ ಯಾವುದೇ ಹಾನಿಯಾಗಿಲ್ಲ ಎಂದು ಪೋಸ್ಟ್ ಮಾಸ್ಟರ್ ಶಿವಾನಂದ್ ತಿಳಿಸಿದ್ದಾರೆ.

ಬೆಳ್ತಂಗಡಿ ತಾಲೂಕಿನ ಅಲ್ಲಲ್ಲಿ ಮಳೆ: ರಸ್ತೆಗೆ ಬಿದ್ದ ವಿದ್ಯುತ್ ತಂತಿಗಳು

ಬೆಳ್ತಂಗಡಿ: ತಾಲೂಕಿನ ಕಡಿರುದ್ಯಾವರ ಮಿತ್ತಬಾಗಿಲು, ಮಲವಂತಿಗೆ, ದಿಡುಪೆ, ಅಳದಂಗಡಿ ಮೊದಲಾದ ಭಾಗಗಳಲ್ಲಿ ಮಂಗಳವಾರ ಮಧ್ಯಾಹ್ನದ ಬಳಿಕ ಗುಡುಗು, ಸಿಡಿಲು, ಗಾಳಿ ಸಹಿತ ಭಾರಿ ಮಳೆ ಸುರಿದಿದೆ. ಬೆಳ್ತಂಗಡಿ ನಗರ, ವೇಣೂರು, ಉಜಿರೆ, ಲಾಯಿಲ, ಕನ್ಯಾಡಿ, ಶಿರ್ಲಾಲು, ಗುರಿಪಳ್ಳ, ಮುಂಡಾಜೆ, ಕಲ್ಮಂಜ ಮುಂತಾದ ಕಡೆಗಳಲ್ಲಿ ಸಾಮಾನ್ಯ ಮಾದರಿಯ ಮಳೆಯಾಗಿದೆ.

ಕೊಲ್ಲಿ– ಕಿಲ್ಲೂರು– ಬಂಗಾಡಿ–ಲಾಯಿಲ ರಸ್ತೆಯಲ್ಲಿ ಮರವೊಂದು ರಸ್ತೆಗೆ ಉರುಳಿ ಬಿದ್ದು ವಾಹನ ಸಂಚಾರಕ್ಕೆ ತಡೆ ಉಂಟಾಯಿತು. ಸ್ಥಳೀಯರು ಸೇರಿ ಮರವನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಿದರು. ಮರವು ವಿದ್ಯುತ್ ಲೈನ್ ಮೇಲೆಯೂ ಬಿದ್ದ ಕಾರಣ ತಂತಿಗಳು ತುಂಡಾಗಿ ರಸ್ತೆಯುದ್ದಕ್ಕೂ ಹರಡಿಕೊಂಡಿದ್ದವು. ಮಳೆ ಆರಂಭವಾಗುತ್ತಿದ್ದಂತೆ ಗ್ರಾಮೀಣ ಭಾಗಗಳಲ್ಲಿ ಯಥಾಪ್ರಕಾರ ವಿದ್ಯುತ್ ಹಾಗೂ ಅಂತರ್ಜಾಲ ವ್ಯವಸ್ಥೆಯಲ್ಲಿ ವ್ಯತ್ಯಯ ಕಂಡುಬಂದಿದೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಕೆಲವೆಡೆಗಳಲಿ ಇನ್ನೂ ನಾಲ್ಕು ದಿನ ಮಳೆ?

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬೇಸಿಗೆ ಮಳೆ ಹಲವು ನಿರೀಕ್ಷೆ ಹುಟ್ಟುಹಾಕಿದೆ.

ತುಂಬೆ ನೀರಿನ ಮಟ್ಟ ಮತ್ತಷ್ಟು ಇಳಿಕೆ

4 ಮೀಟರ್ ಅಷ್ಟೇ

ಮಳೆ ಬಿದ್ದರೂ ಕಳೆ ಹೆಚ್ಚಿಸದ ಹೊಳೆ

ಬಂಟ್ವಾಳ: ಬಿಸಿಲಿನ ಝಳಕ್ಕೆ ಜಿಲ್ಲೆಯ ಜೀವನದಿ ನೇತ್ರಾವತಿಯ ನೀರಿನ ಮಟ್ಟ ಗಣನೀಯವಾಗಿ ಇಳಿಕೆಯಾಗಿರುವುದು ಇದೀಗ ಜನರಲ್ಲಿ ಕುಡಿಯುವ ನೀರಿನ ಆತಂಕವನ್ನು ಹೆಚ್ಚಿಸಿದೆ.

ಕಳೆದ ಎರಡ್ಮೂರು ದಿನಗಳಲ್ಲಿ ಸಂಜೆಯ ವೇಳೆಗೆ ಗುಡುಗು ಸಹಿತ ಒಂದಷ್ಟು ಮಳೆಯಾದರೂ ನೇತ್ರಾವತಿಯಲ್ಲಿ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ನೀರು ಹರಿಯುತ್ತಿಲ್ಲ, ಮಂಗಳವಾರ ಸಂಜೆಯ ಹೊತ್ತಿಗೆ ತುಂಬೆ ವೆಂಟೆಡ್ ಡ್ಯಾಂನಲ್ಲಿ 4 ಮೀ.ನಷ್ಟು ಮಾತ್ರ ನೀರು ಶೇಖರಣೆಯಾಗಿದೆ.

ಸದ್ಯಕ್ಕೆ ಕಾಡಿಲ್ಲ ಎಲ್ಲೂ ನೀರಿನ ಅಭಾವ

ಜಕ್ರಿಬೆಟ್ಟು ಡ್ಯಾಂ ನಿರ್ಮಾಣದಿಂದಾಗಿ ಬಂಟ್ವಾಳ ಪುರಸಭಾ ವ್ಯಾಪ್ತಿಯ ನಗರ ಪ್ರದೇಶ, ವಿವಿಧೆಡೆಯಲ್ಲಿ ಅನುಷ್ಠಾನ ಗೊಂಡ ಬಹುಗ್ರಾಮ ಯೋಜನೆಯಿಂದ ತಾಲೂಕಿನಲ್ಲಿ ಕುಡಿಯುವ ನೀರಿಗೆ ಅಷ್ಟೊಂದು ಪ್ರಮಾಣದಲ್ಲಿ ಅಭಾವ ತಲೆದೋರದಿದ್ದರೂ, ಪಲ್ಗುಣಿ ನದಿಯಲ್ಲಿ ನೀರು ಈಗ ಬತ್ತಿಹೋಗಿರುವುದರಿಂದ ಸಂಗಬೆಟ್ಟು ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಬಳಕೆದಾರರಿಗೆ ನೀರಿಗೆ ಸಮಸ್ಯೆ ಎದುರಾದಂತಿದೆ. ಈ ಜಿಟ್ಟಿನಲ್ಲಿ ಜಕ್ರಿಬೆಟ್ಟು ಡ್ಯಾಂನಿಂದ ಈ ಭಾಗಕ್ಕೆ ನೀರು ಪೂರೈಸುವ ನಿಟ್ಟಿನಲ್ಲಿ ಯೋಜನೆ ರೂಪಿಸಲು ಶಾಸಕ ರಾಜೇಶ್ ನ್ಯಾಕ್ ಚಿಂತನೆ ನಡೆಸಿದ್ದು, ಇದನ್ನು ಪರಿಶೀಲಿಸಿ ಪ್ರಸ್ತಾವನೆಯನ್ನು ಸಿದ್ದಪಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ತುಂಬೆ ಡ್ಯಾಂನಲ್ಲಿ ನೀರು ಶೇಖರಿಸಿಡಲು, ನೀರಿನ ಕೊರತೆ ಎದುರಾದರೆ ಶಂಭೂರು ಎಎಂಆರ್ ಡ್ಯಾಂನಿಂದ ತುಂಬೆ ಡ್ಯಾಂನತ್ತ ನೀರು ಹರಿಸಲು ಜಿಲ್ಲಾಧಿಕಾರಿಯವರು ಸೂಚನೆ ನೀಡಿದ್ದಾರೆ.



ಮಂಗಳೂರು, ಉಳ್ಳಾಲಕ್ಕೂ ಇದೇ ನೀರು...

ಬಂಟ್ವಾಳದಲ್ಲಿ ಹರಿಯುವ ನೇತ್ರಾವತಿ ಕೇವಲ ಬಂಟ್ವಾಳದ ಜನತೆಯ ನೀರಿನದಾಹ ತೀರಿಸುವುದಲ್ಲದೆ ಪಕ್ಕದ ಮಂಗಳೂರು ಮಹಾಜನತೆ ಹಾಗೂ ಉಳ್ಳಾದ ಜನತೆಗೂ ನೀರು ಪೂರೈಸುತ್ತಿರುವುದು ವಿಶೇಷವಾಗಿದೆ. ಕೆಲವೊಮ್ಮೆ ಬಂಟ್ವಾಳದ ಜನತೆ ನೀರಿಗಾಗಿ ಪರಿತಪಿಸಬೇಕಾದ ಸನ್ನಿವೇಶ ಉಂಟಾಗುತ್ತಿದೆ.

ನೇತ್ರಾವತಿ ಒಡಲಲ್ಲಿ ಮರಳು, ಬಂಡೆಕಲ್ಲುಗಳು

ಮೇ ತಿಂಗಳು ಪೂರ್ತಿ ಬಿಸಿಲಿನ ತಾಪ ಇನ್ನಷ್ಟು ಹೆಚ್ಚಳವಾದರೆ ನೀರಿನ ಮಟ್ಟ ಮತ್ತಷ್ಟು ಕಡಿಮೆಯಾಗುವ ಸಾಧ್ಯತೆಗಳಿವೆ. ಪ್ರಸ್ತುತ ಬಂಟ್ವಾಳದ ಜಕ್ರಿಬೆಟ್ಟು ಡ್ಯಾಂನ ಕೆಳಭಾಗದಿಂದ ಪಾಣೆಮಂಗಳೂರು ನೂತನ ಸೇತುವೆ ವರೆಗೆ ನದಿಯಲ್ಲಿ ನೀರು ಬತ್ತಿಹೋಗಿ ಮರಳು, ಬಂಡೆಕಲ್ಲು ಕಾಣುತ್ತಿವೆ.

ತ್ರಾಸಿ ಮರವಂತೆಯ ಎಲ್ಲೆಂದರಲ್ಲಿ ಪೌಚ್, ಪ್ಲಾಸ್ಟಿಕ್ ಬಾಟಲ್, ಚಿಪ್ಸ್‌ಕವರ್

ಈಗ ಕಸದ ತೊಟ್ಟಿಯಾಗುತ್ತಿದೆ ಕಡಲತೀರ

ಕುಂದಾಪುರ: ವಿಶ್ವ ಪ್ರಸಿದ್ಧ ತ್ರಾಸಿ–ಮರವಂತೆ ಕಡಲ ತೀರ ಪ್ರದೇಶದಲ್ಲಿ ಹೆಚ್ಚುತ್ತಿರುವ ಪ್ರವಾಸಿಗರ ಸಂಖ್ಯೆ ಜೊತೆ ಕಸದ ಸಮಸ್ಯೆಯೂ ಹೆಚ್ಚುತ್ತಿದೆ.

ಕುಂದಾಪುರ– ಬೈಂದೂರು ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿರುವ ಪ್ರಸಿದ್ಧ ಪ್ರವಾಸಿ ತಾಣದಲ್ಲಿ ಕಸದ ತೊಟ್ಟಿಗಳನ್ನು ಅಳವಡಿಸಿದ್ದರೂ, ಹಲವರು ತೊಟ್ಟಿಗಳೊಳಗೆ ಕಸ ಹಾಕದೆ ಅದರ ಸುತ್ತಲೂ ಎಸೆಯುತ್ತಿರುವುದು ಕಂಡು ಬರುತ್ತಿದೆ.

ಅಪಾಯದಲ್ಲಿ ವಾಹನ ಸವಾರರು

ಮರವಂತೆ ಕಡಲತೀರಕ್ಕೆ ಆಗಮಿಸುವ ಕೆಲ ಪ್ರವಾಸಿಗರು ಕಡಲ ಸೌಂದರ್ಯ ವೀಕ್ಷಿಸುತ್ತಲೇ ವಾಹನಗಳಲ್ಲೇ ತಿಂಡಿ ಸೇವಿಸಿ, ಉಳಿದ ಆಹಾರದ ಕವರ್, ಪ್ಲಾಸ್ಟಿಕ್ ಬಾಟಲ್‌ಗಳನ್ನು ನಿರ್ಲಕ್ಷ್ಯವಾಗಿ ಕಿಟಕಿಯಿಂದ ಹೊರಗೆ ಎಸೆಯುತ್ತಿದ್ದಾರೆ. ಗಾಳಿಯ ತೀವ್ರತೆಗೆ ಆ ಕಸ ಹೆದ್ದಾರಿ ಮಧ್ಯೆ ತೂರಿಬಂದು ವಾಹನ ಸವಾರರಿಗೆ ಅಪಾಯವಾಗುತ್ತಿದೆ. ಇಲ್ಲಿ ವಿಶೇಷವಾಗಿ ಪ್ಲಾಸ್ಟಿಕ್ ಬಾಟಲ್‌ಗಳು ದ್ವಿಚಕ್ರ ವಾಹನಗಳ ಚಕ್ರದ ಅಡಿ ಸಿಲುಕುವ ಸಾಧ್ಯತೆ ಹೆಚ್ಚಿದ್ದು, ಇದರಿಂದ ಅಪಘಾತವಾಗುವ ಭೀತಿ ಇದೆ ಎಂದು ದ್ವಿಚಕ್ರ ವಾಹನ ಸವಾರರು ಆರೋಪಿಸಿದ್ದಾರೆ. »ಪುಟ 4





‘ಇಲ್ಲಿ ಕಸ ಹಾಕಿ’ ಫಲಕಕ್ಕೆ ಸೀಮಿತ!

‘ಇಲ್ಲಿ ಕಸ ಹಾಕಿ’ ಎಂದು ಸೂಚನಾ ಫಲಕಗಳನ್ನು ಅಳವಡಿಸಿದ್ದರೂ ಅದನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ. ಕಡಲತೀರ ಹಾಗೂ ರಸ್ತೆ ಬದಿಗಳಲ್ಲಿ ಪ್ಲಾಸ್ಟಿಕ್ ಬಾಟಲ್, ಚಿಪ್ಸ್ ಕವರ್, ಆಹಾರ ತ್ಯಾಜ್ಯ, ನೀರಿನ ಪೌಚ್ ಸೇರಿದಂತೆ ವಿವಿಧ ರೀತಿಯ ಕಸ ಎಲ್ಲೆಂದರಲ್ಲಿ ಬಿದ್ದಿದ್ದು, ಪರಿಸರದ ಸೌಂದರ್ಯಕ್ಕೂ ಧಕ್ಕೆಯಾಗಿದೆ. ಕೆಲವು ಕಸದ ತೊಟ್ಟಿಗಳು ಮುರಿದು ಹಾಳಾಗಿರುವುದರಿಂದ ಅವುಗಳನ್ನು ದುರಸ್ತಿ ಮಾಡಬೇಕು ಎಂಬ ಆಗ್ರಹವೂ ಇದೆ.

ಮಂಜಲ್ಪಡ್ಪುವಿನ ರಸ್ತೆ ಬದಿಯ ತುಂಬಾ ತುಂಬಿಕೊಂಡಿದೆ ‘ಕೆಂಪು ಕೆಂಪು’ ನೀರು!

ಪುತ್ತೂರು: ನಗರದ ಮಂಜಲ್ಪಡ್ಪು ಬಳಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಸೂಕ್ತ ಚರಂಡಿ ಇಲ್ಲದೆ ರಸ್ತೆ ಬದಿಯೇ ಕೃತಕ ಕೆರೆ ನಿರ್ಮಾಣವಾಗಿದೆ.

ಇದರಿಂದ ವಾಹನ ಸುಗಮ ಸಂಚಾರಕ್ಕೆ, ಪಾದಚಾರಿಗಳಿಗೆ ಅಡ್ಡಿಯಾಗುತ್ತಿದೆ.

ಪೂರ್ವ ತಯಾರಿ ಇಲ್ಲ

ಮಳೆಗಾಲ ಪೂರ್ವ ಭಾವಿ ಚರಂಡಿಯ ಕಸ ಕಡ್ಡಿ ತೆರವುಗೊಳಿಸದೇ ಇರುವುದರಿಂದ ಮಳೆ ನೀರು ಈಗ ಇಲ್ಲಿ ರಸ್ತೆಯಲ್ಲೇ ಹರಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ಕೆಲ ದಿನಗಳಿಂದ ತಾಲೂಕಿನಲ್ಲಿಸಂಜೆ, ರಾತ್ರಿ ಮಳೆಸುರಿಯುತ್ತಿದೆ. ಇದರಿಂದಾಗಿ ಕೆಲ ತಗ್ಗು ಪ್ರದೇಶಗಳಲ್ಲಿ ನೀರು ತುಂಬಿಕೊಂಡಿವೆ. ನಗರದ ಮಂಜಲ್ಪಡ್ಪು ರಸ್ತೆ ಬಳಿ ಇದೇ ರೀತಿ ನೀರು ತುಂಬಿಕೊಂಡು ವಾಹನ ಚಾಲಕರು, ಪಾದಚಾರಿಗಳು ಪರದಾಡುವಂತಾಗಿದೆ.



ಮಳೆಗಾಲವು ಸಮೀಪಿಸುತ್ತಿದ್ದರೂ ನಗರಸಭೆ ಚರಂಡಿಗಳನ್ನು ಸ್ವಚ್ಛಗೊಳಿಸಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಯಾವುದೇ ಕ್ರಮ ಕೈಗೊಂಡಿಲ್ಲ.

ಇದರಿಂದಾಗಿ ಮಳೆಗಾಲ ಆರಂಭಗೊಂಡ ಬಳಿಕ ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿದು ಹೋಗದೆ ರಸ್ತೆಯ ಇಕ್ಕೆಲಗಳಲ್ಲಿ ಹರಿದು ವಾಹನ ಸಂಚಾರಕ್ಕೆ, ಪಾದಚಾರಿಗಳ ಓಡಾಟಕ್ಕೆ ಅಡ್ಡಿ ಉಂಟಾಗಲಿದೆ.

ಕೆಎಸ್‌ಆರ್‌ಟಿಸಿಗೆ ಏಳು ಲಕ್ಷ ರೂ. ಪಾವತಿಸಲು ಬಾಕಿ | ಗ್ರಾಮ ಪಂಚಾಯತ್‌ನ ಬಸ್ ಸೇವೆ ತಾತ್ಕಾಲಿಕ ಬಂದ್

ಕುಂಬಳೆ ನಾಗರಿಕರಿಗೆ ವರದಾನವಾಗಿದ್ದ ‘ಗ್ರಾಮ ವಂಡಿ’ಗೆ ಗ್ರಹಣ

ಸಂಗಮ ವಿಶೇಷ

ಕಾಸರಗೋಡು: ಕುಂಬಳೆ ಗ್ರಾಮ ಪಂಚಾಯತ್‌ನ ಗ್ರಾಮೀಣ ಪ್ರದೇಶದ ನಾಗರಿಕರ ಪ್ರಯಾಣ ಸೌಲಭ್ಯಕ್ಕಾಗಿ ಕುಂಬಳೆ ಗ್ರಾಮ ಪಂಚಾಯತ್ ವತಿಯಿಂದ ಆರಂಭಿಸಿದ್ದ ‘ಗ್ರಾಮ ವಂಡಿ’ ಎಂಬ ಪ್ರಾದೇಶಿಕ ಕೆಎಸ್ ಆರ್‌ಟಿಸಿ ಬಸ್ ಸಂಚಾರ ರದ್ದುಗೊಂಡಿದೆ.

ಬಸ್ ಸಂಚಾರ ನಿಮಿತ್ತ ಕೆಎಸ್ಆರ್ಟಿಸಿಗೆ ಕುಂಬಳೆ ಗ್ರಾಮ ಪಂಚಾಯತ್ ಏಳು ಲಕ್ಷ ರೂ. ಪಾವತಿಸಲು ಬಾಕಿ ಉಳಿದ ಕಾರಣ ಸಂಚಾರ ರದ್ದುಗೊಂಡಿದೆ.

ಜನತೆಯ ಸೌಕರ್ಯಕ್ಕಾಗಿ ಸೇವೆ

ಗ್ರಾಮೀಣ ರೂಟ್‌ನಲ್ಲಿ ಜನತಾ ಸೌಕರ್ಯಕ್ಕಾಗಿ ಪಂಚಾಯತ್ ವತಿಯಿಂದ ಬಸ್ ಸಂಚಾರ ಆರಂಭಿಸಲಾಗಿತ್ತು. ಪಂಚಾಯತ್ ನಿರ್ದೇಶಿಸಿದ ರೂಟ್‌ನಲ್ಲಿ ಈ ಬಸ್ ಸಂಚರಿಸಬೇಕಿದ್ದು, ಇದರ ಇಂಧನ ವೆಚ್ಚವನ್ನು ಪಂಚಾಯತ್ ಭರಿಸಬೇಕಿತ್ತು. ಈ ಮೂಲಕ ವರ್ಷಕ್ಕೆ ಒಟ್ಟು ಹತ್ತು ಲಕ್ಷ ರೂಪಾಯಿ ಹೆಚ್ಚುವರಿ ವೆಚ್ಚ ಪಂಚಾಯತ್ ಭರಿಸಬೇಕಿತ್ತು. ಆದರೆ ನಿರೀಕ್ಷಿತ ಆದಾಯ ಈ ಬಸ್ ಸಂಚಾರಕ್ಕೆ ದೊರೆಯುತ್ತಿರಲಿಲ್ಲ, ಕುಂಬಳೆಯಿಂದ ಕೊಡ್ಯಮ್ಮೆ, ಪೇರಾಲ್, ಬಂಬ್ರಾಣ, ಕಳತ್ತೂರು ರೂಟ್‌ನಲ್ಲಿ ಈ ‘ಗ್ರಾಮ ವಂಡಿ’ ಸಂಚರಿಸುತ್ತಿತ್ತು.

2023ರಲ್ಲಿ ಸಚಿವರಿಂದ ಚಾಲನೆ ಸಿಕ್ಕಿತ್ತು

2023ರ ಅಕ್ಟೋಬರ್ 7ರಂದು ಅಂದಿನ ಕೇರಳ ಸಾರಿಗೆ ಸಚಿವ ಆ್ಯಂಟನಿ ರಾಜು ಅವರು ಕುಂಬಳೆ ಪಂಚಾಯತ್‌ನ ‘ಗ್ರಾಮ ವಂಡಿ’ ಯೋಜನೆ ಉದ್ಘಾಟಿಸಿದ್ದರು.



ಇನ್ನಷ್ಟು ಪ್ರದೇಶಕ್ಕೆ ವಿಸ್ತರಿಸಲು ಆಗ್ರಹ

ಬಸ್‌ನ ವೆಚ್ಚವನ್ನು ಸೇವಾ ಸೌಲಭ್ಯವೆಂಬ ರಿಯಾಯಿತಿಯಿಂದ ಪಂಚಾಯತ್ ಭರಿಸಬೇಕೆಂದೂ ಗ್ರಾಮ ವಂಡಿಯನ್ನು ಇನ್ನಷ್ಟು ಪ್ರದೇಶಕ್ಕೆ ವ್ಯಾಪಿಸಿ ಪುನರಾರಂಭಿಸಬೇಕೆಂದೂ ನಾಗರಿಕರು ಒತ್ತಾಯಿಸಿದ್ದಾರೆ.

ಬಾಕಿ ಪಾವತಿಸಿದರೆ ನಾವು ರೆಡಿ ಎಂದ ಸಂಸ್ಥೆ

ಹಿಂದಿನ ಬಾಕಿ ಏಳು ಲಕ್ಷ ರೂ ಪಾವತಿಸಿದರೆ ಬಸ್ ಸಂಚಾರ ಪುನರಾರಂಭಿಸಲು ಸಿದ್ದರಿದ್ದೇವೆ ಎಂದು ಕೆಎಸ್‌ಆರ್‌ಟಿಸಿ ಅಧಿಕೃತರು ತಿಳಿಸಿದ್ದಾರೆ. ಪ್ರಸ್ತುತ ಈ ಬಸ್ ಕಾಞಂಗಾಡು - ಕಾಸರಗೋಡು ರೂಟ್‌ನಲ್ಲಿ ಸಂಚರಿಸುತ್ತದೆ.

- **ಇದು ವಾಹನ ಸಂಚಾರ ಕೊರತೆ ಇರುವ ಗ್ರಾಮ ಪ್ರದೇಶಕ್ಕೆ ಪಂಚಾಯತ್ ವೆಚ್ಚದಲ್ಲಿ ಬಸ್ ಸೌಕರ್ಯ ಒದಗಿಸುವ ಯೋಜನೆ**
- **ಕುಂಬಳೆ ಪಂಚಾಯತ್‌ನಲ್ಲಿ ಬಸ್‌ಗೆ ಆದಾಯದ ಕೊರತೆಯಿಂದ ಸದ್ಯಕ್ಕೆ ಬಸ್ ಸಂಚಾರ ಸ್ಥಗಿತ**
- **ಈ ‘ಗ್ರಾಮ ವಂಡಿ’ ಪುನರ್ ಆರಂಭಿಸಲು ನಾಗರಿಕರ ಆಗ್ರಹ**

ಸುತ್ತ ಮುತ್ತ


ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ಕಂಕನಾಡಿ ಉಪಕೇಂದ್ರದಿಂದ ಹೊರಡುವ ಮಿಷನ್ ಕಾಂಪೌಂಡ್ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಮೇ 13ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಕೆಎಂಸಿ ಹಾಸ್ಪಿಟಲ್, ಬಲ್ಮಠ ನ್ಯೂ ರೋಡ್, ಅಥೆನಾ ಹಾಸ್ಪಿಟಲ್, ಶಾಂತಿನಿಲಯ, ಚರ್ಚ್ ರೋಡ್, ಕೆಇಬಿ ಸೊಸೈಟಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಬಿಜೈ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಬಿಜೈ ಉಪಕೇಂದ್ರ, ನೆಹರೂ ಮೈದಾನ ಉಪಕೇಂದ್ರ, ಅಳಕೆ ಉಪಕೇಂದ್ರ, ನಂದಿಗುಡ್ಡ ಉಪಕೇಂದ್ರಗಳಿಂದ ಹೊರಡುವ ಎಲ್ಲಾ ಫೀಡರ್‌ಗಳಲ್ಲಿ ಹಾಗೂ ಕದ್ರಿ ಉಪಕೇಂದ್ರದಿಂದ ಹೊರಡುವ ಕೆಲವೊಂದು ಫೀಡರ್‌ಗಳ ವ್ಯಾಪ್ತಿಯಲ್ಲಿ ಮೇ 14ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ತೋಕೂರು: ಶ್ರೀ ಸುಬ್ರಹ್ಮಣ್ಯ ದೇವರ ಪ್ರತಿಷ್ಠಾಪನೆ ವರ್ಷಾಚರಣೆ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ತೋಕೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಶ್ರೀ ಸುಬ್ರಹ್ಮಣ್ಯ ದೇವರ ಪ್ರತಿಷ್ಠಾಪನಾ ಮಹೋತ್ಸವದ ವರ್ಷಾಚರಣೆ ಮೇ 12ರಂದು ಕ್ಷೇತ್ರದ ತಂತ್ರಿ ಬ್ರಹ್ಮಶ್ರೀ ಶಿಬರೂರು ಗೋಪಾಲಕೃಷ್ಣ ತಂತ್ರಿ ಅವರ ನೇತೃತ್ವದಲ್ಲಿ ನಡೆಯಿತು. ಮಂಗಳವಾರ ಬೆಳಗ್ಗೆ ವಿಶೇಷ ಪ್ರಾರ್ಥನೆ, ದೇವರಿಗೆ ಪಂಚಾಮೃತ ಅಭಿಷೇಕ, ಬೆಳಗ್ಗೆ 10.05ಕ್ಕೆ ಮಿಥುನ ಲಗ್ನದಲ್ಲಿ ಶ್ರೀ ಸುಬ್ರಹ್ಮಣ್ಯ ದೇವರಿಗೆ ನವಕಪ್ರಧಾನ ಕಲಶಾಭಿಷೇಕ, ಪ್ರಸನ್ನ ಪೂಜೆ, ಮಧ್ಯಾಹ್ನ ಮಹಾಪೂಜೆ ನಡೆಯಿತು. ಸಂಜೆ ದೊಡ್ಡರಂಗಪೂಜೆ, ರಾತ್ರಿ 7ಕ್ಕೆ ಬಲಿ ಮಹೋತ್ಸವ ನಡೆಯಿತು. ಈ ಸಂದರ್ಭದಲ್ಲಿ ಪ್ರಧಾನ ಅರ್ಚಕ ಟಿ.ಕೆ. ಮಧುಸೂದನ ಆಚಾರ್ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗುರುರಾಜ್ ಎಸ್. ಪೂಜಾರಿ, ಸದಸ್ಯರಾದ ಪುರುಷೋತ್ತಮ ಕೋಟ್ಯಾನ್, ಅಶೋಕ್ ಕುಂದರ್, ಸಂಪತ್ ಜೆ. ಶೆಟ್ಟಿ ತೋಕೂರುಗುತ್ತು, ವಿಶ್ವನಾಥ್, ಭಾಸ್ಕರ್ ದೇವಾಡಿಗ, ಸವಿತಾ ಬೆಳ್ಳಾಯರು, ಶೋಭಾ ವಿ. ಅಂಚನ್ ಮತ್ತು ಗ್ರಾಮಸ್ಥರಾದ ಹರಿದಾಸ್ ಭಟ್, ರಾಮಣ್ಣ ದೇವಾಡಿಗ ಮುಂಚೂರು, ಪುರುಷೋತ್ತಮ ರಾವ್, ವ್ಯಾಸರಾವ್ ಚೆನ್ನೈ ಮತ್ತು ಗ್ರಾಮಸ್ಥರು ಇದ್ದರು.

ಮೇ 17: ಆಯುರ್ವೇದ ವೈದ್ಯಕೀಯ ತಪಾಸಣಾ ಶಿಬಿರ

ಸುರತ್ಕಲ್: ಬ್ರಾಹ್ಮಣರ ಸಂಘ ಕಾಟಿಪಳ್ಳ ಕೃಷ್ಣಾಪುರ ಆಶ್ರಯದಲ್ಲಿ ಕರ್ನಾಟಕ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ವೇದಾಮಯ ಆಯುರ್ವೇದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗದಿಂದ ಮೇ 17ರಂದು ಬೆಳಗ್ಗೆ 8.30ರಿಂದ ಕಾಟಿಪಳ್ಳ ಮೂಲ ನಾಗಬ್ರಹ್ಮಸ್ಥಾನ ವಠಾರದಲ್ಲಿ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ವೇದಾಮಯ ಆಯುರ್ವೇದ ಆಸ್ಪತ್ರೆಯ ಮುಖ್ಯಸ್ಥ ಡಾ. ಕೇಶವ್ ರಾಜ್ ಅವರು ಸಾಮಾನ್ಯ ತಪಾಸಣೆ ನಡೆಸಿ ಅಗತ್ಯವಿರುವವರಿಗೆ ಕೆಲವು ಔಷಧಗಳನ್ನು ಉಚಿತವಾಗಿ ವಿತರಿಸಲಿದ್ದಾರೆ. ಶಿಬಿರದಲ್ಲಿ ಮಧುಮೇಹ ಪರೀಕ್ಷೆ, ಮೂಳೆ ಸಾಂದ್ರತೆ ಪರೀಕ್ಷೆ, ಹಿಮೋಗ್ಲೋಬಿನ್ ಪರೀಕ್ಷೆ ಹಾಗೂ ಇತರ ಸಾಮಾನ್ಯ ಆರೋಗ್ಯ ತಪಾಸಣೆಗಳನ್ನು ಉಚಿತವಾಗಿ ನಡೆಸಲಾಗುತ್ತದೆ. ಆಯುರ್ವೇದ ಸ್ತ್ರೀರೋಗ ತಜ್ಞರು, ಆಯುರ್ವೇದ ಇಎನ್‌ಟಿ ತಜ್ಞರು, ಆಯುರ್ವೇದ ಕಣ್ಣಿನ ತಜ್ಞರು ಹಾಗೂ ಆಯುರ್ವೇದ ಮೂಲವ್ಯಾಧಿ ತಜ್ಞರು ಸಮಾಜ ಬಾಂದವರಿಗೆ ಉಚಿತ ಸಮಾಲೋಚನೆ ನೀಡಲಿದ್ದಾರೆ. ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿರುವವರು ಡಾ. ಕೇಶವ್ ರಾಜ್ ಅವರನ್ನು ಸಮಾಲೋಚಿಸಿ ರಿಯಾಯಿತಿ ದರದಲ್ಲಿ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಹೆದ್ದಾರಿ ಸಮಸ್ಯೆ ಬಗೆ ಹರಿಸಲು ಮನವಿ

ಸುರತ್ಕಲ್: ಮುಕ್ಕದಿಂದ ಬೈಕಂಪಾಡಿವರೆಗೆ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಅನೇಕ ಸಮಸ್ಯೆಗಳು ಕಂಡುಬರುತ್ತಿದ್ದು, ಈ ಕುರಿತು ತುರ್ತು ಆದ್ಯತೆ ನೀಡಿ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಆಪದ್ಬಾಂಧವ ಸಮಾಜ ಸೇವಾ ಸಂಸ್ಥೆ ವತಿಯಿಂದ ಮನವಿ ಸಲ್ಲಿಸಲಾಯಿತು. ಸಂಸ್ಥೆಯ ಸ್ಥಾಪಕ ಅಧ್ಯಕ್ಷ ಉಮೇಶ್ ದೇವಾಡಿಗ ಅವರ ನೇತೃತ್ವದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾಜೆಕ್ಟ್ ಡೈರೆಕ್ಟರ್ ಜಾವೆದ್ ಅಜ್ಮಿ ಅವರನ್ನು ಭೇಟಿ ಮಾಡಿ ಮನವಿ ಪತ್ರ ನೀಡಲಾಯಿತು. ಮನವಿಯಲ್ಲಿ ಮುಕ್ಕದಿಂದ ಸುರತ್ಕಲ್ ಮೂಲಕ ಬೈಕಂಪಾಡಿವರೆಗೆ ಸಮರ್ಪಕ ಸರ್ವಿಸ್ ರಸ್ತೆ ನಿರ್ಮಾಣ, ಅಪಘಾತ ಹೆಚ್ಚಾಗಿ ಸಂಭವಿಸುತ್ತಿರುವ ಪ್ರದೇಶಗಳಲ್ಲಿ ಸುರಕ್ಷತಾ ಕ್ರಮಗಳನ್ನು ಬಲಪಡಿಸುವ ಬಗ್ಗೆ ಒತ್ತಾಯಿಸಲಾಯಿತು. ಸಂಸ್ಥೆಯ ವೇಣುಗೋಪಾಲ್, ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೂಲಸೌಕರ್ಯ ವಂಚಿತ ಕಿನ್ಯ ಗ್ರಾಮದ ಕುಟುಂಬಕ್ಕೆ ಆಸರೆಯಾದ ದಿವ್ಯಜ್ಯೋತಿ ಕ್ರಿಕೆಟರ್ಸ್ ತಂಡ

ಅಶಕ್ತ ಕುಟುಂಬದ ಮನೆ ದುರಸ್ತಿಗೊಳಿಸಿ ನೆರವಾದ ಸಂಘಟನೆ

ಉಳ್ಳಾಲ: ಕುಡಿಯುವ ನೀರು, ಶೌಚಾಲಯ, ವಿದ್ಯುತ್‌ನಂತಹ ಮೂಲಭೂತ ಸೌಕರ್ಯಗಳಿಂದ ವಂಚಿತಗೊಂಡು ಗುಡಿಸಲೊಂದರಲ್ಲಿ ತನ್ನ ಇಬ್ಬರು ಮಕ್ಕಳೊಂದಿಗೆ ವಾಸವಿರುವ ವಿಧವೆಯೊಬ್ಬರಿಗೆ ಕುತ್ತಾರು ಪಂಡಿತ್ ಹೌಸ್‌ನ ದಿವ್ಯಜ್ಯೋತಿ ಕ್ರಿಕೆಟರ್ಸ್ ಉತ್ಸಾಹಿ ಯುವಕರು ಅವಶ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟು ಅಬಲೆಗೆ ಆಸರೆಯಾಗಿ ಮಾನವೀಯತೆ ಮೆರೆದಿದ್ದಾರೆ.



ಉಳ್ಳಾಲ ತಾಲೂಕಿನ ಕಿನ್ಯ ಗ್ರಾಮದ ಪೆರಮಂದೂರು ಎಂಬಲ್ಲಿ ವಾಸವಿರುವ ಕುಲಾಲ ಸಮುದಾಯದ ಮೀನಾಕ್ಷಿ (39) ಅವರು ಈ ಹಿಂದೆ ಪತಿಯೊಂದಿಗೆ ಮಂಗಳೂರಿನ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಪತಿಯು ಕೆಲ ವರುಷಗಳ ಹಿಂದೆ ಮೃತಪಟ್ಟಿದ್ದು ತನ್ನ ಇಬ್ಬರು ಮಕ್ಕಳನ್ನು ಸಾಕುವ ಜವಾಬ್ದಾರಿ ಮೀನಾಕ್ಷಿ ಅವರ ಹೆಗಲ ಮೇಲೇರಿತ್ತು. ಪತಿಯು ತನ್ನ ಜೀವಿತಾವಧಿಯಲ್ಲಿ ಪೆರಮಂದೂರು ಎಂಬಲ್ಲಿನ ನಿರ್ಜನ ಪ್ರದೇಶದಲ್ಲಿ ಖರೀದಿಸಿದ್ದ ಕುಮ್ಕಿ ಜಾಗದಲ್ಲಿ ಮೀನಾಕ್ಷಿ ಅವರು ಸಣ್ಣ ಗುಡಿಸಲೊಂದನ್ನು ಕಟ್ಟಿ ತನ್ನ ಮಗ ಮತ್ತು ಮಗಳೊಂದಿಗೆ ವಾಸವಿದ್ದಾರೆ. ಮೀನಾಕ್ಷಿ ಅವರಿಗೆ ಕುಮ್ಕಿ ಜಾಗದ ಹಕ್ಕು ಪತ್ರವೂ ಲಭಿಸದೆ, ಕುಡಿಯುವ ನೀರು, ವಿದ್ಯುತ್ ಸಂಪರ್ಕದಂತಹ ಮೂಲಭೂತ ಸೌಕರ್ಯಗಳಿಂದಲೇ ಕುಟುಂಬ ವಂಚಿತಗೊಂಡಿತ್ತು.

ಆಸರೆಯಾದ ಕ್ರಿಕೆಟ್ ಆಡುವ ಹುಡುಗರು

ಕ್ರಿಕೆಟ್ ಆಟದೊಂದಿಗೆ ಸಾಮಾಜಿಕ ಕಳಕಳಿಯ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಕುತ್ತಾರು ಪಂಡಿತ್ ಹೌಸ್ ದಿವ್ಯ ಜ್ಯೋತಿ ಕ್ರಿಕೆಟರ್ಸ್ ಹಾಗೂ ದಿವ್ಯ ಜ್ಯೋತಿ ಸೇವಾ ಬಳಗದ ಸದಸ್ಯರು ಮೀನಾಕ್ಷಿ ಅವರ ಕುಟುಂಬದ ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡಕೊಂಡಿದ್ದಾರೆ.

ಕಳೆದ ಕೆಲ ತಿಂಗಳ ಹಿಂದೆ ಮೀನಾಕ್ಷಿ ಅವರ ಗುಡಿಸಲಿಗೆ ವಿದ್ಯುತ್ ಸಂಪರ್ಕವನ್ನು ನೀಡಿದ್ದಾರೆ. ಮಳೆಗಾಲ ಸಮೀಪಿಸುತ್ತಿರುವುದರಿಂದ ಭಾನುವಾರ ತಂಡದ ಸದಸ್ಯರು ಸುಡುವ ಬಿಸಿಲನ್ನೂ ಲೆಕ್ಕಿಸದೆ ಒರ್ವ ಮೇಸ್ತ್ರಿಯ ಸಹಕಾರದಿಂದ ಶ್ರಮದಾನ ಮಾಡಿ ಮೀನಾಕ್ಷಿ ಅವರ ಗುಡಿಸಲಿಗೆ ಬಾಗಿಲುಗಳನ್ನು ಅಳವಡಿಸಿದ್ದಲ್ಲದೆ, ಕಲ್ಲಿನ ಗೋಡೆಗೆ ಸಿಮೆಂಟ್ ದರ್ಜೆ ಕಟ್ಟಿ ಸಿಮೆಂಟ್ ಬ್ಲಾಕ್‌ನಿಂದ ಶೌಚಾಲಯವನ್ನು ನಿರ್ಮಿಸಿಕೊಟ್ಟಿದ್ದಾರೆ. ಜೊತೆಗೆ ಹಂಚಿನ ಛಾವಣಿಯ ಮೇಲೆ ಟರ್ಪಾಲನ್ನು ಹೊದಿಸಿದ್ದಾರೆ.

ಬಡತನದಿಂದ ಮಕ್ಕಳ ಶಿಕ್ಷಣ ಮೊಟಕು

ಮೀನಾಕ್ಷಿ ಅವರು ಕುಟುಂಬ ನಿರ್ವಹಣೆಗಾಗಿ ದೇರಳಕಟ್ಟೆಯ ಖಾಸಗಿ ಆಸ್ಪತ್ರೆಯೊಂದರಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದಾರೆ. ಕಿತ್ತು ತಿನ್ನುವ ಬಡತನದಿಂದಾಗಿ ಅವರ ಮಗ ಮತ್ತು ಕಿರಿಯ ಮಗಳು ಐದನೇ ತರಗತಿಯವರೆಗೆ ಶಾಲೆಗೆ ಹೋಗಿ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿದ್ದಾರೆ. ಕಿರಿಯ ಮಗಳು ಟ್ಯುಟೋರಿಯಲ್ ಮೂಲಕ ನೇರ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲು ದಿವ್ಯ ಜ್ಯೋತಿ ಕ್ರಿಕೆಟರ್ಸ್‌ನ ಸದಸ್ಯರು ಪುಸ್ತಕಗಳನ್ನು ಖರೀದಿಸಿ ಕೊಟ್ಟಿದ್ದಲ್ಲದೆ, ಟ್ಯುಟೋರಿಯಲ್ ಶುಲ್ಕವನ್ನೂ ಭರಿಸಿದ್ದಾರೆ.

ದಾನಿಗಳ, ಸೇವಾ ಬಳಗದ ಸಹಕಾರ

ಮೀನಾಕ್ಷಿ ಅವರ ಅಶಕ್ತ ಕುಟುಂಬಕ್ಕೆ ಬೇಕಾದ ಅಗತ್ಯ ಮೂಲಭೂತ ಸೌಕರ್ಯಗಳನ್ನು ದಾನಿಗಳು ಮತ್ತು ದಿವ್ಯ ಜ್ಯೋತಿ ಸೇವಾಬಳಗದ ಸಹಕಾರದಿಂದ ಒದಗಿಸಿಕೊಟ್ಟಿದ್ದೇವೆ. ಮೀನಾಕ್ಷಿ ಅವರಿಗೆ ಜಾಗದ ಹಕ್ಕು ಪತ್ರ ಲಭಿಸಬೇಕಿದೆ. ದಾನಿಗಳು ಮುಂದೆ ಬಂದರೆ ಮುಂದಿನ ದಿನಗಳಲ್ಲಿ ಮೀನಾಕ್ಷಿ ಅವರಿಗೆ ಸುಸಜ್ಜಿತ ಮನೆಯೊಂದನ್ನು ನಿರ್ಮಿಸಿ ಕೊಡಬಹುದಾಗಿದೆ.

● ಯತೀಶ್ ಶೆಟ್ಟಿ ಪಂಡಿತ್ ಹೌಸ್, ಅಧ್ಯಕ್ಷ, ದಿವ್ಯ ಜ್ಯೋತಿ ಕ್ರಿಕೆಟರ್ಸ್

ಅಶೋಕ ನಗರದ ಶ್ರೀ ಕೃಷ್ಣ ಮಂದಿರ: 27ನೇ ವರ್ಷದ ಪ್ರತಿಷ್ಠಾ ಮಹೋತ್ಸವ



ಮಂಗಳೂರು: ನಗರದ ಅಶೋಕನಗರದಲ್ಲಿರುವ ಶ್ರೀ ಕೃಷ್ಣ ಮಂದಿರದಲ್ಲಿ 27ನೇ ಪ್ರತಿಷ್ಠಾ ಮಹೋತ್ಸವವನ್ನು ಉರ್ವ ಪಂಚಲಿಂಗೇಶ್ವರ ದೇವಸ್ಥಾನದ ಬ್ರಹ್ಮಶ್ರೀ ವೇದಮೂರ್ತಿ ದೇರೆಬೈಲು ಕೀರ್ತಿ ಶೇಷ ಶ್ರೀ ಹರಿಕೃಷ್ಣ ತಂತ್ರಿಗಳ ಪುತ್ರ ಬ್ರಹ್ಮಶ್ರೀ ವೇದಮೂರ್ತಿ ಡಾ. ಶಿವಪ್ರಸಾದ್ ತಂತ್ರಿ ಹಾಗೂ ಶ್ರೀ ಕೃಷ್ಣ ಮಂದಿರದ ಪ್ರಧಾನ ಅರ್ಚಕ ವೇದಮೂರ್ತಿ ಕಗ್ಗಿ ಶ್ರೀನಿವಾಸ ಆಚಾರ್ಯ ಚಿತ್ರಾಪುರ ಅವರ ನೇತೃತ್ವದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ವಿವಿಧ ಕ್ಷೇತ್ರಗಳ ಸಾಧಕರಾದ ವೇದಮೂರ್ತಿ ಸತೀಶ್ ಉಡುಪ, ನಗರದ ವಕೀಲ, ಸಂಗೀತ ಕಲಾವಿದ ಅನಂತ ಕೃಷ್ಣ ಉಡುಪ, ಶ್ರೀ ಕೃಷ್ಣ ಮಂದಿರದ ವ್ಯವಸ್ಥಾಪಕ ಸಂದೇಶ್ ರಾವ್ ಅವರನ್ನು ಗೌರವಿಸಿ ಶ್ರೀ ಕೃಷ್ಣ ಸೇವಾ ರತ್ನ ಪ್ರಶಸ್ತಿ ನೀಡಲಾಯಿತು. ಚೆಸ್ ಆಟದಲ್ಲಿ ಸಾಧನೆ ಮಾಡಿದ, ನಗರದ ರಾವ್ ಚೆಸ್ ಕಾರ್ನರ್‌ನ ಮಾಲಕ ಶರಣ್ ರಾವ್, ವಿದ್ಯಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವೃಂದಾ ಜಿ.ರಾವ್ ಅವರನ್ನು ಗೌರವಿಸಿ ಶ್ರೀ ಕೃಷ್ಣ ಯುವರತ್ನ ಪ್ರಶಸ್ತಿ ನೀಡಲಾಯಿತು. ವಕೀಲ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷ ಮಹೇಶ್ ಕಜೆ, ವೈದ್ಯ ಡಾ.ಪ್ರಭಾಕರ ರಾವ್, ಎನ್ಎಂಪಿಟಿ ನಿವೃತ್ತ ಇಂಜಿನಿಯರ್ ಗಣಪತಿ ಐತಾಳ್, ಹೊಟೇಲ್ ದ್ವಾರಕಾ ಗ್ರೂಪ್ ಬೆಂಗಳೂರು ಮಾಲಕ ರಾಘವೇಂದ್ರ ರಾವ್ ಮಾತನಾಡಿದರು. ಟ್ರಸ್ಟ್‌ನ ಅಧ್ಯಕ್ಷ ಸುರೇಶ್ ರಾವ್ ಸ್ವಾಗತಿಸಿದರು. ಕಾರ್ಯದರ್ಶಿ ಡಾ. ರಮಾನಂದ ರಾವ್ ವಂದಿಸಿದರು. ಉಪಾಧ್ಯಕ್ಷ ಶ್ರೀ ಸುಮಂತ್ ಕುಮಾರ್, ಜೊತೆ ಕಾರ್ಯದರ್ಶಿ ಪ್ರಕಾಶ್ ರಾವ್, ಕೋಶಾಧಿಕಾರಿ ಪ್ರವೀಣ್ ಕುಮಾರ್, ಸದಸ್ಯರಾದ ಎಸ್.ಜಿ. ಹೆಗಡೆ, ಲಲಿತಾ ಆರ್.ರಾವ್, ಗಣೇಶ್ ರಾವ್, ವಾದಿರಾಜ ಆಚಾರ್, ಸಹಕರಿಸಿದರು. ವೃಂದಾ ಕೊನ್ನಾರ್ ನಿರೂಪಿಸಿದರು. ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭರತಾಂಜಲಿ ಕೊಟ್ಟಾರ, ಮಂಗಳೂರು ವಿದುಷಿ ಪ್ರತಿಮಾ ಶ್ರೀಧರ್ ಮತ್ತು ಬಳಗದವರಿಂದ ನೃತ್ಯ ಮಾಧುರ್ಯ ಕಾರ್ಯಕ್ರಮ ನಡೆಯಿತು.

ಬನ್ನಡ್ಕದಲ್ಲಿ ಸರ್ವಿಸ್ ರಸ್ತೆ ನಿರ್ಮಾಣ, ನಾಮಫಲಕ ಅಳವಡಿಕೆಗೆ ಶಾಸಕರ ಸೂಚನೆ



ಮೂಡುಬಿದಿರೆ: ಮಂಗಳೂರು – ಮೂಡುಬಿದಿರೆ – ಕಾರ್ಕಳ ರಾಷ್ಟ್ರೀಯ ಹೆದ್ದಾರಿಯ ಬನ್ನಡ್ಕ ಪ್ರದೇಶದಲ್ಲಿ ಸಂಭವಿಸುತ್ತಿರುವ ಸರಣಿ ಅಪಘಾತಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಶಾಸಕ ಉಮಾನಾಥ್ ಕೋಟ್ಯಾನ್ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರಸ್ತೆ ಸಮತಟ್ಟಾಗಿಲ್ಲದಿರುವುದು, ವಾಹನಗಳ ಗೋಚರತೆಯ ಕೊರತೆ ಮತ್ತು ಅಮನಬೆಟ್ಟು ಕ್ರಾಸ್‌ನಲ್ಲಿ ರಸ್ತೆಯು ಹೆದ್ದಾರಿಗಿಂತ ತೀರಾ ಕೆಳಮಟ್ಟದಲ್ಲಿರುವುದು ಅಪಘಾತಗಳಿಗೆ ಪ್ರಮುಖ ಕಾರಣ ಎಂದು ಸ್ಥಳೀಯರಾದ ಸೂರಜ್ ಜೈನ್, ಸುಧಾಕರ ಆಚಾರ್ಯ ಶಾಸಕರ ಗಮನಕ್ಕೆ ತಂದರು. ಮೇ 20ರೊಳಗೆ ಸರ್ವಿಸ್ ರಸ್ತೆ ಕಾಮಗಾರಿ ಆರಂಭಿಸದಿದ್ದರೆ ಪ್ರತಿಭಟನೆ ನಡೆಸುವುದಾಗಿ ಸ್ಥಳೀಯರು ಎಚ್ಚರಿಸಿದ ಹಿನ್ನೆಲೆಯಲ್ಲಿ, ಶಾಸಕರು ಅಧಿಕಾರಿಗಳಿಗೆ ತಕ್ಷಣದ ಕ್ರಮಕ್ಕೆ ಸೂಚಿಸಿದರು.

ಎಸ್‌ಕೆಎಫ್ ಮತ್ತು ಬನ್ನಡ್ಕ ಗರಡಿ ಮುಂಭಾಗದ ಹೆದ್ದಾರಿ ಪ್ರವೇಶವನ್ನು ತಾತ್ಕಾಲಿಕವಾಗಿ ಬಂದ್ ಮಾಡಬೇಕು ಹಾಗೂ ಕೂಡಲೇ 600 ಮೀ. ಉದ್ದದ ಸರ್ವಿಸ್ ರಸ್ತೆ ಕಾಮಗಾರಿ ಪ್ರಾರಂಭಿಸಬೇಕು ಎಂದು ಶಾಸಕರು ಇಂಜಿನಿಯರ್‌ಗಳು ಮತ್ತು ಡಿಬಿಎಲ್ ಕಂಪನಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಧಿಕಾರಿಗಳು ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ ಕೂಡಲೇ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಬಳಿಕ ಮಾತನಾಡಿದ ಶಾಸಕರು, ಸ್ಥಳೀಯರ ಸಲಹೆಗಳನ್ನು ಪರಿಗಣಿಸಲಾಗಿದ್ದು, ವಾಹನ ಸವಾರರು ಸಹ ರಸ್ತೆ ನಿಯಮ ಪಾಲಿಸುವ ಮೂಲಕ ಸಹಕರಿಸಬೇಕು ಎಂದರು.

ತಹಸೀಲ್ದಾರ್ ಶ್ರೀಧರ ಮುಂದಲಮನಿ, ಹೆದ್ದಾರಿ ಇಲಾಖೆ ಇಂಜಿನಿಯರ್ ಮಹಮ್ಮದ್ ನಾಝಿರ್, ಡಿಬಿಎಲ್ ಅಧಿಕಾರಿಗಳಾದ ಪ್ರಸಾದ್, ಬಾಲಾಜಿ, ರಾಘವ್‌ರಾವ್, ಪಿಡಿಒ ಸಾಯೀಶ್ ಚೌಟ, ಸಬ್ ಇನ್ಸ್‌ಪೆಕ್ಟರ್ ಕೃಷ್ಣಪ್ಪ ಮುಖಂಡರಾದ ರಂಜಿತ್ ಪೂಜಾರಿ, ವಿಶ್ವನಾಥ ಕಾಮತ್,

ಆತ್ಮಶಕ್ತಿ ಪ್ರಧಾನ ಕಚೇರಿಗೆ ಶಿವಗಿರಿ ಮಠದ ಶ್ರೀ ವಿಶುದ್ಧಾನಂದ ಭೇಟಿ



ಮಂಗಳೂರು: ಕೇರಳದ ಶಿವಗಿರಿಯ ಶ್ರೀ ನಾರಾಯಣ ಗುರು ಧರ್ಮ ಸಂಘ ಇದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ, 2019ರಲ್ಲಿ ರಾಷ್ಟ್ರದ ಅತ್ಯುನ್ನತ ಪದ್ಮಶ್ರೀ ಪ್ರಶಸ್ತಿಯಿಂದ ಪುರಸ್ಕೃತರಾದ ಪದ್ಮಶ್ರೀ ಶ್ರೀ ವಿಶುದ್ಧಾನಂದ ಸ್ವಾಮೀಜಿ ಕೇರಳದ ಅಲಪ್ಪುಝ ಜಿಲ್ಲೆಯ ಕಾಯಂಕುಳಂ ಮಠದ (ಶಿವಗಿರಿ ಮಠದ ಶಾಖೆ) 48ಕ್ಕೂ ಮಿಕ್ಕಿ ಅನುಯಾಯಿಗಳೊಂದಿಗೆ ಪಡೀಲ್‌ನಲ್ಲಿರುವ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘದ ಪ್ರಧಾನ ಕಚೇರಿ ಆತ್ಮಶಕ್ತಿ ಸೌಧಕ್ಕೆ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಸಂಘದ ವತಿಯಿಂದ ಶ್ರೀ ವಿಶುದ್ಧಾನಂದ ಸ್ವಾಮೀಜಿ ಅವರನ್ನು ಗೌರವಿಸಿದರು. ಉಪಾಧ್ಯಕ್ಷ ನೇಮಿರಾಜ್ ಪಿ, ಸಿಇಒ ಸೌಮ್ಯ ವಿಜಯ್, ಸಹಾಯಕ ಪ್ರಬಂಧಕ ವಿಶ್ವನಾಥ, ಹಿರಿಯ ಶಾಖಾಧಿಕಾರಿ ಹರಿಣಾಕ್ಷಿ ಪ್ರಶಾಂತ್, ನಾರಾಯಣ ಗುರು ಧರ್ಮ ಪ್ರಸರಣ ಸೇವಾ ಟ್ರಸ್ಟ್ ಮಂಗಳೂರು ಇದರ ವ್ಯವಸ್ಥಾಪಕ ಟ್ರಸ್ಟಿ ರಾಮಚಂದ್ರ ಪೂಜಾರಿ ದೇರೆಬೈಲ್ ಮತ್ತಿತರರು ಉಪಸ್ಥಿತರಿದ್ದರು.

ಮಾಜಿ ಸೈನಿಕರ ಸಂಘದಿಂದ ಮನೆ ಹಸ್ತಾಂತರ



ಬಂಟ್ವಾಳ: ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಬಂಟ್ವಾಳ ಹಾಗೂ ಮಾತೃಭೂಮಿ ಸೇವಾ ಸಂಘ ನಾವೂರು ಆಶ್ರಯದಲ್ಲಿ ಸಮಾಜಮುಖಿ ಬಂಧುಗಳ ಸಹಕಾರದಿಂದ ದುರಸ್ತಿಗೊಂಡ ನಾವೂರು ಗ್ರಾಮದ ಸಿಂತಾನಿಕಟ್ಟೆಯ ಬಡ ಮಹಿಳೆ ಅಪ್ಪಿ ಅವರಿಗೆ ಮನೆಯನ್ನು ಹಸ್ತಾಂತರಿಸಲಾಯಿತು. ಉದ್ಯಮಿ ಸಂದೇಶ್ ಶೆಟ್ಟಿ, ಅಖಿಲ ಕರ್ನಾಟಕದ ಮಾಜಿ ಸೈನಿಕರ ಸಂಘ ಬಂಟ್ವಾಳ ಘಟಕದ ಅಧ್ಯಕ್ಷ ಮೋನಪ್ಪ ಪೂಜಾರಿ ಮೊಗರ್ನಾಡು, ಮಾಜಿ ಸೈನಿಕರಾದ ರಾಮನಾಥ ಶೆಣೈ ಬಂಟ್ವಾಳ, ಐವನ್ ಮೆನೆಂಜಸ್ ಲೊರೆಟ್ಟೊ ಪದವು, ಹರೀಶ್ ಮೈಂದಾಳ, ನಾವೂರು ಗ್ರಾ.ಪಂ. ಸದಸ್ಯರಾದ ಮಹಮ್ಮದ್ ಫಾರುಕ್, ಮಾತೃಭೂಮಿ ಸೇವಾ ಸಂಘದ ಅಧ್ಯಕ್ಷ ಸಂತೋಷ್ ಕೋಟ್ಯಾನ್ ಜತೆ ಕಾರ್ಯದರ್ಶಿ ವರುಣ್ ಸಂಘಟಕ ಹರೀಶ್ ಕೆಲ್ಲರ್ ಮಾರ್ ಹರ್ಷಿತ್ ಪದವು ಸ್ಥಳೀಯರಾದ ರಮೇಶ್ ಸಿಂತಾನಿಕಟ್ಟೆ ಬಡಗಿ ಜಗದೀಶ್, ಸಂಘದ ನಿರ್ದೇಶಕರಾದ ಸುರೇಶ್ ಎಸ್. ನಾವೂರು ಇದ್ದರು.

ಕುಂಪಲ ದೇಗುಲ: ಮೆರವಣಿಗೆಯಲ್ಲಿ ಅನಂತ ಪದ್ಮನಾಭ ದೇವರ ಶಿಲಾಬಿಂಬ ಆಗಮನ



ಉಳ್ಳಾಲ: ಕುಂಪಲ ಶ್ರೀ ದುರ್ಗಾಪರಮೇಶ್ವರ ಕ್ಷೇತ್ರದಲ್ಲಿ ಪರಿವಾರ ಶಕ್ತಿಯಾಗಿ ಶ್ರೀ ಅನಂತ ಪದ್ಮನಾಭ ದೇವರ ಶಿಲಾ ವಿಗ್ರಹದ ಪ್ರತಿಷ್ಠಾಪನಾ ವೈದಿಕ ಪ್ರಕ್ರಿಯೆ ಜೂ.16ರಿಂದ 19ರವರೆಗೆ ನಡೆಯಲಿದ್ದು ಶ್ರೀ ಅನಂತ ಪದ್ಮನಾಭ ದೇವರ ಶಿಲಾ ಬಿಂಬವನ್ನು ಕುಂಪಲ ಶ್ರೀ ಬಾಲಕೃಷ್ಣ ಮಂದಿರದಿಂದ ದುರ್ಗಾ ಪರಮೇಶ್ವರ ಕ್ಷೇತ್ರಕ್ಕೆ ಶೋಭಾಯಾತ್ರೆಯ ಮೂಲಕ ಬರಮಾಡಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಕುಂಪಲ ಶ್ರೀ ಬಾಲಕೃಷ್ಣ ಮಂದಿರದ ಅಧ್ಯಕ್ಷ ಸತೀಶ್ ಕುಂಪಲ, ಶ್ರೀ ದುರ್ಗಾ ಪರಮೇಶ್ವರ ಕ್ಷೇತ್ರದ ಪ್ರಧಾನ ಅರ್ಚಕ ಭವಾನಿಶಂಕರ ಶಾಂತಿ, ಬಾಲಕೃಷ್ಣ ಮಂದಿರದ ಅರ್ಚಕ ಮಹಾಬಲ ಬಂಗೇರ, ಮಂದಿರದ ಆಡಳಿತ ಮಂಡಳಿಯ ಸದಸ್ಯರಾದ ಪ್ರವೀಣ್.ಎಸ್.ಕುಂಪಲ, ಗಣೇಶ್ ಅಂಚನ್, ಪ್ರಹ್ಲಾದ್ ಕುಮಾರ್ ಇಂದಾಜೆ, ದೀಕ್ಷಿತ್ ನಿಸರ್ಗ, ಜಗದೀಶ್ ಆಚಾರ್ಯ, ಕಿಶೋರ್ ಡಿ.ಕೆ., ಗಣೇಶ್ ಶೆಟ್ಟಿ ಹನುಮಾನ್ ನಗರ, ದುರ್ಗಾ ಪರಮೇಶ್ವರ ಕ್ಷೇತ್ರದ ಸೇವಾ ಸಮಿತಿಯ ಭಾಸ್ಕರ ಕುಜುಮಗದ್ದೆ ಹರಿಶ್ಚಂದ್ರ ಕುಜುಮಗದ್ದೆ ಗಂಗಾಧರ ಪೂಜಾರಿ, ನಿತೇಶ್ ಕುಂಪಲ, ದೇವದಾಸ್ ಬಾರ್ದೆ, ಯಶವಂತ ಹನುಮಾನ್ ನಗರ, ವಸಂತ್ ದಾಸ್, ಮಡಿಲು ತಂಡದ ಸುಧೀರ್, ಉದ್ಯಮಿ ಜಯಂತ್ ಕೊಂಡಾಣ, ಕೊಲ್ಯ ಶಾರದಾ ಟ್ರಸ್ಟ್ ಅಧ್ಯಕ್ಷ ಮೋಹನ್ ಶೆಟ್ಟಿ ಕುಂಪಲ, ಭಜನಾ ಸೇವಕ್ ಅಶೋಕ್ ಎಡಪದವು, ಅಶ್ವಿನಿ ಜಪ್ಪಿನಮೊಗರು ಮತ್ತು ಬಾಲಕೃಷ್ಣ ಮಹಿಳಾ ಸಮಿತಿ, ಶ್ರೀ ದುರ್ಗಾ ಪರಮೇಶ್ವರ ಮಹಿಳಾ ಸಮಿತಿ ಸದಸ್ಯರು ಇದ್ದರು.

ಮರ್ದಾಳ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರರಿಗೆ ಅದ್ದೂರಿ ಸ್ವಾಗತ



ಕಡಬ: ಕುಕ್ಕೆ ಸುಬ್ರಹ್ಮಣ್ಯಕ್ಕೆ ಆಗಮಿಸಿದ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರ ನೇತೃತ್ವದಲ್ಲಿ ಸುಳ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಮರ್ದಾಳ ಜಂಕ್ಷನ್‌ನಲ್ಲಿ ಸೋಮವಾರ ರಾತ್ರಿ ಅದ್ದೂರಿ ಸ್ವಾಗತದ ಮೂಲಕ ಬರಮಾಡಿಕೊಳ್ಳಲಾಯಿತು.

ವಿಜಯೇಂದ್ರರನ್ನು ಗೌರವಿಸಿದ ಕಾರ್ಯಕರ್ತರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವಿಜಯೇಂದ್ರ ಹಾಗೂ ಬಿಜೆಪಿಗೆ ಜಯಘೋಷ ಹಾಕಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಬಳಿಕ ವಾಹನ ಜಾಥಾದ ಮೂಲಕ ಅವರನ್ನು ಸುಬ್ರಹ್ಮಣ್ಯಕ್ಕೆ ಕರೆದೊಯ್ಯಲಾಯಿತು. ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಕೃಷ್ಣ ಶೆಟ್ಟಿ ಕಡಬ, ಯುವ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಶ್ರೀಕೃಷ್ಣ ಎಂ.ಆರ್., ಕುಟ್ರುಪ್ಪಾಡಿ ಶಕ್ತಿಕೇಂದ್ರದ ಅಧ್ಯಕ್ಷ ಸುರೇಶ್ ದೇಂತಾರ್, ಕಡಬ ಮಹಾ ಶಕ್ತಿಕೇಂದ್ರದ ಕಾರ್ಯದರ್ಶಿ ಅಶೋಕ್‌ಕುಮಾರ್ ಪಿ., ಎಪಿಎಂಸಿ ಮಾಜಿ ಸದಸ್ಯ ಮೇದಪ್ಪ ಗೌಡ ಡೆಪ್ಪುಣಿ, ಮರ್ದಾಳ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಹರೀಶ್ ಕೋಡಂದೂರು, ಪ್ರಮುಖರಾದ ದಯಾನಂದ ಗೌಡ ಆರಿಗ, ಸುಪ್ರೀತ್ ಆಮೈ ಬಿಳಿನೆಲೆ, ಕಾರ್ತಿಕ್ ಪಿಜಕಳ, ರಮೇಶ್ ಕೊಲ್ಲೆಸಾಗು, ರಾಘವ ಕಳಾರ, ದೇವಿಪ್ರಸಾದ್ ಮರ್ದಾಳ, ಪ್ರಮೋದ್ ರೈ ನಂದುಗುರಿ, ಗಣೇಶ್ ವೆಂಕಟಹಿತ್ತಿಲು, ಶಶಿ ಕೋಲಂತಾಡಿ, ವಿನುತ್ ಕಂಪ, ವಿನಯ ಕೇನ್ಯ ಮುಂತಾದವರು ಉಪಸ್ಥಿತರಿದ್ದರು.



ಪುತ್ತೂರಿನ ವಿಧೆಡೆ ಮಂಗಳವಾರ ಭಾರೀ ಗಾಳಿ-ಮಳೆಯಾಗಿದ್ದು, ಕಾವು ಎಂಬಲ್ಲಿ ಹಾದುಹೋಗಿರುವ ಹೈಟೆನ್ಶನ್ ತಂತಿಗೆ ಮರ ಬಿದ್ದು ಹಾನಿ ಸಂಭವಿಸಿದೆ.

ಮೊದಲ ಮಳೆಗೆ ಪುತ್ತೂರಿನಲ್ಲಿ ವಿದ್ಯುತ್ ವ್ಯತ್ಯಯ | ಮೆಸ್ಕಾಂ ಅಧಿಕಾರಿಗಳ ಜೊತೆ ಶಾಸಕ ಅಶೋಕ್ ರೈ ಸಭೆ

ವಿದ್ಯುತ್ ಸಮಸ್ಯೆ ಪರಿಹರಿಸಲು ಸಮರೋಪಾದಿಯಲ್ಲಿ ಕ್ರಮಕೈಗೊಳ್ಳಲು ಸೂಚನೆ

ಪುತ್ತೂರು: ಪುತ್ತೂರಿನಲ್ಲಿ ಈ ವರ್ಷದ ಮೊದಲ ಮಳೆಗೆ 15ರಿಂದ 200 ವಿದ್ಯುತ್ ಕಂಬಗಳು ಧರಾಶಾಯಿಯಾಗಿದ್ದು, ಮರಗಳು ಬಿದ್ದು ವಿದ್ಯುತ್ ತಂತಿಗಳು ತುಂಡಾದ ಕಾರಣ ಕಳೆದ ಮೂರು ದಿನಗಳಿಂದ ನಗರ ವ್ಯಾಪ್ತಿಯಲ್ಲಿ ವಿದ್ಯುತ್ ಸಮಸ್ಯೆಯಾಗಿದೆ. ಎಲ್ಲೆಲ್ಲಿ ವಿದ್ಯುತ್ ಸಮಸ್ಯೆ ಇದೆಯೋ ಅಲ್ಲೆಲ್ಲಾ ಸ್ಪಂದಿಸುವ ಕೆಲಸವನ್ನು ಮೆಸ್ಕಾಂ ಸಿಬಂದಿ ಮಾಡುತ್ತಿದ್ದಾರೆ. ಬಹುತೇಕ ಕಡೆಗಳಲ್ಲಿ ಸಮಸ್ಯೆ ಇತ್ಯರ್ಥಪಡಿಸಲಾಗಿದೆ ಎಂದು ಪುತ್ತೂರು ಶಾಸಕ ಅಶೋಕ್ ರೈ ತಿಳಿಸಿದ್ದಾರೆ.



ಸೋಮವಾರ ಶಾಸಕರ ಕಚೇರಿಯಲ್ಲಿ ವಿದ್ಯುತ್ ಸಮಸ್ಯೆ ಬಗ್ಗೆ ಚರ್ಚಿಸಲು ಏರ್ಪಡಿಸಲಾಗಿದ್ದ ಮೆಸ್ಕಾಂ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು. ಸಮಸ್ಯೆ ಬಗ್ಗೆ ಪೂರ್ತಿ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ಸಮಸ್ಯೆ ಪರಿಹಾರಕ್ಕೆ ಎರಡು ಸೆಕ್ಷನ್‌ಗಳನ್ನು ಮಾಡಲಾಗಿದ್ದು ಒಂದು ಸೆಕ್ಷನ್‌ನಲ್ಲಿ 60 ಮಂದಿ ಇದ್ದಾರೆ. ಒಟ್ಟು 120 ಸಿಬಂದಿ ಸಮರೋಪಾದಿಯಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ ಎಂದು ತಿಳಿಸಿದರು.

ಪುತ್ತೂರು ನಗರಸಭಾ ವ್ಯಾಪ್ತಿಯ ಬನ್ನೂರು, ಬೇರಿಕೆ, ಜಿಡೆಕಲ್ಲು, ಬಪ್ಪಳಿಗೆ, ಬಲ್ನಾಡು ಮತ್ತು ಜೈನರಗುರಿಯಲ್ಲಿ ಅತ್ಯಧಿಕ ಹಾನಿಯಾಗಿದೆ. ಹೆಚ್ಚಿನ ಕಡೆಗಳಲ್ಲಿ ಮರ ಬಿದ್ದು ವಿದ್ಯುತ್ ತಂತಿಗಳು ಕಡಿತಗೊಂಡಿವೆ. ಅವುಗಳನ್ನು ಮರು ಜೋಡಿಸುವ ಕೆಲಸವನ್ನು ಮಾಡಲಾಗಿದೆ. ಎರಡು ಕಡೆ ಹೊರತುಪಡಿಸಿ ಉಳಿದ ಕಡೆಗಳಲ್ಲಿ ಕಾಮಗಾರಿ ಪೂರ್ಣಗೊಂಡಿದೆ. ಸಂಜೆಯೊಳಗೆ ದುರಸ್ತಿ ಮಾಡುವಂತೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಮಾಹಿತಿ ನೀಡಿ

ಪುತ್ತೂರು ನಗರಸಭಾ ವ್ಯಾಪ್ತಿಯಲ್ಲಿ ವಿದ್ಯುತ್ ಸಮಸ್ಯೆ ಉಂಟಾದಲ್ಲಿ ಸಾರ್ವಜನಿಕರು 08251-236393, 9480833013ಕ್ಕೆ ಕರೆ ಮಾಡಿ ಮಾಹಿತಿ ನೀಡಿ ಸಹಕರಿಸಿ ಎಂದು ಸಭೆಯಲ್ಲಿದ್ದ ಮೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ರಾಮಚಂದ್ರ, ಕುಂಬ್ರ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಶಿವಶಂಕರ್, ಜೆಇಗಳಾದ ರಾಜೇಶ್, ದುರ್ಗಾಸಿಂಗ್ ತಿಳಿಸಿದರು.

ಸ್ವಲ್ಪ ಸಮಸ್ಯೆ ಆಗಿದೆ

ಮಳೆಗಾಲ ಪ್ರಾರಂಭದಲ್ಲಿ ಸ್ವಲ್ಪ ಸಮಸ್ಯೆಯಾಗಿದೆ. ಮೆಸ್ಕಾಂನಲ್ಲಿ ಸಿಬಂದಿ ಕೊರತೆಯಿಲ್ಲ. ಬೇಸಿಗೆಯಲ್ಲಿ ಜೋತು ಬಿದ್ದ ಕೇಬಲ್‌ಗಳು ಕೆಲವೊಮ್ಮೆ ಮಳೆ ಬರುವ ವೇಳೆ ಕಡಿತಗೊಳ್ಳುತ್ತದೆ. ಈ ಕಾರಣಕ್ಕೆ ಶಾರ್ಟ್ ಆಗಿ ಕೆಲವು ಕಡೆಗಳಲ್ಲಿ ಟ್ರಾನ್ಸ್‌ಫಾರ್ಮರ್ ಕೂಡಾ ಕೆಟ್ಟು ಹೋಗಿದೆ. ಎಲ್ಲೆಲ್ಲಿ ಸಮಸ್ಯೆಗಳಿವೆಯೋ ಅಲ್ಲಿಗೆಲ್ಲಾ ತೆರಳಿ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುವಂತೆ ಮೆಸ್ಕಾಂಗೆ ಸೂಚನೆ ನೀಡಿರುವುದಾಗಿ ಶಾಸಕರು ತಿಳಿಸಿದರು. ವಿದ್ಯುತ್ ಇಲ್ಲದೆ ಕೆಲವೊಂದು ಕಡೆ ರೋಗಿಗಳಿಗೂ ತೊಂದರೆಯುಂಟಾಗಿದ್ದು, ನನ್ನ ಗಮನಕ್ಕೆ ಬಂದಿದೆ. ಮುಂದೆ ಆ ರೀತಿಯಾಗದಂತೆ ಮುನ್ನೆಚ್ಚರಿಕೆ ವಹಿಸುವಂತೆ ಮೆಸ್ಕಾಂಗೆ ತಿಳಿಸಿದ್ದೇನೆ ಎಂದು ಹೇಳಿದರು.

ಸುತ್ತಮುತ್ತ

ಟೆಂಡರ್ ಆಹ್ವಾನ

ಕಾಸರಗೋಡು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿಯ ಅಧೀನದಲ್ಲಿರುವ ಪರಪ್ಪ ಹೆಚ್ಚುವರಿ ಐಸಿಡಿಎಸ್ ಯೋಜನೆಯಲ್ಲಿ ಅಧಿಕೃತ ಉದ್ದೇಶಗಳಿಗಾಗಿ ಬಾಡಿಗೆಗೆ ವಾಹನಗಳ ಒದಗಿಸಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆ ದಿನ ಮೇ 22 ಮಧ್ಯಾಹ್ನ 2 ಗಂಟೆ. ಆದೇ ದಿನ ಅಪರಾಹ್ನ 3 ಗಂಟೆಗೆ ಟೆಂಡರ್ ತೆರೆಯಲಾಗುತ್ತದೆ. ಮಾಹಿತಿಗೆ ಮೊ.ಸಂ. 9745251914, 8943141553 ಕರೆ ಮಾಡಬಹುದು.

ನಾಳೆ ವರ್ಷಾವಧಿ ನೇಮ

ಉಪ್ಪಳ: ಹೇರೂರು ಬಜೆ ಕುಟುಂಬಸ್ಥರ ಮನೆಯಲ್ಲಿ ಮೇ 14ರಂದು ಸತ್ಯನಾರಾಯಣ ಪೂಜೆಯೊಂದಿಗೆ ಧೂಮಾವತಿ, ರಕ್ತೇಶ್ವರಿ ಹಾಗೂ ಪರಿವಾರ ದೈವಗಳಿಗೆ ವರ್ಷಾವಧಿ ನೇಮ ಜರಗಲಿದೆ.

ಮೇ 13: ಅಖಂಡ ಏಕಾಹ ಭಜನೆ, ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ

ಪೆರ್ಲ: ಪೆರ್ಲ ಶ್ರೀ ಸತ್ಯನಾರಾಯಣ ಮಂದಿರದಲ್ಲಿ ಮೇ 13ರಂದು ಅಖಂಡ ಏಕಾಹ ಭಜನೆ ಮತ್ತು ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ವೇ.ಮೂ. ಶುಳುವಾಲಮೂಲೆ ಶಿವಸುಬ್ರಮಣ್ಯ ಭಟ್ಟರ ನೇತೃತ್ವದಲ್ಲಿ ನಡೆಯಲಿದೆ. ಬೆಳಿಗ್ಗೆ 6.06ಕ್ಕೆ ದೀಪ ಪ್ರತಿಷ್ಠೆ ಸಾಮೂಹಿಕ ಪ್ರಾರ್ಥನೆ, ಭಜನಾ ತಂಡಗಳಿಂದ ಏಕಾಹ ಭಜನೆ, ಸಂಜೆ 5.30ಕ್ಕೆ ಶ್ರೀ ಸತ್ಯನಾರಾಯಣ ಪೂಜೆ ಆರಂಭ, ಪ್ರಸಾದ ವಿತರಣೆ, ಮೇ 14ರಂದು ಬೆಳಿಗ್ಗೆ 5ರಿಂದ ಸಾಮೂಹಿಕ ಭಜನೆ ನಡೆಯಲಿದೆ.

ಮಕ್ಕಳಿಗೆ ಉಚಿತ ಪ್ರಯಾಣ ಸೌಲಭ್ಯ ನೀಡಲು ಸಿಸಿಡಬ್ಲ್ಯೂಒ ಆಗ್ರಹ

ಕಾಸರಗೋಡು: ಕೇರಳದಲ್ಲಿ ಎಲ್ಲಾ ಮಕ್ಕಳಿಗೂ ಉಚಿತ ಬಸ್ ಪ್ರಯಾಣ ಸೌಕರ್ಯ ಏರ್ಪಡಿಸಬೇಕೆಂದು ಚೈಲ್ಡ್ ಕೇರ್ ಆ್ಯಂಡ್ ವೆಲ್ಫೇರ್ ಆರ್ಗನೈಸೇಸ್ ಆಗ್ರಹಿಸಿದೆ. ಹೊಸ ಸರಕಾರ ಅಧಿಕಾರಕ್ಕೇರಿದ ಮೇಲೆ ಚುನಾವಣಾ ಪ್ರಣಾಳಿಕೆ ಯಲ್ಲಿ ಘೋಷಿಸಿದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಭರವಸೆ ಜಾರಿಗೊಳಿಸಬೇಕೆಂದು ಅದರ ಜೊತೆಯಲ್ಲಿ ಮಕ್ಕಳಿಗೂ ಈ ಸೌಲಭ್ಯ ಮಂಜೂರು ಮಾಡಬೇಕೆಂದು ಕಲ್ಲಿಕೋಟೆಯಲ್ಲಿ ಜರಗಿದ ರಾಷ್ಟ್ರೀಯ ಆಡಳಿತ ಸಮಿತಿ ಸಭೆ ಒತ್ತಾಯಿಸಿತು. ಈ ಶೈಕ್ಷಣಿಕ ವರ್ಷದಲ್ಲಿ ಬಡವರಾದ ಮಕ್ಕಳಿಗೆ ಕಲಿಕೋಪಕರಣ ಕಿಟ್ ವಿತರಿಸಲಾಗುವುದು. ಅಲ್ಲದೆ ಆಯ್ಕೆ ಮಾಡಿದ ಶಾಲೆಯೊಂದರಲ್ಲಿ ಸಿಸಿಟಿವಿ ಕ್ಯಾಮರಾ ಸ್ಥಾಪಿಸಲು ಸಭೆ ತೀರ್ಮಾನಿಸಿದೆ. ಸಿಸಿಡಬ್ಲ್ಯೂಒ ಅಧ್ಯಕ್ಷ ಸುನಿಲ್ ಮಾಳಿಕ್ಕಾಲ್ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಮನೋಜ್ ತೃಪುಮಿತ್ತರ, ಉಮ್ಮುಕುಲ್ಸು ಉಮ್ಮರ್ ಪಾಡಲಡ್ಕ, ಶಾಜಿ ಕಲ್ಲಿಕೋಟೆ, ಜಯಪ್ರಸಾದ್ ಪಾವಡ್ಕ, ಜಂಶೀರ್ ಮತ್ತಿತರರಿದ್ದರು.

ಮೇ 21-24: ನಾಟಕೋತ್ಸವ

ಕಾಸರಗೋಡು: ಕೇಂದ್ರ ಸರಕಾರದ ಸಾಂಸ್ಕೃತಿಕ ಇಲಾಖೆ ಮತ್ತು ರಂಗಶಂಕರ ಬೆಂಗಳೂರು ಇದರ ಸಹಯೋಗದಲ್ಲಿ ಮೇ 21ರಿಂದ 24ರ ವರೆಗೆ ರಾತ್ರಿ 7 ಗಂಟೆಗೆ ಕಾಸರಗೋಡು ಪಿಲಿಕುಂಜೆ ನಗರಸಭಾ ಟೌನ್‌ಹಾಲ್‌ನಲ್ಲಿ ನಾಟಕೋತ್ಸವ ಜರಗಲಿದೆ. ಇದರ ಅಂಗವಾಗಿ ಕನ್ನಡ, ಮಲೆಯಾಳ, ತುಳು ರಂಗಗೀತೆಗಳ ಮತ್ತು ಏಕಪಾತ್ರಾಭಿನಯ ಸ್ಪರ್ಧೆ ಏರ್ಪಡಿಸಲಾಗಿದೆ. 17ವರ್ಷಕ್ಕಿಂತ ಕೆಳಗಿನ ಹಾಗೂ ಮೇಲ್ಪಟ್ಟವರು ಎಂಬ ಎರಡು ವಿಭಾಗದಲ್ಲಿ ನಡೆಯುವ ಸ್ಪರ್ಧೆಗೆ ಮೇ 15ರ ಮುಂಚಿತವಾಗಿ ಹೆಸರು ನೋಂದಾಯಿಸಬಹುದು. ಪಿ.ದಿವಾಕರ ಅಶೋಕನಗರ ಅವರ ಮೊ.ಸಂ. 9495104563ರಲ್ಲಿ ಸಂಪರ್ಕಿಸಿ ನೋಂದಾಯಿಸಬಹುದು.

ಮೈತ್ರಿ ಪೈಕದಿಂದ ವೈದ್ಯಕೀಯ ಶಿಬಿರ

ಕಾಸರಗೋಡು: ಪೈಕ ಮೈತ್ರಿ ಸಾಂಸ್ಕೃತಿಕ ವೇದಿಕೆ ಆಶ್ರಯದಲ್ಲಿ ಸುಳ್ಯ ಕೆವಿಜಿ ವೈದ್ಯಕೀಯ ಕಾಲೇಜು, ಆಸ್ಪತ್ರೆ ಹಾಗೂ ಮುಳ್ಳೇರಿಯ ಲಯನ್ಸ್ ಕ್ಲಬ್ ಇವುಗಳ ಸಹಕಾರದೊಂದಿಗೆ ಬಾಲಡ್ಕದಲ್ಲಿ ವೈದ್ಯಕೀಯ ಶಿಬಿರ ಜರಗಿತು. ಶಿಬಿರವನ್ನು ಬದಿಯಡ್ಕ ಪೊಲೀಸ್ ಇನ್‌ಸ್ಪೆಕ್ಟರ್ ಆರ್.ಪಿ.ಅನೂಪ್‌ಕೃಷ್ಣ ಉದ್ಘಾಟಿಸಿದರು. ಲಯನ್ಸ್ ಕ್ಲಬ್ ಉಪಾಧ್ಯಕ್ಷ ಟಿ.ಎನ್.ಮೋಹನನ್ ಅಧ್ಯಕ್ಷತೆ ವಹಿಸಿದ್ದರು. ಪಂ. ಸದಸ್ಯೆ ಪಿ.ಶೈಲಜಾ, ಸುಳ್ಯ ನೆಹರೂ ಕಾಲೇಜು ಪ್ರಾಂಶುಪಾಲ ಡಾ.ಎಂ.ಎಂ.ರುದ್ರಕುಮಾರ್, ಡಾ. ಅನಿರುದ್ಧ್, ಸಹಾಯಕ ಪ್ರಾಧ್ಯಾಪಕ ವಿ.ಶ್ರೀಧರ, ಶಾಫಿ ಚೂರಿಪಳ್ಳ, ಹನೀಫ್ ಕರಿಂಪಳ್ಳ, ಬಿ.ಕೆ.ಬಶೀರ್ ಪೈಕ, ಶೇಖರನ್ ನಾಯರ್ ಉಪಸ್ಥಿತರಿದ್ದರು. ವಿವಿಧ ವಿಭಾಗಗಳಲ್ಲಾಗಿ 15ರಷ್ಟು ವೈದ್ಯರು ರೋಗಿಗಳ ತಪಾಸಣೆ ನಡೆಸಿದರು. 200ರಷ್ಟು ರೋಗಿಗಳು ಶಿಬಿರದ ಪ್ರಯೋಜನ ಪಡೆದುಕೊಂಡರು.

ಕುಡಿಯುವ ನೀರು ವಿತರಣೆ ಕುರಿತು ಜಿಲ್ಲಾಮಟ್ಟದ ಸಭೆ | ಕೆ.ಬಾಲಕೃಷ್ಣನ್ ಭರವಸೆ

ಸ್ಥಳೀಯಾಡಳಿತಗಳಿಗೆ ಅನುಕೂಲವಾಗಲಿದೆ ನೀರಿನ ಬಜೆಟ್

ಕಾಸರಗೋಡು: ಬೇಸಿಗೆಯಲ್ಲಿ ಕುಡಿಯುವ ನೀರಿನ ತೀವ್ರ ಕೊರತೆ ಎದುರಿಸಲು ಜಿಲ್ಲೆ ಸಿದ್ಧವಾಗಿದೆ. ಹರಿತ ಕೇರಳಂ ಮಿಶನ್ ಸಿದ್ಧಪಡಿಸಿದ ನೀರಿನ ಬಜೆಟ್‌ನ ಅಂಕಿಅಂಶಗಳ ಪ್ರಕಾರ ಕಳೆದ ಕೆಲವು ವರ್ಷಗಳಿಂದ ಜೂನ್‌ನಿಂದ ಫೆಬ್ರವರಿ ವರೆಗೆ ಜಿಲ್ಲೆಯ ಎಲ್ಲಾ ಸ್ಥಳೀಯಾಡಳಿತಗಳಿಗೆ ನೀರಿನ ಪ್ರಮಾಣ ಹೆಚ್ಚುವರಿಯಾಗಿ ಕಂಡುಬಂದಿದೆ. ಕ್ರಿಯಾ ಯೋಜನೆ ಜಿಲ್ಲಾಸಂಯೋಜಕ ಕೆ.ಬಾಲಕೃಷ್ಣನ್ ಹೇಳಿದ್ದಾರೆ. ಜಿಲ್ಲಾ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಕುಡಿಯುವ ನೀರಿನ ವಿತರಣೆ ಸಂಬಂಧ ನಡೆದ ಜಿಲ್ಲಾಮಟ್ಟದ ಸಭೆಯಲ್ಲಿ ಅವರು ಮಾತನಾಡಿದರು.



ಜಲ ಸಂರಕ್ಷಣಾ ತಾಂತ್ರಿಕ ಸಮಿತಿ ನೇತೃತ್ವದಲ್ಲಿ ಐದು ವರ್ಷಗಳ ಜಲ ಸಂರಕ್ಷಣಾ ಯೋಜನೆಯನ್ನು ಈಗಾಗಲೇ ಸಿದ್ಧಪಡಿಸಲಾಗಿದೆ. ಜಿ.ಪಂ. ಮತ್ತು 38 ಗ್ರಾ.ಪಂ.ಗಳು ನೀರಿನ ಬಜೆಟ್‌ನ್ನು ಸಂಯೋಜಿಸಿವೆ ಮತ್ತು ಸಮಗ್ರ ಜಿಲ್ಲಾ ಜಲ ಬಜೆಟ್‌ನ್ನು ರೂಪಿಸಿವೆ. ಇದರ ಚಟುವಟಿಕೆಗಳನ್ನು ಬ್ಲಾಕ್ ಮತ್ತು ಜಿಲ್ಲಾ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಈ ಅನುಕೂಲಕರ ಪರಿಸ್ಥಿತಿ ಲಾಭ ಪಡೆದುಕೊಂಡು ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಟ್ಯಾಂಕರ್ ಲಾರಿಗಳ ಮೇಲಿನ ಅವಲಂಬನೆಯನ್ನು ಸಂಪೂರ್ಣ ತೆಗೆದುಹಾಕಲು ಜಿಲ್ಲೆ ಸಮಗ್ರ ಕ್ರಿಯಾ ಯೋಜನೆ ರೂಪಿಸುತ್ತಿದೆ.

ಮುಂಗಾರು ಮತ್ತು ಬೇಸಿಗೆ ಮಳೆಯ ಕೊರತೆ, ಜಿಲ್ಲಾ ಗುಡ್ಡಗಾಡು ಮತ್ತು ತೀವ್ರ ಮಣ್ಣಿನ ಸವೆತದಿಂದಾಗಿ ಮಣ್ಣಿನ ನೀರಿನ್ನು ಹೀರಿಕೊಳ್ಳುವ ಸಾಮರ್ಥ್ಯದಲ್ಲಿನ ಇಳಿಕೆ. ಇದರ ಜೊತೆಗೆ ಕೊಳವೆ ಬಾವಿಗಳ ಅತಿಯಾದ ಬಳಕೆ ಅಂತರ್ಜಲ ಕುಸಿತ ಹೆಚ್ಚಿಸುತ್ತದೆ ಮತ್ತು ಉಪ್ಪು ನೀರಿನ ಒಳನುಗ್ಗುವಿಕೆಯಿಂದ ಬೇಸಿಗೆಯಲ್ಲಿ ಅನೇಕ ಮೂಲಗಳಲ್ಲಿ ಶುದ್ಧ ಕುಡಿಯುವ ನೀರು ಲಭ್ಯವಿರುವುದಿಲ್ಲ. ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಅನೇಕ ಪಂ.ಗಳಿಗೆ ಕುಡಿಯುವ ನೀರನ್ನು ಈಗ ಟ್ಯಾಂಕರ್ ಲಾರಿಗಳಲ್ಲಿ ಸರಬರಾಜು ಮಾಡಲಾಗುತ್ತದೆ.

> **ನೂತನ ಜಲ ಸಂರಕ್ಷಣಾ ಚಟುವಟಿಕೆ ಶೀಘ್ರ ಜಾರಿ**
>
> ಜಿಲ್ಲೆಯ ಇತರ ನೂತನ ಜಲ ಸಂರಕ್ಷಣಾ ಚಟುವಟಿಕೆಗಳನ್ನು ಶೀಘ್ರ ಜಾರಿಗೆ ತರಲಾಗುವುದು. ಮೊದಲ ಹಂತದ ಜಲಮೂಲಗಳಲ್ಲಿ ಸೂಕ್ತ ಅಣೆಕಟ್ಟುಗಳ ನಿರ್ಮಿಸಲಾಗುವುದು. ಹರಿಯುವ ನೀರನ್ನು ಮಣ್ಣಿನಲ್ಲಿ ಹರಿಸಲಾಗುವುದು. ವೈಜ್ಞಾನಿಕ ನೀರಿನ ಸಂರಕ್ಷಣೆ -ಜನರ ಪೂರ್ಣ ಭಾಗವ ಹಿಸುವಿಕೆ ಮೂಲಕ ಮುಂದಿನ ದಿನಗಳಲ್ಲಿ ನೀರಿನ ಕೊರತೆ ನಿವಾರಿಸಲು ಜಿಲ್ಲೆ ಸಿದ್ಧವಾಗಿದೆ.
>
> • ಕೆ.ಬಾಲಕೃಷ್ಣನ್, ನವ ಕೇರಳ ಕ್ರಿಯಾ ಯೋಜನೆ ಜಿಲ್ಲಾ ಸಂಯೋಜಕ

ಜಲ ಸಂರಕ್ಷಣೆಗೆ ಉದ್ಯೋಗ ಖಾತರಿ ಯೋಜನೆ

ಅಯ್ಯಂಗಾಳಿ ಮತ್ತು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳ ಸಹಯೋಗದೊಂದಿಗೆ ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಸಮಗ್ರ ಜಲಾನಯನ ಆಧಾರಿತ ಯೋಜನೆ ಜಾರಿಗೆ ತರಲಾಗುವುದು. ಮಣ್ಣು ಸಂರಕ್ಷಣಾ ಇಲಾಖೆಯು ವಿವಿಧ ಸಂಸ್ಥೆಗಳ ಸಹಾಯದಿಂದ ಸ್ಥಳೀಯ ಮಟ್ಟದಲ್ಲಿ ಮಣ್ಣಿನ ನೀರು ಸಂರಕ್ಷಣಾ ಯೋಜನೆಗಳನ್ನು ಜಾರಿಗೊಳಿ ಸುತ್ತಿದೆ. ಇದರ ಭಾಗವಾಗಿ ಮಳೆಗಾಲದಲ್ಲಿ ಹೆಚ್ಚಿನ ಮಳೆನೀರನ್ನು ಮಣ್ಣಿನಲ್ಲಿ ತರುವ ಸಲುವಾಗಿ ಪಾಳುಭೂಮಿಗಳಲ್ಲಿ ಮಳೆ ಹೊಂಡ ಮತ್ತು ಜಲಾನಯನ ಪ್ರದೇಶಗಳ ನಿರ್ಮಿಸುವ ಗುರಿ ಹೊಂದಿದೆ. ತೆಂಗಿನಕಾಯಿ ಮತ್ತು ಅಡಿಕೆ ತೋಟಗಳಲ್ಲಿ ವೈಜ್ಞಾನಿಕ ಮಣ್ಣು-ಜಲ ಸಂರಕ್ಷಣಾ ಚಟುವಟಿಕೆಗಳನ್ನು ಕೈಗೊಳ್ಳುವುದರ ಜೊತೆಗೆ ನೀರು ಮಣ್ಣನ್ನು ತಲುಪಲು ಗರಿಷ್ಠ ಅವಕಾಶ ಒದಗಿಸಲು ಉಳುಮೆ, ಮಣ್ಣಿನ ಸೇತುವೆಗಳು, ಹುಲ್ಲಿನ ದಂಡೆಗಳು ಮತ್ತು ಸಣ್ಣ ಚೆಕ್ ಡ್ಯಾಮ್‌ಗಳ ನಿರ್ಮಿಸಲಾಗುವುದು.

ಯೋಜನೆಗಳು

- ನದಿಗಳಲ್ಲಿ ಸಿಹಿನೀರಿನ ಲಭ್ಯತೆ ಖಚಿತಪಡಿಸಿಕೊಳ್ಳಲು ಉಪ್ಪುನೀರಿನ ರಕ್ಷಣಾ ಕಟ್ಟೆಗಳ ಸ್ಥಾಪಿಸುವುದು. ಪಾಲಾಯಿ ರೆಗ್ಯುಲೇಟರ್ ಕಮ್ ಬ್ರಿಡ್ಜ್ ನಿರ್ಮಾಣ ಪೂರ್ತಿಗೊಳಿಸು ವುದರೊಂದಿಗೆ ಕಾರ್ಯಂಕೋಡ್ ನದಿಗೆ ಉಪ್ಪುನೀರು ಪ್ರವೇಶ ತಡೆಯಬಹುದು.
- ಬರಗಾಲದ ತೀವ್ರತೆ ಕಡಿಮೆ ಮಾಡಲು ಎಲ್ಲಾ ಮನೆಗಳು, ಸಂಸ್ಥೆಗಳಲ್ಲಿ ಮಳೆನೀರು ಸಂಗ್ರಹ ಕಡ್ಡಾಯಗೊಳಿಸಲಾಗುವುದು.
- ಸಾಮಾನ್ಯ ಬಾವಿಗಳು ಮತ್ತು ಕೊಳವೆ ಬಾವಿಗಳಿಗೆ ವೈಜ್ಞಾನಿಕ ಮರುಚಾರ್ಜಿಂಗ್ ವ್ಯವಸ್ಥೆ ಪರಿಚಯಿಸುವ ಮೂಲಕ ಕುಡಿಯುವ ನೀರಿನ ಕೊರತೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬಹುದು. ಆ ಮೂಲಕ ಭವಿಷ್ಯದಲ್ಲಿ ಟ್ಯಾಂಕರ್ ಲಾರಿಗಳಲ್ಲಿ ನೀರಿನ ಪೂರೈಕೆ ನಿಲ್ಲಿಸಬಹುದು

ರಾಜ್ಯಮಟ್ಟದ ಕವನ ಸ್ಪರ್ಧೆ: ಪೆರಿಯ ವಿವಿಯ ದರ್ಶನ್ ಪ್ರಥಮ, ಜ್ಯೋತಿರ್ಲಕ್ಷ್ಮೀ ದ್ವಿತೀಯ

ಕಾಸರಗೋಡು: ಮೈಸೂರಿನ 'ಸಮತಾ ಅಧ್ಯಯನ ಕೇಂದ್ರ'ವು ಡಾ.ವಿಜಯಾ ದಬ್ಬೆ ಅವರ ಸ್ಮರಣಾರ್ಥ ಹಮ್ಮಿಕೊಂಡಿದ್ದ 2026ನೇ ಸಾಲಿನ ರಾಜ್ಯಮಟ್ಟದ ಕವನ ಸ್ಪರ್ಧೆಯಲ್ಲಿ ಕೇರಳ ಕೇಂದ್ರೀಯ ವಿ.ವಿ. ಕನ್ನಡ ವಿಭಾಗದ ವಿದ್ಯಾರ್ಥಿಗಳು ಪ್ರಮುಖ ಬಹುಮಾನ ಪಡೆದುಕೊಂಡಿದ್ದಾರೆ.





ಈ ಸ್ಪರ್ಧೆಯಲ್ಲಿ ದ್ವಿತೀಯ ಎಂ.ಎ. ವಿದ್ಯಾರ್ಥಿ ದರ್ಶನ್ ಕುಮಾರ್ ಅವರ 'ವ್ಯಾಕರಣಕ್ಕೊಲಿಯದ ಬಯಲು' ಕವನವು ಪ್ರಥಮ ಬಹುಮಾನ ಪಡೆದರೆ, ಪಿಎಚ್‌ಡಿ ಸಂಶೋಧನಾರ್ಥಿ ಜ್ಯೋತಿರ್ಲಕ್ಷ್ಮಿ ಅವರ 'ದರ್ಪಣ ಸುಂದರಿ ಮತ್ತು ಕನ್ನಡಿಯ ಕಥೆ' ಕವನವು ದ್ವಿತೀಯ ಬಹುಮಾನಕ್ಕೆ ಭಾಜನವಾಗಿದೆ.

ಸಮತಾ ಅಧ್ಯಯನ ಕೇಂದ್ರವು ಈ ಸ್ಪರ್ಧೆಯನ್ನು 20 ರಿಂದ 35 ವರ್ಷದೊಳಗಿನ ಯುವಜನರಿಗಾಗಿ ಆಯೋಜಿಸಿತ್ತು.

> **ಬಹುಮಾನ ವಿತರಣೆ**
>
> ವಿಜೇತರಿಗೆ ಮೇ 31 ಮತ್ತು ಜೂನ್ 1ರಂದು ಮೈಸೂರಿನ ಗೋಕುಲಂನಲ್ಲಿರುವ ಇಂಟರ್ ನ್ಯಾಶನಲ್ ಯೂತ್ ಹಾಸ್ಟೆಲ್‌ನಲ್ಲಿ ಎರಡು ದಿನಗಳ ಕಾವ್ಯ ಕಮ್ಮಟವನ್ನು ಏರ್ಪಡಿಸಲಾಗಿದೆ. ಜೂನ್ 1ರಂದು ಸಂಜೆ ನಡೆಯುವ ಸಮಾರಂಭದಲ್ಲಿ ಕನ್ನಡದ ಹಿರಿಯ ಸಾಹಿತಿಗಳ ಸಮ್ಮುಖದಲ್ಲಿ ಬಹುಮಾನ ವಿತರಣೆ ನಡೆಯಲಿದೆ.
>
> • ಡಾ. ಸಬಿಹಾ ಭೂಮಿ ಗೌಡ, ಸಂಸ್ಥೆಯ ಅಧ್ಯಕ್ಷ



ಕಾಸರಗೋಡಿನ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ 5 ದಶಕಗಳಿಗೂ ಅಧಿಕ ಕಾಲ ಪ್ರಧಾನ ಅರ್ಚಕರಾಗಿ ಸೇವೆ ಸಲ್ಲಿಸಿ ವಿಶ್ರಾಂತ ಜೀವನದಲ್ಲಿದ್ದು ಇತ್ತೀಚೆಗೆ ನಿಧನರಾದ ರಾಧಾಕೃಷ್ಣ ಅಡಿಗರ ಸೋಮವಾರ ನಡೆದ ವೈಕುಂಠ ಸಮಾರಾಧನೆಗೆ ಪಂದಳ ರಾಜಮನೆತನದ ಶ್ರೀ ನಾರಾಯಣ ರಾಜವರ್ಮಾ ಅವರು ಆಗಮಿಸಿ ಮನೆಯವರಿಗೆ ಸಾಂತ್ವನ ಹೇಳಿ ನುಡಿನಮನ ಸಲ್ಲಿಸಿದರು. ಅವರನ್ನು ಕಾಸರಗೋಡು ಶ್ರೀ ಧರ್ಮಶಾಸ್ತಾ ಸೇವಾ ಸಂಘದ ಕಾರ್ಯಾಧ್ಯಕ್ಷ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ ಶಾಲು ಹೊದೆಸಿ ಸ್ವಾಗತಿಸಿದರು. ಶಂಕರನಾರಾಯಣ ಅಡಿಗ, ನಾರಾಯಣ ಗುರುಸ್ವಾಮಿ ಉದಯಗಿರಿ ಕೆ.ಕೆ.ಮಯ್ಯ, ನೀರ್ಚಾಲು ಜೊತೆಗಿದ್ದರು.

ಮನಸೂರೆಗೊಂಡ ದಕ್ಷಿಣ ಅಮೆರಿಕಾ ಕಲಾವಿದೆ ಮಂಜರಿಯ ಭರತನಾಟ್ಯ

ಕಾಸರಗೋಡು: ಬೇಕಲ ಗೋಕುಲಂ ಗೋಶಾಲೆಯಲ್ಲಿ ಆಯೋಜಿಸಲಾಗಿರುವ ವೈಶಾಖ ನಟನಂ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ದಕ್ಷಿಣ ಅಮೆರಿಕಾದ ಪೆರು ದೇಶದ ಕಲಾವಿದೆ ಅನಂಗ ಮಂಜರಿ ಗೊನ್ಸಾಲೇಸ್ ಅವರು ನಂದಿ ಮಂಟಪದಲ್ಲಿ ಭರತನಾಟ್ಯ ಪ್ರದರ್ಶಿಸಿದರು.



ಗೊನ್ಸಾಲೇಸ್ ಅವರ ಅಭಿನಯ ಮತ್ತು ತಾಳಲಯಬದ್ಧ ನೃತ್ಯ ಪ್ರದರ್ಶನವು ನೆರೆದಿದ್ದ ಕಲಾಭಿಮಾನಿಗಳ ಮನಸೂರೆಗೊಂಡಿತು.

ಡಾ.ಜಾನಕಿ ರಂಗರಾಜ್ ಅವರ ಶಿಷ್ಯೆಯಾಗಿರುವ ಅವರು, ಮುಂದಿನ ವರ್ಷದ ವೈಶಾಖ ನಟನಂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಆಶಯದೊಂದಿಗೆ ನೃತ್ಯ ನಮನ ಸಲ್ಲಿಸಿದರು. ಹೊಂಗ್‌ಕಾಂಗ್‌ನಿಂದ ಆಗಮಿಸಿದ್ದ ಸಂಜಯ್ ವಡವಳ್ಳಿ ಅವರು ನಂದಿ ಮಂಟಪದಲ್ಲಿ ನೃತ್ಯಾರ್ಚನೆ ನಡೆಸಿಕೊಟ್ಟರು.

ಮುಳಿಯ ಕುಟುಂಬದ ಆದ್ಯ ಸುಲೋಚನಾ, ಶಾರ್ವರಿ ಮಯ್ಯ, ಮೈಸೂರಿನ ಡಾ.ಕೆ. ಕುಮಾರ್ ಸೇರಿದಂತೆ ಹಲವು ಗಣ್ಯ ಕಲಾವಿದರು ನೃತ್ಯ ವೈವಿಧ್ಯ ಪ್ರಸ್ತುತಪಡಿಸಿದರು.

ನೃತ್ಯೋತ್ಸವದ ಅಂಗವಾಗಿ ನಂದಿ ಮಂಟಪ ಮತ್ತು ಧೇನು ಮಂಟಪಗಳಲ್ಲಿ ಭರತನಾಟ್ಯ, ಮೋಹಿನಿಯಾಟ್ಟಂ, ಕೂಚುಪುಡಿ, ಕೇರಳ ನಟನಂ, ಕಥಕ್ ಹಾಗೂ ತಿರುವಾತಿರಕ್ಕಳಿ ಸೇರಿದಂತೆ ವಿವಿಧ ಶಾಸ್ತ್ರೀಯ, ಸಾಂಪ್ರದಾಯಿಕ ನೃತ್ಯ ಪ್ರಕಾರಗಳು ಸಾಂಗವಾಗಿ ನೆರವೇರಿತು.

ಪೆರಡಾಲ ಶ್ರೀ ಉದನೇಶ್ವರ ದೇವಳಕ್ಕೆ ಶೃಂಗೇರಿ ಮಠದ ಶ್ರೀ ಜಗದ್ಗುರು ಭೇಟಿ



ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ಕ್ಷೇತ್ರಕ್ಕೆ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶಂಕರಾಚಾರ್ಯ ಶ್ರೀ ವಿಧುಶೇಖರ ಭಾರತೀ ಶ್ರೀಪಾದಂಗಳ ಭೇಟಿ ನೀಡಿದರು.

ಪೂರ್ಣಕುಂಭ ಸ್ವಾಗತ

ಈ ಸಂದರ್ಭ ಆಡಳಿತ ಮಂಡಳಿಯ ಸದಸ್ಯರು, ಎಲ್ಲಾ ಸಮಿತಿಯ ಸದಸ್ಯರು, ಭಕ್ತರು, ವೇದ ಘೋಷ ಸಹಿತ ಮಹಿಳೆ ಯರು ಸೇರಿ ಪೂರ್ಣಕುಂಭ ಸ್ವಾಗತದೊಂದಿಗೆ ಶ್ರೀಗಳನ್ನು ಸ್ವಾಗತಿಸಿದರು. ರಾತ್ರಿ ಪೂಜೆಯ ಶುಭ ಮುಹೂರ್ತದಲ್ಲಿ ಪೆರಡಾಲ ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿ ಕ್ಷೇತ್ರದ ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವ ಕಾರ್ಯಗಳನ್ನು ತಿಳಿದು ಸಂತೋಷ ವ್ಯಕ್ತಪಡಿಸಿದರು. ಆ ಮೇಲೆ ಭಕ್ತರಿಗೆ ಫಲ ಮಂತ್ರಾಕ್ಷತೆ ನೀಡಿ ಅನುಗ್ರಹಿಸಿ ಹರಸಿದರು.

ವೈಭವಯುತ ಉತ್ಸವಗಳು ಕಳೆದ ಬಳಿಕ ಶ್ರೀ ಗುರುಗಳ ಪಾದ ಸ್ಪರ್ಶದಿಂದ ಪೆರಡಾಲದ ಭಕ್ತರು ಕೃತಾರ್ಥರಾದರು.

ಈ ಸಂದರ್ಭದಲ್ಲಿ ಕ್ಷೇತ್ರ ಆಡಳಿತ ಮೊಕ್ತೇಸರ ವಕೀಲ ವೆಂಕಟ್ರಮಣ ಭಟ್ ಚಂಬಲ್ತಿ ಮಾರು, ಕ್ಷೇತ್ರ ಪ್ರಧಾನ ಅರ್ಚಕ ಶಿವರಾಮ ಭಟ್ ಪೆರಡಾಲ, ಮೊಕ್ತೇಸರ ಜಗನ್ನಾಥ ರೈ, ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ, ಕೋಶಾಧಿಕಾರಿ ಸೂರ್ಯನಾರಾಯಣ ಬಿ., ರಕ್ಷಾಧಿಕಾರಿಗಳಾದ ಗೋಪಾಲಕೃಷ್ಣ ಪೈ, ಕೃಷ್ಣಮೂರ್ತಿ ಪುದುಕೋಳಿ, ಗಣೇಶ ಪ್ರಸಾದ್ ಕಡಪ್ಪು, ಡಾ.ಶ್ರೀಶಕುಮಾರ್ ಪಂಜಿತ್ತಡ್ಕ, ಸತೀಶ್‌ಕುಮಾರ್ ಪುದ್ಯೋಡು, ಜಯಶಂಕರ್ ಪಿ.ಎಸ್., ಮಾಜಿ ಮೊಕ್ತೇಸರರಾದ ಪಿ.ಜಿ.ಚಂದ್ರಹಾಸ ರೈ ಪೆರಡಾಲ ಗುತ್ತು, ವಿವಿಧ ಸಮಿತಿ ಪದಾಧಿಕಾರಿಗಳು ಹಾಗೂ ಊರ ಹತ್ತು ಸಮಸ್ತರು ಉಪಸ್ಥಿತರಿದ್ದರು.

ಚೆರುವತ್ತೂರು-ಮಟ್ಟಲಾಯಿ ರಾಷ್ಟ್ರೀಯ ಹೆದ್ದಾರಿ ಬಿರುಕು: ಅಧಿಕಾರಿಗಳಿಂದ ಪರಿಶೀಲನೆ



ಕಾಸರಗೋಡು: ಚೆರುವತ್ತೂರು -ಮಟ್ಟಲಾಯಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿರುಕು ಉಂಟಾಗಿರುವ ಕುರಿತು ತನಿಖಾ ವರದಿ ಸಲ್ಲಿಸಲು ಕಾಸರಗೋಡು ಜಿಲ್ಲಾಧಿಕಾರಿ ನೇಮಿಸಿದ ಅಧಿಕಾರಿಗಳ ತಂಡ ಮಂಗಳವಾರ ಸ್ಥಳ ಪರಿಶೀಲನೆ ನಡೆಸಿತು.

ಕಾಞಂಗಾಡು ಆರ್‌ಡಿಒ ಪ್ರತಿನಿಧಿ ಹಿರಿಯ ಅಧೀಕ್ಷಕ ಇ.ಎಂ.ಬಿಜು, ಹೊಸದುರ್ಗ ತಹಶೀಲ್ದಾರ್ ಪಿ.ಕೆ.ಪ್ರೇಮಾನಂದ್, ಉಪ ತಹಶೀಲ್ದಾರ್ ಪಿ.ವಿ.ತುಳಸಿರಾಜ್, ಮಣ್ಣು ಸಂರಕ್ಷಣಾ ಮೇಲ್ವಿಚಾರಕ ಕೆ.ನಜಿಬುದ್ದೀನ್, ರಮ್ಯಾ ಎನ್., ಗಣಿ ಮತ್ತು ಭೂವಿಜ್ಞಾನ ಸಹಾಯಕ ಭೂವಿಜ್ಞಾನಿ ಅಜಿತ್ ಎಲ್., ಅಮೃತಾ ಕೆ., ಚಂದೇರ ಪೊಲೀಸ್ ಇನ್‌ಸ್ಪೆಕ್ಟರ್ ಶಿಜು ಎಂ.ವಿ., ವಿಜಯನ್ ಎಂ., ಲೋಕೋಪಯೋಗಿ ಇಲಾಖೆ ಸಹಾಯಕ ಇಂಜಿನಿಯರ್ ಸುನೀಲ್ ಕುಮಾರ್, ಎಸ್.ಶಾಜಿ ತೈಲ್, ಪಿಲಿಕ್ಕೋಡ್ ಪಂಚಾಯತ್ ಕಾರ್ಯದರ್ಶಿ ಮಧುಸೂದನನ್, ಚೆರುವತ್ತೂರು ಗ್ರಾಮ ಪಂಚಾಯತ್ ಕಾರ್ಯದರ್ಶಿ ಜಿ.ವಿ. ಅರುಣಮ್ಮ ಮೊದಲಾದವರು ಈ ಸಂದರ್ಭದಲ್ಲಿ ಜೊತೆಗಿದ್ದರು.

ಸಮಸ್ಯೆಗಳ ಮಂಡನೆ

ಪಿಲಿಕೋಡು ಗ್ರಾಮ ಪಂಚಾಯತ್ ಅಧ್ಯಕ್ಷ ಇ.ಕುಂಞಿರಾಮನ್ ಸಮಸ್ಯೆಗಳನ್ನು ಮಂಡಿಸಿದರು. ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಕೆ.ಹರಿದಾಸ್ ಹಾಗೂ ಇತರ ಸಾರ್ವಜನಿಕ ಪ್ರತಿನಿಧಿಗಳು ಹಾಗೂ ಗುತ್ತಿಗೆ ಕಂಪೆನಿ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಏತಡ್ಕ ಟ್ರಸ್ಟ್‌ನಿಂದ ಪುನರ್ಜೀವನ ಆ್ಯಂಬುಲೆನ್ಸ್ ಸೇವೆ ಲೋಕಾರ್ಪಣೆ



ಕಾಸರಗೋಡು: ಗ್ರಾಮೀಣ ಪ್ರದೇಶಗಳ ಜನರ ಆರೋಗ್ಯಕ್ಕೆ ತುರ್ತು ಸಹಾಯಕವಾಗುವ ಉದ್ದೇಶದಿಂದ ಏತಡ್ಕದ ಸಮಾನ ಮನಸ್ಕರ ಸಂಘಟನೆಯಾದ ದುರ್ಗಾ ಚಾರಿಟೇಬಲ್ ಟ್ರಸ್ಟ್‌ನಿಂದ ಪುನರ್ಜೀವನ ಆ್ಯಂಬುಲೆನ್ಸ್ ಸೇವೆ ಲೋಕಾರ್ಪಣೆ ನಡೆಯಿತು.

ಖ್ಯಾತ ವೈದ್ಯ ಡಾ.ಮೋಹನ್‌ಕುಮಾರ್ ವಾಹನಕ್ಕೆ ಚಾಲನೆ ನೀಡಿದರು. ದುರ್ಗಾ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಸುರೇಶ್‌ಕುಮಾರ್ ಎಸ್. ಕೆ.ಅಧ್ಯಕ್ಷತೆ ವಹಿಸಿದ್ದರು.

ಸಂತೋಷ್‌ಕುಮಾರ್ ರೈ ಗಾಡಿಗುಡ್ಡೆ, ಬಾಲಕೃಷ್ಣ ಕೆ. ಕುಂಡಾಪು, ಜಾನ್ ಕ್ರಾಸ್ತಾ ಅಜ್ಜಿಮೂಲೆ, ಮೊಹಮ್ಮದ್ ನೀರಡ್ಕ, ವಿಷ್ಣು ಭಟ್ ಪಡಿಕ್ಕಲ್, ಗೋಪಾಲಕೃಷ್ಣ ಭಟ್ ಅಳಕ್ಕೆ ಮೂಸ ನೀರಡ್ಕ, ಕೃಷ್ಣ ಶರ್ಮಾ ಜಿ., ಶೈಲಜಾ ಭಟ್, ಎಜಿಜಬೆತ್ ಕ್ರಾಸ್ತಾ, ನಯನಾ ಕಾನಕಜೆ, ಪಂಚಾಯತ್ ಸದಸ್ಯರಾದ ಮಹೇಶ್ ಅಜ್ಜಿಮೂಲೆ, ನಳಿನಿ ರವಿಶ್ ಏತಡ್ಕ, ಧಾರ್ಮಿಕ ಸಾಮಾಜಿಕ ಮುಂದಾಳು ಹರಿಪ್ರಸಾದ್ ರೈ ಪುತ್ರಕಳ ಮೊದಲಾದವರು ಭಾಗವಹಿಸಿದ್ದರು. ರವೀಶ್ ಏತಡ್ಕ ಸ್ವಾಗತಿಸಿ, ನವೀನ್ ಕುಮಾರ್ ಪುತ್ರಕಳ ವಂದಿಸಿದರು.


ಚಿಗುರುಪಾದೆ ದೈವಸ್ಥಾನದಲ್ಲಿ ಪ್ರತಿಷ್ಠಾ ದಿನಾಚರಣೆ: ದೊಂದಿ ಬೆಳಕಿನಲ್ಲಿ ಕೋಲ



ಮಂಜೇಶ್ವರ: ಚಿಗುರುಪಾದೆ ಬ್ರಹ್ಮಶ್ರೀ ಮೊಗೇರ ಹಾಗೂ ಪರಿವಾರ ದೈವಸ್ಥಾನದಲ್ಲಿ ಪ್ರತಿಷ್ಠಾ ದಿನಾಚರಣೆಯ ಪ್ರಯುಕ್ತ ಬೆಳಿಗ್ಗೆ ಗಣಪತಿ ಹೋಮ, ಕಲಶಾಭಿಷೇಕ, ತಂಬಿಲ ಸೇವೆ ಹಾಗೂ ರಾತ್ರಿ ಶ್ರೀ ಕೊರಗು ತನಿಯ ದೈವದ ವಿಶೇಷ ಹಾಗೂ ಅಪರೂಪವಾದ ದೊಂದಿ ಬೆಳಕಿನಲ್ಲಿ ಕೋಲ ನಡೆಯಿತು.

ದೊಂದಿಯನ್ನು ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ದೀಪ ಪ್ರಜ್ವಲನೆಗೊಳಿಸುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಸಾಮಾಜಿಕ ಕಾರ್ಯಕರ್ತ ಪಿ.ಆರ್. ಶೆಟ್ಟಿ ಕುಳೂರು ಪೊಯ್ಯೆಲು, ದೈವ ಕ್ಷೇತ್ರ ಅಭಿವೃದ್ಧಿ ಅಧ್ಯಕ್ಷ ರಮೇಶ್ ಶೆಟ್ಟಿ ಕುಳಬೈಲು, ದೈವ ಕ್ಷೇತ್ರ ಅಭಿವೃದ್ಧಿ ಸಲಹೆಗಾರ ಟಿ.ಡಿ.ಸದಾಶಿವ ರಾವ್, ಬ್ರಹ್ಮಶ್ರೀ ಮೊಗೇರ ಸೇವಾ ಸಮಿತಿ ಅಧ್ಯಕ್ಷ ನಾರಾಯಣ ಸಿ. ಮೊದಲಾದ ಗಣ್ಯರು ಉಪಸ್ಥಿತರಿದ್ದರು.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಮುದಾಯ ಅಭಿವೃದ್ಧಿ ಯಿಂದ ಶ್ರೀ ಗೋಪಾಲಕೃಷ್ಣ ಸಭಾಭವನ ಶಡ್ರಂಪಾಡಿ ಎಡನಾಡು ಕುಂಬಳೆ ಇಲ್ಲಿಗೆ ಸಭಾಭವನ ನಿರ್ಮಾಣಕ್ಕೆ ಕ್ಷೇತ್ರದಿಂದ ಮಂಜೂರು ಮಾಡಿದ ಅನುದಾನದ ಮಂಜೂರಾತಿ ಪತ್ರವನ್ನು ತಾಲೂ ಕಿನ ಯೋಜನಾಧಿಕಾರಿ ಗಳು ಶಶಿಕಲಾ ಸುವರ್ಣ, ಕುಂಬಳೆ ಜನಜಾಗೃತಿ ವಲಯಾಧ್ಯಕ್ಷರುಮಹೇಶ್ ಪುಣಿಯೂರು ಉಪಸ್ಥಿತಿಯಲ್ಲಿ ಸಮಿತಿ ಅಧ್ಯಕ್ಷರು, ಪದಾಧಿಕಾರಿಗಳಿಗೆ ಹಸ್ತಾಂತರಿಸಲಾಯಿತು.

ಉಬ್ರಂಗಳ ಶ್ರೀ ಶಾಸ್ತಾರ ದೇವಸ್ಥಾನದಲ್ಲಿ 18 ಮೆಟ್ಟಿಲುಗಳಿಗೆ ಹಿತ್ತಾಳೆ ಕವಚದ ಲೋಕಾರ್ಪಣೆ, ಶ್ರೀ ದೇವರ ಭವ್ಯ ಮಹೋತ್ಸವ

ಶಾಸ್ತಾರ ದೇವರ ಸಾನ್ನಿಧ್ಯದ ಫಲವಾಗಿ ನಾಡು ಸಮೃದ್ಧಿಯಾಗಲಿ: ಪಂದಳಂ ಅರಮನೆಯ ನಾರಾಯಣ ವರ್ಮ

ಬದಿಯಡ್ಕ: ಕುಂಬ್ಡಾಜೆ ಬಡಗುಶಬರಿಮಲೆ ಉಬ್ರಂಗಳ ಶ್ರೀ ಮಹಾದೇವ ಪಾರ್ವತಿ ಶ್ರೀ ಶಾಸ್ತಾರ ದೇವಸ್ಥಾನದಲ್ಲಿ 18 ಮೆಟ್ಟಿಲುಗಳಿಗೆ ಹಿತ್ತಾಳೆ ಕವಚದ ಲೋಕಾರ್ಪಣೆ ಹಾಗೂ ಶ್ರೀ ದೇವರ ಭವ್ಯ ಮಹೋತ್ಸವ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಿತು.

ಈ ಸಂದರ್ಭ ನಡೆದ ಧಾರ್ಮಿಕ ಸಭೆಯಲ್ಲಿ ಪಂದಳಂ ಅರಮನೆಯ ನಾರಾಯಣ ವರ್ಮ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿ, ಉಬ್ರಂಗಳ ಕ್ಷೇತ್ರಕ್ಕೆ ಆಗಮಿಸಿದಾಗ ಶಬರಿಮಲೆಯ ಅಯ್ಯಪ್ಪನ ದೇವಾಲಯದಂತೆ ಭಾಸವಾಗುತ್ತಿದೆ. ಶಾಸ್ತಾರ ದೇವರ ಸಾನ್ನಿಧ್ಯದ ಫಲವಾಗಿ ನಾಡು ಸಮೃದ್ಧಿ ಕಾಣಲಿ. ಬಡಗು ಶಬರಿಮಲೆ ಪರಮಪವಿತ್ರ ಧಾರ್ಮಿಕ ಕೇಂದ್ರವಾಗಿ ಮುಂದಿನ ದಿನಗಳಲ್ಲಿ ಜಗತ್ಪ್ರಸಿದ್ಧವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದರು.



ಈ ಸಂದರ್ಭ ನಾರಾಯಣ ವರ್ಮ ಅವರನ್ನು ಕ್ಷೇತ್ರದ ವತಿಯಿಂದ ಅಭಿನಂದಿಸಲಾಯಿತು.

ಜಗದ್ಗುರು ಶಂಕರಾಚಾರ್ಯ ಸಂಸ್ಥಾನ ಶ್ರೀ ಎಡನೀರು ಮಠದ ಪರಮಪೂಜ್ಯ ಶ್ರೀ ಸಚ್ಚಿದಾನಂದ ಭಾರತೀ ಶ್ರೀ ಪಾದಂಗಳವರು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸಮಾಜ ಅಭಿವೃದ್ಧಿಯಾಗಲು ಯುವ ಸಮುದಾಯವು ವಿಶೇಷ ಕಾಳಜಿಯನ್ನು ವಹಿಸಬೇಕು. ಕೇವಲ ಉದ್ಯೋಗಕ್ಕಾಗಿ ಮಾತ್ರ ಜೀವನವನ್ನು ಮಾಡುವುದಲ್ಲ, ನಮ್ಮ ಭವಿಷ್ಯದ ಕುರಿತಾದ ಕಲ್ಪನೆಯನ್ನು ಗಮನದಲ್ಲಿಟ್ಟು ಹಿಂದೂ ಸಮಾಜದಲ್ಲಿ ಮುಂದಿನ ಪೀಳಿಗೆಯ ಮಕ್ಕಳು ಹೆಚ್ಚು ಹೆಚ್ಚು ಜನಿಸಿಬರಬೇಕು ಎಂದು ಶ್ರೀ ಕ್ಷೇತ್ರದ ಗೌರವ ಸಲಹೆಗಾರ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಹೇಳಿದರು.

ಉತ್ಸವ ಸಮಿತಿಯ ಅಧ್ಯಕ್ಷ ಹರಿನಾರಾಯಣ ಶಿರಂತಡ್ಕ ಸಭೆಯ ಅಧ್ಯಕ್ಷತೆ ವಹಿಸಿದ್ದರು. ದೈವಜ್ಞ ಕೆ.ಸಿ.ನಾಗೇಂದ್ರ ಭಾರದ್ವಾಜ್ ಸುರತ್ಕಲ್, ರಾಮಗುರು ಸ್ವಾಮಿ ಉದಯಗಿರಿ, ಹೆಸ್ಕಾಂ, ಧಾರವಾಡ ತಾಂತ್ರಿಕ ನಿರ್ದೇಶಕ ಜಗದೀಶ್ ಎಸ್., ಶ್ರೀ ಕ್ಷೇತ್ರದ ಆಡಳಿತ ಮೊಕ್ತೇಸರ ಡಾ.ಕಿಶೋರ್‌ಕುಮಾರ್ ಕುಣಿಕುಳ್ಳಾಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆಡಳಿತ ಮಂಡಳಿಯ ಪ್ರಧಾನ ಕಾರ್ಯದರ್ಶಿ ಕಿರಣ್‌ಕುಮಾರ್ ಕುಣಿಕುಳ್ಳಾಯ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಉತ್ಸವ ಸಮಿತಿಯ ಕಾರ್ಯದರ್ಶಿ ಸತೀಶ್ ವೈ. ಸ್ವಾಗತಿಸಿ, ಕೋಶಾಧಿಕಾರಿ ರಾಜಶೇಖರ ಪದ್ಮಾರು ವಂದಿಸಿ, ಚಂದ್ರಶೇಖರ ಕುರುಪ್ಪ್ ನಿರೂಪಿಸಿದರು.

18 ಮೆಟ್ಟಿಲುಗಳ ದ್ವಾರಪೂಜೆ

ಶ್ರೀ ಕ್ಷೇತ್ರ ತಂತ್ರಿವರ್ಯ ಬ್ರಹ್ಮಶ್ರೀ ಗಣೇಶ ತಂತ್ರಿ ದೇಲಂಪಾಡಿ ಹಿತ್ತಾಳೆ ಕವಚದ 18 ಮೆಟ್ಟಿಲುಗಳ ದ್ವಾರಪೂಜೆ ನೆರವೇರಿಸಿದರು. ಶ್ರೀ ದೇವರ ಭವ್ಯ ಮಹೋತ್ಸವ ಜರಗಿತು.

> **ಗೌರವ**
>
> 18 ಮೆಟ್ಟಿಲುಗಳಿಗೆ ಅಳವಡಿಸಿದ ಹಿತ್ತಾಳೆ ಕವಚದ ದಾನಿಗಳಾದ ತಾಳಿಪ್ಪಾಡಿ ಜಾಹ್ನವಿ ಶಾಸ್ತ್ರೀ ಬೆಂಗಳೂರು, ಸುರೇಶ್ ಉಳಿಯತ್ತಡ್ಕ ಮತ್ತು ಗಂಗಾಧರನ್ ಮಾರಾರ್ ನೀಲೇಶ್ವರಂ ಅವರನ್ನು ಗೌರವಿಸಲಾಯಿತು. ಮಾಯಿಪ್ಪಾಡಿ ಅರಮನೆಯ ರಘುರಾಮ ವರ್ಮ ಅವರನ್ನು ಸನ್ಮಾನಿಸಲಾಯಿತು.

> **101 ಚೆಂಡೆಗಳ ನಾದ**
>
> 101 ಚೆಂಡೆಗಳ ಏಕಕಾಲದ ಧ್ವನಿಯು ಆಕಾಶವನ್ನೇ ಮುಟ್ಟುವಂತಿದ್ದು, ಭಕ್ತರಲ್ಲಿ ಅಧ್ಯಾತ್ಮದ ಸಂಚಲನ ಮೂಡಿಸಿತು. ವಾದ್ಯಗಳ ಬಡಿತಕ್ಕೆ ತಕ್ಕಂತೆ ಹೆಜ್ಜೆ ಹಾಕುವ ಭಕ್ತರು, ಕ್ಷೇತ್ರದ ದಿವ್ಯ ಪರಿಸರಕ್ಕೆ ಹೊಸ ಕಳೆಯನ್ನು ತಂದಿದ್ದರು. ಮೇಳದ ನಾದವು ಸುತ್ತಮುತ್ತಲಿನ ಪರಿಸರ ವನ್ನು ದೇವಲೋಕದಂತೆ ಪರಿವರ್ತಿಸಿದ್ದು, ಪ್ರತಿಯೊಬ್ಬರ ಮನಸ್ಸಿನಲ್ಲಿ ಭಕ್ತಿಭಾವ ಉಕ್ಕಿ ಹರಿಯುವಂತಾಯಿತು.

ಸುತ್ತಮುತ್ತ

ಖರೀದಿ ವೋಚರ್ ಆಧಾರದಲ್ಲಿ ಕಸ ಎಸೆದ ವ್ಯಕ್ತಿಗೆ ದಂಡ

ಕಾರ್ಕಳ: ಸಾರ್ವಜನಿಕ ಸ್ಥಳದಲ್ಲಿ ಕಸ ಎಸೆದ ವ್ಯಕ್ತಿಗೆ ಒಂದು ಸಾವಿರ ರೂ. ದಂಡವನ್ನು ಮರ್ಣೆ ಗ್ರಾಮ ಪಂಚಾಯತ್ ವಿಧಿಸಿದೆ. ತಾಲೂಕಿನ ಮರ್ಣೆ ಗ್ರಾ.ಪಂ. ವ್ಯಾಪ್ತಿಯಲ್ಲಿ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಅಜೆಕಾರು ಪೇಟೆಯಿಂದ ಎಣ್ಣೆಹೊಳೆವರೆಗೆ ಸ್ವಚ್ಛತಾ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸುಮಾರು 80 ಮಂದಿ ಪಾಲ್ಗೊಂಡು 4 ಕಿ.ಮೀ. ರಾಜ್ಯ ಹೆದ್ದಾರಿಯನ್ನು ಸ್ವಚ್ಛಗೊಳಿಸಿದರು. ಈ ವೇಳೆ ವಿವಿಧ ಕಡೆಗಳಲ್ಲಿ ಜನರು ಎಸೆದಿದ್ದ ತ್ಯಾಜ್ಯವನ್ನು ಸಂಗ್ರಹಿಸಲಾಯಿತು. ಈ ಸಂದರ್ಭ ಹೆಕ್ಕಿದ ಕಸದ ಚೀಲವೊಂದರಲ್ಲಿ ಖರೀದಿ ವೋಚರ್ ಪತ್ತೆಯಾಗಿತ್ತು. ಇದರ ಆಧಾರದಲ್ಲಿ ಕಸ ಎಸೆದವರನ್ನು ಪತ್ತೆಹಚ್ಚಿದ ಗ್ರಾ.ಪಂ. ಸಿಬ್ಬಂದಿ ವತಿಯಿಂದ 1000 ರೂ. ದಂಡ ವಿಧಿಸಿದರು.

ಕುಡಿಯುವ ನೀರಿನ ಸಮಸ್ಯೆ: ಸಹಾಯವಾಣಿ ಸ್ಥಾಪನೆ

ಉಡುಪಿ: ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾದಲ್ಲಿ, ಸಮಸ್ಯೆ ನಿವಾರಣೆ ಕುರಿತು ಜಿಲ್ಲಾ ಮಟ್ಟದಲ್ಲಿ ಸಹಾಯವಾಣಿ ಸಂಖ್ಯೆ: 8217075359 ಅನ್ನು ತೆರೆಯಲಾಗಿದ್ದು ಸಾರ್ವಜನಿಕರು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ ಪ್ರಕಟಣೆ ತಿಳಿಸಿದೆ.

ರೆಡ್‌ಕ್ರಾಸ್‌ನ ವಾರ್ಷಿಕ ಮಹಾಸಭೆ ಮುಂದೂಡಿಕೆ

ಉಡುಪಿ: ಉಡುಪಿಯ ಅಜ್ಜರಕಾಡು ಟೌನ್ ಹಾಲ್ (ಮಿನಿಹಾಲ್) ನಲ್ಲಿ ಮೇ 13ರಂದು ಬೆಳಗ್ಗೆ 10.30ಕ್ಕೆ ನಿಗದಿಯಾಗಿದ್ದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಉಡುಪಿ ಜಿಲ್ಲಾ ಘಟಕದ 2019-2020ರಿಂದ 2025-2026 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದ್ದು, ವಾರ್ಷಿಕ ಮಹಾಸಭೆಯ ಮುಂದಿನ ದಿನಾಂಕವನ್ನು ತಿಳಿಸಲಾಗುವುದು ಎಂದು ರೆಡ್‌ಕ್ರಾಸ್‌ನ ಪ್ರಕಟಣೆ ತಿಳಿಸಿದೆ.

ಮೇ 15ರಂದು ನೇರ ಸಂದರ್ಶನ

ಉಡುಪಿ: ಉಡುಪಿಯ ನಿಟ್ಟೂರಿನ ಆಭರಣ ಮೋಟಾರ್ಸ್ ಪ್ರೈವೇಟ್ ಲಿಮಿಟೆಡ್ ಇಲ್ಲಿ ಮೇ 15ರಂದು ಬೆಳಗ್ಗೆ 10.30 ಕ್ಕೆ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ ನಡೆಯಲಿದೆ. ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ ಹಾಗೂ ಇತರೆ ಪದವಿ ವಿದ್ಯಾರ್ಹತೆಯೊಂದಿಗೆ ಉತ್ತೀರ್ಣರಾದ ಅಭ್ಯರ್ಥಿಗಳು ತಮ್ಮ ಅಂಕಪಟ್ಟಿ, ಸ್ವವಿವರವುಳ್ಳ ರೆಸ್ಯೂಮ್, ಸಿವಿ ಹಾಗೂ ಆಧಾರ್ ಕಾರ್ಡ್ ಪ್ರತಿಯೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾಧಿಕಾರಿ ಸಂಕೀರ್ಣ, ರಜತಾದ್ರಿ, ಮಣಿಪಾಲ, ಉಡುಪಿ ದೂರವಾಣಿ ಸಂಖ್ಯೆ: 8105618291, 9945856670 ಹಾಗೂ 9901472710 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಪ್ರಕಟಣೆ ತಿಳಿಸಿದೆ.

ಇಂದು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ

ಕುಂದಾಪುರ: ಸರ್ಕಾರಿ ಜಾಗವನ್ನು ದುರ್ಬಳಕೆ ಮಾಡಿ ಕಾಂಗ್ರೆಸ್ ಕಟ್ಟಡ ನಿರ್ಮಾಣಕ್ಕೆ ಮುಂದಾಗಿರುವ ರಾಜ್ಯ ಸರಕಾರದ ಧೋರಣೆ ಖಂಡಿಸಿ ಭಾರತೀಯ ಜನತಾ ಪಕ್ಷ ಕುಂದಾಪುರ ಮಂಡಲ ವತಿಯಿಂದ ಬೃಹತ್ ಪ್ರತಿಭಟನೆ ಕುಂದಾಪುರ ಶಾಸ್ತ್ರಿ ಸರ್ಕಲ್ ಬಳಿ ಮೇ 13ರಂದು ಬೆಳಗ್ಗೆ 9.30ಕ್ಕೆ ನಡೆಯಲಿದೆ. ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಬಿಜೆಪಿ ಮಂಡಲ ಅಧ್ಯಕ್ಷ ಸುರೇಶ ಶೆಟ್ಟಿ ಗೋಪಾಡಿ ಮೊದಲಾದವರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಉಡುಪಿ: ಉಡುಪಿ ನಗರಸಭೆಯ ಪ್ರಸಕ್ತ ಸಾಲಿನ ಎಸ್.ಎಫ್.ಸಿ ಮುಕ್ತನಿಧಿಯ ಶೇ. 7.25 ರ ಇತರೆ ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮದಡಿ ಪ್ರಸಕ್ತ ಸಾಲಿನಲ್ಲಿ ಉತ್ತೀರ್ಣರಾದ ಎಸ್ಸೆಸ್ಸೆಲ್ಸಿ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಮೇ 11 ಕೊನೆಯ ದಿನ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಪೌರಾಯುಕ್ತರು, ನಗರಸಭೆ, ಉಡುಪಿ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಕಸದ ತೊಟ್ಟಿ

ಹಸಿ ಕಸ ಮತ್ತು ಒಣ ಕಸ ವಿಂಗಡಣೆಗೆ ಪ್ರತ್ಯೇಕ ತೊಟ್ಟಿಗಳನ್ನು ಅಳವಡಿಸಿದರೆ ಪೌರ ಕಾರ್ಮಿಕರಿಗೆ ಕಸ ವಿಲೇವಾರಿ ಸುಲಭವಾಗಲಿದೆ. ಪ್ರವಾಸಿಗರು ಹೆಚ್ಚು ಸೇರುವ ಬ್ಲಾಕ್ ಸ್ಪಾಟ್ ಪ್ರದೇಶಗಳಲ್ಲಿ ಜಾಗೃತಿ ಮೂಡಿಸಲು ಸಿಬಂದಿ ನೇಮಿಸಬೇಕು. ಕಸ ಎಸೆಯುವವರ ವಿರುದ್ಧ ಶಿಸ್ತು ಕ್ರಮ ಜರಗಿಸಿ, ಅತ್ಯಧಿಕ ದಂಡ ವಿಧಿಸಬೇಕು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ. ತೊಟ್ಟಿಗಳ ಹೊರಗೆ ಬಿದ್ದಿರುವ ಕಸ ಮಳೆ ನೀರಿನೊಂದಿಗೆ ಸಮುದ್ರ ಸೇರುವ ಅಪಾಯವಿದ್ದು, ಈ ಕೂಡಲೇ ಸ್ಥಳೀಯಾಡಳಿತ ಗಮನಹರಿಸಬೇಕು.

ಪಡುಕುತ್ಯಾರು | ಪಟ್ಟಾಭಿಷೇಕ ವರ್ಧಂತ್ಯುತ್ಸವದಲ್ಲಿ ಶ್ರೀ ಕಾಳಹಸ್ತೇಂದ್ರ ಸರಸ್ವತೀ ಸ್ವಾಮೀಜಿ ಬಣ್ಣನೆ

ಅದ್ಭುತ ಶಿಲ್ಪಗಳ ದೇವಾಲಯಗಳು ದೇಶದ ಸಂಸ್ಕೃತಿಯಾಗಿದೆ

ಕಾಪು: ಶಿಲ್ಪ ಎಂಬುದು ವಿಜ್ಞಾನ. ಆಧುನಿಕ ವಿಜ್ಞಾನಗಳಿಗೆ ಸವಾಲಾಗಿರುವ ವಿಶ್ವಕರ್ಮ ಶಿಲ್ಪಿ ಸಮುದಾಯದ ಅದ್ಭುತ ಶಿಲ್ಪಗಳ ದೇವಾಲಯಗಳು ಭಾರತೀಯ ಸಂಸ್ಕೃತಿಯಾಗಿದೆ. ಪ್ರವಾಸೋದ್ಯಮಕ್ಕೆ ಆಧಾರವಾಗಿರುವ ಭಾರತೀಯ ಶಿಲ್ಪ ವೈಭವಗಳ ದೇವಾಲಯಗಳು ಭಾರತ ಸರಕಾರದ ಆದಾಯದ ಮೂಲವೂ ಆಗಿದೆ. ಹಾಗಾಗಿ ಭಾರತೀಯ ಸಂಸ್ಕೃತಿಯೇ ದೇವಾಲಯದ ಸಂಸ್ಕೃತಿ ಶಿಲ್ಪಗಳಾಗಿವೆ ಎಂದು ಪಡುಕುತ್ಯಾರು ಆನೆಗುಂದಿ ಸಂಸ್ಥಾನದ ಶ್ರೀ ಕಾಳಹಸ್ತೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.



ಶ್ರೀಗಳವರು ಪಡುಕುತ್ಯಾರಿನ ಮಹಾಸಂಸ್ಥಾನದಲ್ಲಿ 16ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವದ ವರ್ಧಂತ್ಯುತ್ಸವದ ಸಂದರ್ಭ ಜರಗಿದ ಧಾರ್ಮಿಕ ಸಭೆಯಲ್ಲಿ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ ಸಾಧಕರಿಗೆ ರಾಷ್ಟ್ರೀಯ ಪ್ರಶಸ್ತಿ ಪ್ರದಾನ, ಆನೆಗುಂದಿಶ್ರೀ ಪ್ರಶಸ್ತಿ ವಿತರಣೆ ಹಾಗೂ ಯುವ ಶಿಲ್ಪಿಗಳಿಗೆ ಅಭಿನಂದನಾ ಕಾರ್ಯಕ್ರಮವನ್ನು ನೆರವೇರಿಸಿ ಬಳಿಕ ಅವರು ಆಶೀರ್ವಚನ ನೀಡಿದರು. ಆಸ್ಥಾನ ವಿದ್ವಾಂಸ ವಿದ್ವಾನ್ ಮಹಾ ಮಹೋಪಾಧ್ಯಾಯ ಪಂಜ ಭಾಸ್ಕರ ಭಟ್, ಬ್ರಹ್ಮಶ್ರೀ ವಿದ್ವಾನ್ ಶಂಕರಾಚಾರ್ಯ ಕಡ್ಲಾಸ್ಕರ್ ಪಂಡಿತ್ ಹುಬ್ಬಳ್ಳಿ ಧರ್ಮ ಸಂದೇಶ ನೀಡಿದರು.

ರಾಷ್ಟ್ರೀಯ ಪ್ರಶಸ್ತಿ ಪ್ರದಾನ

ಎಸ್‌ಕೆಎಫ್ ಸಮೂಹ ಸಂಸ್ಥೆಗಳ ಪ್ರಾಯೋಜಕತ್ವದಲ್ಲಿ ಡಾ.ಜಿ. ರಾಮಕೃಷ್ಣ ಆಚಾರ್ ಅಧ್ಯಕ್ಷತೆಯ ರಾಷ್ಟ್ರೀಯ ಪ್ರಶಸ್ತಿ ಸಮಿತಿ ಮತ್ತು ಡಾ. ಬಿ. ಶ್ರೀಕಂಠಾಚಾರ್ ಅವರ ಸಂಚಾಲಕತ್ವದಲ್ಲಿ ಆಯ್ಕೆ ಮಾಡಲಾಗಿರುವ ಚಾಲುಕ್ಯ ಶಿಲ್ಪಿ ಲಿಪಿಕಾರ ಶ್ರೀ ಅಕ್ಷರಮೇರು ದಾಮೋದರಾಚಾರಿ ಸಾಹಿತ್ಯ ಸರಸ್ವತೀ ಸಮ್ಮಾನ್ ರಾಷ್ಟ್ರೀಯ ಪ್ರಶಸ್ತಿಯನ್ನು ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ ಹುಬ್ಬಳ್ಳಿಯ ಈ. ಭೀಮಸೇನ ಬಡಿಗೇರ ಅವರಿಗೆ ಪ್ರಧಾನಿಸಲಾಯಿತು.

ಮಹಾಶಿಲ್ಪಿ ಶ್ರೀ ಗುಂಡನ್ ಅನಿವಾರಿತಾಚಾರಿ ತ್ರಿಭುವನಾಚಾರಿ ರಾಷ್ಟ್ರೀಯ ಪ್ರಶಸ್ತಿಯನ್ನು ಕಲ್ಬುರ್ಗಿ ಕೊತ್ತನೂರು ಹಿರಿಯ ಶಿಲ್ಪಿ ಸ್ಥಪತಿಗಳಾದ ಡಾ. ಮಾನಯ್ಯ ಎನ್. ಬಡಿಗೇರ ಅವರಿಗೆ ಪ್ರದಾನಿಸಲಾಯಿತು. ಹೊಯ್ಸಳ ಮಹಾಶಿಲ್ಪಿ ಮಲ್ಲಿಂತಮ ರಾಷ್ಟ್ರೀಯ ಪ್ರಶಸ್ತಿಯನ್ನು ಲೋಹ ಶಿಲ್ಪಿ ಹೊನ್ನಪ್ಪಾಚಾರ್ ಬೆಂಗಳೂರು ಅವರಿಗೆ ಪ್ರಧಾನಿಸಲಾಯಿತು. ವಾಸ್ತು ಪಿತಾಮಹ ಸರ್ವಸಿದ್ಧಿ ಆಚಾರಿ ರಾಷ್ಟ್ರೀಯ ಪ್ರಶಸ್ತಿಯನ್ನು ಅಂತಾರಾಷ್ಟ್ರೀಯ ಖ್ಯಾತಿಯ ಸ್ಥಪತಿ ಡಾ. ಪ್ರಭಾಕರ ಗೋವಿಂದ ಆಚಾರ್ಯ ಕುಂಭಕೋಣಂ ಅವರಿಗೆ ಪ್ರಧಾನಿಸಲಾಯಿತು.

ಆನೆಗುಂದಿಶ್ರೀ ಪ್ರಶಸ್ತಿ ಪ್ರದಾನ

ಮಹಾಸಂಸ್ಥಾನದ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರಿಗೆ ಆನೆಗುಂದಿಶ್ರೀ ಪ್ರಶಸ್ತಿಯನ್ನು ವೇ. ಬ್ರ. ನಾಗಭೂಷಣ ಆಚಾರ್ಯ ತುಮಕೂರು (ಶಿಲ್ಪ), ಜ್ಯೋತಿಷಿ ಸಿ.ವಿ. ಪೊದುವಾಳ್ ಮಂಗಳೂರು (ಜ್ಯೋತಿಷ್ಯ), ಕೆ. ವಾದಿರಾಜ ರಾವ್ ನೇಜಾರು (ಸಾಮಾಜಿಕ ಸೇವೆ), ಡಾ. ಎಸ್.ಪಿ. ಗುರುದಾಸ್, ಮಂಗಳೂರು (ಹರಿದಾಸ ಸೇವೆ), ವೇದಬ್ರಹ್ಮ ವಿಘ್ನೇಶ್ವರ ಪುರೋಹಿತ್ ಮೂಡಬಿದ್ರೆ (ವೈದಿಕ), ಡಾ. ಕೃಷ್ಣ ಆಚಾರ್ಯ ನಕ್ರೆ ಕಾರ್ಕಳ (ಶಿಲಾ ಶಿಲ್ಪ ವಿಭಾಗ), ಶಿಲ್ಪಿ ದೇವಿದಾಸ್ ಆಚಾರ್ಯ ತ್ರಿಶೂರು, ಕೇರಳ (ವಾಸ್ತುಶಿಲ್ಪ) ಅವರಿಗೆ ಪ್ರಧಾನಿಸಲಾಯಿತು.

ಯುವ ಶಿಲ್ಪಿ ಪ್ರಮೋದ್ ಸಿ.ಕೆ. ಕಡೂರು, ಉದಯೋನ್ಮುಖ ಶಿಲ್ಪಿ ಮನೋಜ್ಞ ಟಿ. ಆಚಾರ್ಯ ಪುತ್ತೂರು, ಮಹಾದಾನಿಗಳನ್ನು ಅಭಿನಂದಿಸಲಾಯಿತು. ಅಧ್ಯಕ್ಷತೆಯನ್ನು ವಹಿಸಿದ್ದ ಸರಸ್ವತೀ ಪೀಠ ಪ್ರತಿಷ್ಠಾನದ ಅಧ್ಯಕ್ಷ ವಿ. ಶ್ರೀಧರ ಆಚಾರ್ಯ ವಡೇರಹೋಬಳಿ ಮಾತನಾಡಿದರು. ಗಣ್ಯರಾದ ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ. ಸುಜ್ಞಾನ ಮೂರ್ತಿ ಬೆಂಗಳೂರು, ಅಮರಾವತಿಯ ಸಮರ್ಥ್ ಬಹುದೇಶೀಯ ಸಂಸ್ಥಾ ಅಧ್ಯಕ್ಷ ಡಾ. ನಿಲೇಶ್ ವಿಶ್ವಕರ್ಮ, ಬೆಂಗಳೂರು ವಿಶ್ವಕರ್ಮ ಸಮಾಜ ವೇದಿಕೆ ಅಧ್ಯಕ್ಷ ವಿ.ಎಸ್. ಮೋಹನ ಆಚಾರ್ಯ, ಕೊಯಂಬತ್ತೂರು ವಿಶ್ವ ಶಿಲ್ಪ ಸಂಘದ ಅಧ್ಯಕ್ಷ ಹೇಮಚಂದ್ರ ಆಚಾರ್ಯ ಕಣಂದೂರು, ಮಂಗಳೂರು ವಿಶ್ವಕರ್ಮ ಸಹಕಾರ ಬ್ಯಾಂಕ್ ಅಧ್ಯಕ್ಷ ಡಾ.ಎಸ್.ಆರ್. ಹರೀಶ್ ಆಚಾರ್ಯ, ಎಸ್.ಕೆ. ಗೋಲ್ಡ್‌ಸ್ಮಿತ್ ಸೊಸೈಟಿ ಅಧ್ಯಕ್ಷ ಉಪೇಂದ್ರ ಆಚಾರ್ಯ ಪೆರ್ಡೂರು, ಚಾತುರ್ಮಾಸ್ಯ ವ್ರತ ನಿರ್ವಹಣಾ ಸಮಿತಿ ಗೌರವಾಧ್ಯಕ್ಷ ಪಿ.ವಿ. ಗಂಗಾಧರ ಆಚಾರ್ಯ, ಪಂಚಸಿಂಹಾಸನ ವಿಕಾಸ ಸಮಿತಿ ಅಧ್ಯಕ್ಷ ದಿನೇಶ್ ಆಚಾರ್ಯ ಪಡುಬಿದ್ರಿ, ಪ್ರತಿಷ್ಠಾನ ಉಪಾಧ್ಯಕ್ಷ ನಾಗರಾಜ ಆಚಾರ್ಯ ಕಾಡಬೆಟ್ಟು, ದೇವಸ್ಥಾನಗಳ ಧರ್ಮದರ್ಶಿಗಳಾದ ಕೆಳಿ ಚಂದ್ರಯ್ಯ ಆಚಾರ್ಯ ಉಪ್ಪಳ್ಳಿ, ಕೆ. ಪ್ರಭಾಕರ ಆಚಾರ್ಯ ಮಧೂರು, ಮಧುಕರ ಚಂದ್ರಶೇಖರ ಆಚಾರ್ಯ ಗೋಕರ್ಣ, ಬಾಲಕೃಷ್ಣ ಆಚಾರ್ಯ ಮೂಡುಬಿದ್ರಿ, ರಾಮಚಂದ್ರ ಆಚಾರ್ಯ ಕಾರ್ಕಳ, ಗಣೇಶ ಆಚಾರ್ಯ ಕಾಪು, ಕೆ. ಸುಧಾಕರ ಆಚಾರ್ಯ ಕೊಲಕಾಡಿ, ಸುಂದರ ಆಚಾರ್ಯ ಕೋಟೆಕಾರು, ಬಿ.ಎಂ. ಯದುನಂದನ ಆಚಾರ್ಯ ಬಂಗ್ರಮಂಜೇಶ್ವರ, ಜನಾರ್ದನ ಆಚಾರ್ಯ ಆರಿಕ್ಕಾಡಿ, ಪ್ರಭಾಕರ ಆಚಾರ್ಯ ಕೋಟೆಕಾರು ಮಧೂರು, ಪುರುಷೋತ್ತಮ ಆಚಾರ್ಯ ಕಾಞಂಗಾಡು, ಗಜಾನನ ಆರ್. ಆಚಾರ್ಯ ಭಟ್ಕಳ, ನಾಗರಾಜ ಹಾವನೂರ ಹಳೇ ಹುಬ್ಬಳ್ಳಿ, ದತ್ತಾ ಎಂ. ಆಚಾರ್ಯ ಅಂಕೋಲ, ಜಗದೀಶ್ ಆಚಾರ್ಯ ಪಡುಪಣಂಬೂರು, ಗುರುನಾಥ ಪಟ್ಟಣಕೋಡಿ ಧಾರವಾಡ, ಮಹಾಸಂಸ್ಥಾನದ ಸಮಿತಿಗಳ ಪ್ರಮುಖರಾದ ಬಿ. ಸೂರ್ಯಕುಮಾರ್ ಆಚಾರ್ಯ ಹಳೆಯಂಗಡಿ, ಗಣೇಶ್ ಆಚಾರ್ಯ ಕೆಮ್ಮಣ್ಣು ಸುಂದರ ಆಚಾರ್ಯ ಬೆಳುವಾಯಿ, ಸಂಧ್ಯಾ ಲಕ್ಷ್ಮಣ ಆಚಾರ್ಯ ಉಡುಪಿ, ಹರಿಶ್ಚಂದ್ರ ಎನ್. ಆಚಾರ್ಯ, ಬೆಂಗಳೂರು (ಶಾಖಾ ಮಠ ಸಮಿತಿ ಅಧ್ಯಕ್ಷ), ಕೃಷ್ಣ ವಿ. ಆಚಾರ್ಯ, ಮುಂಬೈ ವೇದಿಕೆಯಲ್ಲಿದ್ದರು. ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಲೋಕೇಶ್ ಎಂ.ಬಿ. ಆಚಾರ್ ಕಂಬಾರು ಸ್ವಾಗತಿಸಿದರು. ಕೋಶಾಧಿಕಾರಿ ಅರವಿಂದ ವೈ. ಆಚಾರ್ಯ ಬೆಳುವಾಯಿ ವಂದಿಸಿದರು. ನ್ಯಾಯವಾದಿ ಕೆ.ಎಂ. ಗಂಗಾಧರ ಆಚಾರ್ಯ ಕೊಂಡೆವೂರು, ಡಾ. ಬಾಲಕೃಷ್ಣ ಹೊಸಂಗಡಿ ನಿರೂಪಿಸಿದರು.

ಧಾರ್ಮಿಕ ಕಾರ್ಯಕ್ರಗಳು

ವರ್ಧಂತಿ ಉತ್ಸವದ ಅಂಗವಾಗಿ ಬೆಳಿಗ್ಗೆ ಕಟಪಾಡಿಯ ಶ್ರೀ ಮಹಾಸಂಸ್ಥಾನದಲ್ಲಿ ಜಗದ್ಗುರುಗಳವರಿಂದ ಶ್ರೀಕರಾರ್ಚಿತ ದೇವತಾ ಪೂಜೆಯ ಬಳಿಕ, ಅನಂತಶ್ರೀ ವಿಭೂಷಿತ ನಾಗಧರ್ಮೇಂದ್ರ ಸರಸ್ವತೀ ಮಹಾಸ್ವಾಮಿಗಳವರ ವೃಂದಾವನದಲ್ಲಿ ಪೂಜೆ ನಡೆಯಿತು. ಅನಂತರ ಪಡುಕುತ್ಯಾರಿನ ಶ್ರೀ ಸರಸ್ವತೀ ಯಾಗಶಾಲೆಯಲ್ಲಿ ಶ್ರೀ ವಿಶ್ವಕರ್ಮ ಯಜ್ಞ, ಶ್ರೀ ದಕ್ಷಿಣಾಮೂರ್ತಿ ಯಜ್ಞ, ಶ್ರೀ ರುದ್ರ ಯಜ್ಞ ಹಾಗೂ ಸಾಮೂಹಿಕ ಶ್ರೀ ಚಂಡಿಕಾ ಯಾಗ ಪೂರ್ಣಾಹುತಿ ನೆರವೇರಿಸಲಾಯಿತು.

ಕಾರ್ಯಕ್ರಮಗಳಿಗೆ ಚಾಲನೆ

ಜಗದ್ಗುರುಗಳವರ 50ನೇ ಜನ್ಮವರ್ಧಂತಿ ವರ್ಷಾಚರಣೆಯ ಅಂಗವಾಗಿ ಒಂದು ವರ್ಷದ ಕಾಲ ನಡೆಯಲಿರುವ ವಿವಿಧ ಮಹತ್ವದ ಕಾರ್ಯಕ್ರಮಗಳಿಗೆ ದೀಪಬೆಳಗಿಸಿ ಚಾಲನೆ ನೀಡಲಾಯಿತು. ಕುಲಗುರು ಪೀಠ ಜಾಗೃತಿ ಹಾಗೂ ಸಾಂಸ್ಕೃತಿಕ ಪಂಚಪ್ರಬೋಧನ ಸಂಕಲ್ಪದ ಸುವರ್ಣ ಸಂಕಲ್ಪ ಅಭಿಯಾನ ಪ್ರಾರಂಭೋತ್ಸವ ನಡೆಯಿತು. ಪಡುಕುತ್ಯಾರು ಸಮೀಪದಲ್ಲಿ ನಿರ್ಮಾಣಗೊಳ್ಳುತ್ತಿರುವ ಶ್ರೀ ಸರಸ್ವತೀ ಹೌಸಿಂಗ್ ಸೊಸೈಟಿ ಯೋಜನೆಯ ಲೋಕಾರ್ಪಣೆ ನೆರವೇರಿತು.

ಬಂಟಕಲ್ಲು ಕಾಲೇಜಿನಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ



ಶಿರ್ವ: ಬಂಟಕಲ್ಲು ಶ್ರೀಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ 13ನೇ ವರ್ಷದ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವು ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿತ್ತು.

ಶ್ರೀ ಸೋದೆ ವಾದಿರಾಜ ಮಠ ಶಿಕ್ಷಣ ಸಂಸ್ಥೆಗಳ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಡಾ. ರಾಧಾಕೃಷ್ಣ ಎಸ್. ಐತಾಳ್ ಮಾತನಾಡಿ, ವಿದ್ಯಾರ್ಥಿಗಳ ವಿನಯ ಶೀಲತೆಯು ಅವರ ವ್ಯಕ್ತಿತ್ವ ಮತ್ತು ಪದವಿಯ ಮೌಲ್ಯವನ್ನು ಹೆಚ್ಚಿಸುತ್ತದೆ ಎಂದರು.

ಶ್ರೀ ಸೋದೆ ವಾದಿರಾಜ ಮಠ ಶಿಕ್ಷಣ ಪ್ರತಿಷ್ಠಾನದ ಕಾರ್ಯದರ್ಶಿ ರತ್ನಕುಮಾರ್ ಮಾತನಾಡಿ, ಉದ್ಯೋಗ ಜೀವನದ ಅನುಭವವನ್ನು ಹಂಚಿಕೊಂಡರು, ವಿದ್ಯಾರ್ಥಿಗಳು ಉದ್ಯಮಿಗಳಾಗಿ ಇತರರಿಗೆ ಉದ್ಯೋಗಾವಕಾಶಗಳನ್ನು ನೀಡಬೇಕು ಎಂದರು.

ಸಂಸ್ಥೆಯ ಪ್ರಾಂಶುಪಾಲ ಡಾ. ನಾಗರಾಜ್ ಭಟ್ ಮಾತನಾಡಿ, ಅಂತಿಮ ವರ್ಷದ ವಿದ್ಯಾರ್ಥಿಗಳ ಸಾಧನೆಯ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ಅಂತಿಮ ವರ್ಷದ ವಿದ್ಯಾರ್ಥಿಗಳ ಅತ್ಯುತ್ತಮ ಪ್ರಾಜೆಕ್ಟ್‌ಗಳಿಗೆ ಬಹುಮಾನವನ್ನು ನೀಡಲಾಯಿತು.

ಸರ್ಕ್ಯೂಟ್ರಿಕ್ ಸ್ಪರ್ಧೆಯಲ್ಲಿ ನಿಟ್ಟೆ ವಿದ್ಯಾರ್ಥಿಗಳಿಗೆ ದ್ವಿತೀಯ ಸ್ಥಾನ



ಕಾರ್ಕಳ: ಎಸ್ಡಿಎಂ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಯಲ್ಲಿ ಇತ್ತೀಚೆಗೆ ನಡೆದ 'ಸೃಷ್ಟಿ ಇನ್ನೋವೇಶನ್ ಎಕ್ಸ್‌ಚೇಂಜ್ 2026ರ ಸಮಯದಲ್ಲಿ ನಡೆದ ರಾಜ್ಯ ಮಟ್ಟದ 'ಸರ್ಕ್ಯೂಟ್ರಿಕ್ಸ್ - ಸರ್ಕ್ಯೂಟ್ ಡಿಸೈನ್ ಮತ್ತು ಡೀಬಗ್ಗಿಂಗ್' ಸ್ಪರ್ಧೆಯಲ್ಲಿ ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ ನಾಲ್ಕನೇ ಸೆಮಿಸ್ಟರ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗದ (ಇಸಿಇ) ವಿದ್ಯಾರ್ಥಿಗಳಾದ ಧನುಷ್ ಎಸ್. ಪೂಜಾರಿ ಮತ್ತು ಆಕಾಶ್ ಶೆಟ್ಟಿ ರನ್ನರ್-ಅಪ್ ಸ್ಥಾನವನ್ನು ತಮ್ಮದಾಗಿಸಿಕೊಂಡಿದ್ದಾರೆ.

ಈ ಸ್ಪರ್ಧೆಯಲ್ಲಿ ರಾಜ್ಯದಾದ್ಯಂತದ ವಿವಿಧ ಎಂಜಿನಿಯರಿಂಗ್ ಸಂಸ್ಥೆಗಳನ್ನು ಪ್ರತಿನಿಧಿಸಿ ವಿದ್ಯಾರ್ಥಿಗಳು ಭಾಗವಹಿಸಿ ದ್ದರು. ಸರ್ಕ್ಯೂಟ್ ವಿನ್ಯಾಸ, ಟ್ರಬಲ್ ಶೂಟಿಂಗ್ ಮತ್ತು ಡೀಬಗ್ಗಿಂಗ್‌ನಲ್ಲಿ ತಮ್ಮ ಕೌಶಲ್ಯಗಳನ್ನು ಪ್ರದರ್ಶಿಸಿದರು. ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ಮತ್ತು ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ರಾಜ್ಯ ಸಚಿವೆ ಆಗಿರುವ ಶೋಭಾ ಕರಂದ್ಲಾಜೆ ಅವರು ಬಹುಮಾನ ವಿತರಿಸಿದರು.

ಪಡುಬಿದ್ರಿಯ ದೇವಸ್ಥಾನ ಜಾತ್ರೆ, ಶ್ರೀ ದೇವರಿಗೆ ಮಹಾರಥೋತ್ಸವ



ಪಡುಬಿದ್ರಿ: ಪಡುಬಿದ್ರಿಯ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ವರ್ಷಾವಧಿ ಜಾತ್ರಾ ಮಹೋತ್ಸವದ ಪ್ರಯುಕ್ತ ಮಂಗಳವಾರ ಮಧ್ಯಾಹ್ನ ಶ್ರೀ ದೇವರ ರಥಾರೋಹಣವು ಶ್ರೀ ಕ್ಷೇತ್ರದ ತಂತ್ರಿ ವೇದಮೂರ್ತಿ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯ ನೇತೃತ್ವದಲ್ಲಿ ನೆರವೇರಿತು.

ಶ್ರೀ ದೇವರಿಗೆ ಉತ್ಸವ ಕಾಲದ ವಿಶೇಷ ಪೂಜಾದಿಗಳು, ನಿತ್ಯ ಬಲಿ, ಮಹಾಪೂಜೆಯ ಬಳಿಕ ಪಲ್ಲಪೂಜಾದಿಗಳು ನಡೆದು, ರಥ ಶುದ್ಧಿಯನಂತರದಲ್ಲಿ ಉತ್ಸವಬಲಿಯೊಂದಿಗೆ ಶ್ರೀ ದೇವರು ರಥದೆಡೆಗೆ ಬಂದರು. ದಿಕ್ಪಾಲ ಬಲಿಗಳ ಬಳಿಕ ದೇವ ವಾಹಕರಾಗಿದ್ದ ವೈ. ಗಣಪತಿ ಭಟ್ ಮೂಲಕವಾಗಿ ಶ್ರೀ ದೇವರ ರಥಾರೋಹಣವು ಸಂಪನ್ನಗೊಂಡಿತು.

ಬಳಿಕ ಸುಮಾರು 4000 ಮಂದಿ ಭಕ್ತರು ಶ್ರೀ ದೇವರ ಅನ್ನ ಪ್ರಸಾದವನ್ನು ಸ್ವೀಕರಿಸಿದರು.

ದೇಗುಲದ ಆನುವಂಶಿಕ ಮೊಕ್ತೇಸರ ಪಡುಬಿದ್ರಿ ಬೀಡು ರತ್ನಾಕರ ರಾಜ್ ಅರಸ್ಕಿನ್ನಕ್ಕ ಬಲ್ಲಾಳರು, ಪಡುಬಿದ್ರಿ ಪೇಟೆಮನೆ ಭವಾನಿಶಂಕರ ಹೆಗ್ಡೆ, ಕೊರ್ನಾಯ ಶ್ರೀಪತಿ ರಾವ್, ಕಾರ್ಯ ನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ಕೃಷ್ಣಾಪುರ ಶಾಖಾ ಮಠದ ಶ್ರೀನಿವಾಸ ಉಪಾಧ್ಯಾಯ, ವೈ.ಎನ್. ರಾಮಚಂದ್ರ ರಾವ್, ನಡ್ಸಾಲುಗುತ್ತು ಶ್ರೀನಾಥ ಹೆಗ್ಡೆ ವೈ. ಸುಕುಮಾರ್, ನವೀನ್ಚಂದ್ರ ಜೆ. ಶೆಟ್ಟಿ ನವೀನ್‌ಎನ್. ಶೆಟ್ಟಿ ಮಿಥುನ್ ಹೆಗ್ಡೆ ರಮಾಕಾಂತ ರಾವ್ಸಹಿತ ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವ ಸಮಿತಿಯ ಎಲ್ಲಾ ಪದಾಧಿಕಾರಿಗಳು, ಸದಸ್ಯರು, ದೇಗುಲದ ಅರ್ಚಕರು, ಸಿಬಂದಿ ವರ್ಗ ಮತ್ತಿತರರು ಉಪಸ್ಥಿತರಿದ್ದರು. ರಾತ್ರಿ ಮಹಾರಥೋತ್ಸವ, ಭೂತಬಲಿ, ಕವಾಟಬಂಧನದ ಧಾರ್ಮಿಕ ವಿಧಿಗಳೂ ನೆರವೇರಿದವು.



ಕಾರ್ಕಳ ತಾಲೂಕಿನ ಮರ್ಣೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಅಜೆಕಾರು ಪೇಟೆಯಿಂದ ಎಣ್ಣೆಹೊಳೆವರೆಗೆ ಬೃಹತ್ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಗ್ರಾ.ಪಂ. ಆಡಳಿತಾಧಿಕಾರಿ ಸುರೇಂದ್ರನಾಥ್ ಎಂ.ವಿ., ಪಿಡಿಒ ಅಂಕಿತಾ ನಾಯಕ್ ಪಾಲ್ಗೊಂಡಿದ್ದರು.

ಯಕ್ಷಸೌರಭ ಶ್ರೀ ಹಿರೇಮಹಾಲಿಂಗೇಶ್ವರ ಕಲಾರಂಗ ವಾರ್ಷಿಕೋತ್ಸವ, ಪ್ರಶಸ್ತಿ ಪ್ರದಾನ



ಕೋಟ: ಕೋಟದ ಯಕ್ಷಸೌರಭ ಶ್ರೀ ಹಿರೇ ಮಹಾಲಿಂಗೇಶ್ವರ ಕಲಾರಂಗ ವಾರ್ಷಿಕೋತ್ಸವ ಶ್ರೀ ಹಿರೇ ಮಹಾಲಿಂಗೇಶ್ವರ ದೇವಸ್ಥಾನದ ವಠಾರದಲ್ಲಿ ನಡೆಯಿತು.

ದೇಗುಲದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ವೇದಮೂರ್ತಿ ಹಲಸಿನಕಟ್ಟೆ ಅನಂತಪದ್ಮನಾಭ ಐತಾಳ ಕಾರ್ಯಕ್ರಮ ಉದ್ಘಾಟಿಸಿದರು. ಯಕ್ಷಸೌರಭ ಸಂಸ್ಥೆಯ ಅಧ್ಯಕ್ಷ ಗಿರೀಶ್ ಗಾಣಿಗ ಬೆಟ್ಲಕ್ಕಿ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಹಿರಿಯ ಯಕ್ಷಗಾನ ಕಲಾವಿದ ಬೇಲ್ತೂರು ರಮೇಶ್ ನಾಯ್ಕ್‌ಗೆ ಯಕ್ಷಸೌರಭ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ದ.ಕ. ಜಿಲ್ಲಾ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಸತೀಶ್ ಕಿಣಿ ಬೆಳ್ವೆ ಮಾತನಾಡಿದರು. ಯಕ್ಷಗುರು ಪ್ರಸಾದ್ ಕುಮಾರ್ ಮೊಗೆಬೆಟ್ಟು ಅವರನ್ನು ಗೌರವಿಸಲಾಯಿತು. ಯಕ್ಷಸೌರಭದ ಗೌರವ ಸಲಹೆಗಾರ ಟಿ. ಮಂಜುನಾಥ ಗಿಳಿಯಾರು, ಜಿ.ಪಂ. ಮಾಜಿ ಸದಸ್ಯ ರಾಘವೇಂದ್ರ ಕಾಂಚನ್, ಬ್ರಹ್ಮಾವರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ರಾಜೇಶ್ ಗಾಣಿಗ ಅಚ್ಲಾಡಿ, ರೋಟರಿ ಮಾಜಿ ಸಹಾಯಕ ಗವರ್ನರ್ ಚಂದ್ರಶೇಖರ ಮೆಂಡನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಮಾಜ ಸೇವೆಯ ಮನೋಭಾವ ರೂಢಿಸಿಕೊಳ್ಳಿ: ತಾರಾನಾಥ ಹೊಳ್ಳ



ಕೋಟ: ಸಮಾಜದಲ್ಲಿ ಬದುಕುವ ಅರ್ಹತೆ ಹೊಂದಿದವನು ಸಮಾಜ ಸೇವೆಯಲ್ಲಿ ತೊಡಗಿಕೊಳ್ಳಬೇಕು. ಸಮಾಜ ಸೇವೆ ಮಾಡುವ ಮನಸ್ಸುಗಳಿಗೆ ಸಾಕಷ್ಟು ಹಣ ವಿನಿಯೋಗ ಮಾಡಬೇಕಂತಿಲ್ಲ, ಎಳೆವೆಯಲ್ಲಿಯೇ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವ ಮನೋಬಾವ ಬೆಳೆಸಿಕೊಳ್ಳಿ ಎಂದು ಗೆಳೆಯರ ಬಳಗ ಕಾರ್ಕಡ ಅಧ್ಯಕ್ಷ ಕೆ. ತಾರಾನಾಥ ಹೊಳ್ಳ ಹೇಳಿದರು.

ತೆಕ್ಕಟ್ಟೆಯ ಆಚಾರ್ಯ ಸಹೋದರರ ತಾಣದಲ್ಲಿ ಶ್ರೀ ಕೈಲಾಸ ಕಲಾಕ್ಷೇತ್ರ ಟ್ರಸ್ಟ್ ತೆಕ್ಕಟ್ಟೆ, ಧಮನಿ ಟ್ರಸ್ಟ್ ತೆಕ್ಕಟ್ಟೆ, ಶ್ರೀಪರ್ಣ ಯಕ್ಷ ಬಳಗ ತೆಕ್ಕಟ್ಟೆ ಯಶಸ್ವೀ ಮಹಿಳಾ ಬಳಗ ತೆಕ್ಕಟ್ಟೆ ಸಂಯುಕ್ತ ಆಶ್ರಯದಲ್ಲಿ ರಜಾರಂಗು-2026 ಶಿಬಿರದಲ್ಲಿ ಗೆಳೆಯರ ಬಳಗ ಕಾರ್ಕಡ ಇದರ ಅಧ್ಯಕ್ಷ ತಾರಾನಾಥ ಹೊಳ್ಳ ಮಾತನ್ನಾಡಿದರು. ಶಿಬಿರದ ನಿರ್ದೇಶಕ ರೋಹಿತ್ ತೀರ್ಥಹಳ್ಳಿ, ಭುವನ್ ಮಣಿಪಾಲ ಇದ್ದರು.

ಸಾಗರದಲ್ಲಿನ ಸಣ್ಣ ಪರ್ಸಿನ್ ಬೋಟ್ ಮೀನುಗಾರಿಕೆ ಯೋಜನೆಯ ಹಿತಾಸಕ್ತಿಪಕ್ಷಗಳ ಸಭೆ | ಪ್ರಮೋದ್ ಮಧ್ವರಾಜ್ ಸಲಹೆ

ಮೀನುಗಾರಿಕೆ ಕ್ಷೇತ್ರದ ಬೆಳವಣಿಗೆಗೆ ಕರಾವಳಿಯಲ್ಲಿ ಏಕರೂಪ ಶಾಸನ ಅಗತ್ಯ

ಪಡುಬಿದ್ರಿ: ವಿಶ್ವದ ಗುಣಮಟ್ಟದ ಪ್ರಮಾಣಿಕತೆಗೆ ಭಾರತವು ಸ್ಪರ್ಧೆಯಲ್ಲಿ ಉಳಿಯಲು ಮೀನುಗಾರಿಕೆಯ ಸುಸ್ಥಿರ ಅಭಿವೃದ್ಧಿಗೆ ಮತ್ತು ಅವಲಂಬಿತ ಫಿಶ್‌ಮೀಲ್‌ನಂತಹಾ ಕೈಗಾರಿಕೆಗಳ ಜವಾಬ್ದಾರಿಯುತ ಬೆಳವಣಿಗೆಗೆ ಕರಾವಳಿಯಲ್ಲಿ ಏಕರೂಪ ಶಾಸನದ ಅಗತ್ಯವಿದೆ ಎಂದು ಭಾರತದ ಫಿಶ್‌ಮೀಲ್ ಮತ್ತು ಫಿಶ್ ಆಯಿಲ್ ರಫ್ತುದಾರರ ಒಕ್ಕೂಟದ ಗೌರವಾಧ್ಯಕ್ಷ, ಮಾಜಿ ಮೀನುಗಾರಿಕಾ ಸಚಿವ ಪ್ರಮೋದ್ ಮಧ್ವರಾಜ್ ಹೇಳಿದರು.



ಅವರು ಸೋಮವಾರ ಎರ್ಮಾಳಿನಲ್ಲಿ ನಡೆದ ಕರ್ನಾಟಕ ರಾಜ್ಯ ಮೀನುಗಾರಿಕೆ ಸುಧಾರಣಾ ಕಾರ್ಯಕ್ರಮದ (ಎಫ್‌ಐಪಿ) ಅಡಿಯಲ್ಲಿ ಸಾಗರದಲ್ಲಿನ ಸಣ್ಣ ಪರ್ಸಿನ್ ಬೋಟ್ ಮೀನುಗಾರಿಕೆ ಯೋಜನೆಯ 8ನೇ ಹಿತಾಸಕ್ತಿಪಕ್ಷಗಳ ಸಭೆಯಲ್ಲಿ ಅತಿಥಿಗಳಾಗಿ ಅವರು ಮಾತನಾಡಿದರು.

ರಾಜ್ಯ ಮೀನುಗಾರಿಕಾ ಇಲಾಖೆಯ ಹೆಚ್ಚುವರಿ ನಿರ್ದೇಶಕ ಮಹೇಶ್ ಕುಮಾರ್ ಮಾತನಾಡಿ, ಸಾಗರದಲ್ಲಿ ಪ್ಲಾಸ್ಟಿಕ್ ತ್ಯಾಜ್ಯಗಳ ನಿಯಂತ್ರಣದ ಸಹಿತ ಅನೇಕ ವಿಚಾರಗಳಲ್ಲಿ ನಾವು ಬದಲಾಗಬೇಕಿದೆ. ಕಾರ್ಯಪಡೆಯ ಆದೇಶಗಳನ್ನೂ ಅನುಷ್ಠಾನಿಸಬೇಕಿದೆ. ಪ್ರಸ್ತುತ 6.1 ಕೋಟಿ ರೂ.ಇರುವ ಸಾಗರೋತ್ಪನ್ನ ಕೈಗಾರಿಕೆಗಳ ರಫ್ತಿನ ಪ್ರಮಾಣವನ್ನು ಮುಂದಿನ ವರ್ಷಗಳಲ್ಲಿ 1ಲಕ್ಷ ಕೋಟಿ ರೂ.ಗಳಿಗೆ ನಿಗದಿಪಡಿಸಲಾಗಿದೆ ಎಂದರು.

ಅವಂತಿ ಫೀಡ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಡಾ. ಅಲ್ಲೂರಿ ಇಂದ್ರಕುಮಾರ್ ಅಧ್ಯಕ್ಷತೆಯನ್ನು ವಹಿಸಿದ್ದರು. ರಾಜ್ಯ ಎಫ್‌ಐಪಿ ಮುಖ್ಯಸ್ಥ ಉದಯಕುಮಾರ್ ಸಾಲ್ಯಾನ್, ಯೋಜನಾ ಸಂಯೋಜಕ ಡಾ. ನಿಮ್ಮುವಲ್ ಪೀವ್ರೋಂಗ್‌ಗಾಮ್, ಐಸಿಎಆರ್-ಸಿಎಮ್‌ಎಫ್‌ಆರ್‌ಐ ಮಂಗಳೂರು ಕೇಂದ್ರದ ಮುಖ್ಯ ವಿಜ್ಞಾನಿ ಡಾ. ಸುಜಿತಾ ಥಾಮಸ್, ರಾಷ್ಟ್ರೀಯ ಕಾರ್ಯಪಡೆ ಸದಸ್ಯ ಗಣೇಶ್ ನಖವಾ, ದಕ್ಷಿಣ್ ಫೌಂಡೇಶನ್‌ನ ಡಾ. ನವೀನ್ ನಂಬೂದಿರಿ, ದೇವಿ ಸೀಫುಡ್ಸ್ ಲಿಮಿಟೆಡ್‌ನ ಸರಬ್ಜಿತ್ ಸಿಂಗ್, ಅವಂತಿ ಫೀಡ್ಸ್ ಲಿಮಿಟೆಡ್‌ನ ನಂದ ಕಿಶೋರ್ ಹಾಗೂ ಸೀಫುಡ್ ಟಾಸ್ಕ್ ಫೋರ್ಸ್‌ನ ಎ.ಬಿ. ಜೈನ್ ವಿವಿಧ ವಿಷಯಗಳ ಕುರಿತು ಮಾತನಾಡಿದರು. ಎಂಪಿಇಡಿಎ ಉಪನಿರ್ದೇಶಕ ಮನೋಜ್ ಕುಮಾರ್ ಟಿ.ಜಿ., ಜನತಾ ಗ್ರೂಪ್‌ನ ಅಧ್ಯಕ್ಷ ಆನಂದ್ ಸಿ. ಕುಂದರ್ ಇದ್ದರು. ರಾಜ್ಯ ಎಫ್‌ಐಪಿ ಸಾಗರದಲ್ಲಿನ ಸಣ್ಣ ಪರ್ಸಿನ್ ಮೀನುಗಾರಿಕೆ ಯೋಜನೆಯಲ್ಲಿ ಜಿಲ್ಲೆಯ ವಿವಿಧ ಫಿಶ್ ಮೀಲ್ ಕಂಪೆನಿಗಳು ಸದಸ್ಯ ಸಂಸ್ಥೆಗಳಾಗಿ, ಸರಕಾರದ ವಿವಿಧ ಇಲಾಖೆಗಳು, ಸಂಶೋಧನಾ ಸಂಸ್ಥೆಗಳು, ಸಮುದ್ರ ಆಹಾರ ಕೈಗಾರಿಕೆ, ರಫ್ತುದಾರರು, ಸುಸ್ಥಿರ ಮೀನುಗಾರಿಕೆಗೆ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಹಾಗೂ ಮೀನುಗಾರರ ಪ್ರತಿನಿಧಿಗಳು ಭಾಗವಹಿಸಿದ್ದರು. ಯೋಜನೆಯಡಿ ಸುಸ್ಥಿರ ಹಾಗೂ ಜವಾಬ್ದಾರಿಯುತ ಮೀನುಗಾರಿಕೆ ಕಾರ್ಯಕ್ರಮಗಳ ಅನುಷ್ಠಾನ, ಜವಾಬ್ದಾರಿಯುತ ಮೀನುಗಾರಿಕೆ ಪದ್ಧತಿ, ಭಾರತದ ಸಮುದ್ರ ಆಹಾರ ಸರಬರಾಜು ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಕುರಿತು ಚರ್ಚೆ ನಡೆಯಿತು. ರಮೇಶ್ ಎಂ.ಆರ್. ಸ್ವಾಗತಿಸಿದರು. ಚೇತನ್ ಕುಮಾರ್ ಸುವರ್ಣ ವಂದಿಸಿದರು.